TEXT FLY WITHIN
THE BOOK ONLY

UNIVERSAL LIBRARY
OU_198665
UNIVERSAL LIBRARY

ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯಶ್ರೇಷ್ಠ

ಸಾಧುವರ್ಯ ನಾಗಮಹಾಶಯರ

# ಜೀವನ ಕಥೆ

K922
N65G

ಗೋವಿಂದರಾವ ಹಳ್ಳಿಪ್ಪನವರ

ಬೆಲೆ ೧ ರೂಪಾಯಿ

ಧಾರವಾಡದ ‘ ಕರ್ನಾಟಕ ಶಿಕ್ಷಣ ಸಮಿತಿ ’ ಯಿಂದ
ಪ್ರಕಟವಾದ ಸುಪ್ರಸಿದ್ಧ ಲೇಖಕರ
ರಸಭರಿತವಾದ, ನೋಡಿದರೆ ಬಿಡದಿರುವ ಗ್ರಂಥಗಳು!!

ಮುಂಬಯಿ ಸರಕಾರದ ಶಿಕ್ಷಣ ಖಾತೆಯವರು ಇವನ್ನು ಇನಾಮಿಗಾಗಿಯೂ ಗ್ರಂಥಾಲಯಗಳಿಗಾಗಿಯೂ ಮಂಜೂರು ಮಾಡಿರುವರು.

೧) ಆರ್ಯಧರ್ಮ ಪ್ರದೀಪ— (ಸಚಿತ್ರ) ಸನಾತನ ಆರ್ಯಧರ್ಮದ ಮೂಲತತ್ವಗಳನ್ನರಿಯಲು ಉತ್ತಮ ಸಂಧಿ. ಧಾರ್ಮಿಕ ಶಿಕ್ಷಣಕ್ಕೆ ಯೋಗ್ಯಪಠ್ಯ ಪುಸ್ತಕ. ೬೦೦ ಪುಟಗಳು ಲೇ:—ಹೊಸಕೆರೆ ಚಿದಂಬರಯ್ಯನವರು. ಬೆಲೆ ರು ೩—೦—೦

೨) ಭರತ ಖಂಡದ ಜೀವಜ್ಯೋತಿಗಳು (ಸಚಿತ್ರ)— ಐತಿಹಾಸಿಕ, ಸಾಮಾಜಿಕ, ಧಾರ್ಮಿಕ, ರಾಷ್ಟ್ರವೀರರ ೨೫ ಜೀವನ ಕಥೆಗಳನ್ನೊಳಗೊಂಡಿದೆ. ಲೇ:—ಹೊಸಕೆರೆ ಚಿದಂಬರಯ್ಯನವರು ಬೆಲೆ, ರು, ೧—೮—೦

೩) ಭಾರತೀಯರ ಇತಿಹಾಸ (ಸಚಿತ್ರ):—ಪ್ರಾಚೀನ ಆರ್ಯರ ಸ್ವಾತಂತ್ರ್ಯಪೂರ್ಣ, ಸಾಂಸ್ಕೃತಿಕ ಮತ್ತು ಜನಜೀವನ ದರ್ಶಕವಾದ ಚರಿತ್ರೆ. ಲೇ:—ನಾರಾಯಣ ಶರ್ಮಾ. ಬೆಲೆ ರೂ, ೭—೮—೦

೪) ಭಾವಗೀತೆ:—ದಾಸರ ಮತ್ತು ಶಿವಶರಣರ ಉತ್ತಮ ಪದಗಳನ್ನೂ ಭಕ್ತಿ ಗೀತೆಗಳನ್ನೂ ಸಂಗ್ರಹಿಸಿದೆ. ೧೬೫ ಸುಂದರ ಪದಗಳಿವೆ. ಬೆಲೆ ರೂ. ೧—೨—೦

೫) ಕರ್ನಾಟಕ ಗತವೈಭವ (ಸಚಿತ್ರ):—ಕರ್ನಾಟಕ ದೇವಿಯ ಬಗ್ಗೆ ಅಭಿಮಾನವನ್ನೂ ಪ್ರೇಮೋತ್ಸಾಹಗಳನ್ನೂ ಉಂಟು ಮಾಡಿ ಕರ್ನಾಟಕದ ಹಿಂದಿನ ಮೇಲ್ಗಾಲವನ್ನೂ ಸಂಕ್ಷಿಪ್ತ ಇತಿಹಾಸವನ್ನೂ ಬಣ್ಣಿಸುವ ಗ್ರಂಥ. ಲೇ:—ಆಲೂರ ವೆಂಕಟರಾಯರು. ಬೆಲೆ ರೂ. ೧—೪—೦

೬) ಕರ್ನಾಟಕ ವೀರರತ್ನಗಳು (ಸಚಿತ್ರ):-ರಣಾಂಗಣದ ವೀರಕ್ಷತ್ರಿಯ ಭಾಷೆಯಲ್ಲಿ ವೀರರ ಹೃದಯವನ್ನು ಉಕ್ಕಿಸಿ ಹುರಿಗೊಳಿಸುವಂತೆ ಬರೆದಪ್ಪು. ಲೇ:—ಆಲೂರ ವೆಂಕಟರಾಯರು. ಬೆಲೆ ರೂ ೧—೦—೦

ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ಉಚ್ಚಕೋಟಿಯ

ಶಿಷ್ಯರಾದ

# ಸಾಧುವರ್ಯ ನಾಗಮಹಾಶಯರ

# ದಿವ್ಯ ಜೀವನ ಚರಿತ್ರೆ

ಲೇಖಕರು:— ಶ್ರೀ. ಗೋವಿಂದ ಲಕ್ಷ್ಮಣ ಹಳ್ಳಿಪ್ಪನವರ

ಪ್ರಕಾಶಕರು:— ಶ್ರೀ. ಸುರೇಂದ್ರ ಶಿವರಾವ ದೇಸಾಯಿ

ಬೆಲೆ ೧ ರೂಪಾಯಿ

# ಅರ್ಪಣೆ.

---

ಯುರೋಪ, ಅಮೇರಿಕೆ ದೇಶಗಳಲ್ಲಿ
ಸನಾತನ ಧರ್ಮದ ಉಜ್ವಲ ತತ್ವಗಳ ಪ್ರತಿಭೆಯನ್ನು
ತಮ್ಮ ಅಪ್ರತಿಮ ತೇಜಸ್ಸಿನಿಂದ ಬೆಳಗಿದ
ಜಗದ್ವಿಖ್ಯಾತ

## ಶ್ರೀಮತ್ ಸ್ವಾಮೀ ವಿವೇಕಾನಂದರ

ಅಡಿದಾವರೆಗಳಲ್ಲಿ
ಇದೊಂದು ಹೂ

—ಲೇಖಕ



ಶ್ರೀಮತ್ ವಿವೇಕಾನಂದ ಸ್ವಾಮಿಗಳು.

'rinting Works, Dharwar.

# ಬಿನ್ನಹ.

ಶ್ರೀ. ಶರಚ್ಚಂದ್ರ ಚಕ್ರವರ್ತಿಯವರು ನಾಗಮಹಾಶಯರ ಚರಿತ್ರೆಯನ್ನು ಮೊದಲು ಬಂಗಾಲಿಯಲ್ಲಿ ಬರೆದರು. ಅದರ ಇಂಗ್ಲಿಷ ಅನುವಾದವೂ ಪ್ರಕಟವಾಗಿದೆ. ಇವೆರಡರ ಸಹಾಯದಿಂದ ನಾನೀ ಪುಸ್ತಕವನ್ನು ಕನ್ನಡದಲ್ಲಿ ಬರೆದೆ. ಇದು ಹೆಚ್ಚು ಕಡಿಮೆ ಇದು ಮೂಲ ಚರಿತ್ರೆಯ ಅನುವಾದವೆಂದರೂ ಸರಿ.

ಯುಗಾವತಾರ ಶ್ರೀ ರಾಮಕೃಷ್ಣ ಪರಮಹಂಸರ ಸನ್ಯಾಸೀ ಶಿಷ್ಯರಲ್ಲಿ ಸ್ವಾಮಿ ವಿವೇಕಾನಂದರು ಶ್ರೇಷ್ಠರಿದ್ದಂತೆ ಅವರ ಗೃಹಸ್ಥಾಶ್ರಮಿ ಶಿಷ್ಯರಲ್ಲಿ ನಾಗ ಮಹಾಶಯರು ಸರ್ವ ಶ್ರೇಷ್ಠರು. ಅವರ ಚರಿತ್ರೆಯು ಅದ್ಭುತವಾಗಿಯೂ ಒಳ್ಳೇ ಮನೋವೇಧಕವಾಗಿಯೂ ಇದೆ. ಗೃಹಸ್ಥಾಶ್ರಮಿಗಳಿಗಂತೂ ಅದು ಆದರ್ಶ ಸ್ವರೂಪವಾಗಿದೆ. ಎಂಥ ಸಾಧಾರಣ ಮನುಷ್ಯನಾದರೂ ಅದನ್ನು ಓದಿ ಪ್ರಭಾವಿತನಾಗದೇ ಇರಲಾರನು.

ಭಾಷೆಯ ಮೇಲೆ ಅಂಥ ಪ್ರಭುತ್ವವು ನನಗಿಲ್ಲ. ಲೇಖಕನೆಂದು ಪ್ರಸಿದ್ಧಿಯನ್ನು ಪಡೆಯಬೇಕೆಂಬ ಹಂಬಲವೂ ನನಗಿಲ್ಲ, ಆದರೂ ಈ ಚರಿತ್ರೆಯನ್ನು ಬರೆಯುವದರಲ್ಲಿ ನನ್ನ ಉದ್ದೇಶವು, ಕನ್ನಡಿಗರು ನಾಗ ಮಹಾಶಯರ ಚರಿತ್ರೆಯ ಸವಿಯನ್ನು ಸವಿಯಲೆಂದೂ ನನ್ನಿಂದ ಕೈಲಾದಮಟ್ಟಿಗೆ ಭಾಷೆಯ ಹಾಗೂ ಧರ್ಮದ ಸೇವೆಯು ಜರಗಲೆಂದೂ ಇದೆ.

ಗು. ದೇಸಾಯಿಯವರ ಪ್ರೋತ್ಸಾಹನೆಯೂ ಇದಕ್ಕೆ ಕೈ ಹಾಕಲು ಕಾರಣವಾಯಿತು. ಅವರ ಸಹಾಯ ಹಾಗೂ ಪ್ರೋತ್ಸಾಹನೆಯಿಲ್ಲದಿದ್ದರೆ ಈ ಕೆಲಸ ಕೊನೆಗಾಣುವಂತಿದ್ದಿಲ್ಲ. ಈ ಪುಸ್ತಕ ಬೆಳಕಿಗೆ ತಂದವರೂ ಅವರೇ. ಅದಕ್ಕಾಗಿ ನಾನು ಅವರಿಗೆ ಬಹು ಕೃತಜ್ಞನಾಗಿರುವೆನು.

ಕಾರ್ತಿಕ ಶುದ್ಧ ೧
ಪ್ರಮೋದೂತ

ಗೋವಿಂದ ಲಕ್ಷ್ಮಣ ಪಳ್ಳೈಕ್ಪನವರ,
ಕಲಘಟಗಿ

# ಮುನ್ನುಡಿ.

ಈಗಿನ ದಿವಸಗಳಲ್ಲಿ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ಮತ್ತು ಅವರ ಜಗದ್ವಿಖ್ಯಾತ ಪಟ್ಟಶಿಷ್ಯರಾದ ವಿವೇಕಾನಂದ ಸ್ವಾಮಿಗಳ ಹೆಸರನ್ನು ಕೇಳದ ಭಾರತೀಯನಿಲ್ಲವೆಂದು ಹೇಳಬಹುದು. ಸ್ವದೇಶದಲ್ಲಿಷ್ಟೇ ಅಲ್ಲ. ಪರದೇಶಗಳಲ್ಲಿಯೂ ಕೂಡ ಇವರು ಕೀರ್ತಿ ಶರೀರಿಗಳಾಗಿ ಬೆಳಗುತ್ತಿದ್ದಾರೆ. ಲೋಕಪ್ರಸಿದ್ಧ ಫ್ರೆಂಚ ವಿದ್ವಾಂಸನಾದ ರೋಮಾಂ ರೋಲಾ ಎಂಬವನು ಇವರ ಪ್ರಖ್ಯಾತವಾದ ಜೀವನ ಚರಿತ್ರೆಯನ್ನು ಬರೆದು ಪಶ್ಚಿಮ ದೇಶಗಳಲ್ಲಿಯೂ ಇವರ ವಿಭೂತಿವಿಶೇಷವನ್ನು ಹೊಗಳಿ ಅಜರಾಮರಗೊಳಿಸಿದ್ದಾರೆ. ಆದರೆ ಸ್ವಾಮಿ ವಿವೇಕಾನಂದರಷ್ಟೇ ಆತ್ಮೋನ್ನತಿಯನ್ನು ಹೊಂದಿದ ಮತ್ತು ಕೆಲವು ದೃಷ್ಟಿಯಿಂದ ಹೆಚ್ಚುಗಾರಿಕೆಯನ್ನು ಕೂಡ ತೋರಿಸಿದ ಸಾಧುವರ್ಯ ನಾಗಮಹಾಶಯರ ಹೆಸರನ್ನು ಬಹು ಜನರು ಕೇಳಿಲ್ಲ. ಬಹಿರಂಗವಾಗಿ ಪ್ರಪಂಚದ ರಂಗಸ್ಥಳದಲ್ಲಿಳಿದು ತಮ್ಮ ಲೋಕಕಲ್ಯಾಣಕಾರ್ಯವನ್ನು ನೆರವೇರಿಸಿದ ವಿಭೂತಿಗಳಿಗಿಂತ ಎಷ್ಟೋ ಪಟ್ಟು ಮಿಗಿಲಾದ ಆಧ್ಯಾತ್ಮಿಕ ಸಿಂಹಗಳು ತಮ್ಮಷ್ಟಕ್ಕೆ ತಾವೇ ಆತ್ಮಾನಂದದಲ್ಲಿ ನಲಿದಾಡುತ್ತ ಕಟ್ಟಡವಿಯಲ್ಲಿಯೋ ಜನಸಮ್ಮರ್ದವಿಲ್ಲದ ಹಳ್ಳಿಗಳಲ್ಲಿಯೋ ಏಕಾಂತದಲ್ಲಿದ್ದುಕೊಂಡು ಕಾಲಕಳೆಯುತ್ತಾರೆ. ಇಂಥ ಅಜ್ಞಾತ ವಿಭೂತಿವಿಶೇಷಗಳ ಮಿದುಳಿನಿಂದ ಹೊರಹೊಮ್ಮುವ ವಿಚಾರ ತರಂಗಗಳು ಗುಹೆಯ ಕಲ್ಲಿನ ಗೋಡೆಗಳನ್ನು ಕೊರೆದು ಪಾರಾಗಿ ವಾತಾವರಣದಲ್ಲಿ ತಿರುಗುತ್ತ ತಿರುಗುತ್ತ ತರಂಗಗಳನ್ನೆಬ್ಬಿಸುತ್ತ ಅಲೆದಾಡಿ ತಮಗೆ ಅನುರೂಪವಾದ ಕರ್ತೃತ್ವಶಕ್ತಿಯುಳ್ಳ ಮಹಾಪುರುಷನನ್ನು ಕಂಡಕೂಡಲೇ ಅವನನ್ನು ತಮ್ಮ ವಾಹನವನ್ನಾಗಿ ಮಾಡಿಕೊಂಡು ಆಶ್ಚರ್ಯಕರವಾದ ಮಹತ್ಕಾರ್ಯಗಳನ್ನು ಮಾಡಿಸುತ್ತಿವೆ. ಇಂಥ ಅಜ್ಞಾತ ಶ್ರೇಷ್ಠ ಪುರುಷರಲ್ಲಿ ಸಾಧುವರ್ಯ ನಾಗಮಹಾಶಯನೊಬ್ಬನು.

ನಾಗಮಹಾಶಯರು ಶುದ್ಧ ವೈಷ್ಣವರು. ತಾನೇ ದೇವರೆಂಬ ಅದ್ವೈತಿಗಳ ವಿಚಾರವು ಅವರಿಗೆ ಸರಿಬೀಳುತ್ತಿದ್ದಿಲ್ಲ. ನಮ್ಮ ಸೇವಕ

ಭಾವದಿಂದ ಪರಮಾತ್ಮನನ್ನು ಆರಾಧಿಸಿದರು. ದೇವಿಯ ಅಪ್ಪಣೆಯಿಲ್ಲದೆ ಹುಲ್ಲುಕಡ್ಡಿಯು ಕೂಡ ಕದಲದೆಂದು ಅವರ ದೃಢವಾದ ನಂಬುಗೆಯಿತ್ತು. ಅವರ ದೃಢನಿಶ್ಚಯ, ಮನೋನಿಗ್ರಹ, ವೈರಾಗ್ಯ, ಗೃಹಸ್ಥವೃತ್ತಿ, ಸತ್ಯ, ಅಹಿಂಸಾ, ಭೂತದಯೆ ಮೊದಲಾದ ಗುಣಗಳು ಅಪ್ರತಿಮವಾಗಿದ್ದವು. ಕೇವಲ ಚುರುಮುರಿಯನ್ನು ಮುಕ್ಕಿ ನೀರು ಕುಡಿದು ಸಂಜೆಯವರೆಗಾದರೂ ಊಟಮಾಡದೆ ಉಪವಾಸವಿದ್ದು ಹತ್ತುಹತ್ತು ಮೈಲಿ ನಡೆದಾದರೂ ಪರ ಊರೊಳಗಿನ ಶಾಲೆಗೆ ಹೋಗಿ ವಿದ್ಯೆ ಕಲಿಯಬೇಕೆಂಬ ಅವರ ಸಾಹಸವು ದೃಢನಿಶ್ಚಯವನ್ನು ತೋರಿಸುತ್ತದೆ. ಎರಡು ಲಗ್ನವಾದರೂ ಕೂಡ ಪತ್ನಿಯು ಕೂಡ ಯಾವ ತರಹದ ಶಾರೀರಿಕ ಸಂಬಂಧವನ್ನಿಡದೆ ಕೇವಲ ಸಹಧರ್ಮಚಾರಿಣಿಯೆಂದು ತಿಳಿದು, ಪಿತೃಋಣದಿಂದ ಮುಕ್ತರಾಗಿ ಸ್ವರ್ಗವನ್ನೋ ವೈಕುಂಠವನ್ನೋ ಸೇರಲೆಂದು ಮಕ್ಕಳನ್ನು ಹಡೆಯುವ ಹುಚ್ಚು ಗೋಜಿಗೆ ಹೋಗದೆ ಇಂದ್ರಿಯ ನಿಗ್ರಹವನ್ನು ಮಾಡಿದ್ದು ಅನುಕರಣೀಯವಾಗಿದೆ. ಹೆಂಡತಿಯು ತೌರುಮನೆಯಿಂದ ಅತ್ತೇಮನೆಗೆ ಬಂದಿರುವಳೆಂದು ತಿಳಿದಕೂಡಲೆ, ಎಲ್ಲಿ ಮನಸ್ಸು ಕರಗಿ ಮೋಹಪರವಶವಾಗುವದೋ ಎಂದು ಭಯಗೊಂಡು ಊರಹೊರಗಿನ ತೋಟದಲ್ಲಿಯ ಒಂದು ದೊಡ್ಡ ಮರದಲ್ಲಿ ಕೆಲವು ದಿನಗಳ ವರೆಗೆ ಕುಳಿತಿದ್ದರು. ಎಂಥ ಅದ್ಭುತ ನಿಗ್ರಹಶಕ್ತಿಯಿದು! ಅವರು ಕಾಮಿನಿಯಂತೆ ಕಾಂಚನವನ್ನೂ ಅಷ್ಟೇ ಬಲವಾಗಿ ಗೆದ್ದಿದ್ದರು. ಇವರು ವೈದ್ಯಕೀ ವೃತ್ತಿಯನ್ನವಲಂಬಿಸಿದಾಗ ಶ್ರೀಮಂತ ರೋಗಿಗಳು ಹೆಚ್ಚು ಹಣವನ್ನು ಕೊಡುತ್ತೇವೆಂದು ಆಗ್ರಹದಿಂದ ಕೊಡಹೋದರೂ ಒಲ್ಲೆಂದು ಮೋರೆತಿರುವಿದ ಧೀರರಿವರು. ಒಬ್ಬ ಬಡ ರೋಗಿಯು ಉಗ್ರ ಜ್ವರದಿಂದ ಪೀಡಿತನಾಗಿದ್ದರೂ ಹಾಸಿಕೊಳ್ಳಲಿಕ್ಕೂ ಇಲ್ಲದುದಕ್ಕಾಗಿ ಬರೀ ನೆಲದ ಮೇಲೆ ಬಿದ್ದಿರುವದನ್ನು ಕಂಡು ತನ್ನ ಹಾಸಿಗೆಯನ್ನೇ ಅವನಿಗೆ ಕಳಿಸಿಕೊಟ್ಟರು. ಸ್ವಾರ್ಥವನ್ನು ಬದಿಗೊತ್ತಿ ಪರಾರ್ಥಕ್ಕಾಗಿ ಹೆಣಗುವ ಈ ಜೀವನು ದಾನಮಾಡುವ ಪ್ರಸಂಗ ಬಂದರೂ ಹೆದರದೆ ಅನ್ಯರ ಮೇಲೆ ಭಾರ ಹಾಕದೆ ಉಪವಾಸವಿದ್ದಾದರೂ ಪರರಿಗೆ ಒಂದು ತುತ್ತು ಅನ್ನವನ್ನೀಯುವ ಈ ಭಗದ್ಭಕ್ತನಂಥವರು ಲೋಕದಲ್ಲಿ ಅತಿ ವಿರಳ. ಪ್ಲೇಗಿನ ಹಾವಳಿಯ ದಿನಗಳಲ್ಲಿ ತನ್ನ ದೇಹ

ವನ್ನು ಗಂಡಾಂತರಕ್ಕೊಡ್ಡಿಯಾದರೂ ಪ್ಲೇಗಿನಿಂದ ಪೀಡಿತನಾದ ಒಬ್ಬ ನಿರಾಶ್ರಿತ ಅನಾಥನ ಶುಶ್ರೂಷೆಯನ್ನು ಮಾಡಿದ ಅಂತಃಕರಣವುಳ್ಳವನಿವನು.

ಮಹಾತ್ಮಾ ಗಾಂಧಿಯವರು ಹೇಳಿದ ಅಹಿಂಸಾಮಾರ್ಗವು ಅವ್ಯವಹಾರ್ಯವೆಂದು ಹೇಳುವ ಮಹನೀಯರು ನಾಗಮಹಾಶಯರ ಚರಿತ್ರೆಯನ್ನೋದಲಿ. ಮನೆಯಲ್ಲಿ ಬಂದ ಒಂದು ದೊಡ್ಡ ನಾಗರಹಾವನ್ನು ಕೊಲ್ಲಲುದ್ಯುಕ್ತರಾದ ತನ್ನವರನ್ನು ತಡೆದು ಅದರ ಜೀವವನ್ನುಳಿಸಿ ಕುಶಲನಾದ ಮಾಟಗಾರನಂತೆ ಅದನ್ನು ತನ್ನನ್ನು ಹಿಂಬಾಲಿಸಿ ಕರೆದುಕೊಂಡು ಊರಹೊರಕ್ಕೆ ಹೋಗಿ ಬಿಟ್ಟುಬಂದನು. ತನ್ನ ಮನೆಯ ಕಂಬಕ್ಕೆ ಹತ್ತಿ ಕೊರೆಯುತ್ತಿರುವ ಗೆದ್ದಲಿಯ ಹುಳವನ್ನು ತನ್ನ ಹೆಂಡತಿಯು ಕೆಳಗೆ ಕೆಡವಿದ್ದನ್ನು ಕಂಡು ಅನುಕಂಪಿತರಾಗಿ ಕೆಳಗೆ ಬಿದ್ದ ಆ ಹುಳಗಳನ್ನು ಒಂದೊಂದನ್ನೇ ಮೇಲಕ್ಕೆತ್ತಿ ಕಂಬಕ್ಕೆ ತಗಲಿಸಿ ಪುನಃ ಮೇಯಲು ಅನುವನ್ನುಂಟುಮಾಡಿಕೊಟ್ಟನು. ಕಂಬವು ಜರ್ಜರಿತವಾಗಿ ಮುರಿದು ಮನೆಯು ಕುಸಿಬಿದ್ದರೂ ಅವನ ಮನಸ್ಸು ವಿಚಲಿತವಾಗಲಿಲ್ಲ. ಸರ್ವತ್ರ ಪರಮಾತ್ಮನ ಅನುಸಂಧಾನವನ್ನು ಮಾಡುವ ಇವರ ಶಕ್ತಿಯು ಅದ್ಭುತವಾಗಿತ್ತು. ಮಳೆಯಲ್ಲಿ ಸೋರುತ್ತಿದ್ದ ತಮ್ಮ ಮನೆಯ ಹಂಚನ್ನು ಹೊಚ್ಚುತ್ತಿದ್ದ ಕೂಲಿಯವನು ತನಗಾಗಿ ಬಿಸಲಿನಲ್ಲಿ ದುಡಿಯುತ್ತಿರುವನ್ನು ಕಂಡು 'ಪರಮಾತ್ಮನು ನನಗಾಗಿ ಹೀಗೆ ತಾಪಬಡಬೇಕೇ?' ಎಂದು ಮನದಲ್ಲಿ ಕೊರಗಿ ಕಲ್ಲಿನಿಂದ ಹಣೆಹಣೆ ಬಡಿದುಕೊಳ್ಳುತ್ತಿದ್ದವನು. ಆ ಕೂಲಿಯವನು ಕೆಳಗಿಳಿದು ಬಂದು ಬಿಡಿಸುವತನಕ ಬಿಡಲಿಲ್ಲ. ಇವನ ಉಗ್ರತಪಶ್ಚರ್ಯದ ಫಲವಾಗಿ ಅನೇಕ ಸಿದ್ಧಿಗಳೂ ಕೈವಶವಾಗಿದ್ದವು. ಆದರೂ ಅವುಗಳನ್ನು ವಿಶೇಷವಾಗಿ ತೋರ್ಪಡಿಸುತ್ತಿರಲಿಲ್ಲ. ಮಹಾಪರ್ವಕಾಲದಲ್ಲಿ ಗಂಗಾಸ್ನಾನಕ್ಕೆ ಹೋಗಬಯಸಿದ ತನ್ನ ತಂದೆಯ ಪ್ರೀತಿಗಾಗಿ ಮನೆಯ ಅಂಗಳದಲ್ಲಿಯೇ ಗಂಗೆಯನ್ನು ಕೆಲಕಾಲ ಪುಟಿಸಿದನು. ಹೀಗೆ ಒಂದೇ, ಎರಡೇ, ಈ ಮಹಾಮಹಿಮನ ವಿಭೂತಿವಿಶೇಷವನ್ನು ಈ ಚಿಕ್ಕ ಮುನ್ನುಡಿಯಲ್ಲಿ ಎಷ್ಟೆಂತ ಬಣ್ಣಿಸಲಿ! ಅವನ ಚರಿತ್ರೆಯನ್ನು ಓದುವಾಗ ಇಂಥ ಪುಣ್ಯ ಪುರುಷನು ನಿಜವಾಗಿ ಇದೇ ಜಗತ್ತಿನಲ್ಲಿ ಮೊನ್ನೆ

ಮೊನ್ನೆ ಬಾಳಿ ಹೋದನೇ ಎಂದು ವಾಚಕರು ಸಂಶಯಪಡುವಂತಿದೆ. ಆದರೆ ಅವನನ್ನು ಕಣ್ಮುಟ್ಟಿ ಕಂಡವರು ಈಗ್ಯೂ ಜೀವಿಸಿರುವದರಿಂದ ಹಾಗೆ ಹೇಳಲು ಸಾಧ್ಯವಿಲ್ಲದಾಗಿದೆ. ತಮ್ಮ ಮನೆತನವನ್ನೇ ತಪೋವನವನ್ನಾಗಿ ಮಾಡಿಕೊಂಡ ಈ ಪರಮ ಕರುಣಾಶಾಲಿಯಾದ ಭಗವದ್ಭಕ್ತನ ದಿವ್ಯ ಚರಿತ್ರೆಯನ್ನು ಓದಿ, ಪುನಃ ಓದಿ ಕೇಳಿಯೂ ತೃಪ್ತಿಯುಂಟಾಗದಷ್ಟು ರಸವು ಇದರಲ್ಲಿದೆ. ವಾಚಕರು ಸವಿದು ನೋಡಲಿ.

ಈ ಚರಿತ್ರೆಯ ಲೇಖಕರಾದ ಶ್ರೀ. ಹಳ್ಳೆಪ್ಪನವರ ಗೋವಿಂದರಾಯನು ತರುಣನೂ ಬರಹಕ್ಕೆ ಇದೇ ಮೊದಲುಮಾಡಿದವನೂ ಆದರೂ ವಿಚಾರ ಭಾವನೆಗಳಲ್ಲಿಯೂ ಭಾಷೆಯಲ್ಲಿಯೂ ನುರಿತ ಹಂಣಾದ ಅನುಭವಿಕ ಹಳಬನಂತೆ ಈ ಕಾರ್ಯವನ್ನು ಕೊನೆಗಾಣಿಸಿದ್ದು ಅಭಿನಂದನೀಯವಾಗಿದೆ ಇದಕ್ಕೂ ಹೆಚ್ಚಿನ ನಾಡನುಡಿಯ ಸೇವೆಗೆ ಗ್ರಂಥಕರ್ತನು ಕೈ ಮುಂದೆ ಚಾಚಲೆಂದು ಹಾರೈಸುತ್ತೇವೆ. ಕರ್ಮವೀರ ಮುದ್ರಣಾಲಯದ ಒಡೆಯರಾದ ಶ್ರೀ. ಹುಕ್ಕೇರಿಕರ ರಾಮರಾಯರ ಉಪಕಾರವನ್ನೂ ಸ್ಮರಿಸದಿರಲಾರೆವು.

ಓಂ ಶಾಂತಿಃ

ಧಾರವಾಡ
ತಾ. ೧೫-೧೧-೧೯೩೧.

ಸುರೇಂದ್ರ ಶಿವರಾವ ದೇಸಾಯಿ, ಎಂ. ಎ.
ಸಂಪಾದಕ, ಸ್ವಧರ್ಮ.

# ವಿಷಯಾನುಕ್ರಮಣಿಕೆ.


| | | | ಪುಟ |
|---|---|---|---|
| | | ಪೀಠಿಕೆ | ೧—೪ |
| ೧ | ನೆಯ ಪ್ರಕರಣ | ಬಾಲ್ಯ | ೪— ೨ |
| ೨ | ,, | ವೈದ್ಯಕೀ ಅಭ್ಯಾಸವೂ ವೈದ್ಯ ವೃತ್ತಿಯೂ. | ೧೨—೨೨ |
| ೩ | ,, | ದ್ವಿತೀಯ ವಿವಾಹವೂ ವೈದ್ಯಕೀ ವ್ಯವಸಾಯವೂ. | ೨೩—೩೨ |
| ೪ | ,, | ಮಂತ್ರೋಪದೇಶಗ್ರಹಣವೂ ದಕ್ಷಿಣೇಶ್ವರ ಯಾತ್ರೆಯೂ | ೩೩—೪೩ |
| ೫ | ,, | ಶ್ರೀ. ರಾಮಕೃಷ್ಣರ ದರ್ಶನ | ೪೪—೭೦ |
| ೬ | ,, | ದೇವಭೋಗದಲ್ಲಿ ವಾಸ | ೭೧—೮೫ |
| ೭ | ,, | ಗೃಹಸ್ಥಾಶ್ರಮ ಹಾಗೂ ಗುರುಸ್ಥಾನ | ೮೫—೧೧೮ |
| ೮ | ,, | ಭಕ್ತರೊಡನೆ | ೧೧೯—೧೩೨ |
| ೯ | ,, | ಮಹಾಸಮಾಧಿ | ೧೩೩—೧೪೭ |
| | | ಶಿಷ್ಟ | i—vii |



ಸಾಧುವರ್ಯ ನಾಗಮಹಾಶಯರು

Vasant Printing Works Dharwar.

स्थापकाय च धर्मस्य सर्वधर्मस्वरूपिणे ।
अवतारवरिष्ठाय रामकृष्णाय ते नमः ॥

# ಸಾಧುವರ್ಯ ನಾಗಮಹಾಶಯರ ಚರಿತ್ರೆಯು.

## ಪೀಠಿಕೆ

ಲೋಕದಲ್ಲಿ ಜೀವನಕಲಹವು ಅಥವಾ ಅದಕ್ಕೂ ಸರಿಯಾಗಿ ಹೇಳಬೇಕೆಂದರೆ ಧ್ಯೇಯಸಿದ್ಧಿಗಾಗಿ ಪ್ರಯತ್ನಿಸುವದು ಯಾರಿಗೂ ತಪ್ಪಿದ್ದಲ್ಲ. ಧ್ಯೇಯವನ್ನು ಸಾಧಿಸುವದು, ಗುರಿಯನ್ನು ಮುಟ್ಟುವದು, ಜಗತ್ತಿನ ನಿಯಮವೇ ಆಗಿದೆ. ಈ ನಿಯಮವು ಮಾನವವಿಕಾಸದ ಪ್ರತಿಯೊಂದು ಸ್ಥಿತಿಯಲ್ಲಿ ಹತ್ತುವದು. ಆದರೂ ಸರ್ವಸಾಧಾರಣವಾಗಿ ಎಲ್ಲರಿಗೂ ಜೀವನದ ಗತಿಯನ್ನು ತಿಳಿದುಕೊಳ್ಳುವದು ಸಾಧ್ಯವಿಲ್ಲ; ಆದರ್ಶದ ಸ್ಪಷ್ಟ ಕಲ್ಪನೆಯೇ ಅವರಿಗೆ ತೋರದು. ಬಹುತರವಾಗಿ ಮನುಷ್ಯನ ಜೀವನಪ್ರವಾಹವು ಅವನಿಗೆ ತಿಳಿಯದಂತೆ ಎದುರಿಗಿನ ಆಚೆಯ ದಂಡೆಗೆ ಸಾಗುತ್ತದೆ. ಜೀವಿತದ ಉದ್ದೇಶವನ್ನು ತಿಳಿದು ಆ ಪ್ರಕಾರ ತಮ್ಮ ಆಚರಣೆಯನ್ನಿಟ್ಟು ವ್ಯವಹರಿಸುವ ಭಾಗ್ಯವಂತರು ಬಹು ವಿರಳ. ಈ ಭಾಗ್ಯವಂತರೇ ನಿಜವಾಗಿಯೂ ಸಮಾಜದ ತಿರುಳೆಂದೂ ಮಾರ್ಗದರ್ಶಕ ದೀಪಸ್ತಂಭವೆಂದೂ ಹೇಳಲು ಅಭ್ಯಂತರವಿಲ್ಲ. ಅವರ ಜೀವನದೀಪವು ಅಂಧಕಾರದಲ್ಲಿ ಪೇಚಾಡುತ್ತಿರುವ ಪ್ರಾಪಂಚಿಕರಿಗೆ ಧ್ಯೇಯದ ದಾರಿಯನ್ನು ತೋರಿಸುವದು. ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿ ಇಂಥ ಮಹಾತ್ಮರು ಆಗಾಗ್ಗೆ ಉದಯಿಸಿ ತಮ್ಮ ಆಚರಣೆಯಿಂದ ಆ ರಾಷ್ಟ್ರಗಳನ್ನೇ ಧ್ಯೇಯದ ಬಾಗಿಲಲ್ಲಿರಿಸಿ, ಅವುಗಳ ಪ್ರಗತಿಯಾಗಲು ಯತ್ನಿಸಿದ್ದಾರೆ. ಯಾವ ದೇಶದಲ್ಲಿ ಇಂಥ ಮಹಾತ್ಮರು ಹುಟ್ಟಿರುವರೋ, ಯಾವ ದೇಶದಲ್ಲಿ ಜನರ

ಪ್ರಕೃತಿ ಗುಣವು ಈ ಧ್ಯೇಯ ವಿಷಯಕ ಜಾಗ್ರತ ಪ್ರೇಮಕ್ಕೆ ಪ್ರೋತ್ಸಾಹಕವಾಗಿರುವದೋ ಅದೇ ದೇಶವು ನಿಜವಾಗಿ ಮುಂದುವರೆದದ್ದು.

शृण्वंतु विश्वे अमृतस्य पुत्रा, आये धामानि दिव्यानि तस्थुः ॥
वेदाहमेतं पुरुषं महांतं, आदित्यवर्णं तमसः परस्तात् ॥
तमेव विदित्वातिमृत्युमेति नान्यः पंथाविद्यतेऽयनाय ॥

"ಅಯ್ಯಾ ಅಮೃತವಸ್ತುವಿನ ಮಕ್ಕಳೇ, ದಿವ್ಯಲೋಕಗಳಲ್ಲಿ ವಾಸಿಸುವ ಜನರೇ, ನೀವೆಲ್ಲರೂ ಕೇಳಿರಿ. ತಮಸ್ಸಿನ ಆಚೆಗಿದ್ದ ಸೂರ್ಯ ಕಾಂತಿಯ ಆ ಮಹಾಪುರುಷನನ್ನು ನಾನು ಕಂಡಿರುವೆನು. ಆವನೊಬ್ಬನ ಜ್ಞಾನವನ್ನು ಮಾಡಿಕೊಂಡರೆ ಮಾತ್ರ ಅಮೃತತ್ವವು ಪ್ರಾಪ್ತವಾಗುವದು. ಮತ್ತೆ ಎರಡನೆಯ ಮಾರ್ಗವಿಲ್ಲ." ಈ ಪ್ರಕಾರವಾಗಿ ಸರ್ವ ಕಾಲದಲ್ಲಿಯೂ ಜೀವನದ ಧ್ಯೇಯ ಮತ್ತು ಅದರ ಉದ್ದೇಶವಿರುವದೆಂದು ವೈದಿಕ ಋಷಿಯು ಸಾರುತ್ತಿದ್ದಾನೆ. ಪ್ರತ್ಯಗಾತ್ಮನು ತನ್ನ ಸ್ವಾಭಾವಿಕವಾದ ಅಮರತ್ವದ ನಿಧಿಯನ್ನು ಕಳೆದುಕೊಂಡು ಅದನ್ನು ಪುನಃ ದೊರಕಿಸುವದಕ್ಕಾಗಿ ವಿಘ್ನಪರಂಪರೆಗಳಿಗೆದುರಾಗಿ ಹೋರಾಡುತ್ತಿರುತ್ತಾನೆ! ಮತ್ತು ಸೃಷ್ಟಿನಿಯಮಾನುಸಾರವಾಗಿ ಅದನ್ನು ದೊರಕಿಸದೆ ಬಿಡನು. ಅದು ದೊರೆಯುವವರೆಗೆ ಈ ಯುದ್ಧವು ನಿಲ್ಲದು.

ಇಂಥ ಅನೇಕ ದೈವೀಪುರುಷರಿಗೆ ಜನ್ಮವೀಯುವ ಭಾಗ್ಯವು ಎಲ್ಲ ದೇಶಗಳಿಗಿಂತ ನಮ್ಮ ಭರತ ಭೂಮಿಗೆ ಹೆಚ್ಚಾಗಿ ದೊರಕಿದೆ. ಈ ಮಹಾ ಪುರುಷರ ತೇಜಸ್ಸು ಯುಗಯುಗಾಂತರಗಳಲ್ಲಿಯೂ ಬೆಳಗುತ್ತಿರುವದು. ತಪ್ಪುದಾರಿಯಿಂದ ಸಾಗಿದ ಮಾನವ ಜಾತಿಗೆ ಅವರ ಜೀವನವು ಮಾರ್ಗ ದರ್ಶಕವಾಗುವದು. ಭರತ ಭೂಮಿಗೆ ಅನೇಕ ರಾಜಕೀಯ ಅಥವಾ ಆರ್ಥಿಕ ಗಂಡಾಂತರಗಳೊದಗಿದ ಕಾಲವು ಅದರ ಕೇಡುಗಾಲವಲ್ಲ. ಆದರೆ ಎಂದು ಇಂಥ ಮಹಾಪುರುಷರ ಜ್ಞಾನದ ಬೆಳಕು ತೋರದೆ, ದೇಶವೆಲ್ಲವೂ ಅಂಧಕಾರಮಯವಾಯಿತೋ ಅಂದೇ ಅದರ ಬಹು ದುರ್ಭಾಗ್ಯದ ಕಾಲವು.

ಹತ್ತೊಂಬತ್ತನೆಯ ಶತಮಾನದಲ್ಲಿ ಹಿಂದುಸ್ತಾನದಲ್ಲಿ ಅದ್ವಿತೀಯವಾದ ಧಾರ್ಮಿಕ ಪ್ರವೃತ್ತಿಯ ವಿಕಾಸವು ತೋರಿಬಂದಿತು. ಅದ್ಭುತ ಮಹಾತ್ಮ್ಯವುಳ್ಳ ಅನೇಕ ದೈವಿಕ ಪುರುಷರ ಉದಯವೇ ಇದಕ್ಕೆ ಉದಾಹರಣೆ. ಭೌತಿಕ ಶಾಸ್ತ್ರದೊಡನೆ ಪರಮಾರ್ಥ ಶಾಸ್ತ್ರವು ಸಾಗಿಸಿದ ಯುದ್ಧದಲ್ಲಿ ಇವರ ಉಪದೇಶ ಪ್ರಭಾವದಿಂದ ಪರಮಾರ್ಥದ ಗೆಲುವಾಯಿತು. ಈ ಮಹಾತ್ಮರ ನಕ್ಷತ್ರಮಾಲಿಕೆಯಲ್ಲಿ ಭಗವಾನ ಶ್ರೀ. ರಾಮಕೃಷ್ಣ ಪರಮಹಂಸರು ನಿರುಪಮ ಜ್ಯೋತಿಯಿಂದ ಬೆಳಗುತ್ತಿರುವರು. ಅವರ ಅವತಾರದಿಂದ ದೇಶವಲ್ಲೆಲ್ಲ ರಾಷ್ಟ್ರೀಯ ಜೀವನದ ಹೊಸಯುಗವು ಪ್ರಾರಂಭವಾಯಿತಲ್ಲದೆ, ಇಡೀ ಜಗತ್ತಿಗೇ ಅಧ್ಯಾತ್ಮ ಜ್ಞಾನವನ್ನೀಯುವ ಶಕ್ತಿಸಂಗ್ರಹವು ಕೂಡ ಆಯಿತು. ದೊಡ್ಡದೊಂದು ತೆರೆಯು ಸಣ್ಣ ಸಣ್ಣ ತೆರೆಗಳಿಂದೊಡಗೂಡಿ ಪೂರ್ಣವಾಗುವಂತೆ ಅಥವಾ ಮಹತ್ತಾದ ಅಗ್ನಿಯು ತನ್ನ ಶರೀರದಿಂದಲೇ ಅನೇಕ ಕಿಡಿಗಳನ್ನು ಹೊರಡಿಸಿ ಮತ್ತಿಷ್ಟು ಪ್ರಕಾಶಮಾನವಾಗುವಂತೆ ಶ್ರೀರಾಮಕೃಷ್ಣ ಪರಮಹಂಸರು ಲೋಕಕ್ಕೆ ತಮ್ಮ ಶಿಷ್ಯಸಂಘವೊಂದನ್ನು ದಯಪಾಲಿಸಿದರು. ಅವರಲ್ಲನೇಕರು ಇತಿಹಾಸ ಪ್ರಸಿದ್ಧರಾಗಿದ್ದಾರೆ. ಆದರೂ ಅವರ ಶಿಷ್ಯರಲ್ಲನೇಕರು ಅಜ್ಞಾತವಾಗಿ ಏಕಾಂತವಾಸದಲ್ಲಿದ್ದು ತಮ್ಮ ಪರಮೋಚ್ಚ ಜೀವನವನ್ನು ನಡೆಯಿಸಿ ಸುತ್ತುಮುತ್ತಲಿದ್ದವರನ್ನು ಉತ್ಕಟ ಧಾರ್ಮಿಕ ಉತ್ಸಾಹದಿಂದ ತುಂಬಿದರು. ರಾಮಕೃಷ್ಣ ಪರಮಹಂಸರ ಇಂಥ ಅನೇಕ ಶಿಷ್ಯರಲ್ಲೊಬ್ಬರ ಚರಿತ್ರೆಯನ್ನು ಈ ಪುಸ್ತಕದಲ್ಲಿ ಬರೆಯಲುದ್ದೇಶಿಸಿದೆ. ಈಗಿನ ಸಮಾಚಾರದಲ್ಲಿ ಸದ್ಯದ ಪರಿಸ್ಥಿತಿಯಲ್ಲಿ ಸಹ ಪ್ರಾಪಂಚಿಕರು ಅತ್ಯಂತ ಸನ್ಯಸ್ತವೃತ್ತಿಯಿಂದಲೂ ಅತ್ಯುಚ್ಚ ಆಧ್ಯಾತ್ಮಿಕವೃತ್ತಿಯಿಂದಲೂ ಹೇಗೆ ಇರಬಹುದೆಂಬದನ್ನು ಸಿದ್ಧಪಡಿಸಲು ಈ ಚರಿತ್ರೆಯು ಬಹು ಚೆನ್ನಾದ ಉದಾಹರಣೆಯಾಗಿದೆ.

# ೧ನೆಯ ಪ್ರಕರಣ

## ಬಾಲ್ಯ.

ಈ ಸಾಧುವರ್ಯರ ಚರಿತ್ರೆಯನ್ನು ಪರಮಪೂಜ್ಯ ಸ್ವಾಮೀವಿವೇಕಾನಂದರ ಚಿರಸ್ಮರಣೀಯವಾದ ಶಬ್ದಗಳಿಂದ ಪ್ರಾರಂಭಿಸುವಾ "ಪೃಥ್ವಿಯ ದೂರ ದೂರ ದೇಶಗಳಲ್ಲಿ ನಾನು ಪ್ರವಾಸ ಮಾಡಿರುವೆನು. ಆದರೆ ನಾಗಮಹಾಶಯರಂಥ ಮಹಾತ್ಮನನ್ನು ಎಲ್ಲಿಯೂ ಕಾಣಲಿಲ್ಲ'' ಎಂದು ಅವರು ಅನ್ನುತ್ತಿದ್ದರು.

ಪೂರ್ವಬಂಗಾಲದಲ್ಲಿ ನಾರಾಯಣಗಂಜ ಎಂಬ ಬಂದರದಿಂದ ಒಂದೇ ಮೈಲು ದೂರದಲ್ಲಿ ದೇವಭೋಗವೆಂಬ ಸಣ್ಣ ಹಳ್ಳಿಯಿದೆ. ಇಲ್ಲಿಯೇ ನಮ್ಮ ಚರಿತ್ರನಾಯಕರಾದ ಸಾಧುವರ್ಯ ದುರ್ಗಾಚರಣ ನಾಗಮಹಾಶಯರ ಜನ್ಮವು ವಿಕ್ರಮ ಶಕೆ ೧೨೫೩ ಭಾದ್ರಪದ ಶುದ್ಧ ಷಷ್ಠಿಯ ದಿವಸ (ತಾ॥ ೧—೮—೧೮೪೬ನೇ ಇಸ್ವಿ) ಆಯಿತು. ಅವರ ತಂದೆಯ ಹೆಸರು ದೀನದಯಾಳ ಮತ್ತು ತಾಯಿಯ ಹೆಸರು ತ್ರಿಪುರಸುಂದರಿ. ಅವರ ಮೂಲ ಊರು ತಿಲರ್ಡಿ ಎಂಬುದು. ಆದರೆ ಎರಡು ಮೂರು ತಲೆಗಳಿಂದ ಹಿಂದಿನ ಹಿರಿಯರು ದೇವಭೋಗದಲ್ಲಿ ವಸತಿಯಾದರು. ದೀನದಯಾಳರಿಗೆ ಇಬ್ಬರು ಸಹೋದರಿಯರು. ಹಿರಿಯಳಾದ ಭಗವತಿಯು ಒಂಭತ್ತನೇ ವರ್ಷದಲ್ಲಿ ವಿಧವೆಯಾಗಿ ಜೀವಮಾನ ಪರ್ಯಂತ ತನ್ನ ತಮ್ಮನ ಮನೆಯಲ್ಲಿಯೇ ಇದ್ದಳು. ಚಿಕ್ಕವಳಾದ ಭಾರತಿಯ ವಿಷಯವಾಗಿ ವಿಶೇಷವೇನೂ ತಿಳಿದಿಲ್ಲ. ಆದರೆ ಅವಳು ತನ್ನ ಅಣ್ಣನ ಮನೆಗೆ ಕ್ವಚಿತ್ತಾಗಿ ಬರುತ್ತಿದ್ದಳೆಂದೂ ಅಕ್ಕನಿಗಿಂತ ಮೊದಲೇ ತೀರಿಹೋದಳೆಂದೂ ಹೇಳುತ್ತಾರೆ.

ದೀನದಯಾಳರಿಗೆ ದುರ್ಗಾಚರಣರ ಹೊರತಾಗಿ ಇಬ್ಬರು ಹೆಣ್ಣುಮಕ್ಕಳೂ ಒಬ್ಬ ಗಂಡುಮಗನೂ ಹುಟ್ಟಿದ್ದರು. ಆದರೆ ದುರ್ಗಾಚರಣರ ಬೆನ್ನ ಮೇಲೆ ಹುಟ್ಟಿದ ಶಾರದಾಮಣಿಯೊಬ್ಬಳನ್ನು ಬಿಟ್ಟು ಉಳಿದವ

ರೆಲ್ಲರೂ ಬಾಲರೋಗದಿಂದ ಮರಣಹೊಂದಿದರು. ಅವನ ತಾಯಿಯಾದರೂ ಕಡೆಯ ಮಗುವಿಗೆ ಜನ್ಮವಿತ್ತ ಸ್ವಲ್ಪ ದಿನಗಳಲ್ಲಿಯೇ ಭಗವತಿಯ ಕೈಯಲ್ಲಿ ತನ್ನ ಇಬ್ಬರೂ ಮಕ್ಕಳನ್ನೊಪ್ಪಿಸಿ ಸೂತಿಕಾರೋಗದಿಂದ ಕಾಲವಶಳಾದಳು.

ಈ ಪ್ರಕಾರ ದುರ್ಗಾಚರಣರೂ ಅವರ ತಂಗಿಯಾದ ಶಾರದಾಮಣಿಯೂ ಅನುಕ್ರಮವಾಗಿ ೯ ಮತ್ತು ೪ ವರ್ಷ ವಯಸ್ಸಿನಲ್ಲಿಯೇ ಮಾತೃಹೀನರಾದರು. ದೀನದಯಾಳರು ದ್ವಿತೀಯ ವಿವಾಹದ ಗೋಜಿಗೆ ಹೋಗದ್ದರಿಂದ ಈ ಇಬ್ಬರು ಮಕ್ಕಳ ಪೋಷಣೆಯ ಭಾರವನ್ನು ಅವರ ಅಕ್ಕನಾದ ಭಗವತಿಯೇ ವಹಿಸಬೇಕಾಯಿತು. ಭಗವತಿಯಾದರೂ ಅತ್ಯಂತ ಪ್ರೇಮದಿಂದ ಇವರನ್ನು ತಾಯಿಗಿಂತ ಹೆಚ್ಚಾಗಿ ಸಂರಕ್ಷಿಸಿದಳು. ದುರ್ಗಾಚರಣರ ಮೇಲಂತೂ ಇವಳದು ವಿಶೇಷ ಪ್ರೇಮ. ಭಗವತಿಯು ತಮ್ಮ ಮೇಲೆ ತೋರಿಸಿದ ಅನುರಾಗದ ವಿಷಯವಾಗಿ "ನನ್ನ ಈ ಸೋದರತ್ತೆಯು ಪೂರ್ವಜನ್ಮದಲ್ಲಿ ನನ್ನ ತಾಯಿಯಾಗಿರಬೇಕೆಂ"ದು ನಾಗಮಹಾಶಯರು ಆಗಾಗ್ಗೆ ಅನ್ನುತ್ತಿದ್ದರು.

ದೀನದಯಾಳರು ದೇವಬ್ರಾಹ್ಮಣರ ಬಗ್ಗೆ ವಿಶೇಷ ಪೂಜ್ಯಬುದ್ಧಿಯುಳ್ಳವರೂ ಬಹು ಧರ್ಮಪರಾಯಣರೂ ಆಗಿದ್ದರು. ಅವರು ಕಲಕತ್ತೆಯಲ್ಲಿ ಕುಮಾರತುಲಿ ಎಬಲ್ಲಿರುವ ಶ್ರೀ. ರಾಜಕುಮಾರ ಮತ್ತು ಹರಿಚರಣಪಾಲ ಚೌಧರಿ ಎಂಬ ವ್ಯಾಪಾರಸ್ಥರಲ್ಲಿ ಅಲ್ಪ ವೇತನ ತೆಗೆದುಕೊಂಡು ಕೆಲಸ ಮಾಡುತ್ತಿದರು. ಕುಮಾರತುಲಿಯಲ್ಲಿ ಅವರದೊಂದು ಹಂಚಿನ ಗುಡಿಸಲಿದ್ದು ಅವರು ಅದರಲ್ಲಿಯೇ ವಾಸಮಾಡುತ್ತಿದ್ದರು.

ಪಾಲ ಇವರು ದೀನದಯಾಳರನ್ನು ಸೇವಕಭಾವದಿಂದ ನೋಡದೆ ತಮ್ಮ ಕುಟುಂಬದವರಲ್ಲೊಬ್ಬರೆಂದೇ ತಿಳಿಯುತ್ತಿದ್ದರು. ಸತ್ವವಂತರೂ ನಿಸ್ಪೃಹರೂ ಧರ್ಮಪರಾಯಣರೂ ಆಗಿರುವ ದೀನದಯಾಳರ ಮೇಲೆ ಅವರ ನಂಬಿಗೆಯು ಬಹಳವಿತ್ತು. ಅವರು ಎಂದೂ ದೀನದಯಾಳರಿಗೆ ಲೆಕ್ಕವನ್ನು ಒಪ್ಪಿಸಲು ಕೇಳುತ್ತಿದ್ದಿಲ್ಲ. ಒಮ್ಮೆ ಅವರ ಲೆಕ್ಕದಲ್ಲಿ ಕೆಲವು ಸಾವಿರ ರೂಪಾಯಿಗಳು ಕೊರತೆಯಾಗಿದ್ದದ್ದು ಕಂಡುಬಂದಿತು. ದೀನದಯಾಳರು ಆ ಹಣವನ್ನು ಎತ್ತಿ ಹಾಕಿ ಅಸದ್ವಿನಿಯೋಗಮಾಡಿಲ್ಲೆಂಬ

ಬಗ್ಗೆ ಪಾಲರು ಸಂಪೂರ್ಣ ನಿಶ್ಚಿತರಿದ್ದರು. ಆದ್ದರಿಂದ ಆ ಕೊರತೆಯಾದ ಹಣವನ್ನು ಲೆಕ್ಕದಿಂದ ತೆಗೆದುಹಾಕಿ ಸರಿಮಾಡಿ ಬಿಡಲಿಕ್ಕೆ ಅಪ್ಪಣೆ ಮಾಡಿದರು. ಸುಮಾರು ಒಂದು ವರ್ಷದ ನಂತರ ಆ ಹಣದ ಕೊರತೆಯ ಕಾರಣವು ತಿಳಿಯಬಂದಿತು. ಹೀಗಾಗಿ ದೀನದಯಾಳರ ಮೇಲಿನ ಅವರ ವಿಶ್ವಾಸವು ಮತ್ತಿಷ್ಟು ಬೆಳೆಯಲು ಕಾರಣವಾಯಿತು. ಅಂದಿನಿಂದ ಪಾಲರು ದೀನದಯಾಳರಿಗೆ ಆದಷ್ಟು ಹೆಚ್ಚಿಗೆ ಪ್ರಾಪ್ತಿಯಾಗುವಂತೆ ನೋಡುತ್ತಿದ್ದರು. ಇದೇ ಕಾಲದ ಮತ್ತೊಂದು ಮಹತ್ವದ ಸಂಗತಿಯನ್ನು ಇಲ್ಲಿ ಹೇಳಿದರೆ ಅಪ್ರಸ್ತುತವಾಗಲಿಕ್ಕಿಲ್ಲ.

ಪಾಲರು ಉಪ್ಪಿನ ನಿರ್ಯಾತವನ್ನು ಕೈಕೊಂಡ ವ್ಯಾಪಾರಸ್ಥರಾಗಿದ್ದರು. ಆದ್ದರಿಂದ ಅವರು ಆಗಾಗ್ಗೆ ತಮ್ಮ ಸರಕನ್ನು ಡೋಣಿಗಳಲ್ಲಿ ತುಂಬಿ ನಾರಾಯಣಗಂಜಕ್ಕೆ ಕಳಿಸುತ್ತಿದ್ದರು. ಆ ಹಾದಿಯು ಕಳ್ಳರಿಂದ ಕೂಡಿದ ದಟ್ಟಡವಿಯೊಳಗಿಂದ ಹೋಗಿತ್ತು. ಹೀಗಾಗಿ ಆ ಸರಕಿನ ಕೂಡ ಅದರ ರಕ್ಷಣೆಗಾಗಿ ಯಾವನಾದರೊಬ್ಬ ಶೂರನೂ ವಿಶ್ವಾಸಿಕನೂ ಆದ ಅಧಿಕಾರಿಯಿರುವದು ಅತ್ಯಾವಶ್ಯವಿರುತ್ತಿತ್ತು. ಒಂದು ಸಾರೆ ದೀನದಯಾಳರಿಗೆ ಇದೇ ಕೆಲಸದ ಮೇಲೆ ಹೋಗುವ ಪ್ರಸಂಗ ಬಂದಿತು. ಸುಂದರಬನವನ್ನು ಪ್ರವೇಶಿಸಿ ಡೋಣಿಯು ಒಂದು ಸುರಕ್ಷಿತ ಸ್ಥಳವನ್ನು ಮುಟ್ಟುವಷ್ಟರಲ್ಲಿಯೇ ದಟ್ಟಾಗಿ ಕತ್ತಲೆಗವಿಯಿತು. ಇನ್ನು ಮುಂದೆ ಹೋಗುವದು ಸುರಕ್ಷಿತವಲ್ಲವೆಂದು ದೀನದಯಾಳರು ತಿಳಿದರು. ಹತ್ತರದಲ್ಲಿಯೇ ದಂಡೆಯ ಮೇಲೆ ಒಂದು ದೊಡ್ಡ ಹಾಳುಮನೆಯನ್ನೂ ಅದರ ಸುತ್ತಲು ಒಕ್ಕಲಿಗರ ಎರಡು ಮೂರು ಗುಡಿಸಲುಗಳನ್ನೂ ಕಂಡು ಅಲ್ಲಿಯೇ ಡೋಣಿಗಳನ್ನು ನಿಲ್ಲಿಸಲಿಕ್ಕೆ ಅವರು ಅಪ್ಪಣೆಮಾಡಿದರು.

ಎಲ್ಲ ನಾವಾಡಿಗರು ಊಟವಾದ ಕೂಡಲೇ ಮಲಗಿಕೊಂಡುಬಿಟ್ಟರು. ಆದರೆ ದೀನದಯಾಲರು ಮಾತ್ರ ಕೈಯಲ್ಲೊಂದು ಗಟ್ಟಿಯಾದ ಕೋಲನ್ನು ಹತ್ತರ ಇಟ್ಟುಕೊಂಡು ರಾತ್ರಿಯೆಲ್ಲ ಎಚ್ಚತ್ತಿದ್ದರು. ಕ್ರಮೇಣ ರಾತ್ರಿಯು ಕಳೆಯುತ್ತ ಬೆಳಗಿನ ಜಾವವು ಬಂದಿತು. ಐದು ಗಂಟೆಯ ಸುಮಾರಿಗೆ ವಿಶ್ರಾಂತಿಯನ್ನು ತಕ್ಕೊಳ್ಳುವದಕ್ಕಾಗಿ ದೀನದಯಾಳರು ಆ ಹಾಳುಮನೆಯ ಕಡೆಗೆ ಸಾಗಿದರು. ಸ್ವಭಾವವಾಗಿಯೇ ಚಪಲರಾದ ಅವರು

ಸುಮ್ಮನೆ ಕೂಡಲಾರದೆ ಒಂದು ಕಡೆಯಲ್ಲಿ ತಮ್ಮ ಬೆರಳುಗಳಿಂದ ನೆಲವನ್ನು ಕೆದರಹತ್ತಿದರು. ಅಷ್ಟರಲ್ಲಿಯೇ ಅಕಸ್ಮಾತ್ತಾಗಿ ಅವರ ಕೈಗೆ ನಾಣ್ಯವೊಂದು ಹತ್ತಿದಂತಾಯಿತು. ಹೀಗಾಗಿ ಅವರ ಕುತೂಹಲವು ಹೆಚ್ಚಿ ಮತ್ತಿಷ್ಟು ಮಣ್ಣನ್ನು ಆ ಸ್ಥಳದಿಂದ ತೆಗೆಯಲಾಗಿ ಬಂಗಾರದ ನಾಣ್ಯಗಳಿಂದ ತುಂಬಿದ ಪಾತ್ರೆಯೊಂದು ಕಂಡುಬಂದಿತು. ದೀನದಯಾಳರಿಗೆ ಅತ್ಯಾಶ್ಚರ್ಯವಾಯಿತು. ಅದರಲ್ಲಿಯ ಕೆಲವು ನಾಣ್ಯಗಳನ್ನು ಪರೀಕ್ಷಿಸಲಾಗಿ ಅವು ಪೂರ್ವಕಾಲದವುಗಳೆಂದು ತಿಳಿಯಿತು. ಆದರೂ ಅವರು ಚಂಚಲಚಿತ್ತರಾಗಲಿಲ್ಲ. ಅವುಗಳನ್ನು ಪುನಃ ಆ ಪಾತ್ರೆಯಲ್ಲಿ ಹಾಕಿ ಅದೇ ಮಣ್ಣಿನಲ್ಲಿ ಮುಚ್ಚಿಬಿಟ್ಟರು; ಮತ್ತು ಆಗಿಂದಾಗಲೇ ಆ ಸ್ಥಳದಿಂದ ತಮ್ಮ ಡೋಣಿಗಳ ಕಡೆಗೆ ಬಂದರು. ನಾವಿಕರಿಗೆ ಕ್ಷಣಸಹ ವಿಲಂಬ ಮಾಡದೇ ನೌಕೆಗಳನ್ನು ಮುಂದೆ ಸಾಗಿಸಲು ಹೇಳಿದರು. ಎಷ್ಟೋ ದಿನಗಳ ನಂತರ ಅವರು ಹೀಗೆ ಹೇಳಿದರು "ಆ ಪಾತ್ರೆಯನ್ನು ನೋಡಿದ ಕೂಡಲೆ ಅದನ್ನು ತೆಗೆದುಕೊಳ್ಳುವ ಆಶೆಯು ಸಾವಕಾಶವಾಗಿ ಪ್ರಾದುರ್ಭೂತವಾಯಿತು. ನಾನು ಒಮ್ಮೆಲೇ ಶ್ರೀಮಂತನಾಗಬೇಕೆಂದು ಬಯಸಿದೆ. ಆದರೆ ಆ ಹಣವು ಅಕಸ್ಮಾತ್ತಾಗಿ ಯಾವನಾದರೊಬ್ಬ ಬ್ರಾಹ್ಮಣನದಾಗಿರಬಹುದೆಂದೂ ಅದನ್ನು ತಕ್ಕೊಂಡರೆ ನಾನು ನರಕಗಾಮಿಯಾಗಬೇಕೆಂಬ ವಿಚಾರವು ತಟ್ಟನೆ ಹೊಳೆಯಿತು. ಆದ್ದರಿಂದ ಆ ಕ್ಷಣದಲ್ಲಿಯೇ ಆ ಸ್ಥಳದಿಂದ ಜಾರಿಬಂದು ಮೋಹಮಯವಾದ ಆಶೆಯಿಂದ ಪಾರಾದೆನು.''

ನಾಗಮಹಾಶಯರ ಬಾಲ್ಯದ ವಿಷಯವಾಗಿ ವಿಶೇಷವೇನೂ ತಿಳಿದಿಲ್ಲ. ಆದರೆ ಅವರು ಮಧುರಭಾಷಿಗಳಾಗಿಯೂ ವಿನಯಿಗಳಾಗಿಯೂ ಸದ್ವರ್ತನವುಳ್ಳವರಾಗಿಯೂ ಇದ್ದರೆಂದು ಐತಿಹ್ಯವಿದೆ. ಅವರ ಶರೀರವು ಕೂಡ ಬಲವಂತವಿತ್ತು. ಸುಂದರವಾದ ಉದ್ದವಾದ ತಲೆಗೂದಲುಗಳು ತಲೆಯಿಂದ ಜೋಲುಬಿದ್ದಿರಲಾಗಿ ಬಹು ಸುಂದರವಾಗಿ ಕಾಣುತ್ತಿದ್ದವು. ಬೆಳ್ಳಿಯ ಎರಡು ಕಡಗಗಳನ್ನು ಬಿಟ್ಟರೆ ಉಳಿದ ಯಾವತರಹದ ಆಭರಣವೂ ಇವರಿಗೆ ಇದ್ದಿಲ್ಲ. ಆದರೆ ಸ್ವಭಾವಸುಂದರರಾದ ಇವರು ಆಭರಣವಿಹೀನರಾದರೂ ಉಳಿದ ಹುಡುಗರಿಗಿಂತ ಚಲುವರಾಗಿಯೇ ತೋರುತ್ತಿದ್ದರು.

ನೆರೆಯ ಹೆಂಗಸರಾದರೂ ಈ ಮಗುವನ್ನು ಕಂಡರೆ ಕರೆದುಕೊಂಡು ಸಂತೋಷದಿಂದ ಆಡಿಸುತ್ತಿದ್ದರು. ಬಾಲ್ಯದಲ್ಲಿ ಸಹ ಇವರದೊಂದು ವಿಶೇಷಗುಣವೇನಿತ್ತೆಂದರೆ ಪರಕೀಯರಿಂದ ಕೊಡಲ್ಪಟ್ಟ ಯಾವ ವಸ್ತುವನ್ನೂ ಇವರು ತಿನ್ನುತ್ತಿರಲಿಲ್ಲ.

ಸಂಜೆಯಲ್ಲಿ ಈ ಶಾಂತಮಗುವು ನಕ್ಷತ್ರಮಯವಾದ ಆಕಾಶದ ಕಡೆಗೆ ದೃಷ್ಟಿಯನ್ನಿಟ್ಟು ತಲೆಯ ಮೇಲೆ ಮಿನುಗುತ್ತಿದ್ದ ಆ ಚಿಕ್ಕೆಗಳನ್ನು ನೋಡುತ್ತ ಒಂದೇ ಎಷ್ಟೋ ಹೊತ್ತು ನಿಲ್ಲುವದು. ತನ್ನ ಸೋದರತ್ತೆಗೆ "ಅವ್ವಾ, ಈ ನಕ್ಷತ್ರಗಳ ರಾಜ್ಯಕ್ಕೆ ಹೋಗೋಣ ನಡೆಯೇ, ನನಗೆ ಇಲ್ಲಿ ಇರಲು ಅಷ್ಟು ಮನಸ್ಸು ಬಾರದು.'' ಎಂದು ಈ ಬಾಲಕನು ಪ್ರೇಮದಿಂದ ನುಡಿಯುವನು. ಚಂದ್ರೋದಯವಾದ ಕೂಡಲಂತೂ ತನ್ನ ಚಿಕ್ಕ ಕೈಗಳಿಂದ ಚಪ್ಪಾಳಿಯಿತ್ತು ಆನಂದದಿಂದ ಕುಣಿದಾಡುವನು. ಗಾಳಿಯಿಂದ ಮರಗಳು ಭರಭರ ಎನ್ನುತ್ತಾ ಹೊಯ್ದಾಡುವಾಗ್ಗೆ ಅವು ತನ್ನನ್ನು ಆಟಕ್ಕೆ ಕರೆಯುತ್ತಿರುವವೆಂದು ತಿಳಿದು 'ಅವ್ವಾ, ಅವುಗಳ ಕೂಡ ಆಡಲು ನಾನು ಹೋಗಲೇ?' ಎಂದೆನ್ನುವನು; ಮತ್ತು ನಿಜವಾಗಿಯೂ ಅವು ತನ್ನ ಜೊತೆಗಾರರೆಂದು ತಿಳಿದು ಅವುಗಳಂತೆ ತಾನೂ ಮಾಡುವನು. ಎಲ್ಲರೂ ಮಗುವಿನ ಆಟವನ್ನು ನೋಡಿ ಸಂತಸಬಡುವರು.

ಅವನ ಸೋದರತ್ತೆಯು ಇವನಿಗೆ ಪುರಾಣದೊಳಗಿನ ಅನೇಕ ಮನೋಹರ ಕತೆಗಳನ್ನು ಆಗಾಗ್ಗೆ ಹೇಳುತ್ತಿದ್ದಳು. ಮಹಾಭಾರತ ರಾಮಾಯಣಗಳೊಳಗಿನ ಕತೆಗಳನ್ನು ಹೇಳುತ್ತಾ ಅವನನ್ನು ಮಲಗಿಸುತ್ತಿದ್ದಳು. ಅವನು ಕತೆಯನ್ನು ಕೇಳದೆ ಒಂದು ದಿನವನ್ನಾದರೂ ಕಳೆಯಲಿಲ್ಲ. ಎಂದಾದರೂ ಭಗವತಿಯು ಬೇಸತ್ತರೆ ಅವನು ಹೇಗಾದರೂ ಮಾಡಿ ಕಾಡಿ ಬೇಡಿ ಅವಳಿಗೆ ಕಥೆ ಹೇಳಹಚ್ಚುತ್ತಿದ್ದನು. ಎಷ್ಟೋ ಸಾರೆ ಈ ಕಥೆಗಳ ಕನಸುಗಳು ಅವನಿಗೆ ಬೀಳುತ್ತಿದ್ದವು. ಕನಸಿನಲ್ಲಿಯ ದೇವದೇವತೆಗಳ ಮೂರ್ತಿಗಳನ್ನು ನೋಡಿ ಬೆದರಿ ಎಚ್ಚರಾಗಲು, ಆ ದಿನವೆಲ್ಲ ದುಡಿದು ಹೈರಾಣಾಗಿ ನಿದ್ರೆಹೋದ ಸೋದರತ್ತೆಗೆ ತೊಂದರೆಕೊಡಬಾರದೆಂದು ತಿಳಿದು ಅವಳನ್ನು ಎಬ್ಬಿಸದೆ ಅವಳ ಬಳಿಯಲ್ಲಿಯೇ ಕೂತುಬಿ

ಡುತ್ತಿದ್ದನು. ಮುಂಜಾನೆ ಕನಸಿನ ಸಂಗತಿಯನ್ನು ಹೇಳಲಾಗಿ ಅವಳು ಭಯಗ್ರಸ್ತಳೂ ಆಶ್ಚರ್ಯಚಕಿತಳೂ ಆಗುತ್ತಿದ್ದಳು.

ಪುರಾಣಪ್ರಸಿದ್ಧನಾದ ಪ್ರಲ್ಹಾದನಂತೆ ನಾಗಮಹಾಶಯನಾದರೂ ಚಿಕ್ಕಂದಿನಿಂದಲೂ ಆಟಗೂಳಿಯಾಗಿರಲಿಲ್ಲ. ತನ್ನ ಗೆಳೆಯರನ್ನು ಸಂತೋಷಬಡಿಸುವದಕ್ಕೆಂದು ಮಾತ್ರ ಯಾವಾಗಾದರೊಮ್ಮೆ ಆಡುತ್ತಿದ್ದನು. ಆದರೆ ಆಟದಲ್ಲಿಯೇ ಆಗಲಿ ಚೇಷ್ಟೆಯಿಂದಾದರೂ ಆಗಲಿ ಸುಳ್ಳನ್ನೆಂದೂ ಆಡುತ್ತಿದ್ದಿಲ್ಲ. ಸತ್ಯದ ಬಗ್ಗೆ ಅವರ ಪ್ರೇಮವು ಬಹಳವಿತ್ತು. ಅವನ ಸ್ನೇಹಿತರಲ್ಲಿ ಯಾರಾದರೂ ಸುಳ್ಳು ಮಾತಾಡಿದರೆ ಅವರ ಕೂಡ ಯಾವ ತರಹದ ಸ್ನೇಹಸಂಬಂಧವನ್ನೂ ಬೆಳೆಸುತ್ತಿದ್ದಿಲ್ಲ. ಆಟದಲ್ಲಿ ಎಂದಾದರೂ ಜಗಳ ಬಂದರೆ ಎರಡೂ ಬಣದವರು ಸಂತುಷ್ಟರಾಗುವಂತೆ ಅದನ್ನು ನ್ಯಾಯವಾಗಿ ಬಗೆಹರಿಸುತ್ತಿದ್ದನು. ಹೀಗಾಗಿ ಎಲ್ಲರೂ ಅವನನ್ನು ತಮ್ಮ ಮುಂದಾಳೆಂದು ತಿಳಿಯುತ್ತಿದ್ದರು. ಚಿಕ್ಕಂದಿನಿಂದಲೂ ತನ್ನ ಸಾಧು ವರ್ತನದಿಂದ ಹಿರಿಕಿರಿಯರೆಲ್ಲರನ್ನೂ ತನ್ನ ಕಡೆಗೆ ಅವನು ಆಕರ್ಷಿಸಿಕೊಂಡಿದ್ದನು. ದೀನದಯಾಳರ ಮಗನಂಥ ಸರಳನೂ ವಿನಯಿಯೂ ಸಭ್ಯನೂ ಆದ ಹುಡುಗನನ್ನು ಎಲ್ಲಿಯೂ ನೋಡಿಲ್ಲವೆಂದೆನ್ನುವ ಅನೇಕ ಜನರು ಇನ್ನೂ ದೇವಭೋಗದಲ್ಲಿ ಜೀವಿಸುತ್ತಿರುವರು.

ನಾಗಮಹಾಶಯನ ತಾಯಿಯು ತೀರಿಕೊಂಡ ನಂತರ ಅವನ ಸೋದರತ್ತೆಯೇ ಅವನನ್ನು ಪ್ರೇಮಪೂರ್ವಕವಾಗಿ ಸಂರಕ್ಷಿಸಿದಳು. ನಾಗಮಹಾಶಯನು ದೊಡ್ಡವನಾಗಹತ್ತಿದಂತೆ ಅವನಿಗೆ ವಿದ್ಯೆಯನ್ನು ಕಲಿಯಬೇಕೆಂಬ ಇಚ್ಛೆಯು ತೀವ್ರವಾಗುತ್ತ ಬಂದಿತು. ಈಗಿನಂತೆ ಆಗ್ಗೆ ಬಂಗಾಲದಲ್ಲಿ ಬಹಳ ಶಾಲೆಗಳಿರಲಿಲ್ಲ. ನಾರಾಯಣಗಂಜದಲ್ಲಿ ಮಾತ್ರ ಒಂದೇ ಒಂದು ಪ್ರಾಥಮಿಕ ಶಾಲೆಯಿತ್ತು. ನಾಗಮಹಾಶಯನ ಶಿಕ್ಷಣವೂ ಅಲ್ಲಿಯೇ ಪ್ರಾರಂಭವಾಯಿತು. ಆ ಶಾಲೆಯಲ್ಲಿ ಮೂರನೆಯ ಇಯತ್ತೆಗಿಂತ ಹೆಚ್ಚಿಗೆ ಕಲಿಸುತ್ತಿದ್ದಿಲ್ಲವಾದ್ದರಿಂದ ಅವನ ಶಿಕ್ಷಣವು ಅದಕ್ಕಿಂತ ಮುಂದಕ್ಕೆ ಸಾಗಲಿಲ್ಲ. ಹೀಗಾಗಿ ಅವನು ಖಿನ್ನಮನಸ್ಕನಾದನು. ದುರ್ಗಾಪೂಜೆಯ ಸಮಯದಲ್ಲಿ ಅವನ ತಂದೆಯು ಊರಿಗೆ ಬಂದಾಗ್ಗೆ ಕಲಕತ್ತೆಯಲ್ಲಿ ತನ್ನ ಅಭ್ಯಾಸವನ್ನು ಸಾಗಿಸುವ ಇಚ್ಛೆಯಿದೆಯೆಂದು ಆತನಿಗೆ ಹೇಳಿದನು. ಆದರೆ ಮನೆಯ

ನವು ತೀರ ದರಿದ್ರಾವಸ್ಥೆಯಲ್ಲಿದ್ದುದರಿಂದ ಹಾಗೆ ಮಾಡುವದು ಸಾಧ್ಯವಿಲ್ಲೆಂದು ಆತನು ಹೇಳಿದನು. ಅತ್ಯಂತ ದುಃಖಿತನಾಗಿ ಕಲಕತ್ತೆಯಲ್ಲಿ ಕಲಿಯುವ ಹವ್ಯಾಸವನ್ನು ಬಿಟ್ಟುಕೊಟ್ಟು ತಮ್ಮ ಜಿಲ್ಲೆಯಲ್ಲಿಯೇ ಯಾವದಾದರೊಂದು ಶಾಲೆಯಲ್ಲಿ ಕಲಿಯುವದು ಸಾಧ್ಯವಿದೆಯೋ ಎಂದು ಅವನು ವಿಚಾರಮಾಡಹತ್ತಿದನು. ಡಾಕಾಪಟ್ಟಣದಲ್ಲಿ ಅನೇಕ ಶಾಲೆಗಳಿರುವವೆಂದು ಅವನಿಗೆ ಹೇಗೋ ತಿಳಿಯಬಂತು. ಆದರೆ ಡಾಕಾಪಟ್ಟಣವು ನಾರಾಯಣ ಗಂಜದಿಂದ ೧೦ ಮೈಲು ದೂರವಿದ್ದುದರಿಂದ ಅಲ್ಲಿಗೆ ಹೋಗಿ ತಿರುಗಿ ಬರಬೇಕೆಂದರೆ ಒಟ್ಟಿಗೆ ೨೦ ಮೈಲು ನಡೆಯಬೇಕಾಗುತ್ತಿತ್ತು. ಅವನ ತಂದೆಯೂ ಸೋದರತ್ತೆಯೂ ಉಳಿದ ಮಿತ್ರರೂ ಹಿತಚಿಂತಕರೂ ಅಲ್ಲಿಗೆ ಹೋಗಿ ಬಂದು ಮಾಡುವದು ಯುಕ್ತವಲ್ಲವೆಂದು ಸಲಹೆಕೊಟ್ಟರು. ನಾಗಮಹಾಶಯನಾದರೋ ದೃಢ ನಿಶ್ಚಯವುಳ್ಳವನು. ಯಾರಿಗೂ ತಿಳಿಸದೆ ಮರುದಿವಸ ಮುಂಜಾನೆ ಆಹಾರಕ್ಕಾಗಿ ಸ್ವಲ್ಪ ಚುರಮರಿಗಳನ್ನು ತಕ್ಕೊಂಡು ಡಾಕಾಕ್ಕೆ ಹೊರಟುಹೋದನು. ಡಾಕಾದಲ್ಲೆಲ್ಲ ಇಡೀದಿವಸ ತಿರುಗಾಡಿ ತನ್ನ ಮನಸಿಗೆ ಬರುವಂಥ ಶಾಲೆಯನ್ನು ಹುಡುಕಿಕೊಂಡು ಸಂಜೆಗೆ ತಿರುಗಿ ಮನೆಗೆ ಬಂದನು. ಮನೆಗೆ ಬರುವಷ್ಟರಲ್ಲಿ ಕತ್ತಲೆಯಾಗಿತ್ತು. ಇಷ್ಟರಲ್ಲಿ ಅವನ ಸೋದರತ್ತೆಯು ನೆರೆಯ ಹಳ್ಳಿಗಳಲ್ಲೆಲ್ಲ ಇವನನ್ನು ಹುಡುಕಿ ಹುಡುಕಿ ಕಾಣಲಾರದೇ ಬೇಸತ್ತು ಚಿಂತಿಸುತ್ತ ಕುಳಿತಿದ್ದಳು. ನಾಗಮಹಾಶಯನು ಮನೆಗೆ ಬಂದ ಕೂಡಲೆ ಅವನನ್ನು ನೋಡಿ ಆವಳಿಗೆ ಹಿಡಿಸಲಾರದಷ್ಟು ಆನಂದವಾಯಿತು. ಮೊದಲು ಅವನಿಗೆ ಊಟಕ್ಕೆ ಹಾಕಿ ಆ ಮೇಲೆ ಎಲ್ಲಿಗೆ ಹೋಗಿದ್ದನೆಂಬ ಬಗ್ಗೆ ವಿಚಾರಿಸಹತ್ತಿದಳು. ನಾಗಮಹಾಶಯನು ಎಲ್ಲ ಸಂಗತಿಯನ್ನು ವಿವರಿಸಿ "ನಾನು ನಾಳಿನಿಂದ ದಿನಾಲು ಡಾಕಾಕ್ಕೆ ಕಲಿಯಲಿಕ್ಕೆ ಹೋಗುವೆನು. ಮುಂಜಾನೆ ಎಂಟು ಗಂಟೆಯೊಳಗಾಗಿ ಅಡಿಗೆಯಾಗಬೇಕೆಂದು ಹೇಳಿದನು. ಅವನ ಉತ್ಸಾಹವನ್ನೂ ಆತುರತೆಯನ್ನೂ ನೋಡಿ ಅವಳು 'ಹಾದಿಯಲ್ಲಿ ನಿನಗೆ ಯಾವ ತೊಂದರೆಯೂ ಬರದಂತೆ ದೇವರು ನೋಡಿಕೊಳ್ಳಲಿ' ಎಂದು ಆಶೀರ್ವದಿಸಿದಳು.

ಮರುದಿನ ಮುಂಜಾನೆ ನಾಗಮಹಾಶಯನು ಡಾಕಾಕ್ಕೆ ಹೊರಟು ಹೋಗಿ ನಾರ್ಮಲ್ ಸ್ಕೂಲಿನಲ್ಲಿ ಪ್ರವಿಷ್ಟನಾದನು. ಆ ಶಾಲೆಯಲ್ಲಿ ೧೫

ತಿಂಗಳು ಅಭ್ಯಾಸ ಮಾಡಿದನು. ಈ ಅವಧಿಯಲ್ಲಿ ಅವನಿಗೆ ಎರಡೇ ದಿನ ಮಾತ್ರ ಶಾಲೆಗೆ ಹೋಗಲಿಕ್ಕಾಗಲಿಲ್ಲ. ಚಳಿಮಳೆ ಬಿಸಿಲುಗಾಳಿಗಳನ್ನು ಲೆಕ್ಕಿಸದೆ ನಿಶ್ಚಯಪೂರ್ವಕವಾಗಿ ತಪ್ಪದೆ ಅಲ್ಲಿಗೆ ದಿನಾಲು ಹೋಗಿ ಬರುತ್ತಿದ್ದನು. ಆದರೆ ಅತಿಶ್ರಮದಿಂದ ಅವನ ದೇಹಸ್ಥಿತಿಯು ಕೆಟ್ಟಿತು. ಈ ದಿನಗಳ ವಿಷಯವಾಗಿ ನಾಗಮಹಾಶಯನು ಹೀಗೆ ಹೇಳುತ್ತಿದ್ದನು. "ಡಾಕಾ ಪಟ್ಟಣಕ್ಕೆ ಹೋಗುವ ಸಮೀಪದ ಅಡ್ಡದಾರಿಯೊಂದು ನನಗೆ ಗೊತ್ತಾಯಿತು. ಹೀಗಾಗಿ ನನಗೆ ಏನೂ ದಣುವಾಗುತ್ತಿದ್ದಿಲ್ಲ. ಹಾದಿಯಲ್ಲಿ ಹಸಿವೆಯಾದರೆ ಒಂದು ದುಡ್ಡಿನ ಚುರಮರಿಯನ್ನು ಕೊಂಡು ಹಾದಿಗುಂಟ ಮುಕ್ಕುತ್ತ ಬರುತ್ತಿದ್ದೆನು."

ಶಾಲೆಯಲ್ಲಿಯ ಶಿಕ್ಷಕನೊಬ್ಬನು ಇವನನ್ನು ಸ್ವಂತ ಮಗನಂತೆ ಪ್ರೀತಿಸುತ್ತಿದ್ದನು. ನಾಗಮಹಾಶಯನು ದಿನಾಲು ಬಹು ದೂರದಿಂದ ನಡೆದು ಬರಬೇಕಾಗುತ್ತದೆಂಬುದನ್ನು ತಿಳಿದು "ಮಗೂ, ನಿಮ್ಮೂರಿಂದ ಇಂಥ ದೂರಿನ ಪಟ್ಟಣಕ್ಕೆ ದಿನಾಲು ನಡೆದು ಬರುವದು ನಿನಗೆಷ್ಟು ಶ್ರಮವಾಗುವದು! ನೀನು ನನ್ನ ಸಂಗಡಲೇ ಇರಬಾರದೇ? ನಾನು ನಿನ್ನ ಎಲ್ಲ ಭಾರವನ್ನು ವಹಿಸುವೆನು." ಎಂದು ಆ ಶಿಕ್ಷಕನು ಒಂದು ದಿನ ನುಡಿದನು. ಆದರೆ ಉದಾರಾಂತಃಕರಣದ ನಾಗಮಹಾಶಯನು "ಇಲ್ಲ, ಸ್ವಾಮಿ. ನನಗೆ ಇಲ್ಲಿಗೆ ಬರಲಿಕ್ಕೆ ಏನೂ ಶ್ರಮವೆನಿಸುವದಿಲ್ಲ" ಎಂದು ನುಡಿದನು. ಈ ಉತ್ತರವನ್ನು ಕೇಳಿ ಆ ಶಿಕ್ಷಕನು ಆಶ್ಚರ್ಯಚಕಿತನಾಗಿ ಈ ಹುಡುಗನು ಮುಂದೆ ಎಂಥ ದೊಡ್ಡ ಮನುಷ್ಯನಾಗುವನೋ ಎಂದು ಅಂದನು. ಆ ಶಿಕ್ಷಕನು ನಾಗಮಹಾಶಯನ ಭವಿಷ್ಯಜೀವನವನ್ನು ನೋಡಲು ಬದುಕಿದ್ದರೆ ತನ್ನ ಭವಿಷ್ಯವು ನಿಜವಾಗಿದ್ದುದನ್ನು ನೋಡಿ ಎಷ್ಟು ಸಂತೋಷಬಡುತ್ತಿದ್ದನು!

ನಾಗಮಹಾಶಯನು ಡಾಕಾಶಹರದ ನಾರ್ಮಲ್‌ಸ್ಕೂಲಿನಲ್ಲಿ ಕೆಲವು ದಿನಗಳು ಮಾತ್ರ ಕಲಿತಿದ್ದರೂ ಬಂಗಾಲೀ ಭಾಷೆಯ ಮೇಲೆ ಅಸಾಧಾರಣ ಪ್ರಭುತ್ವವುಳ್ಳವನಾದನು. ಅವನ ಕೈಬರಹವು ಬಹು ಸುಂದರವಾಗಿಯೂ ಲೇಖಗಳು ಸುಲಭ, ಸರಳ, ವಿಚಾರಶೀಲ ಮತ್ತು ಆಕರ್ಷಕವಾಗಿರುತ್ತಿದ್ದವು. ಅವನನ್ನೋದಿದರೆ ಇಷ್ಟು ಚಿಕ್ಕ ವಯಸ್ಸಿನ ಬಾಲಕನು ಇಂಥ

ಲೇಖಗಳನ್ನು ಬರೆಯಬೇಕಾದರೆ ಅವನ ಬುದ್ಧಿಮತ್ತೆಯು ಬಹು ಪ್ರಖರ ವಾಗಿರಬೇಕೆಂದು ಯಾರಿಗಾದರೂ ಅನಿಸುತ್ತಿತ್ತು. ಅವನ ಎಲ್ಲ ಲೇಖ ಗಳೂ ಧಾರ್ಮಿಕ ವಿಷಯಗಳಿಂದಲೇ ತುಂಬಿದವುಗಳಾಗಿದ್ದವು. ನಾಗ ಮಹಾಶಯನು ಈಚೆಗೆ ಕಲಕತ್ತೆಗೆ ವೈದ್ಯಕೀಯ ಅಭ್ಯಾಸವನ್ನು ಮಾಡ ಲಿಕ್ಕೆ ಬಂದಾಗ್ಗೆ ಈ ಲೇಖಗಳು 'ಬಾಲಕರಿಗೆ ಉಪದೇಶ' ವೆಂಬ ಹೆಸರಿನಿಂದ ಪ್ರಸಿದ್ಧವಾದವು. ಈ ಸಂಗತಿಯನ್ನು ಅವನು ಎಷ್ಟೋ ದಿನ ಗುಪ್ತವಾಗಿ ಟ್ಟಿದ್ದನು. ಅವನ ಜೀವದ ಗೆಳೆಯನಾದ ಸುರೇಶಚಂದ್ರದತ್ತನಿಗೆ ಅದು ಮುದ್ರಿತವಾಗುವವರೆಗೆ ಗೊತ್ತಾಗಿರಲಿಲ್ಲ. ಪುಸ್ತಕವು ಪ್ರಕಾಶಿತವಾದ ಮೇಲೆ ಅದರದೊಂದು ಪ್ರತಿಯು ಇವನಿಗೆ ಕೊಡಲ್ಪಟ್ಟಿತು. ಆ ಪುಸ್ತಕ ಗಳನ್ನೆಲ್ಲ ತನ್ನ ಹಳ್ಳಿಯ ಹುಡುಗರಿಗೆ ಹಂಚಿದನು. ಇವತ್ತಿಗೂ ದೇವ ಭೋಗದಲ್ಲಿ ಕೆಲವು ಪ್ರತಿಗಳು ನೋಡಲಿಕ್ಕೆ ದೊರೆಯಬಹುದು.

---

# ೨ನೆಯ ಪ್ರಕರಣ

## ವೈದ್ಯಕೀ ಅಭ್ಯಾಸವೂ ವೈದ್ಯವೃತ್ತಿಯೂ.

ನಾಗಮಹಾಶಯನು ಈಗ ದೊಡ್ಡವನಾದನು. ಪ್ರಪಂಚದ ಬಂಧನವನ್ನು ದೃಢಗೊಳಿಸುವದಕ್ಕಾಗಿ ಈ ಮಾತೃಹೀನ ಹುಡುಗನ ಸೋದರತ್ತೆಯು ಅವನ ವಿವಾಹ ವನ್ನು ಮಾಡಬೇಕೆಂದು ನಿಶ್ಚಯಿಸಿ ವಿಕ್ರಮಪುರದಲ್ಲಿ ರಾಯ ಸದಿಯಾ ಎಂಬ ಗ್ರಾಮದ ಒಬ್ಬ ಸ್ಥಿತಿವಂತ ಗೃಹಸ್ಥರಾದ ಶ್ರೀ ಜಗನ್ನಾಥದಾಸರ ಹನ್ನೊಂಬು ವರ್ಷದ ಕುಮಾರಿ ಯಾದ ಶ್ರೀಮತಿ ಪ್ರಸನ್ನಾಕುಮಾರಿ ಎಂಬ ಹೆಣ್ಣುಮಗಳನ್ನು ಮದುವೆ ಮಾಡಿಕೊಟ್ಟರು. ಮದುವೆಯಾಗಿ ಐದು ತಿಂಗಳ ಮೇಲೆ ನಾಗಮಹಾಶ ಯನು ಕಲಕತ್ತೆಗೆ ಬಂದು ತನ್ನ ತಂದೆಯ ಕೂಡ ಇರಹತ್ತಿದನು. ಕ್ಯಾಂಬೆಲ ವೈದ್ಯಕೀ ಶಾಲೆಯಲ್ಲಿ ಅವನು ಅಭ್ಯಾಸವನ್ನು ಪ್ರಾರಂಭಿಸಿದನು ಆದರೆ ವಿದ್ಯಾರ್ಜನೆಯ ಸಲುವಾಗಿ ಅವನಲ್ಲಿದ್ದ ಉತ್ಕಟ ಉತ್ಸಾಹವು

ಪೂರ್ಣವಾಗಿ ತೃಪ್ತವಾಗಲಿಲ್ಲ. ಯಾಕಂದರೆ ಇಲ್ಲಿ ಕೂಡ ಅವನಿಗೆ ಒಂದು ವರೆ ವರ್ಷಕ್ಕಿಂತ ಹೆಚ್ಚಿಗೆ ಅಭ್ಯಾಸ ಮಾಡಲು ಶಕ್ಯವಾಗಲಿಲ್ಲ. ಅವನು ಶಾಲೆಯನ್ನು ಬಿಡಬೇಕಾದುದರ ಕಾರಣವೂ ಸ್ಪಷ್ಟವಾಗಿ ಯಾರಿಗೂ ಗೊತ್ತಿಲ್ಲ.

ಆ ಮೇಲೆ ನಾಗಮಹಾಶಯನು ಡಾಕ್ಟರ ಬಿಹಾರಿಲಾಲ ಭಾದುರಿ ಎಂಬ ಸುಪ್ರಸಿದ್ಧ ವೈದ್ಯನಲ್ಲಿ ಹೋಮಿಯೋಪಥಿ ಶಾಸ್ತ್ರವನ್ನು ಕಲಿಯಹತ್ತಿದನು. ಡಾಕ್ಟರ ಬಾದುರಿಯು ಈ ಹುಡುಗನ ಸುಶೀಲಸ್ವಭಾವವನ್ನು ನೋಡಿ ಸಂತೋಷಬಟ್ಟು ಬಹು ಪ್ರೇಮದಿಂದ ಕಲಿಸಹತ್ತಿದನು. ದಿನಾಲು ಮುಂಜಾನೆ ಮತ್ತು ಸಾಯಂಕಾಲ ಡಾಕ್ಟರ ಭಾದುರಿಯವರಿಂದ ಪಾಠ ಹೇಳಿಸಿಕೊಂಡು ನಾಗಮಹಾಶಯನು ಮನೆಯಲ್ಲಿ ಪುನಃ ಓದಿ ಗಟ್ಟಿಮಾಡಿಕೊಳ್ಳುತ್ತಿದ್ದನು. ಹೀಗೆ ಎರಡು ವರ್ಷಗಳು ಕಳೆದುಹೋದವು. ಆ ವರ್ಷವನೆಲ್ಲ ಬಹುಶಃ ಕಲಕತ್ತೆಯಲ್ಲಿ ಕಳೆದು ಆತನು ತನ್ನ ವೈದ್ಯವೃತ್ತಿಯ ಅನುಭವವನ್ನು ಪಡೆದುಕೊಂಡನು. ಆದ್ದರಿಂದ ಅವನ ಹೆಂಡತಿಯು ತನ್ನ ತಂದೆಯ ಮನೆಯಲ್ಲಿಯೇ ಇದ್ದಳು. ಇವನಿಗೆ ಆಕೆಯ ಕೂಡ ವಿಶೇಷ ಪರಿಚಯವನ್ನೂ ಸ್ನೇಹಸಂಬಂಧವನ್ನೂ ಬೆಳೆಸಲಿಕ್ಕೆ ಸಮಯವೇ ಒದಗಲಿಲ್ಲ. ಸಮಯವು ದೊರಕಿದಾಗ ಕೂಡ ಆಕೆಯ ಬಳಿಗೆ ಹೋಗಲು ಇವನು ನಾಚುತ್ತಿದ್ದನು. ಇವನು ತನ್ನ ಹಳ್ಳಿಗೆ ಹೋದಾಗ್ಗೆ ಹೆಂಡತಿಯು ಮನೆಯಲ್ಲಿ ಇದ್ದುದಾದರೆ ಇವನು ಯಾವದಾದರೊಂದು ಮರವನ್ನು ಏರಿ ಆಕೆಯ ದರ್ಶನದಿಂದ ಮನಸ್ಸು ಮೋಹವಶವಾಗಬಾರದೆಂಬ ಉದ್ದೇಶದಿಂದ ರಾತ್ರಿಯೆಲ್ಲ ಅಲ್ಲಿಯೇ ಇರುತ್ತಿದ್ದನು. ಈ ತರಹದ ವರ್ತನದ ಅರ್ಥವು ಅವನ ಸೋದರತ್ತೆಗೆ ತಿಳಿಯದೇ ಹೋಯಿತು. ಕಾಲಕ್ರಮೇಣ ಈ ಹುಚ್ಚಾಟವೆಲ್ಲ ಮಾಯವಾಗುವದೆಂದು ಉಳಿದ ಪ್ರಾಪಂಚಿಕರಂತೆ ಆಕೆಯೂ ತಿಳಿದುಕೊಂಡಿದ್ದಳು. ಆದರೆ ದುರ್ದೈವದಿಂದ ಆಕೆಯ ಆಶೆಯು ಬಯಲಾಯಿತು. ಪಾಪ! ಆ ಹುಡುಗೆಯು ಆಮಾಂಶ ಬೇನೆಯಿಂದ ಅಕಸ್ಮಾತ್ತಾಗಿ ಮರಣಹೊಂದಿದಳು. ಇದರಿಂದ ಅವನಿಗೆ ಬಹಳ ವ್ಯಥೆಯಾದರೂ ಒಂದು ಭಾರವು ಹೋದಂತಾಗಿ ಹಗುರೆನಿಸಿತು. ಸಾಕ್ಷಾತ್ಪರಮಾತ್ಮನೇ ತನ್ನನ್ನು ಸಂಸಾರ ಬಂಧನದಿಂದ

ಬಿಡಿಸಿದನೆಂದು ತಿಳಿದು ಸಂತೋಷಪಟ್ಟನು. ಆದರೆ ಅವನ ತಂದೆಯು ಅವನ ಪುನರ್ವಿವಾಹವನ್ನು ಮಾಡಬೇಕೆಂದು ಆಲೋಚಿಸಿ ತನ್ನ ಮಗನಿಗಾಗಿ ಒಬ್ಬ ಯೋಗ್ಯ ಕನ್ನೆಯನ್ನು ಆರಿಸೆಂದು ತನ್ನ ಅಳಿಯನಿಗೆ ಹೇಳಿ ಕೊಟ್ಟು ಹೋದನು

ನಾಗಮಹಾಶಯನು ಪುನಃ ಹೋಮಿಯೋಪಥಿ ಶಾಸ್ತ್ರದ ಅಭ್ಯಾಸವನ್ನು ಆರಂಭಮಾಡಿದನು; ಹೋಮಿಯೋಪಥಿ ಔಷಧಗಳ ಒಂದು ಸಣ್ಣ ಪೆಟ್ಟಿಗೆಯನ್ನು ಕೊಂಡು ಸುತ್ತುಮುತ್ತಲಿನ ಸ್ಥಳಗಳಲ್ಲಿಯ ಬಡ ಜನರಿಗೆ ಪುಕ್ಕಟೆಯಾಗಿ ಔಷಧವನ್ನು ಕೊಟ್ಟು, ಉಪಚಾರ ಮಾಡಹತ್ತಿದನು. ನಾಗಮಹಾಶಯನು ಹೇಳಿಕೊಟ್ಟ ಔಷಧಗಳನ್ನು ಉಪಯೋಗಿಸುವದರಿಂದ ಎಷ್ಟೋ ಪ್ರಬಲ ರೋಗಿಗಳ ವಿಷಯದಲ್ಲಿ ಉತ್ತಮ ಗುಣವು ಕಂಡುಬಂದಿತೆಂದು ಡಾಕ್ಟರ ಭಾದುರಿಯವರು ಅನೇಕ ಸಾರೆ ಹೇಳುತ್ತಿದ್ದರು. ಬೇನೆಯನ್ನು ಚನ್ನಾಗಿ ನಿಧಾನಿಸಿ ಯೋಗ್ಯ ಚಿಕಿತ್ಸೆಯನ್ನು ಮಾಡುವದರಲ್ಲಿ ಅವನಿಗೆ ಅದ್ಭುತಶಕ್ತಿಯಿತ್ತು. ಒಮ್ಮೆ ಅವನ ಅತ್ತೆಯು ಕಲಕತ್ತೆಗೆ ಬಂದಾಗ್ಗೆ ಅವನ ಔಷಧೋಪಚಾರದಿಂದುಂಟಾಗುವ ಆಶ್ಚರ್ಯಕರವಾದ ಪರಿಣಾಮಗಳನ್ನು ಕಂಡು ' ನನ್ನ ಅಳಿಯನು ನಿಜವಾಗಿ ಮಹಾದೇವನೇ ಇರುತ್ತಾನೆ. ಅವನು ಯಾವ ಔಷಧವನ್ನು ಕೊಟ್ಟರೂ ಅದು ಗುಣಕಾರಿಯೇ ಆಗುತ್ತದೆ '' ಎಂದು ನುಡಿದಳು. ಕ್ರಮೇಣ ನಾಗಮಹಾಶಯನ ಹೆಸರು ಸುತ್ತುಮುತ್ತಲೆಲ್ಲ ಪ್ರಸಿದ್ಧಿಯನ್ನು ಹೊಂದಹತ್ತಿತು. ಇನ್ನೂ ವಿದ್ಯಾರ್ಥಿ ಇದ್ದಾಗಲೇ ಈ ತರುಣ ವೈದ್ಯನು ಬಡವರಿಗೆ ಆಧಾರಸ್ತಂಭನಾದನು. ರೋಗಿಗಳು ಹಿಂಡುಗಟ್ಟಿ ಅವನ ಮನೆಗೆ ಬರಹತ್ತಿದರು. ಅವನು ಬಯಸಿದ್ದರೆ ಈಗ ಧನವನ್ನು ಕೂಡ ಹಾಕಬಹುದಾಗಿತ್ತು. ಆದರೆ ಅವನು ಹಾಗೆ ಮಾಡಲಿಲ್ಲ. ಅವನ ಧ್ಯೇಯವು ಹಣವನ್ನು ಸಂಗ್ರಹಿಸುವದಿರದೆ ರೋಗಿಗಳ ಮತ್ತು ಬಡವರ ಸೇವೆ ಮಾಡುವದಾಗಿತ್ತು. ಪರರ ಸೇವೆಮಾಡುವ ಒಂದು ಸಮಯವನ್ನು ಕೂಡ ಅವನು ಕಳೆದುಕೊಳ್ಳುತ್ತಿದ್ದಿಲ್ಲ. ಪರರ ಸೇವೆ ಮಾಡುವಾಗ ಅತಿ ಕೀಳು ಕೆಲಸವನ್ನು ಮಾಡಲಿಕ್ಕೆ ಕೂಡ ಅವನು ಹಿಂದು ಮುಂದೆ ನೋಡುತ್ತಿದ್ದಿಲ್ಲ. ಒಮ್ಮೊಮ್ಮೆ ಅವನ ತಂದೆಯ ಮಿತ್ರರು ಈ ಗುಣದ ಲಾಭ

ಹೊಂದುವ ಆಶೆಯಿಂದ ತಮಗೆ ಬೇಕಾದ ಪೇಟಿಯ ಸಾಮಾನಗಳನ್ನು ತರಲಿಕ್ಕೆ ಅವನಿಗೆ ಹೇಳುತ್ತಿದ್ದರು; ಅವನು ಅವರ ಅಕ್ಕಿಯ ಚೀಲಗಳನ್ನೂ ಕಟ್ಟಿಗೆಯ ಹೊರೆಗಳನ್ನೂ ಕೂಡ ಹೊತ್ತು ತಂದು ಹಾಕುತ್ತಿದ್ದನು.

ದುಃಖಿತರ ಸೇವೆಯನ್ನು ಮಾಡಲಿಕ್ಕಂತೂ ಅವನು ಯಾವಾಗಲೂ ಸಿದ್ಧನೇ. ಹತೋತಿಯೆಂಬಲ್ಲಿ ಪ್ರೇಮಚಂದ ಮುನಶಿ ಎಂಬೊಬ್ಬ ಶ್ರೀಮಂತ ಮನುಷ್ಯನಿದ್ದನು. ಅವನು ಶ್ರೀಮಂತನಿದ್ದರೂ ಮನೆಯಲ್ಲಿ ಒಬ್ಬ ಸೇವಕನನ್ನು ಕೂಡ ನೇಮಿಸಿಕೊಂಡಿದ್ದಿಲ್ಲ. ಮನೆತನದ ಎಲ್ಲ ತರಹದ ಕೆಲಸಗಳನ್ನು ಮಾಡುವದಕ್ಕಾಗಿ ಅವನ ದೂರಿನ ಆಪ್ತನೊಬ್ಬನಿದ್ದನು. ಇದಲ್ಲದೆ ಸಣ್ಣಪುಟ್ಟ ಚಿಲ್ಲರೆ ಸಾಮಾನುಗಳಿಗಾಗಿ ಕೂಡ ನಾಗಮಹಾಶಯನ ಉದಾರಬುದ್ಧಿಯ ಉಪಯೋಗ ಮಾಡಿಕೊಳ್ಳುವಷ್ಟು ಕ್ಷುದ್ರ ಬುದ್ಧಿಯವನು ಅವನಿದ್ದನು. ಅಕಸ್ಮಾತ್ತಾಗಿ ಆ ದೂರಿನ ಆಪ್ತನು ತೀರಿಕೊಂಡನು. ನೆರೆಹೊರೆಯ ಜನರಾರೂ ಅವನನ್ನು ಸೇರುತ್ತಿದ್ದಿಲ್ಲ. ಆದ್ದರಿಂದ ಆ ಆಪ್ತನ ಪ್ರೇತಕ್ಕೆ ದಹನ ಸಂಸ್ಕಾರವನ್ನು ಮಾಡುವದಕ್ಕೆ ಕೂಡ ಯಾರೂ ಮುಂದೆ ಬಂದು ನೆರವಾಗಲಿಲ್ಲ. ದೊಡ್ಡ ಸಿರಿವಂತ ಮನೆತನದ ಈ ಲಕ್ಷಾಧೀಶನು ಮನೆಮನೆಗೆ ಹೋಗಿ ಸಹಾಯವನ್ನು ಅಪೇಕ್ಷಿಸಿದರೂ ಯಾರೂ ಅವನಿಗೆ ಸಹಾಯ ಮಾಡಲಿಕ್ಕೆ ಮುಂದುವರಿಯಲಿಲ್ಲ. ಎಲ್ಲೆಡೆಯಲ್ಲಿಯೂ ಹತಾಶನಾಗಿ ಕಂಗೆಟ್ಟು ಮುನಶಿಯು ನಾಗಮನೆತನದವರ ಕಡೆಗೆ ಸಹಾಯಾರ್ಥವಾಗಿ ಬಂದನು. ತಂದೆಯೂ ಮಗನೂ ಕೂಡಿ ಆ ಬಿಕ್ಕಟ್ಟಿನ ಪ್ರಸಂಗದೊಳಗಿಂದ ಅವನನ್ನು ಪಾರುಮಾಡಿದರು.

ಡಾಕ್ಟರ ಭಾದುರಿಯ ಕೈಕೆಳಗೆ ಒಂದು ವರ್ಷಕಾಲ ಉಮೇದವಾರನಾಗಿ ಕೆಲಸ ಮಾಡಿದ ವೇಳೆ ನಾಗಮಹಾಶಯನಿಗೆ ಸುರೇಶಬಾಬುವಿನ ಪರಿಚಯವಾಯಿತು. ಸುರೇಶನು ಹತ್ತೋಲೆಯ ಸುಪ್ರಸಿದ್ಧ ದತ್ತಮನೆತನದವನು. ಶ್ರೀರಾಮಕೃಷ್ಣರ ಸಂಪರ್ಕವಾಗುವದಕ್ಕಿಂತ ಮೊದಲು ಅವನಿಗೆ ಬ್ರಹ್ಮಸಮಾಜದ ಕಡೆಗೆ ಒಲವಿತ್ತು. ಸುರೇಶನು ನಿರಾಕಾರ ದೇವತೆಯ ಉಪಾಸಕನಿದ್ದು ಸಾಕಾರ ದೇವದೇವತೆಗಳಲ್ಲಿ ಏನೂ ಶ್ರದ್ಧೆಯೂ ಪೂಜ್ಯಬುದ್ಧಿಯೂ ಇದ್ದಿದ್ದಿಲ್ಲ. ನಾಗಮಹಾಶಯನಾದರೋ

ಸಂಪೂರ್ಣವಾಗಿ ಪುರಾಣಪದ್ಧತಿಗೆ ಅಂಟಿಕೊಂಡಿದ್ದ ಹಿಂದುವಾದ್ದರಿಂದ ದೇವಬ್ರಾಹ್ಮಣರ ವಿಷಯದಲ್ಲಿ ಅತಿಶಯ ಪೂಜ್ಯಬುದ್ಧಿಯನ್ನು ತಾಳಿದ್ದನು. ಆಗಾಗ್ಗೆ ಅವರ ನಡುವೆ ತೀಕ್ಷ್ಣವಾದ ಚರ್ಚೆಗಳು ಎಸಗುತ್ತಿದ್ದವು. ನಾಗಮಹಾಶಯನು ಪ್ರತಿಪಾದನ ಮಾಡುವದೇನಂದರೆ:— "ಹಿಂದೂಗಳ ದೇವದೇವತೆಗಳೂ ಬ್ರಹ್ಮನೂ ಎಲ್ಲವೂ ಸತ್ಯವೇ. ಬ್ರಹ್ಮಸಾಕ್ಷಾತ್ಕಾರವಾಗುವದು ಕಠಿಣ. ಲಕ್ಷ ಜನರಲ್ಲಿ ಒಬ್ಬಿಬ್ಬರಾದರೂ ಈ ಸ್ಥಿತಿಯನ್ನು ಹೊಂದುವರೋ ಇಲ್ಲೋ ಸಂಶಯವಿದೆ. ಆದ್ದರಿಂದಲೇ ಹಿಂದೂ ಧರ್ಮದಲ್ಲಿ ಹೇಳಿದಂತೆ ಭಿನ್ನ ಭಿನ್ನ ದೇವ ದೇವತೆಗಳಲ್ಲಿ ಶ್ರದ್ಧೆಯು ಅತ್ಯಾವಶ್ಯಕವಿರುತ್ತದೆ. ಏನಯ್ಯಾ, ವೇದಗಳೂ ಪುರಾಣಗಳೂ ತಂತ್ರಗಳೂ ಮಂತ್ರಗಳೂ ಎಲ್ಲ ಸುಳ್ಳೆಂದು ಹೇಳುವ ಸಾಹಸವನ್ನು ನೀನು ಮಾಡುವಿಯಾ? ಬ್ರಹ್ಮಜ್ಞಾನವು ಅಂತಿಮಧ್ಯೇಯವೇನೋ ನಿಜ. ಆದರೆ ಇವೆಲ್ಲವುಗಳೊಳಗಿಂದ ದಾಟಿ ಪಾರಾಗುವ ವರೆಗೆ ಬ್ರಹ್ಮಜ್ಞಾನವು ದುರ್ಲಭವು. ಮಹಾಮಾಯೆಯು ಕೃಪಾಪ್ರಸಾದವಿಲ್ಲದೆ, ಆಕೆಯು ಹಾದೀ ಮಾಡಿ ಕೊಡದೆ ತಾನಾಗಿಯೇ ಯಾವನೂ ಬ್ರಹ್ಮನನ್ನು ತಿಳಿದುಕೊಳ್ಳಲಾರನು." ನಾಗಮಹಾಶಯನ ಈ ಮಾತುಗಳನ್ನು ಕೇಳಿ ಸುರೇಶನು ಒಳ್ಳೇ ಆವೇಶದಿಂದ "ನಿನ್ನ ಶಾಸ್ತ್ರ ಪುರಾಣಗಳನ್ನೆಲ್ಲ ಒತ್ತಟ್ಟಿಗೆ ಕಟ್ಟಿಡು. ಅವುಗಳಲ್ಲಿ ನನ್ನ ವಿಶ್ವಾಸವಿಲ್ಲ" ಎಂದು ಉತ್ತರ ಕೊಡುತ್ತಿದ್ದನು. ಆದರೆ ನಾಗಮಹಾಶಯನು ದೇವ ದೇವತೆಗಳ ಮೂರ್ತಿಗಳ ಮುಂದೆ ಸಾಷ್ಟಾಂಗ ನಮಸ್ಕಾರ ಹಾಕುವದನ್ನೂ ಬ್ರಾಹ್ಮಣರ ವಿಷಯದಲ್ಲಿ ಅವನಲ್ಲಿದ್ದ ಅಚಲ ಶ್ರದ್ಧೆಯನ್ನೂ ನೋಡಿ ಸುರೇಶನು ಇಂಥ ಅಪ್ರತಿಮ ಶ್ರದ್ಧೆಯಿದ್ದ ಮನುಷ್ಯನು ಬಹು ಬೇಗನೇ ಬ್ರಹ್ಮಜ್ಞಾನವನ್ನು ಹೊಂದುವನೆಂದು ತಿಳಿದುಕೊಂಡಿದ್ದನು.

ಸುರೇಶ ಬಾಬುಗಳು ಪ್ರತಿದಿನ ಸಂಜೆಗೆ ನಾಗಮಹಾಶಯರ ಮನೆಗೆ ಹೋಗುತ್ತಿದ್ದರು. ದಿನಾಲೂ ಈ ರೀತಿಯಾಗಿ ವಾದವಿವಾದಗಳು ನಡೆಯುತ್ತಿದ್ದವು. ಆದರೆ ಒಬ್ಬನ ವಿಚಾರದ ಪ್ರಭಾವವು ಬೇರೊಬ್ಬನ ಮೇಲಾಗಲಿಲ್ಲ. ಪರಸ್ಪರ ವಿರೋಧೀ ಸ್ವಭಾವವುಳ್ಳವರಾಗಿದ್ದರೂ ಇವರಿಬ್ಬರಲ್ಲಿ ಬದುಕಿರುವ ವರೆಗೆ ಅತ್ಯಂತ ಸೌಹಾರ್ದ್ರವಿತ್ತು. ಪಾರಮಾರ್ಥಿಕ

ವಿಷಯುವಲ್ಲದೆ ಬೇರೆ ಯಾವ ವಿಷಯದ ಬಗ್ಗೆಯೂ ಇವರಲ್ಲಿ ವಾದವಿವಾದ ಗಳಾಗುತ್ತಿದ್ದಿಲ್ಲವೆಂಬುದನ್ನು ಲಕ್ಷದಲ್ಲಿಡಬೇಕಾಗಿದೆ.

ನಾಗಮಹಾಶಯರನ್ನು ಸುರೇಶಚಂದ್ರರು ಆಗಾಗ್ಗೆ ಶ್ರೀ. ಕೇಶವ ಚಂದ್ರ ಸೇನರ ಬ್ರಹ್ಮಸಮಾಜದ ಮಂದಿರದ ಕಡೆಗೆ ಕರೆದುಕೊಂಡು ಹೋಗುತ್ತಿದ್ದರು. ಕೇಶವಚಂದ್ರರ ಭಾಷಣವನ್ನು ಕೇಳಿ ನಾಗಮಹಾಶ ಯರು ಮುಗ್ಧರಾಗುತ್ತಿದ್ದರು. ಆದರೆ ಬ್ರಹ್ಮ ಸಮಾಜದ ಆಚಾರ-ವ್ಯವ ಹಾರಗಳು ಅವರಿಗೆ ಸೇರುತ್ತಿದ್ದಿಲ್ಲ. ಬ್ರಹ್ಮ ಸಮಾಜದಿಂದ ಪ್ರಕಾಶಿತ ವಾದ "ಚೈತನ್ಯ ಚರಿತ್ರ" "ರೂಪಸನಾತನ" ಮೊದಲಾದ ಗ್ರಂಥಗ ಳನ್ನು ಅವರು ಬಹು ಉತ್ಸಾಹದಿಂದ ಓದುತ್ತಿದ್ದರು.

ಮೊದಲ ಮಾತುಕತೆಯಲ್ಲಿಯೇ ನಾಗಮಹಾಶಯರ ಜೀವನವು ಅತ್ಯಂತ ನಿರ್ಮಲವಿರುವದೆಂದು ಸುರೇಶರಿಗೆ ಕಂಡುಬಂದಿತು. ಬಾಲ್ಯ ದಿಂದಲೇ ನಾಗಮಹಾಶಯರು ಬಹು ಸದಾಚಾರಿಗಳು, ಮಹಾ ಧರ್ಮ ನಿಷ್ಠರು, ಕಡೆಯ ವರೆಗೂ ದೇಶಾಚಾರವನ್ನಾಗಲಿ, ಲೋಕಾಚಾರವ ನ್ನಾಗಲಿ ಅಥವಾ ಗೃಹಸ್ಥಾಚಾರವನ್ನಾಗಲಿ ಮೀರಿ ನಡೆಯಲಿಲ್ಲ. ಶ್ರದ್ಧೆ ಹಾಗೂ ಈಶ್ವರಾನುರಾಗಗಳು ಜನ್ಮತಃ ಇವರಲ್ಲಿದ್ದವು. ಒಮ್ಮೆ ಇವರ ಕೆಲವು ಗೆಳೆಯರು ನಾಸ್ತಿಕಮತದ ಗ್ರಂಥಗಳನ್ನೋದಿ ನಾಸ್ತಿಕ ಮತ ವನ್ನು ಪ್ರಚಾರಮಾಡುತ್ತಿದ್ದರು. ನಾಗಮಹಾಶಯರೊಡನೆ ಮೇಲಿಂದ ಮೇಲೆ ಇವರ ವಾಗ್—ಯುದ್ಧವು ನಡೆಯತ್ತಿತ್ತು. ಒಮ್ಮೊಮ್ಮೆ ನಾಗ ಮಹಾಶಯರು ಅದರಲ್ಲಿ ಸೋಲುತ್ತಿದ್ದರೂ "ಈಶ್ವರನಿರುವನೆಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ"ವೆಂದು ಗಟ್ಟಿಯಾಗಿ ನುಡಿಯುತ್ತಿದ್ದರು. ಇದು ಚಿಕ್ಕಂದಿನಲ್ಲಿಯ ಮಾತಾಯಿತು. ಭಾವೀ ಜೀವನದಲ್ಲಿ ಸಹ ಒಣಗು ತರ್ಕವೇಕೆ? ಭಗವಂತನು ಸೂರ್ಯನಂತೆ ಸ್ವಯಂಪ್ರಕಾಶನಿರುವನೆಂದು ಪುನಃ ಪುನಃ ಅವರು ಅನ್ನುತ್ತಿದ್ದರು.

ಈ ಸಮಯದಲ್ಲಿ ನಾಗಮಹಾಶಯರಿಗೆ ವೈದ್ಯಕೀಯ ಅಭ್ಯಾಸದಲ್ಲಿ ಅಷ್ಟು ಪ್ರೀತಿ ಇರಲಿಲ್ಲ. ಶಾಸ್ತ್ರ ವಿಚಾರದಲ್ಲಿ ಇವರ ಮನಸ್ಸು ತೊಡಗಿತು. ಆದರೂ ತಂದೆಯ ಆಗ್ರಹದ ಮೂಲಕ ಡಾ. ಭಾದುರಿಯವರ ಸಂಭಂಧ ವನ್ನು ಬಿಡುವದು ಸಾಧ್ಯವಾಗಲಿಲ್ಲ. ನಾಗಮಹಾಶಯರಿಗೆ ಸಂಸ್ಕೃತ

ಭಾಷೆಯು ತಿಳಿಯುತ್ತಿದ್ದಿಲ್ಲ. ಬಂಗಾಲೀ ಭಾಷೆಯಲ್ಲಿ ಪರಿವರ್ತಿಸಲ್ಪಟ್ಟ ಪುರಾಣ ತಂತ್ರ ಮೊದಲಾದವುಗಳನ್ನು ಪ್ರಯತ್ನಪೂರ್ವಕವಾಗಿ ಓದುತ್ತಿದ್ದರು. ಪಂಡಿತರಾರಾದರನ್ನು ಕಂಡರೆ ಅವರ ಕಡೆಯಿಂದ ಶಾಸ್ತ್ರಗಳ ಮರ್ಮವನ್ನು ವಿಶೇಷ ಅನುರಾಗದಿಂದ ತಿಳಿದುಕೊಳ್ಳುತ್ತಿದ್ದರು. ನಿತ್ಯವೂ ಗಂಗಾಸ್ನಾನ ಮಾಡುತ್ತಿದ್ದರು. ನಿಯಮಿತವಾಗಿ ಏಕಾದಶೀ ವ್ರತವನ್ನು ಪಾಲಿಸುತ್ತಿದ್ದರು. ದಿನಾಲೂ ಸಂಜೆಗೆ ಕುಮಾರಟುಲಿಯ ಹತ್ತಿರಿರುವ ಸ್ಮಶಾನಘಾಟದ ಕಡೆಗೆ ತಿರುಗಾಡಲು ಹೋಗುತ್ತಿದ್ದರು. ಒಂದೊಂದು ದಿನ ಚಿಂತಾಕುಲರಾಗಿ ಇರುಳೆಲ್ಲ ಅಲ್ಲಿಯೇ ಕುಳಿತುಕೊಂಡು ಬಿಡುತ್ತಿದ್ದರು. ಗಭೀರವಾದ ರಾತ್ರಿ! ಚಿತೆಗಳೆಷ್ಟೋ ಭುಗಿಭುಗಿಲೆಂದು ಉರಿಯುತ್ತಿವೆ! ಸ್ಮಶಾನದಲ್ಲಿರುವ ಅರಳೆಯ ಮರದೊಡನೆ ಅಲ್ಲಿಯೇ ಹರಿಯುತ್ತಿರುವ ಜಾಹ್ನವಿಯು ಸ್ವರ ಕೂಡಿಸಿ ಅದಾವುದೋ ಹೃದಯಸ್ಪರ್ಶಿಯಾದ ಕರುಣ ಗಾನವನ್ನು ಮಾಡುವಂತಿದೆ! ನಾಗಮಹಾಶಯರು ಅಲ್ಲಿಯೇ ಕುಳಿತುಕೊಂಡು ಯೋಚಿಸುತ್ತಿದ್ದರು. "ಎಲ್ಲವೂ ಅನಿತ್ಯ, ಅನಿತ್ಯ ಪರಮಾತ್ಮನೊಬ್ಬನೇ ನಿತ್ಯ, ಸತ್ಯ. ಆತನ ಲಾಭವಾಗದಿದ್ದರೆ ಈ ಜೀವನವು ವ್ಯರ್ಥ! ಅವನನ್ನು ಹೇಗೆ ಕಾಣುವದು ? ದಾರಿಯನ್ನಾರು ತೋರುವರು ?"

ಕಾಶೀ ಮಿತ್ರನ ಸ್ಮಶಾನ ಘಟ್ಟಕ್ಕೆ ಅನೇಕ ಸಾಧು ಸನ್ಯಾಸಿಗಳು ಮೇಲಿಂದ ಮೇಲೆ ಬರುತ್ತಿದ್ದರು. ನಾಗಮಹಾಶಯರು ವ್ಯಾಕುಲರಾಗಿ ತಮ್ಮ ಮನದ ಅಳಲನ್ನು ಅವರೆದುರಿಗೆ ಬಣ್ಣಿಸುತ್ತಿದ್ದರು ಆದರೆ ಯಾರೂ ಅವರ ಸಮಾಧಾನ ಮಾಡಲು ಸಮರ್ಥರಾಗಲಿಲ್ಲ. ಬಹುಶಃ ಎಲ್ಲರೂ ಅಷ್ಟಸಿದ್ಧಿಗಳ ಬೆನ್ನು ಹತ್ತಿರುವರೇ ಹೊರತು ಪರಾಭಕ್ತಿಯು ಅವರ ಉದ್ದಿಷ್ಟವಿದ್ದಿಲ್ಲ. ಒಂದು ದಿನ ಸ್ಮಶಾನದಲ್ಲಿ ಒಬ್ಬ ತಾಂತ್ರಿಕನ ಭೆಟ್ಟಿಯಾಯಿತು. ವಾಮಾಚಾರ ಸಾಧನೆಯು ಎಂತು? ಎಂದು ನಾಗಮಹಾಶಯರು ಕೇಳಲು ಆತನು ಅನೇಕ ಬೀಭತ್ಸ ವಿಷಯಗಳ ವರ್ಣನೆಯನ್ನು ಮಾಡಹತ್ತಿದನು. ನಾಗಮಹಾಶಯರು ಅವನಿಗೆ ಹೇಳಿದರು, "ತಾವಿನ್ನೂ ಅನೇಕ ಘಟ್ಟಗಳ ನೀರು ಕುಡಿಯಬೇಕು. ತಂತ್ರಶಾಸ್ತ್ರದ ಮರ್ಮ ತಮಗೇನೂ ತಿಳಿದಿಲ್ಲ." ಇಂಥ ಸಾಧು ಸನ್ಯಾಸಿಗಳನ್ನು ಕಂಡು ಧರ್ಮದ ಬಗ್ಗೆ ಆಸ್ಥೆ ಹುಟ್ಟುವದಂತೂ ದೂರ ಉಳಿಯಿತು. ನಾಗಮ

ಹಾಶಯರಿಗೆ ಸಂಶಯು ತಟ್ಟುತ್ತಿತ್ತು. ಒಬ್ಬ ವೃದ್ಧ ಬ್ರಾಹ್ಮಣನ ಮೇಲೆ ಮಾತ್ರ ನಾಗಮಹಾಶಯರಿಗೆ ಶ್ರದ್ಧೆ ಹುಟ್ಟಿತು. ಈ ಬ್ರಾಹ್ಮಣನು ತಾಂತ್ರಿಕ ಸನ್ಯಾಸವನ್ನು ಸ್ವೀಕರಿಸಿ ಸ್ಮಶಾನದಲ್ಲಿ ಸಾಧನೆಗೈಯುತ್ತಿದ್ದನು ಅವನ ಆಚಾರವು ಉದಾರವಾಗಿತ್ತು. ಅವನಲ್ಲಿ ಭೇದಬುದ್ಧಿ ಇದ್ದಿಲ್ಲ. ನಿಯಮಿತವಾಗಿ ಕಾರಣಾದಿಗಳನ್ನು ಆಚರಿಸುತ್ತಿದ್ದನು. ತೀವ್ರವಾದ ಅಂತರ್ದೃಷ್ಟಿಯುವನಲ್ಲಿತ್ತು. ತಾಂತ್ರಿಕ ಸಾಧನೆಯ ಕೂಡ ಮರ್ಮ ಹಾಗೂ ಷಟ್‌ಚಕ್ರಗಳ ರಹಸ್ಯವನ್ನು ನಾಗಮಹಾಶಯರಿಗೆ ಅತಿ ಸರಲವಾಗಿಯೂ ವಿಶದವಾಗಿಯೂ ಆತನು ತಿಳಿಸಿಹೇಳಿದನು. ತಾಂತ್ರಿಕಸಾಧನೆ ಮಾಡುವ ತಮ್ಮ ಉದ್ದೇಶವನ್ನು ಅವನಿಗೆ ನಾಗಮಹಾಶಯರು ಅರುಹಲು ವೃದ್ಧ ಬ್ರಾಹ್ಮಣನು ಅವರನ್ನು ಆಶೀರ್ವದಿಸಿ "ಜಗದಂಬೆಯು ಶೀಘ್ರದಲ್ಲಿಯೇ ನಿನ್ನ ಇಚ್ಛೆಯನ್ನು ಪೂರ್ಣ ಮಾಡುವಳೆಂ"ದು ಆಶ್ವಾಸನ ಕೊಟ್ಟನು. ಈ ಸಾಧಕನ ಬಗ್ಗೆ ನಾಗಮಹಾಶಯರು "ಬ್ರಾಹ್ಮಣನು ಸಾಧನೆಯ ಪಥದಲ್ಲಿ ಬಹು ಆಗೇಸರನಾಗಿದ್ದನು. ಕೊನೆಯವರೆಗೆ ಅವನಿಗೆ ಸ್ಮೃತಿಯು ತಪ್ಪಲಿಲ್ಲ. ಜೀವ ಹೋಗುವ ವರೆಗೂ ಎಚ್ಚರ ತಪ್ಪದೆ ಗಂಗಾನದಿಯ ದಂಡೆಯ ಮೇಲೆ ಪ್ರಾಣ ಬಿಟ್ಟನು" ಎಂದು ಹೇಳುತ್ತಿದ್ದರು.

ಈ ಬ್ರಾಹ್ಮಣನ ಉಪದೇಶದಂತೆ ನಾಗಮಹಾಶಯರು ಕಟ್ಟಿರುಳಲ್ಲಿ ಸ್ಮಶಾನದಲ್ಲಿ ಕುಳಿತುಕೊಂಡು ಜಪಧ್ಯಾನ ಮಾಡುತ್ತಿದ್ದರು ಒಂದು ದಿನ ಧ್ಯಾನ ಮಾಡುತ್ತಿರಲಾಗಿ ಅವರಿಗೆ ಶುಭ್ರ ಜ್ಯೋತಿಯ ದರ್ಶನವಾಯಿತು. ಅಂದಿನಿಂದ ನಾಗಮಹಾಶಯರು ನಿಯಮಿತವಾಗಿ ಸ್ಮಶಾನಕ್ಕೆ ಹೋಗಿ ಜಪ ಧ್ಯಾನ ಮಾಡಹತ್ತಿದರು.

ಈ ಸುದ್ದಿಯು ದೀನದಯಾಲನ ಕಿವಿಗೆ ಬಿತ್ತು. ಆಗ ಅವನು ಬಹು ಕಳವಳಗೊಂಡನು. ತಡಮಾಡದೆ ವಧುವನ್ನು ಹುಡುಕಲು ಅಳಿಯನಿಗೆ ಪತ್ರ ಬರೆದನು. "ಮಗನದು ತರುಣ ವಯಸ್ಸು. ಸಂಸಾರದ ಯಾವ ಬಂಧನವೂ ಇಲ್ಲ. ಅಂತೇ ಸ್ಮಶಾನದಲ್ಲಿ ಸಾಧು ಸನ್ಯಾಸಿಗಳೊಡನೆ ಅಲೆಯುತ್ತಿರುವನು. ಮದುವೆಯಾದ ಕೂಡಲೇ ಈ ದುರ್ಬುದ್ಧಿ ತೊಲಗುವದೆಂ"ದು ದೀನದಯಾಲನ ಭಾವನೆಯಾಗಿತ್ತು. ವಧುವೂ ದೊರೆತಳು.

ದೇವಭೋಗದಲ್ಲಿರುವ ರಾಮದಯಾಲ ಭೂಯಿಯಾ ಇವರ ಹಿರಿಯ ಮಗಳಾದ ಶ್ರೀಮತಿ ಶರತ್ ಕಾಮಿನಿಯನ್ನು ವಧುವಾಗಿ ಯೋಜಿಸಿದರು. ಕಲಕತ್ತೆಗೆ ಸುದ್ದಿ ಬಂದಿತು. ಮಗನೆದುರಿಗೆ ವಿವಾಹದ ಪ್ರಸ್ತಾಪವನ್ನಾಡಲು, ನಾಗಮಹಾಶಯರು ತಾನು ಮತ್ತೆ ವಿವಾಹ ಮಾಡಿಕೊಳ್ಳುವದಿಲ್ಲವೆಂದು ಸ್ಪಷ್ಟವಾಗಿ ಹೇಳಿಬಿಟ್ಟರು. ದೀನದಯಾಲನು ಬಹಳ ತಿಳಿಹೇಳಿದನು. ಎಷ್ಟಾದರೂ ಮಗನ ಮೇಲೆ ಪರಿಣಾಮವಾಗಲಿಲ್ಲ. ಒಮ್ಮೆ ಮಾತಿಗೆ ಮಾತು ಬೆಳೆದು ದೀನದಯಾಲನು ಸಿಟ್ಟಿಗೆದ್ದು ಉಪವಾಸ ಮಾಡಿದನು. ಮಗನೂ ಉಪವಾಸಬಿದ್ದನು. ದಿನಗಳು ಬಹು ಅಶಾಂತಿಯಿಂದ ಕಳೆಯಹತ್ತಿದವು. "ನಿನಗಾಗಿ ಶಿಷ್ಟ ಜನರಿಗೆ ಕೊಟ್ಟ ಮಾತು ತಪ್ಪಿಸಿ ಈ ವೃದ್ಧಾವಸ್ಥೆಯಲ್ಲಿ ಸುಳ್ಳು ಹೇಳಿದ ಪಾಪ ಕಟ್ಟಿಕೊಳ್ಳಬೇಕಾಗಿದೆ" ಎಂದು ದೀನದಯಾಲನೆಂದನು.

ನಾಗಮಹಾಶಯ:— ಮೊದಲನೆಯ ಮದುವೆಯಾಯಿತು. ಆಗ ಅವಳು ತೀರಿಹೋದಳು. ಸುಮ್ಮನೇ ಮತ್ತೊಬ್ಬಳನ್ನೀಗ ಸಾವಿನ ಕೈಯಲ್ಲೇಕೆ ಕೊಡಬೇಕು?

ದೀನದಯಾಲಃ— ಅವರವರ ಅದೃಷ್ಟದಂತೆ ಎಲ್ಲವೂ ಆಗುವದು. ನಾನು ನಿನ್ನ ತಂದೆ. ನನ್ನ ಅಪ್ಪಣೆಯನ್ನು ನೀನು ಮೀರಿ ನಡೆದರೆ ನಿನಗೇನೂ ಲಾಭವಾಗಲಾರದು. ನಾನು ನಿನಗೆ ಶಾಪ ಕೊಡುವೆನು. ಅದರಿಂದ ನಿನ್ನ ಧರ್ಮ ಸಾಧನೆಯಲ್ಲಿ ಏನೂ ಉನ್ನತಿಯಾಗದು.

ವಿಷಮ ಸಂಕಟ! ಒಂದೆಡೆ ತಂದೆಯ ಅಭಿಶಾಪ, ಮತ್ತೊಂದೆಡೆ ಧರ್ಮದ ದಾರಿಗೆ ಪ್ರತಿಭಾಧ, ಸ್ತ್ರೀ ಸಹವಾಸವು ನರಕದ ಮೂಲವು, ಅದನ್ನೇ ತಂದೆಯು ಪ್ರೇರಿಸುತ್ತಿರುವನು. ಹಾಯ! ದೇವಾ ಇನ್ನೇನು ಗತಿ? ಅತ್ಯಂತ ಕಾತರನಾಗಿ ನಾಗಮಹಾಶಯರು ತಂದೆಗೆಂದರು "ನೋಡಿರಿ, ಈ ವಿವಾಹದಿಂದಲೇ ಮನುಷ್ಯನ ದುಖಃ ಬೆಳೆಯುತ್ತದೆ. ದಯಮಾಡಿ ತಮ್ಮ ಸಂಕಲ್ಪದಿಂದ ನಿವೃತ್ತರಾಗಿರಿ. ಮತ್ತೆ ನನ್ನನ್ನು ಬಂಧನದಲ್ಲಿ ತೊಡಗಿಸಬೇಡಿರಿ. ತಮ್ಮ ಜೀವಮಾನಪರ್ಯಂತವೂ ತ್ರಿಕರಣ ಪೂರ್ವಕವಾಗಿ ತಮ್ಮ ಸೇವೆ ಮಾಡುವೆನು. ಮನೆಗೆ ಬಂದ ಸೊಸೆಯು ಮಾಡುವ ನೂರ್ಮಡಿಯಾಗಿ ತಮ್ಮ ಸೇವೆಗೈಯುವೆನು. ನನ್ನನ್ನು ಮುಕ್ತಮಾಡಿರಿ."

ಮಗನ ವಿಷಣ್ಣ ಮುದ್ರೆಯನ್ನು ನೋಡಿ, ಅವನ ಕಾತರ ವಾಕ್ಯಗಳನ್ನು ಕೇಳಿ ತಂದೆಗೆ ಬಹಳ ದುಃಖವಾಯಿತು. ಅವನು "ಯಾರ ಸುಖಕ್ಕಾಗಿ ವಿವಾಹ ಮಾಡಬೇಕೆನ್ನುವೆನೋ ಅವನಿಗೆ ಅದರಿಂದ ದುಃಖವಾಗುವದೆಂದ ಮೇಲೆ ಆ ವಿಚಾರವನ್ನು ಬಿಟ್ಟುಬಿಡುವದೇ ಒಳಿತು. ಆದರೆ ದುರ್ಗಾಚರಣನು ಲಗ್ನಮಾಡಿಕೊಳ್ಳದಿದ್ದರೆ ವಂಶವು ನಿರ್ವಂಶವಾಗುವದು. ಆ ಮೇಲೆ ಪಿತೃಗಳಿಗೆ ಪಿಂಡದಾನ ಮಾಡುವವರಾರು?" ಎಂದು ಯೋಚಿಸಿದನು. ದೀನದಯಾಲನು ಅತ್ಯಂತ ವಿಚಲಿತನಾದನು. ಆದರೆ ಉಪಾಯವೇನು? ತರ್ಕ, ಯುಕ್ತಿ, ತಿರಸ್ಕಾರ ಎಲ್ಲವೂ ವಿಫಲವಾದುವು. ವ್ಯಥಿತ ಹೃದಯನಾಗಿ ದೀನದಯಾಲನು ಮೂಲೆಯಲ್ಲಿ ಕುಳಿತುಕೊಂಡು ಅಳಹತ್ತಿದನು. ನಾಗಮಹಾಶಯರಾಗ ಮನೆಯಲ್ಲಿದ್ದಿಲ್ಲ. ಮನೆಗೆ ಬಂದ ಕೂಡಲೇ ತಂದೆಯು ಅಳುತ್ತಿರುವದನ್ನು ನೋಡಿದರು. ಮನಸ್ಸಿಗೆ ಅತ್ಯಂತ ವ್ಯಥೆಯಾಯಿತು. ಕಡೆಗೆ ವಿಚಾರ ಮಾಡಿದರು, "ತಂದೆಯಲ್ಲದೆ ನನ್ನವರೆಂಬುವವರು ಬೇರೆ ಯಾರೂ ಇಲ್ಲ. ನನ್ನಿಂದ ಅವನು ಇಷ್ಟು ದುಃಖಪಡಬೇಕಾಗಿದೆ. ಧರ್ಮ, ಕರ್ಮ ದೂರಾಗಲಿ. ನಾನು ಮದುವೆ ಮಾಡಿಕೊಳ್ಳುವದರಿಂದ ಅವನ ಚಿತ್ತಕ್ಕೆ ಶಾಂತಿ ದೊರೆಯುತ್ತಿದ್ದರೆ ಹಾಗೆಯೇ ಮಾಡುವೆನು." ತಡಮಾಡದೆ ತಂದೆಗೆ ಹೇಳಿದರು "ನಾನು ಮದುವೆ ಮಾಡಿಕೊಳ್ಳುವೆನು."

ಆಕಸ್ಮಿಕವಾದ ಮಗನ ಮಾತಿನ ಮೇಲೆ ವೃದ್ಧನಿಗೆ ವಿಶ್ವಾಸ ಕೂಡಲಿಲ್ಲ. ಕಂಬನಿದುಂಬಿ ಮಗನ ಕಡೆಗೆ ನೋಡಿದನು. ನಾಗಮಹಾಶಯರು ಮತ್ತೆ "ವಿವಾಹದ ಮುಹೂರ್ತವನ್ನು ನಿಶ್ಚಯಿಸಲು ಊರಿಗೆ ಬೇಗನೇ ಪತ್ರ ಬರೆಯಿರಿ" ಎಂದು ನುಡಿದರು.

"ನೀನು ನನ್ನ ಮಾನವನ್ನುಳಿಸಿದೆ. ಅದರಿಂದ ನನ್ನ ಧರ್ಮರಕ್ಷಣೆಯಾಯಿತು. ಮದುವೆಯಾದ ಮೇಲೆ ನಿನ್ನ ಮನಬಂದಂತೆ ನಡೆ. ಅದಕ್ಕೆ ನನ್ನದೇನೂ ತಡೆಯಿಲ್ಲ. ಭಗವಂತನು ನಿನ್ನ ಮನೋಭಿಲಾಷೆಯನ್ನು ಪೂರೈಸಲೆಂದು ಹೃತ್ಪೂರ್ವಕವಾಗಿ ಹರಿಸುವೆ" ನೆಂದು ಸಂತೋಷದಿಂದ ಗದ್ಗದಕಂಠನಾಗಿ ದೀನದಯಾಲನೆಂದನು. ಕೂಡಲೇ ದೀನದಯಾಲನು ಪಾಲಬಾಬುಗಳ ಮನೆಗೆ ಹೋಗಿ ಈ ಸುಖಸಂವಾದವನ್ನರುಹಿದನು.

ಅದನ್ನು ಕೇಳಿ ಸಂತಸಗೊಂಡು ಪಾಲಬಾಬುಗಳು ವಿವಾಹದ ಕೆಲವು ವೆಚ್ಚವನ್ನು ತಾವೇ ವಹಿಸುವೆವೆಂದು ಹೇಳಿದರು.

ಎಲ್ಲರಿಗೂ ಬಲು ಹಿಗ್ಗು! ಆದರೆ ಮದುವೆ ಮಾಡಿಕೊಳ್ಳುವವನ ಮನಸ್ಸಿನಲ್ಲಿ ಸಮಾಧಾನವಿಲ್ಲ! ಬಹು ಹತಾಶನಾಗಿರುವನು. ತಂದೆಗೆ ಮದುವೆಯ ಒಪ್ಪಿಗೆಯನ್ನು ತಿಳಿಸಿದ ನಂತರ ನಾಗಮಹಾಶಯರು ಮನೆಯಿಂದ ಹೊರಬಿದ್ದರು. ಹಗಲು ಅಲ್ಲಲ್ಲಿ ಅಲೆಯುತ್ತ ಇರುಳಲ್ಲಿ ಗಂಗಾನದಿಯ ದಂಡೆಯ ಮೇಲೆ ಕುಳಿತುಕೊಂಡು ಅತಿಶಯ ವ್ಯಾಕುಲರಾಗಿ ರೋದಿಸಹತ್ತಿದರು. ಅಪರ್ಯಾಪ್ತ ದುಃಖ! ಅಸೀಮ ವೇದನೆ! ಊಟ ಉಡಿಗೆ ಎಲ್ಲವೂ ಮರೆತು ಹೋಯಿತು! ದೀನದಯಾಲನಿಗೆ ಈ ವಿಷಯವೇ ಗೊತ್ತಿಲ್ಲ. ವಿವಾಹದ ಮುಹೂರ್ತ ನಿಶ್ಚಯಿಸುವದು, ಊರಿಗೆ ಪತ್ರ ಬರೆಯುವದು ಮತ್ತು ಅವಶ್ಯಕ ಸಾಮಗ್ರಿಗಳನ್ನು ಒದಗಿಸಿಕೊಳ್ಳುವದು ಇವೇ ಮೊದಲಾದ ಕೆಲಸಗಳಲ್ಲಿ ಅವನು ಮಗ್ನನಾಗಿಬಿಟ್ಟನು.

ಎಲ್ಲವೂ ಅಣಿಯಾಯಿತು. ವರನ ಪೋಷಾಕಿನದೊಂದು ವಿಷಯವು ಉಳಿಯಿತು. ದೀನದಯಾಲನು ಮಗನಿಗೆ ತನ್ನ ಮನಸಿಗೆ ಬಂದ ಪೋಷಾಕು ಕೊಂಡು ತರಲು ಹೇಳಿದರು. ಮಗನು ಒಪ್ಪಲಿಲ್ಲ. ಕಡೆಗೆ ದೀನದಯಾಲನು ತಾನೇ ಹೋಗಿ ಎಲ್ಲವನ್ನೂ ಕೊಂಡುಕೊಂಡು ಬಂದನು.

ಇಂದು ಊರಿಗೆ ಹೊರಡಬೇಕಾದ ದಿನ. ದೀನದಯಾಲನು ಎಲ್ಲ ಸಾಮಾನುಗಳನ್ನೂ ಕಟ್ಟುತ್ತಿರುವನು. ದಿನಾಲು ಸಂಜೆಗೆ ಗಂಗಾತೀರದಲ್ಲಿ ತಿರುಗಾಡಲು ಹೋಗುವಂತೆ ಇಂದೂ ನಾಗಮಹಾಶಯರು ಹೋದರು. ಮನೆಗೆ ಹಿಂದಿರುಗುವ ಮೊದಲು ಗಂಗೆಗೆ ಪೊಡಮಟ್ಟು "ತಾಯಿ, ನೀನು ಪತಿತ ಪಾವನೆಯೆಂದು ಕೇಳಿರುವೆನು. ಗೃಹಸ್ಥಾಶ್ರಮದಲ್ಲಿ ಪ್ರವೇಶಿಸಿದ ಮೇಲೆ ನನ್ನಲ್ಲೇನಾದರೂ ಮಾಲಿನ್ಯವುಂಟಾದರೆ ಅದನ್ನು ತೊಳೆದುಬಿಡು. ಸುಖದಲ್ಲಿಯೂ ದುಃಖದಲ್ಲಿಯೂ ನಿನ್ನ ಶ್ರೀಪಾದಗಳಲ್ಲಿ ನನಗೆ ಎಡೆ ನೀಡು" ಎಂದು ಪ್ರಾರ್ಥಿಸಿದರು. ಅನಂತರ ಮನೆಗೆ ಬಂದರು. ತಂದೆ ಮಕ್ಕಳಿಬ್ಬರೂ ಊರಿಗೆ ಹೊರಟುಹೋದರು.

# ೩ನೆಯ ಪ್ರಕರಣ

## ದ್ವಿತೀಯ ವಿವಾಹವೂ ವೈದ್ಯಕೀ ವ್ಯವಸಾಯವೂ

ವಿವಾಹದ ವಿಷಯವಾಗಿ ನಾಗಮಹಾಶಯರು ಹೀಗ ನ್ನುತ್ತಿದ್ದರು "ಶುದ್ಧ ಪ್ರಜಾಕಾಮರಾಗಿ ಮದುವೆ ಮಾಡಿಕೊಂಡರೆ ಅದರಲ್ಲೇನೂ ದೋಷವಿಲ್ಲ. ಆದರೆ ಪೂರ್ವಕಾಲದ ಋಷಿಗಳು ಮಾತ್ರ ಇಂಥ ವಿವಾಹಕ್ಕೆ ಯೋಗ್ಯರಿದ್ದರು. ಮೊದಲು ಬ್ರಹ್ಮ ಚರ್ಯ ವ್ರತವನ್ನು ಪಾಲಿಸಿ ಸಂತಾನ ಕಾಮನೆ ಯಿಂದ ಲಗ್ನ ಮಾಡಿಕೊಳ್ಳುತ್ತಿದ್ದರು. ಹಾಗೂ ವ್ಯಾಸ, ಶುಕದೇವ, ಸನಕ ಸನತ್ಕುಮಾರರಂಥ ಮಕ್ಕಳನ್ನು ಪಡೆದು ಕಡೆಗೆ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸುತ್ತಿದ್ದರು. ಆದರೆ ಈ ಕಲಿಯುಗದಲ್ಲಿ ಹೀಗಾಗುವದು ಸಾಧ್ಯವಿಲ್ಲ. ಅಂಥ ತಪಸ್ಸೇ ಇಲ್ಲದ ಮೂಲಕ ದುಷ್ಟ ಸಂತತಿಯು ಬೆಳೆಯುತ್ತಿದೆ." ತಮ್ಮ ಎರಡ ನೆಯ ಮದುವೆಯ ಬಗ್ಗೆ ಹೀಗೆ ಹೇಳಿದರು, "ಏನು ಮಾಡಬೇಕು? ತಂದೆಯ ಅಪ್ಪಣೆ! ವಿಷವೆಂದು ತಿಳಿದರೂ ಅದನ್ನು ಮಾಡಲೇಬೇ ಕಾಯಿತು"

ಮದುವೆಗೆ ನಾಲ್ಕಾರು ದಿನ ಮೊದಲು ತಂದೆ ಮಕ್ಕಳು ಊರನ್ನು ಮುಟ್ಟಿದರು. ಶುಭದಿನವು ಬಂದಿತು. ವಧುವಿನ ಮನೆಯು ಅದೇ ಊರ ಲ್ಲಿದೆ. ಸಮಾರಂಭದಿಂದ ಶುಭಕಾರ್ಯವು ಜರುಗಿತು. ಇಷ್ಟು ದಿನಗಳ ವರೆಗೆ ನೀರೆರೆದು ಬೆಳೆಯಿಸಿದ ಆಶಾಲತೆಯು-ಸಂಸಾರದಲ್ಲಿ ಬೀಳದೆ ಭಗವ ತ್ಪ್ರಾಪ್ತಿಗಾಗಿ ಹೆಣಗುವದು — ಕಮರಿತು. ದೈವ ದುರ್ವಿಲಾಸದಿಂದ ಸಂಸಾರದಲ್ಲಿ ಬಿದ್ದ ಮೇಲೆ ಹಣ ಗಳಿಸುವ ಉದ್ಯೋಗ ಮಾಡಬೇಕಷ್ಟೆ. ಸೇವಾವೃತ್ತಿಯ ಬಗ್ಗೆ ನಾಗಮಹಾಶಯರಿಗೆ ಅತ್ಯಂತ ತಿರಸ್ಕಾರ. ಸ್ವತಂ ತ್ರವಾದ ವೈದ್ಯಕೀ ವ್ಯವಸಾಯ ಮಾಡಬೇಕೆಂದು ನಿರ್ಧಾರ ಮಾಡಿದರು. ಪಿತಾ ಪುತ್ರರು ಕಲಕತ್ತೆಗೆ ಬಂದರು. ಅಂದಿನಿಂದ ನಾಗಮಹಾಶಯರು

ಹಣ (Fee) ತೆಗೆದುಕೊಂಡು ಚಿಕಿತ್ಸೆ ಮಾಡಹತ್ತಿದರೆಂದು ಸುರೇಶಚಂದ್ರರು ಹೇಳುತ್ತಾರೆ.

ಅಧ್ಯಯನ ಸುಖ, ರೋಗಿಗಳ ಶುಶ್ರೂಷೆ, ಮಿತ್ರರೊಡನೆ 'ಸತ್ಕಥಾ ವಿನೋದ' ಹಾಗೂ ಭಗವದ್ಭಜನೆ ಮೊದಲಾದವುಗಳಲ್ಲಿ ತೊಡಗಿ ನಾಗಮಹಾಶಯರ ಜೀವನವು ಸಮಾಧಾನಕರವಾಗಿ ಸಾಗಿತ್ತು. ಆದರೆ ಆಕಸ್ಮಿಕವಾಗಿ ನೀಲಾಕಾಶದಲ್ಲಿ ಕಾರ್ಮೋಡವು ತಲೆದೋರಿತು. ಅವರ ಸೋದರತ್ತೆಯು ರೋಗಗ್ರಸ್ತಳಾಗಿರುವಳೆಂದು ಓಲೆ ಬಂದಿತು. ಅವಳದು ವೃದ್ಧ ವಯಸ್ಸು, ಮೇಲೆ ಆಮಾಂಶೆಯ ರೋಗ, ಹೀಗಾಗಿ ನಾಗಮಹಾಶಯರು ಬಹು ಉದ್ವಿಗ್ನರಾಗಿ ಊರಿಗೆ ಹೋದರು. ಸೋದರತ್ತೆಯು ಅವರನ್ನು ಕಂಡು ಆನಂದದಿಂದ "ನಿನ್ನ ಮೊಗ ನೋಡಿ ಸಾಯುವೆನೆಂಬುದನ್ನು ಪರಮ ಸೌಭಾಗ್ಯವೆಂದೆಣಿಸುವೆನೆಂ"ದು ನುಡಿದಳು. ನಾಗಮಹಾಶಯರು ವಿಶ್ವಪ್ರಯತ್ನ ಮಾಡಿದರೂ ತಾಯಿಯಂತಿರುವ ಸೋದರತ್ತೆಯನ್ನುಳಿಸುವದು ಸಾಧ್ಯವಾಗಲಿಲ್ಲ. ಅವಳು ಸಾಯುವ ಮೊದಲು ನಾಗಮಹಾಶಯರನ್ನು ಕರೆದು ಎಲ್ಲರ ಊಟವಾಗಿದೆಯೋ ಇಲ್ಲವೋ ಎಂದು ಕೇಳಿದಳು. ಮರಣ ಸಮಯಕ್ಕಿಂತ ಮುಂಚೆ ಹದಿನೈದು ನಿಮಿಷಗಳ ವರೆಗೆ ರಾಮ ನಾಮ ಜಪ ಮಾಡುತ್ತಿದ್ದಳು. "ಇನ್ನೇನೂ ತಡವಿಲ್ಲವೆಂ"ದಳು. ನಾಗಮಹಾಶಯನ ತಲೆಯ ಮೇಲೆ ಕೈಯಾಡಿಸಿ "ನಿನ್ನ ಮನವು ರಾಮನಲ್ಲಿ ಆಸಕ್ತವಾಗಲಿ" ಎಂದು ಆಶೀರ್ವದಿಸಿದಳು. ಇದೇ ಅವಳ ಕಡೆಯ ಮಾತು! ಅವಳು ರಾಮಮಂತ್ರ ದೀಕ್ಷಿತಳಾಗಿದ್ದಳು. "ರಾ" ಎನ್ನುವಷ್ಟರಲ್ಲಿ ಅವಳ ಪ್ರಾಣವಾಯುವು ಹಾರಿ ಹೋಯಿತು. ನಾಗಮಹಾಶಯರ ವಿವಾಹವಾದ ಏಳು ವರ್ಷಗಳ ನಂತರ ಇವಳು ತೀರಿದಳು.

ಈ ಮೊದಲು ವಿಯೋಗವ್ಯಥೆಯ ಕಲ್ಪನೆಯು ಸಹ ನಾಗಮಹಾಶಯರಿಗಿರಲಿಲ್ಲ ಹೆಂಡತಿಯ ಮೇಲೆ ಅವರಿಗೆ ಮಮತೆಯಿದ್ದಿಲ್ಲ. ಮೊದಲನೆಯ ಹೆಂಡತಿಯು ಮರಣಹೊಂದಿದರೆ ಅವರೇನೂ ವ್ಯಸನಪಡಲಿಲ್ಲ. ಚಿಕ್ಕಂದಿನಲ್ಲಿಯೇ ತಾಯಿ ತೀರಿದ್ದಳು. ಆದರೆ ಆ ತಾಯಿಯ ಬದಲಾಗಿ ಮತ್ತೊರ್ವ ತಾಯಿ ದೊರಕಿದ್ದಳು. ಸೋದರತ್ತೆಯ ನಲುಮೆಯು ತಾಯಿಯ ದುಃಖವನ್ನು ಮರೆಸಿಬಿಟ್ಟಿತ್ತು. ಈಗ ಅವಳೇ ತನ್ನನ್ನು ತೊರೆದು ಹೋದ

ಮೇಲೆ ನಾಗಮಹಾಶಯರ ಮನಸ್ಸಿನ ಮೇಲೆ ಒಳ್ಳೇ ಆಘಾತವಾಯಿತು. ಮನೆಯಲ್ಲಿರುವದು ಅಸಾಧ್ಯವಾಯಿತು. ಆಗಾಗ ಅವಳ ಚಿತಾಭೂಮಿಗೆ ಹೋಗಿ ರಾತ್ರಿಯಲ್ಲೆಲ್ಲ ಅಲ್ಲಿಯೇ ಬಿದ್ದುಕೊಂಡಿರುತ್ತಿದ್ದರು. ಅಡವಿ ಯಡವಿ ತಿರುಗುತ್ತಿದ್ದರು. ಅವರ ತಂಗಿಯಾದ ಶಾರದೆಯು ಹೇಳುತ್ತಿದ್ದಳು, "ಅಣ್ಣನಿಗೆ ಆಗ ಹುಚ್ಚೇ ಹಿಡಿದಂತಾಗಿತ್ತು. ಸ್ನಾನಾಹಾರಗಳ ಪರಿವೆಯೇ ಇದ್ದಿಲ್ಲ. ಒಮ್ಮೊಮ್ಮೆ ಅಡವಿಯಲ್ಲಿಯೇ ಎಲ್ಲಾದರೂ ಒರಗಿಕೊಂಡು ಬಿಡುತ್ತಿದ್ದನು. ಕಡೆಗೆ ತಂದೆಗೆ ಪತ್ರ ಬರೆದುಅವನನ್ನು ಕಲಕತ್ತೆಗೆ ಕರೆದುಕೊಂಡು ಹೋಗಲಿಕ್ಕೆ ಹೇಳಬೇಕಾಯಿತು."

ಸೋದರತ್ತೆಯ ಶ್ರಾದ್ಧಾದಿಗಳನ್ನು ಮಾಡಿ ನಾಗಮಹಾಶಯರು ತಂದೆಯ ಕೂಡ ಕಲಕತ್ತೆಗೆ ಬಂದರು. ದುಃಖದ ಉದ್ವೇಗವು ಕ್ರಮವಾಗಿ ಕಡಿಮೆಯಾಗಹತ್ತಿತ್ತೇನೋ ನಿಜ. ಆದರೆ ಒಂದು ಸಮಸ್ಯೆಯು ಮಾತ್ರ ಅವರ ಹೃದಯದಲ್ಲಿ ಮನೆ ಮಾಡಿಕೊಂಡಿತು. ಹಗಲಿರುಳೂ ಇದೇ ಯೋಜನೆಯಲ್ಲಿ ಮಗ್ನರಾಗಿರುತ್ತಿದ್ದರು. "ಮನುಷ್ಯನು ಹುಟ್ಟುವದೇಕೆ? ಸಾಯುವದೇಕೆ? ಮರಣದ ನಂತರ ಅವನ ಗತಿಯೇನು? ಸೋದರತ್ತೆಯ ಗತಿಯೇನಾಯಿತು? ನನಗೇನಾದರೂ ಸ್ವಲ್ಪ ನೋವಾದರೆ ಧಾವಿಸಿ ಬರುವ ಅವಳು ನಾನೆಷ್ಟು ಅತ್ತು ಕರೆದರೂ ಬರುವದಿಲ್ಲವಲ್ಲ! ಸತ್ತಮೇಲೆ ಎಲ್ಲವೂ ತೊಲಗಿ ಹೋಗುವದೆಂದ ಮೇಲೆ ನನ್ನದು ನನ್ನದು ಎಂಬ ವೃಥಾ ಹಂಬಲವೇಕೆ? ಈ ಜನ್ಮ-ಜರಾ-ಮೃತ್ಯುಪೂರ್ಣ ಸಂಸಾರದಲ್ಲಿ ನಾನೇಕೆ ಜನಿಸಿ ಬಂದೆ? ಮನುಷ್ಯನ ಜೀವನದ ಉದ್ದೇಶವೇನು?"

ಮನಸ್ಸಿಗೆ ಸ್ವಲ್ಪವೂ ಸಮಾಧಾನವಿಲ್ಲ.

ನಾಗಮಹಾಶಯರು ಫೀ ತೆಗೆದುಕೊಂಡು ಚಿಕಿತ್ಸೆ ಮಾಡುತ್ತಿದ್ದರೇನೋ ನಿಜ. ಆದರೆ ಅವರಾಗಿ ಅದನ್ನೆಂದೂ ಕೇಳುತ್ತಿದ್ದಿಲ್ಲ. ಭಕ್ತಿಯಿಂದ ಜನರು ಕೊಟ್ಟಿದ್ದನ್ನು ಮಾತ್ರ ಸ್ವೀಕರಿಸುತ್ತಿದ್ದರು. ಅವರ ವ್ಯವಸಾಯದ ವ್ಯಾಪವು ದಿನದಿನಕ್ಕೆ ಬೆಳೆಯಹತ್ತಿತು.

ವ್ಯವಸಾಯ ಮಾಡುವಾಗ್ಗೆ ನಾಗಮಹಾಶಯರು ಸ್ವಲ್ಪ ಸಹ ಬಾಹ್ಯಾಡಂಬರವನ್ನು ತೋರ್ಪಡಿಸುತ್ತಿದ್ದಿಲ್ಲ. ಕುದುರೆಯಸ್ವಾಗಲಿ

ಗಾಡಿಯನ್ನಾಗಲಿ ಇಟ್ಟಿದ್ದಿಲ್ಲ. ದೂರದಿಂದ ಕರೆವು ಬಂದರೂ ಕಾಲು ನಡಿಗೆಯಿಂದಲೇ ಅಲ್ಲಿಗೆ ಹೋಗುತ್ತಿದ್ದರು. ಸಾಮಾನ್ಯ ಉಡಿಗೆ ತೊಟ್ಟುಕೊಂಡೇ ಚಿಕಿತ್ಸೆ ಮಾಡುತ್ತಿದ್ದರು. ಸುಂದರವಾದ ಪೋಷಾಕು ವ್ಯವಹಾರದ ದೃಷ್ಟಿಯಿಂದ ಉಪಯುಕ್ತವೆಂದು ಯೋಚಿಸಿ ದೀನದಯಾಲರೊಮ್ಮೆ ತಮ್ಮ ಮನಸ್ಸಿಗೆ ಉಚಿತವೆಂದು ಕಂಡ ಪೋಷಾಕನ್ನು ಕೊಂಡು ತಂದಿದ್ದರು. ಆದರೆ ಮಗನು "ಈ ಪೋಷಾಕಿನ ಅವಶ್ಯಕತೆಯು ನನಗಿಲ್ಲ. ಇದೇ ಹಣದಿಂದ ಬಡಬಗ್ಗರಿಗೆ ಸಹಾಯ ಮಾಡಿದ್ದರೆ ಯೋಗ್ಯವಾಗುತ್ತಿತ್ತೆ"ಂದು ಹೇಳಿಬಿಟ್ಟರು. ದೀನದಯಾಲರು ಉಸುರ್ಗರೆದು "ನಿನ್ನ ವಿಷಯವಾಗಿ ನಾನು ಬಹಳ ಆಶೋತ್ತರಗಳನ್ನಿಟ್ಟುಕೊಂಡಿದ್ದೆನು. ಆದರೆ ನಾನು ಮೋಸಹೋದೆ. ದಿನದಿನಕ್ಕೆ ನೀನು ಸನ್ಯಾಸಿಯಾಗತೊಡಗಿರುವಿ" ಎಂದರು. ಸಂಸಾರದಲ್ಲಿ ಅನಭಿಜ್ಞನಾದ ಮಗನದೆಲ್ಲವೂ ವಿಚಿತ್ರವೇ! ನೆರೆಹೊರೆಯವರಾರಾದರೂ ರೋಗಪೀಡಿತರಾಗಿದ್ದರೆ ಅಥವಾ ಅನ್ನವಿಲ್ಲದೆ ಕುಳಿತಿದ್ದರೆ ಅವರ ಯೋಗ್ಯ ಅನುಕೂಲತೆಯನ್ನು ಮಾಡದೆ ನಾಗಮಹಾಶಯರು ಗುಟುಕು ನೀರು ಸಹ ಕುಡಿಯುತ್ತಿದ್ದಿಲ್ಲ. ಅಸಮರ್ಥ ವ್ಯಕ್ತಿಗಳ ಕಡೆಯಿಂದ ಸ್ವಲ್ಪ ಸಹ ದುಡ್ಡು ತೆಗೆದುಕೊಳ್ಳುತ್ತಿದ್ದಿಲ್ಲ. ಇಷ್ಟೇ ಅಲ್ಲ, ಪಥ್ಯದ ವೆಚ್ಚವನ್ನು ಸಹ ತಾವೇ ನೋಡಿಕೊಳ್ಳುತ್ತಿದ್ದರು. ನಿರಾಶ್ರಿತ ರೋಗಿಗಳನ್ನು ಮನೆಗೆ ಕರೆತಂದು ಶುಶ್ರೂಷೆಯನ್ನು ಮಾಡುತ್ತಿದ್ದರು. ಹಸಿದು ಬಂದ ಭಿಕ್ಷುಕರಿಗೆ ತಾವು ಊಟ ಮಾಡಬೇಕೆಂದಿರುವ ಅನ್ನವನ್ನು ನೀಡುತ್ತಿದ್ದರು.

ಒಂದು ದಿನ ನಾಗಮಹಾಶಯರು ಒಬ್ಬ ದರಿದ್ರನ ಮನೆಗೆ ಚಿಕಿತ್ಸೆ ಮಾಡಲು ಹೋದರು. ರೋಗಿಯ ಅವಸ್ಥೆಯು ಬಹು ಶೋಚನೀಯವಾಗಿತ್ತು. ಮೂರು ನಾಲ್ಕು ತಾಸು ಅವನ ಶುಶ್ರೂಷೆ ಮಾಡಿ ಔಷಧ ಕುಡಿಸಿದರು. ರಾತ್ರಿಯಲ್ಲಿ ಮತ್ತೆ ಅವನನ್ನು ನೋಡಲು ಹೋದರು. ಚಳಿಗಾಲ, ಮುರುಕು ಮನೆ, ರೋಗಿಗೆ ಹೊದ್ದುಕೊಳ್ಳಲು ವಸ್ತ್ರವಿಲ್ಲ. "ಇವನ ರೋಗ ಕಠಿಣವಿದೆ. ಚಳಿಯಲ್ಲಿ ಹೀಗೆ ಬಿದ್ದುಕೊಂಡರೆ ಬದುಕುವ ಸಂಭವವಿಲ್ಲವೆಂ"ದು ತಿಳಿದು ನಾಗಮಹಾಶಯರು ತಾವು ಹೊದ್ದುಕೊಂಡಿರುವ ಕಂಬಳಿಯನ್ನು ರೋಗಿಯ ಮೈಮೇಲೆ ಹೊಚ್ಚಿ ಅಲ್ಲಿಂದ

ಹಾಗೆಯೇ ಹೊರಬಿದ್ದರು. ಆ ರೋಗಿಯು ಎಷ್ಟು ಕೂಗಿದರೂ ಇವರು ಹಿಂದಿರುಗಲಿಲ್ಲ. ಬಾಗಿಲದ ಹೊರಗೆ ನಿಂತು "ಏನೂ ಭಯವಿಲ್ಲ; ನಾಳೆ ನಾನು ನಿನ್ನನ್ನು ಕಾಣುವೆನು" ಎಂದು ಹೇಳಿ ಹೋದರು. ಮರುದಿನ ಮುಂಜಾನೆ ರೋಗಿಯು ಅತ್ಯಂತ ಕೃತಜ್ಞತೆಯನ್ನು ವ್ಯಕ್ತಮಾಡಹತ್ತಿ ತ್ತಿದನು. ನಾಗಮಹಾಶಯರು "ಆಗ ನನಗಿಂತ ನಿನಗೆ ಬೆಚ್ಚಗಿನ ವಸ್ತ್ರಗಳ ಅವಶ್ಯಕತೆಯಿದೆಯೆಂದು ಯೋಚಿಸಿ ಅದನ್ನು ನಿನಗೆ ಕೊಟ್ಟೆನೆಂ"ದರು. ಮಗನ ಮೈಮೇಲೆ ಕಂಬಳಿಯಿಲ್ಲದ್ದನ್ನು ಕಂಡು ದೀನದಯಾಲರು ಆ ಬಗ್ಗೆ ವಿಚಾರಿಸಿದರು. ಎಲ್ಲ ಸಮಾಚಾರ ಕೇಳಿ ಒದರಾಡಹತ್ತಿದರು. ಸಿಟ್ಟಿಗೆದ್ದು ಊಟವನ್ನೇ ಮಾಡಲಿಲ್ಲ. ಮಗನೂ ಊಟ ಮಾಡಲಿಲ್ಲ. ದೀನದಯಾಲರು ಮರುದಿನ ಮತ್ತೊಂದು ಕಂಬಳಿಯನ್ನು ಕೊಂಡು ತಂದರು. ರೋಗಿಯು ಗುಣ ಹೊಂದಿದ ಮೇಲೆ ದಿನಾಲೂ ನಾಗಮಹಾಶಯರ ಕಡೆಗೆ ಬಂದು ಅವರನ್ನು ನಮಸ್ಕರಿಸಿ ಹೋಗುತ್ತಿದ್ದನು. ಮತ್ತು ತನ್ನ ಕಣ್ಣಿಗೆ ಬಿದ್ದ ರೋಗಿಗಳನ್ನು ಚಿಕಿತ್ಸೆಗಾಗಿ ನಾಗಮಹಾಶಯರ ಕಡೆಗೆ ಕಳುಹುತ್ತಿದ್ದನು.

ಮತ್ತೊಂದು ದಿನ ನಾಗಮಹಾಶಯರು ಒಬ್ಬ ಬಡ ರೋಗಿಯ ಚಿಕಿತ್ಸೆಮಾಡಲು ಹೋದಾಗ್ಗ ರೋಗಿಯು ನೆಲದ ಮೇಲೆ ಮಲಗಿರುವದನ್ನು ನೋಡಿದರು. ನಾಗಮಹಾಶಯರ ಮನೆಯಲ್ಲಿ ಒಂದು ಪಲ್ಲಂಗವು ಹೆಚ್ಚಾಗಿತ್ತು. ತತ್‌ಕ್ಷಣವೇ ಅದನ್ನು ಅಲ್ಲಿಗೆ ಒಯ್ದು ರೋಗಿಯನ್ನು ಅದರ ಮೇಲೆ ಮಲಗಿಸಿ ಚಿಕಿತ್ಸೆ ಮಾಡಲು ಪ್ರಾರಂಭಿಸಿದರು. ದೀನದಯಾಲರಿಗೆ ಇದೆಲ್ಲವೂ ಸರಿಹೋಗುತ್ತಿದ್ದಿಲ್ಲ.

ಚಿಕ್ಕ ಕೂಸೊಂದು ಮಾರಿಕಾ ಬೇನೆಯಿಂದ (Cholera) ಬಳಲುತ್ತಿತ್ತು. ನಾಗಮಹಾಶಯರು ಇಡೀ ದಿನ ಅದರ ಚಿಕಿತ್ಸೆ ಮಾಡಿದರೂ ಅದು ಬದುಕಲಿಲ್ಲ. ಸುರೇಶ ಬಾಬುಗಳು ಹೀಗೆ ಹೇಳುತ್ತಾರೆ, "ಆ ದಿನ ನಾಗಮಹಾಶಯರಿಗೆ ವಿಶೇಷ ಹಣ ದೊರಕಬಹುದೆಂದು ಭಾವಿಸಿದ್ದೆವು. ಸಂಜೆಯ ಮುಂದೆ ದುಃಖಿಸುತ್ತ ಬರಿಗೈಯಿಂದ ಬಂದರು; ಹಾಗೂ ನುಡಿದರು, 'ಪಾಪ, ಆ ಗೃಹಸ್ಥನಿಗೆ ಅದೊಂದೇ ಮಗು! ಎಷ್ಟು ಯತ್ನಿಸಿದರೂ ಅದನ್ನುಳಿಸುವದು ಸಾಧ್ಯವಾಗಲಿಲ್ಲ. ಅವನ ಮನೆ ಶೂನ್ಯವಾಯಿತು.' ಆ ರಾತ್ರಿ ನಾಗಮಹಾಶಯರು ನೀರು ಸಹ ಕುಡಿಯಲಿಲ್ಲ."

ನಾಗಮಹಾಶಯರ ವೈದ್ಯಕೀ ವ್ಯವಸಾಯವು ದಿನದಿನಕ್ಕೆ ಬೆಳೆಯಹತ್ತಿತು. ಪಾಲ ಬಾಬುಗಳು ಅವರನ್ನು ತಮ್ಮ ಗೃಹ ಚಿಕಿತ್ಸಕ (Family Phygician) ರನ್ನಾಗಿ ಯೋಜಿಸಿದರು. ಪಾಲ ಬಾಬುಗಳು ನಾಗಮಹಾಶಯರನ್ನು ಇನ್ನೂ ಡಾಕ್ಟರ ಎಂದು ಉಲ್ಲೇಖಿಸುತ್ತಾರೆ. ನಾಗಮಹಾಶಯರು ತಮ್ಮ ಗೃಹಚಿಕಿತ್ಸಕರಿರುವವರೆಗೆ ತಮ್ಮ ಮನೆಯಲ್ಲಿ ಒಂದೂ ಅಕಾಲ ಮರಣವು ಸಂಭವಿಸುವದಿಲ್ಲವೆಂದು ಹರಲಾಲ ಪಾಲರು ಹೇಳುತ್ತಾರೆ. ಒಮ್ಮೆ ಅವರ ಬಳಗದವರಲ್ಲೊಬ್ಬ ಸ್ತ್ರೀಯಳು ಮಾರಿಕಾಬೇನೆಯಿಂದ ಪೀಡಿತಳಾದಳು. ನಾಗಮಹಾಶಯರು ಔಷಧ ಕೊಡಹತ್ತಿದರು. ಆದರೆ ರೋಗವು ದಿನದಿನಕ್ಕೆ ಬೆಳೆಯಹತ್ತಿತು. ಗಾಬರಿಯಾಗಿ ಅವರು ಡಾ. ಭಾದುರಿಯವರನ್ನು ಕರೆತರಲು ಹೇಳಿದರು. ಡಾ. ಭಾದುರಿಯವರು ಬಂದಮೇಲೆ ಯಾವ ಯಾವ ಔಷಧ ಕೊಟ್ಟಿರೆಂದು ಕೇಳಿದರು, ಅದನ್ನೆಲ್ಲ ಕೇಳಿ "ಔಷಧ ಯೋಜನೆಯು ಸರಿಯಾಗಿದೆ. ನಾನೇನೂ ಹೆಚ್ಚಿಗೆ ಮಾಡಬೇಕಾಗಿಲ್ಲ" ವೆಂದು ಹೇಳಿ ಹೊರಟು ಹೋದರು. ಪಾಲ ಬಾಬುಗಳು ಎಷ್ಟು ಆಗ್ರಹಪಟ್ಟರೂ ಅವರು ಔಷಧ ಕೊಡಲಿಲ್ಲ. ರೋಗಿಗೆ ಒಬ್ಬರನ್ನು ಬಿಟ್ಟು ಮತ್ತೊಬ್ಬರ ಕಡೆಯಿಂದ ಔಷಧ ಕೊಡಿಸುವದು ಹಿತಕರವಲ್ಲವೆಂದು ಅವರು ಸೂಚಿಸಿದರು. ನಾಗಮಹಾಶಯರ ನಿಪುಣ ಚಿಕಿತ್ಸೆಯಿಂದ ರೋಗಿಗೆ ಆರೋಗ್ಯಲಾಭವಾಗಲು ನಾಗಮಹಾಶಯರ ಮೇಲಿದ್ದ ಪಾಲ ಬಾಬುಗಳ ಶ್ರದ್ಧೆ ಮತ್ತಿಷ್ಟು ಬೆಳೆಯಿತು. ಎಂಥ ದುರ್ಧರ ರೋಗವಿದ್ದರೂ ನಾಗಮಹಾಶಯರನ್ನಲ್ಲದೆ ಬೇರೆ ಡಾಕ್ಟರರನ್ನು ಅವರು ಕರೆಯುತ್ತಿದ್ದಿಲ್ಲ. ಆ ಸ್ತ್ರೀಯು ಪೂರ್ಣ ಗುಣ ಹೊಂದಿದ ಮೇಲೆ ಪಾಲಬಾಬುಗಳು ಒಂದು ಬೆಳ್ಳಿಯ ಪೆಟ್ಟಿಗೆಯಲ್ಲಿ ಎಷ್ಟೋ ರೂಪಾಯಿಗಳನ್ನು ತುಂಬಿ ಬಹುಮಾನವೆಂದು ನಾಗಮಹಾಶಯರಿಗೆ ಕೊಡಹೋದರು. ಪ್ರತಿಪಾಲಕರೆಂದು ತಿಳಿದು ಪಾಲಬಾಬುಗಳ ಕಡೆಯಿಂದ ನಾಗಮಹಾಶಯರು ಎಂದೂ ಹಣ ತೆಗೆದುಕೊಳ್ಳುತ್ತಿದ್ದಿಲ್ಲ. ಏನು ಕೊಡುವದಿದೆಯೋ ಅದನ್ನು ತಂದೆಯವರಿಗೆ ಕೊಡಿರೆಂದು ಅನ್ನುತ್ತಿದ್ದರು. ಆ ಬೆಳ್ಳಿಯ ಪೆಟ್ಟಿಗೆಯನ್ನು ನಾಗಮಹಾಶಯರು ಸ್ವೀಕರಿಸಲಿಲ್ಲ. ಇಷ್ಟೇ ಬಹುಮಾನದಿಂದ ನಾಗಮಹಾಶಯರು ತೃಪ್ತರಾಗಿರಲಿಕ್ಕಿಲ್ಲವೇನೋ ಎಂದು ತಿಳಿದು

ಪಾಲಬಾಬುಗಳು ಮತ್ತೆ ಐವತ್ತು ರೂಪಾಯಿಗಳ ಸಹಿತ ಅದನ್ನು ಕೊಡ ಹೋದರು. ಅದನ್ನು ತೆಗೆದುಕೊಳ್ಳಲು ಬಹಳ ಬಲವಂತಪಡಿಸಹತ್ತಿದರು. ಕಡೆಗೆ ಅವರ ಅತ್ಯಾಗ್ರಹದ ಮೂಲಕ ತಮ್ಮ ಆಗಮನ ಸಂಬಳ (Visit Fee) ಮತ್ತು ಔಷಧದ ಬೆಲೆ ಕೂಡಿ ಇಪ್ಪತ್ತು ರೂಪಾಯಿಗಳನ್ನು ಮಿಕ್ಕುವದಿಲ್ಲವೆಂದು ನುಡಿದು ಅಷ್ಟು ಮಾತ್ರ ತೆಗೆದುಕೊಂಡರು. ಆದರೆ ಪಾಲಬಾಬುಗಳು ಉಳಿದ ಹಣವನ್ನು ಶಾರದಾ ಪೂಜೆಯ ಸಹಾಯಕ್ಕೆಂದು ದೀನದಯಾಲರ ಹೆಸರಿನಿಂದ ಮೀಸಲಾಗಿಟ್ಟರು.

ಪಾಲಬಾಬುಗಳ ಕಡೆಯಿಂದ ಈ ಸುದ್ದಿಯನ್ನು ಕೇಳಿ ದೀನದಯಾಲರು ಸಂಭ್ರಾಂತರಾದರು. "ಅಲ್ಪ ವೇತನಗೆಗಾಗಿ ಈ ವೃದ್ಧ ವಯಸ್ಸಿನಲ್ಲಿ ಸಹ ನಾನು ಸೇವಕರಿಯನ್ನು ಮಾಡುತ್ತಿರುವೆನು. ಈ ನನ್ನ ತಿಳಿಗೇಡಿ ಮಗನು ನ್ಯಾಯಪ್ರಾಪ್ತ ಹಣವನ್ನು ಸಹ ಉಪೇಕ್ಷಿಸುತ್ತಿರುವನಲ್ಲ" ಎಂದು ಅವರ ವಿಚಾರ. ಎಷ್ಟು ಉಪದೇಶಿಸಿದರೂ ಎಲ್ಲವೂ ವ್ಯರ್ಥ! ಮಗನೆಂದನು "ನೀವೇ ನನಗೆ ಧರ್ಮೋಪದೇಶ ಮಾಡುತ್ತೀರಿ. ತಿಳಿದೂ ತಿಳಿದೂ ಹೆಚ್ಚಿಗೆ ಹಣವನ್ನೇಕೆ ತೆಗೆದುಕೊಳ್ಳಬೇಕು? ನಾನಿಷ್ಟು ದಿನಗಳವರೆಗೆ ಕೊಟ್ಟ ಔಷಧದ ಬೆಲೆಯು ಬಹಳೆಂದರೆ ಆರು ರೂಪಾಯಿ ಆಗುವದು. ಮತ್ತು ಏಳು ದಿನಗಳ ನನ್ನ ಪರಿಶ್ರಮದ ಸಂಬಳವು ಹದಿನಾಲ್ಕು ರೂಪಾಯಿಗಳಿಗಿಂತ ಹೆಚ್ಚಾಗಲಾರದು. ಅಂತೇ ಇಪ್ಪತ್ತು ರೂಪಾಯಿಗಳನ್ನು ಅವರ ಕಡೆಯಿಂದ ತೆಗೆದುಕೊಂಡೆನು. ಹೆಚ್ಚಿಗೆ ತೆಗೆದುಕೊಂಡಿದ್ದರೆ ಅಧರ್ಮವಾಗುತ್ತಿತ್ತು. ನೀವಾದರೂ ಉಳಿದ ಹಣವನ್ನು ಎಂದೂ ಒಯ್ಯಬೇಡಿರಿ."

ದೀನದಯಾಲ:— ಪಾಲಬಾಬುಗಳು ಆತ್ಮ ಸಂತೋಷದಿಂದ ಆ ಹಣ ಕೊಟ್ಟರೆ ಸ್ವೀಕರಿಸಲಿಲ್ಲವೇಕೆ? ಹೀಗಾದರೆ ನಿನ್ನ ಉಪಜೀವನವು ಸಾಗಲಿಕ್ಕಿಲ್ಲ.

ನಾಗಮಹಾಶಯ:— ಅದರ ಚಿಂತೆ ನನಗಿಲ್ಲ. ಅನ್ಯಾಯವೆಂದು ತೋರಿದ್ದನ್ನು ನಾನು ಪ್ರಾಣ ಹೋದರೂ ಮಾಡಲಿಕ್ಕಿಲ್ಲ. ಪರಮಾತ್ಮನು ಸತ್ಯಸ್ವರೂಪನು. ಮಿಥ್ಯಾಚಾರವು ಇಹಪರಗಳಲ್ಲಿಯೂ ದುಃಖಕ್ಕೆ ಕಾರಣವು.

ಮಗನ ಮಾತು ಕೇಳಿ ದೀನದಯಾಲರು ಮಗನೆಂದೂ ಸಂಸಾರದಲ್ಲಿ ಹೆಚ್ಚಳ ಪಡೆಯಲಾರನೆಂದು ತಿಳಿದರು.

ಇತ್ತ ಮಗನು ಯೋಚಿಸಹತ್ತಿದನು; "ಹಾಯ್ ಹಾಯ್ ಇದೇ ಸಂಸಾರವೇ? ನಿಜವಾಗಿಯೂ ಇದು ಭವಾಟವಿಯು. ಛಲಬಲದಿಂದ ಹಣ ಗಳಿಸಿದವನೇ ಈ ಸಂಸಾರದಲ್ಲಿ ಶ್ರೇಷ್ಠನೆನಿಸಿಕೊಳ್ಳುವನು. ಅವನೇ ಕೀರ್ತಿವಂತ. ಇಂಥ ಸಂಸಾರದಲ್ಲಿ ನಾನು ತೊಡಗಬೇಕಾಗಿಲ್ಲ. ಸದ್ಭಾವದಿಂದ ಭಿಕ್ಷಾವೃತ್ತಿಯನ್ನವಲಂಬಿಸಿ ದೇಹರಕ್ಷಣೆ ಮಾಡಿಕೊಳ್ಳುವದು ಶ್ರೇಯಸ್ಕರ. ಆದರೆ ಅನ್ಯಾಯದಿಂದ ಅರ್ಥೋಪಾರ್ಜನೆ ಮಾಡಿ ಕೊಳ್ಳುವದು ತೀರ ಅಯೋಗ್ಯವು."

ನಾಗಮಹಾಶಯರ ವ್ಯವಸಾಯವು ದಿನದಿನಕ್ಕೆ ವೃದ್ಧಿಯನ್ನು ಹೊಂದುತ್ತಿದ್ದುದರಿಂದ ಅವರು ಸಹಜವಾಗಿ ಅಪಾರ ಸಂಪತ್ತನ್ನು ಗಳಿಸಬಹುದಾಗಿತ್ತು. ವಸ್ತುತಃ ಅವರಿಗೆ ತಿಂಗಳಿಗೆ ಏನಿಲ್ಲೆಂದರೂ ಮೂರು ನಾಲ್ಕು ನೂರು ರೂಪಾಯಿಗಳ ಪ್ರಾಪ್ತಿಯಾಗಬೇಕಾಗಿತ್ತು. ಆದರೆ ಮೂವತ್ತು ನಾಲ್ವತ್ತು ರೂಪಾಯಿಗಳು ಮಾತ್ರ ಅವರ ಕೈಗೆ ಹತ್ತುತ್ತಿದ್ದವು. ಆಗಮನ ಸಂಬಳವನ್ನು ಅವರು ( Visit fee ) ಯಾರ ಕಡೆಯಿಂದಲೂ ತೆಗೆದುಕೊಳ್ಳುತ್ತಿದ್ದಿಲ್ಲ. ತಾವಾಗಿಯೇ ತಿಳಿದುಕೊಟ್ಟದ್ದನ್ನು ಆದರಪೂರ್ವಕವಾಗಿ ಗ್ರಹಿಸುತ್ತಿದ್ದರು. ಕೆಲವು ಮಹನೀಯ (?) ರು ಎಷ್ಟೋ ಸಾರೆ ಇವರನ್ನು ಮೋಸಗೊಳಿಸುತ್ತಿದ್ದರು. ಔಷಧ ತೆಗೆದುಕೊಂಡು ಅವರ ಹಣವನ್ನು ಮುಟ್ಟಿಸುತ್ತಿದ್ದೇ ಇಲ್ಲ. ಸುರೇಶ ಬಾಬುಗಳು ಹೇಳುತ್ತಾರೆ. ನಾಗಮಹಾಶಯರು ಚಿಕಿತ್ಸೆ ಮಾಡಿ ಮನೆಗೆ ಬರುವ ಹೊತ್ತಿಗೆ ೪--೫ ಜನರು ಅವರ ಕಡೆಯಿಂದ ಹಣ ಕೈಗಡ ಇಸಿದುಕೊಳ್ಳಲಿಕ್ಕೆ ಸನ್ನದ್ಧರಾಗಿ ಮನೆಯಲ್ಲಿ ಬಂದು ಕುಳಿತಿರುತ್ತಿದ್ದರು. ಯಾರು ಏನು ಬೇಡಿದರೂ ನಾಗಮಹಾಶಯರು ಇಲ್ಲವೆಂದನ್ನುತ್ತಿದ್ದಿಲ್ಲ. ಹೀಗಾಗಿ ಅವರ ಹತ್ತರಿದ್ದ ಎಲ್ಲ ಹಣವೂ ಬರಿದಾಗುತ್ತಿತ್ತು. ಒಂದೊಂದು ದಿನ ಏಳೆಂಟು ರೂಪಾಯಿ ಗಳಿಸಿದ್ದರೂ ಅದೆಲ್ಲವನ್ನು ಯಾಚಕರಿಗೆ ಕೊಟ್ಟುಬಿಡುತ್ತಿದ್ದ ಮೂಲಕ ಮನೆಯಲ್ಲಿಯ ಆಹಾರ ಸಾಮುಗ್ರಿಗಳನ್ನು ಕೊಳ್ಳಲಿಕ್ಕೆ ಸಹ ಹಣವಿರುತ್ತಿದ್ದಿಲ್ಲ. ಅಂಥ ದಿನಗಳಲ್ಲಿ ನಾಗಮಹಾಶಯರು ೧—೨ ದುಡ್ಡಿನ ಚುರ

ಮರಿಯನ್ನು ಮುಕ್ಕಿ ಇಡೀ ದಿನ ಇರುತ್ತಿದ್ದರು. ನಾಗಮಹಾಶಯರ ಕಡೆಯಿಂದ ಹಣ ತೆಗೆದುಕೊಂಡ ಜನರಿಗೆ ಅದನ್ನು ಮುಟ್ಟಿಸುವ ಚಿಂತೆಯೇ ಇರುತ್ತಿದ್ದಿಲ್ಲ. ಕೆಲವು ಮಹನೀಯರಂತೂ "ನಿಮಗೇಕೆ ಚಿಂತೆ? ದೇವರು ನಿಮಗೆ ಬೇಕಾದಷ್ಟು ಕೊಡುವನೆಂದು" ಅಂದು ಹಾಗೆಯೇ ಹೋಗುತ್ತಿದ್ದರು. ನಾಗಮಹಾಶಯರು ಕೊಟ್ಟ ಸಾಲವನ್ನು ತಾವಾದರೂ ಕೇಳುತ್ತಿದ್ದಿಲ್ಲ. ಸ್ವತಃದ ಬಗ್ಗೆ ನಾಗಮಹಾಶಯರು ಒಂದು ಪೈ ಸಹ ಸಂಗ್ರಹಿಸಿಡುತ್ತಿದ್ದಿಲ್ಲ. ಇದ್ದುಬಿದ್ದುದನ್ನೆಲ್ಲ ದೀನದಯಾಲರ ಕಡೆಗೆ ಒಪ್ಪಿಸುತ್ತಿದ್ದರು. ತಮಗೇನಾದರೂ ಅಂಗಿ ಅಥವಾ ಧೋತರ ಬೇಕಾಗಿದ್ದರೆ ತಂದೆಯನ್ನು ಕೇಳುತ್ತಿದ್ದರು. ಸಂಗ್ರಹದ ವಿಷಯವಾಗಿ ಅವರು ಹೀಗನ್ನುತ್ತಿದ್ದರು. "ನಮಗೇನಾದರೂ ಬೇಕಾದರೆ ಭಗವಂತನು ನಿಶ್ಚಯವಾಗಿ ಅದನ್ನು ಕೊಡುವನು. ನಾವೇನೂ ಚಿಂತಿಸಬೇಕಾಗಿಲ್ಲ. ಆತನ ಮೇಲೆ ತೀವ್ರವಾದ ನಿಷ್ಠೆ ಮಾತ್ರ ಇರಬೇಕು. ನಾವು ಅಹಂಬುದ್ಧಿಯಿಂದ ಗ್ರಸ್ತರಾಗಿರುವದರಿಂದ ದುಃಖಪಡುತ್ತಿರುವೆವು. ಇದು ನಾನು ಮನಗಂಡ ಮಾತು"

ನಾಗಮಹಾಶಯರು ಅಧರ್ಮವನ್ನಾಗಲಿ ಕಪಟಾಚಾರವನ್ನಾಗಲಿ ಎಂದೂ ಸೈರಿಸುತ್ತಿದ್ದಿಲ್ಲ. ಒಂದು ದಿನ ಒಬ್ಬ ವೇಷಧಾರೀ ವೈಷ್ಣವನು ನವಯೌವನ ಸಂಪನ್ನೆಯಾದ ವೈಷ್ಣವಿಯನ್ನೊಡಗೂಡಿ ಭಿಕ್ಷೆಗಾಗಿ ಅವರ ಮನೆಗೆ ಬಂದನು. ನಾಗಮಹಾಶಯರು ಆಗ ಧ್ಯಾನಮಗ್ನನಾಗಿದ್ದರು. ಬಾಗಿಲಲ್ಲಿ "ರಾಧೇ ರಾಧೇ" ಎಂದು ಕೂಗುವದನ್ನು ಕೇಳಿ ಹೊರಗೆ ಬಂದರು. ವೈಷ್ಣವ ವೈಷ್ಣವಿಯರನ್ನು ಕಂಡು ಸಿಟ್ಟಿನಿಂದ ಉರಿಯಹತ್ತಿದರು. ಅವನಿಗೆಂದರು "ಹೀಗೆ ಸುಮ್ಮನೇ ರಾಧೆ ರಾಧೆ ಎಂದು ಕೂಗಿದರೆ ನೀನೇನು ಭಿಕ್ಷೆಯನ್ನು ಪಡೆಯಲಾರೆ. ಮನಃಪೂರ್ವಕವಾಗಿ ಹಾಗನ್ನುತ್ತಿದ್ದರೆ ಪಡೆಯುವೆ" ವೈಷ್ಣವ ದಂಪತಿಗಳು ಸುಮ್ಮನೆ ಹೊರಟು ಹೋದರು. ನಾಗಮಹಾಶಯರು ಭಾವಿಸಹತ್ತಿದರು "ಹಾಯ್ ಹಾಯ್ ಈ ಘೋರ ಕಲಿಯುಗವು ಜಗವನ್ನೇ ನುಂಗುತ್ತಿರುವದು. ಇಂದು ನಾನು ನನ್ನ ಕಣ್ಣೆದುರಿಗೆ ಕಲಿಕಾಲವನ್ನು ನೋಡಿದೆನು."

ವೈಷ್ಣವ ವೈಷ್ಣವಿಯಂತೆ ಒಂದು ದಿನ ಒಬ್ಬ ಭೈರವನು ಭೈರವಿಯೊಡನೆ ಅವರ ಮನೆಗೆ ಭಿಕ್ಷಾರ್ಥಿಯಾಗಿ ಬಂದನು. ತ್ರಿಶೂಲಧಾರೀ ಭೈರವನು ನಾಗಮಹಾಶಯರನ್ನು ನೋಡಿ ಗಾಂಜಿಗಾಗಿ ರೊಕ್ಕ ಕೇಳಿದನು. ನಾಗಮಹಾಶಯರು ಏನೂ ಉತ್ತರ ಕೊಡದೆ "ಎಲೋ ಭೈರವ ನೀನೇನಾದರೂ ಮಾಡಬಹುದು. ಆದರೆ ಕುಲವತಿಯಾದ ಸ್ತ್ರೀಯಳಿಗೆ ಭೈರವಿಯ ವೇಷ ತೊಡಿಸಿ ರಾಜಪಥದಲ್ಲಿ ಓಡಾಡಿಸುವದು ಯಾವ ಶಾಸ್ತ್ರದ ಪ್ರಕಾರ ಹೇಳು" ಎಂದರು. ಉಗ್ರ ಭೈರವನು ಮತ್ತಿಷ್ಟು ಉಗ್ರನಾದನು. "ನೀನು ಕೊಡದಿದ್ದರೆ ಬಿಡು; ಹೀಗೆ ನನ್ನನ್ನು ಬೈಯುವ ಕಾರಣವೇನು?" ಎಂದನು. ಭೈರವ ಭೈರವಿ ಇಬ್ಬರೂ ಹೋದರು. ನಾಗಮಹಾಶಯರು ಯೋಚಿಸಿದರು "ಯೋಗ್ಯ ಗುರುವು ದೊರೆಯದ ಮೂಲಕ ಜನರದಿಂತು ದುರ್ದೆಶೆಯಾಗುವದು. ತಾವೂ ಮುಳಗುವರು. ಎರಡನೇಯವರನ್ನೂ ಮುಳಗಿಸುವರು. ತಿಳಿಯದೇ ಮಾಡಿದ ಅಪರಾಧಕ್ಕೆ ಕ್ಷಮೆಯಿದೆ. ಆದರೆ ಧರ್ಮದ ಸೋಗು ಹಾಕಿ ವ್ಯಭಿಚಾರವನ್ನಾಗಲಿ ಕಪಟಾಚಾರವನ್ನಾಗಲಿ ಮಾಡಿದರೆ ಎಷ್ಟು ಕಲ್ಪಗಳು ಕಳೆದರೂ ಅಂಥವರ ಉದ್ಧಾರವಾಗುವದು ಕಠಿಣವೆಂ" ದು ನಾಗಮಹಾಶಯರು ಅನ್ನುತ್ತಿದ್ದರು.

# ೪ನೆಯ ಪ್ರಕರಣ

## ಮಂತ್ರೋಪದೇಶಗ್ರಹಣವೂ, ದಕ್ಷಿಣೇಶ್ವರ ಯಾತ್ರೆಯೂ.

ಸಾಂಪತ್ತಿಕ ಸ್ಥಿತಿಯು ಸುಧಾರಿಸಿದ್ದರೂ ದೀನದಯಾಲರ ಮನೆಯಲ್ಲಿ ಅಡಿಗೆ ಮಾಡುವವನಿದ್ದಿಲ್ಲ. ತಂದೆಗೆ ಅಡಿಗೆ ಮಾಡಕೊಟ್ಟದೆ ತಾನೇ ಮಾಡಬೇಕೆಂದು ಮಗನ ಇಚ್ಛೆ. ಸಂಧಿಯೊದಗಿದ ಕೂಡಲೆ ನಾಗಮಹಾಶಯರು ಅಡಿಗೆ ಮಾಡಲು ಕೂಡುತ್ತಿದ್ದರು. ದೀನದಯಾಲರಿಗೆ ಇದರಿಂದ ಬಹಳ ಸಿಟ್ಟು ಬರುತ್ತಿತ್ತು. ಮಗನಿಗೆ ಈ ಸಂಧಿ ದೊರೆಯದಂತೆ ಒದಗಬಾರದೆಂದು ಅವರು ಸದಾ ಜಾಗರೂಕರಾಗಿರುತ್ತಿದ್ದರು. ಮಗನೂ ಹಾಗೆಯೇ. ಹೀಗಾಗಿ ಎಷ್ಟೋ ಸಾರೆ ಇವರಿಬ್ಬರಲ್ಲಿ ಜಗಳವಾಗುತ್ತಿತ್ತು. ಅಂಥ ಸಮಯದಲ್ಲಿ ಮನೆಗೆ ಬಂದಿರುವ ಯಾರಾದರೂ ಗೃಹಸ್ಥರು ಇವರ ನ್ಯಾಯವನ್ನು ಬಗೆಹರಿಸಬೇಕಾಗುತ್ತಿತ್ತು. ದಿನಾಲು ಹೀಗಾಗುತ್ತಿತ್ತು. ಮುಂಜಾನೆ "ತಾನು ಅಡಿಗೆ ಮಾಡಬೇಕು; ತಾನು ಅಡಿಗೆ ಮಾಡಬೇಕು" ಎಂದು ನಿಶ್ಚಯ ಮಾಡಿರುತ್ತಿದ್ದರು. ಆ ದಿನ ಅಡಿಗೆ ಮಾಡಿದವನಿಗೆ ಮಹಾ ಆನಂದ! ಆದರೆ ಮಾಡಲು ದೊರೆಯದವನ ಸಿಟ್ಟಿಗೆ ಅಳತೆಯೇ ಇಲ್ಲ! ಈ ಜಗಳವನ್ನು ನಿಲ್ಲಿಸಬೇಕೆಂದು ನಾಗಮಹಾಶಯರು ತಮ್ಮ ಹೆಂಡತಿಯನ್ನು ಕಲಕತ್ತೆಗೆ ಕರೆದುಕೊಂಡು ಬರಬೇಕೆಂದು ನಿರ್ಧಾರ ಮಾಡಿದರು. ಇದ್ದ ಮನೆಯು ಚಿಕ್ಕದಾಗುವದೆಂದು ಸುರೇಶ ಬಾಬುಗಳ ಮನೆಯ ಹತ್ತರಿರುವ ಬೇರೊಂದು ಮನೆಯನ್ನು ಭಾಡಿಗೆಯಿಂದ ಹಿಡಿದರು.

ನಾಗಮಹಾಶಯರ ಹೆಂಡತಿಯು ೧೮೮೦ನೇ ಇಸವಿಯಲ್ಲಿ ತನ್ನ ಪತಿಯ ಕೂಡ ವಾಸಿಸಲಿಕ್ಕೆಂದು ಕಲಕತ್ತೆಗೆ ಬಂದಳು. ಆಕೆಯ ಅಭಿಲಾಷೆಯ ಪ್ರಕಾರ ಪತಿಯ ಸೇವೆಮಾಡುವ ಸುಪ್ರಸಂಗವು ಬಂದದ್ದು ಇದೇ ಮೊದಲು. ಹಿಂದಕ್ಕೆ ಲಗ್ನವಾದ ಕೂಡಲೇ ಒಮ್ಮೆ ಅವನನ್ನು ಕಾಣುವ

ಪ್ರಸಂಗವು ಆಕೆಗೆ ಬಂದಿತ್ತು; ಆದರೆ ಆಕೆಯು ಆಗ ತೀರ ಸಣ್ಣವ ಳಿದ್ದಳು. ಈಗ ಈ ತರುಣ ಪತ್ನಿಯು ತನ್ನ ಪತಿಯನ್ನೂ ಮಾವನನ್ನೂ ಸಂತೋಷಗೊಳಿಸಿ ಅವರಿಗೆ ಸುಖವಾಗುವಂತೆ ಸರ್ವರೀತಿಯಿಂದಲೂ ಯತ್ನಿಸುತ್ತಿದ್ದಳು. ದೀನದಯಾಳನನ್ನು ಸಂತೋಷಬಡಿಸುವದು ಆಕೆಗೆ ಶಕ್ಯವಾಗಿತ್ತು; ಆದರೆ ತನ್ನ ಪತಿಯ ಮನಸ್ಸನ್ನು ಸೆಳೆದುಕೊಳ್ಳುವದು ಮಾತ್ರ ಆಕೆಗೆ ಸಾಧ್ಯವಾಗಲಿಲ್ಲ. ಆಕೆಯ ಕಡೆ ಮನಸ್ಸು ಹಾಕಲಿಕ್ಕೆ ಅವನಿಗೆ ವೇಳೆಯೇ ದೊರಕುತ್ತಿದ್ದಿಲ್ಲ. ರೋಗಿಗಳ ಉಪಚಾರದಲ್ಲಿಯೇ ಅವನ ವೇಳೆಯ ಬಹು ಭಾಗವು ಕಳೆಯುತ್ತಿತ್ತು. ಉಳಿದ ಸ್ವಲ್ಪ ವೇಳೆ ಯನ್ನು ಧ್ಯಾನದಲ್ಲಿಯೂ ಅಧ್ಯಯನದಲ್ಲಿಯೂ ಕಳೆಯುತ್ತಿದ್ದನು.

ಭಾಗವತದಲ್ಲಿಯ ಭವಾಟವಿಯ ವರ್ಣನೆಯೂ ಜಡಭರತನ ಆಖ್ಯಾ ನವೂ ನಾಗಮಹಾಶಯನ ಮನಸಿನ ಮೇಲೆ ವಿಲಕ್ಷಣ ಪರಿಣಾಮವನ್ನುಂ ಟುಮಾಡಿದವು. ಜಡಭರತನ ಕಥೆಯನ್ನು ಕೇಳಿದ ಮೇಲೆ ವಿಷಯಬಂಧ ನದೊಳಗಿಂದ ಪಾರಾಗುವದು ಸಾಧಾರಣ ಜನರಿಗೆ ಎಷ್ಟು ಕಷ್ಟವಿದೆಯೆಂ ಬುದು ಅವನಿಗೆ ತಿಳಿಯ ಬಂತು. ಜಡಭರತನಂಥ ಮುಕ್ತಪುರುಷನು ಒಂದು ಚಿಗರೆಯಲ್ಲಿ ಆಸಕ್ತನಾಗಿ ಪುನರ್ಜನ್ಮವನ್ನು ತಾಳಬೇಕಾಯಿತು. ಮಾಯೆಯ ಶಕ್ತಿಯು ಅವರ್ಣನೀಯವೂ ಕಲ್ಪನಾತೀತವೂ ಇರುತ್ತದೆಂದು ತಿಳಿದು ಅವನು ಅದರೊಳಗಿಂದ ಪಾರಾಗುವ ದಾರಿಯನ್ನು ಕಾಣದೆ ಜಗ ನ್ಮಾತೆಯನ್ನು ಮೊರೆಹೊಕ್ಕು ಪ್ರಾರ್ಥಿಸಿದನು. ಈ ಸಂಸಾರ ಬಂಧನದೊ ಳಗಿಂದ, ಈ ಮಹಾಮಾಯೆಯ ಹಿಡಿತದೊಳಗಿಂದ ಹೇಗೆ ಪಾರಾಗಬೇ ಕೆಂಬ ಒಂದೇ ಒಂದು ವಿಚಾರವು ಅವನನ್ನು ಪೀಡಿಸುತ್ತಿತ್ತು. ಮದುವೆ ಯಾಯಿತು. ದ್ರವ್ಯಸಂಪಾದನೆಯು ನಡೆದಿದೆ. ದಿನದಿನಕ್ಕೂ ಬಂಧನ ಗಳು ಬಿಗಿಯುತ್ತಾ ನಡೆದಿವೆ. ಇದರೊಳಗಿಂದ ಹೇಗೆ ಪಾರಾಗಬೇಕೆಂಬ ಒಂದೇ ವಿಚಾರವು ಹಗಲು ರಾತ್ರಿ ಅವರನ್ನು ಚಿಂತೆಗೀಡುಮಾಡುತ್ತಿತ್ತು. ವೈದ್ಯವೃತ್ತಿಯನ್ನು ಆರಂಭಮಾಡಿದಾಗ, ಅದರಿಂದ ಬಡವರ ದುಃಖವನ್ನು ನಿವಾರಣೆಮಾಡುವೆವೆಂದು ಅವರು ತಿಳಿದುಕೊಂಡಿದ್ದರು. ಬೇನೆಜೇಸರಿಕೆ ಯಿಲ್ಲದೆ ಅವಿಶ್ರಾಂತವಾಗಿ ಸಮಾಧಾನದಿಂದ ರೋಗಿಗಳ ಶುಶ್ರೂಷೆಯನ್ನು

ಮಾಡಿದರು. ಏನೂ ಹಿಂದು ಮುಂದೆ ನೋಡದೆ ತಾವು ಗಳಿಸಿದ ದ್ರವ್ಯ ವನ್ನೆಲ್ಲ ದಾನಮಾಡಿದರು. ಎಷ್ಟೋ ಸಾರೆ ತಮ್ಮ ಸ್ವಂತ ಊಟದ ಆಹಾರವನ್ನೂ ಕೂಡ ಹಸಿದುಬಂದವರಿಗೆ ಎತ್ತಿಕೊಟ್ಟು ಬಿಟ್ಟಿದ್ದರು. ಆದರೆ, ಅಯ್ಯೋ, ಪಾಪ; ಜಗತ್ತಿನೊಳಗಿನ ದುಃಖಗಳನ್ನೂ ಕಷ್ಟಗಳನ್ನೂ ನಿವಾರಣೆಮಾಡುವದು ಅವರಿಂದಾಯಿತೇ? "ನಾನು ಈ ದುಃಖಮಯ ಜಗತ್ತಿನಲ್ಲಿ ಯಾಕೆ ಬಂದೆನು? ಈ ವಿವಾಹಬಂಧನವು ಪುನಃ ನನ್ನ ಪಾಲಿಗೆ ಬಂತೇ? ಧನ ಮತ್ತು ಸ್ತ್ರೀಗಾಗಿಯೇ ನಾನು ಶ್ರಮಪಡಬೇಕೇ? ಇಷ್ಟರಿಂದಲೇ ನಾನು ಸಂತೋಷಹೊಂದಿ ಆಯುಷ್ಯವನ್ನು ಕಳೆಯಬೇಕೇ? ಅದಾಗದು ಇದೆಲ್ಲ ವ್ಯರ್ಥ. ನಾನು ದೇವರನ್ನು ಕಾಣಲೇಬೇಕು; ಇಲ್ಲದಿದ್ದರೆ ಹುಟ್ಟಿ ಫಲವೇನು? ಆದರೆ ದೇವರನ್ನು ಕಾಣುವದೆಂತು? ಅಯ್ಯೋ, ನನಗೆ ದಾರಿಯನ್ನು ತೋರಿಸುವವರು ಯಾರು?" ಎಂದು ವಿಚಾರಮಾಡುತ್ತಿದ್ದರು.

ಈ ಕಾಲಕ್ಕೆ, ಅವರ ಜೀವದ ಗೆಳೆಯರಾದ ಸುರೇಶ ಬಾಬುಗಳೂ ಮತ್ತು ಬ್ರಹ್ಮಸಮಾಜದ ಕೆಲವು ಗೃಹಸ್ಥರೂ ಗಂಗಾನದಿಯ ದಂಡೆಯ ಮೇಲೆ ಕಲೆತು ಧ್ಯಾನ, ಪ್ರಾರ್ಥನೆ, ಭಜನೆ, ಕೀರ್ತನೆಗಳನ್ನು ಮಾಡುತ್ತ ಕೆಲವು ಹೊತ್ತನ್ನು ಕಳೆಯುತ್ತಿದ್ದರು. ನಾಗಮಹಾಶಯರೂ ಅವರನ್ನು ಕೂಡಿಕೊಂಡರು. ದೇವರ ನಾಮವನ್ನು ಉಚ್ಚರಿಸುವಾಗ ನಾಗಮಹಾಶ ಯರು ಒಮ್ಮೊಮ್ಮೆ ಕುಣಿಯುತ್ತಿದ್ದರು; ಒಮ್ಮೊಮ್ಮೆ ಆನಂದಾತಿರೇಕ ದಿಂದ ಭಾವಸಮಾಧಿಯನ್ನು ಹೊಂದುತ್ತಿದ್ದರು; ಕುಣಿಯುವಾಗ ಕೆಲವು ಸಾರೆ ಎಚ್ಚರದಪ್ಪಿ ಕೆಳಗೆ ಬೀಳುತ್ತಿದ್ದರು. ಒಂದು ದಿವಸ ಅವರು ಗಂಗಾ ನದಿಯಲ್ಲಿ ಬಿದ್ದರು. ಸುರೇಶ ಬಾಬುಗಳು ಮತ್ತೊಬ್ಬನ ಸಹಾಯದಿಂದ ಅವರನ್ನು ಉಳಿಸಿಕೊಂಡರು. ಸ್ವಭಾವದಿಂದ ನಾಗಮಹಾಶಯರು ಸ್ವಲ್ಪ ಭಾವನಾಮಯರಾಗಿದ್ದರೂ ತಮ್ಮ ಭಾವಗಳನ್ನು ನಿಗ್ರಹಿಸುವದರಲ್ಲಿಯೂ ಅವರು ದಕ್ಷರಿದ್ದರು. 'ನಿಮ್ಮ ಭಾವನೆಗಳನ್ನು ನಿಗ್ರಹಿಸಿದಂತೆ ಅವು ಹೆಚ್ಚು ಬಲಹೊಂದುವವು. ಅವುಗಳನ್ನು ಹೆಚ್ಚು ಹೆಚ್ಚು ಹರಿಯಬಿಟ್ಟರೆ ಅವು ಹೆಚ್ಚು ಬಲಗುಂದುವವು' ಎಂದು ಅವರು ಹೇಳುತ್ತಿದ್ದರು. ಆ ಭಾವಾನಂದಸ್ಥಿತಿಯಲ್ಲಿದ್ದಾಗ ಅವರ ಮೈಮೇಲೆ ಶ್ರೇಷ್ಠ ದಿವ್ಯಭಕ್ತನ

ಲಕ್ಷಣಗಳೆಲ್ಲವೂ ಸ್ಪಷ್ಟವಾಗಿ ಕಾಣಬರುತ್ತಿದ್ದವೆಂದು ಸುರೇಶ ಬಾಬುಗಳು
ಹೇಳುತ್ತಿದ್ದರು.

ಆದರೆ ಎಷ್ಟು ಶ್ರದ್ಧೆಯಿದ್ದರೂ ಅನುರಾಗವಿದ್ದರೂ ವಿಧಿಪೂರ್ವಕ
ವಾಗಿ ದೀಕ್ಷೆಹೊಂದಿ ಸಾಧನೆ ಭಜನೆ ಮಾಡದಿದ್ದರೆ ಇಷ್ಟದರ್ಶನವಾಗ
ದೆಂದು ಒಬ್ಬ ಸಾಧುವಿನ ಬಾಯಿಂದ ಕೇಳಿ ನಾಗಮಹಾಶಯರು ದೀಕ್ಷಾ
ಗ್ರಹಣಕ್ಕಾಗಿ ಬಹು ಉತ್ಕಂಠಿತರಾದರು. ಅವರ ಮನಸ್ಸಿಗೆ ಸಮಾಧಾ
ನವೇ ಇದ್ದಿಲ್ಲ. ಸದಾ ಗುರುವಿನ ವಿಚಾರದಲ್ಲಿಯೇ ತೊಡಗಿರುತ್ತಿದ್ದರು.
ಗಂಗಾತೀರಕ್ಕೆ ಆಗಾಗ್ಗೆ ಅನೇಕ ಸಾಧುಸಜ್ಜನರು ಬರುತ್ತಿದ್ದರು. ಅವರಲ್ಲಿ
ಯಾರಾದರೂ ಕರುಣೆದೋರಿ ತಮಗೆ ದೀಕ್ಷೆ ಕೊಡುವರೇನೋ ಎಂದು
ಭಾವಿಸಿ ಕೆಲವು ದಿನ ಎಷ್ಟೋ ರಾತ್ರಿಯಾಗುವ ವರೆಗೂ ಕುಳಿತುಕೊಂಡಿ
ರುತ್ತಿದ್ದರು. ಹೀಗೆ ಅಸಂಖ್ಯ ದಿನಗಳು ಕಳೆದ ಮೇಲೆ ನಾಗಮಹಾಶ
ಯರು ಒಮ್ಮೆ ಕುಮಾರಟುಲಿಯಲ್ಲಿ ಸ್ನಾನಮಾಡುತ್ತಿರುವಾಗ್ಗೆ ಒಬ್ಬನೇ
ಪ್ರವಾಸಿಯನ್ನೊಳಗೊಂಡ ದೋಣಿಯೊಂದು ಘಟ್ಟದ ಕಡೆಗೆ ಬರುತ್ತಿರುವ
ದನ್ನು ಕಂಡರು. ಘಟ್ಟಕ್ಕೆ ಬಂದ ಕೂಡಲೇ ಕುತೂಹಲದಿಂದ ನೋಡ
ಲಾಗಿ ಆ ಪ್ರವಾಸಿಯು ತಮ್ಮ ಕುಲಗುರುಗಳಾದ ವಂಗಚಂದ್ರ ಭಟ್ಟಾ
ಚಾರ್ಯರೆಂದು ಕಂಡುಬಂದಿತು. ನಾಗಮಹಾಶಯರು ಕ್ಷಿಪ್ರದಲ್ಲಿಯೇ
ಸ್ನಾನಮಾಡಿ, ಗುರುಗಳ ಪಾದಧೂಲಿಯನ್ನು ಧರಿಸಿ, ಕಲಕತ್ತೆಗೆ ಅಕಸ್ಮಿಕ
ವಾಗಿ ಬಂದ ಕಾರಣವೇನೆಂದು ಕೇಳಿದರು. ವಂಗಚಂದ್ರರು “ ಮಗೂ,
ಮಹಾಮಾಯೆಯ ಆದೇಶಾನುಸಾರವಾಗಿ ನಿನ್ನನ್ನು ಮಂತ್ರದೀಕ್ಷಿತನಾಗಿ
ಮಾಡಲಿಕ್ಕೆಂದೇ ಇಲ್ಲಿಗೆ ಬಂದಿರುವೆನೆಂ” ದು ನುಡಿದರು. ಜಗಜ್ಜನ
ನಿಯು ತಮ್ಮ ಪ್ರಾರ್ಥನೆಗೆ ಕಿವಿಗೊಟ್ಟಳೆಂದು ನಾಗಮಹಾಶಯರು ತಿಳಿ
ದರು. ಹರ್ಷನಿರ್ಭರರಾಗಿ ಕಾಶೀಮಿತ್ರನ ಓಣಿಯಲ್ಲಿರುವ ತಮ್ಮ ಮನೆಗೆ
ವಂಗಚಂದ್ರರನ್ನು ಕರೆದುಕೊಂಡು ಹೋದರು. ಕುಲಗುರುವನ್ನು ಕಂಡು
ದೀನದಯಾಲರಿಗೂ ಬಹು ಸಂತೋಷವಾಯಿತು. ಧರ್ಮದ ಹುಚ್ಚು
ಹಿಡಿದ ಮಗನಿಗೆ ಅವರಿಂದ ಮಂತ್ರದೀಕ್ಷೆ ಕೊಡಿಸಬೇಕೆಂದು ಅವರ ಇಚ್ಛೆ
ಇತ್ತು. ಮರುದಿನವೇ ಶುಭಮುಹೂರ್ತವಿತ್ತು. ನಾಗಮಹಾಶಯರು

ಸಪತ್ನೀಕರಾಗಿ ಶಕ್ತಿಮಂತ್ರದೀಕ್ಷಿತರಾದರು. ದೀಕ್ಷೆ ಕೊಟ್ಟು ನಾಲ್ಕು ದಿನಗಳಾದ ಮೇಲೆ ವಂಗಚಂದ್ರರು ಬಂದ ದೋಣಿಯಿಂದ ತಿರುಗಿ ವಿಕ್ರಮಪುರಕ್ಕೆ ಹೋದರು. ಕೆಲವು ದಿನ ವಿಶ್ರಮಿಸಲು ಪಿತಾಪುತ್ರರು ಅವರನ್ನೆಷ್ಟು ಬಲವಂತಪಡಿಸಿದರೂ ಅವರು ನಿಲ್ಲಲಿಲ್ಲ. ನಾಗಮಹಾಶಯರಿಗೆ ದೀಕ್ಷೆ ಕೊಟ್ಟ ಮರುವರುಷ ವಂಗಚಂದ್ರರು ನಿಧನಹೊಂದಿದರು.

ದೀಕ್ಷೆ ಹೊಂದಿದ ಬಳಿಕ ನಾಗಮಹಾಶಯರು ಸಾಧನೆಯ ಅಗಾಧ ಸಮುದ್ರದಲ್ಲಿ ಧುಮುಕಿದರು. ಜಪಧ್ಯಾನದಲ್ಲಿ ಇರುಳು ಕಳೆದು ಬೆಳಗಾಗುತ್ತಿತ್ತು. ಅಮಾವಾಸ್ಯೆಯ ದಿನ ಉಪವಾಸ ಮಾಡಿ ಗಂಗಾತೀರದಲ್ಲಿ ಕುಳಿತುಕೊಂಡು ಧ್ಯಾನಮಾಡುತ್ತಿದ್ದರು. ಜಪ ಮಾಡ ಮಾಡುತ್ತ ಬಾಹ್ಯಜ್ಞಾನವು ಲುಪ್ತವಾಗುತ್ತಿತ್ತು. ಅತಿಶಯ ತನ್ಮಯರಾಗಿ ಒಮ್ಮೆ ಜಪ ಮಾಡುತ್ತಿದ್ದಾಗ್ಗೆ ನದಿಗೆ ಪೂರು ಬಂದು ಇವರನ್ನು ತೇಲಿಸಿಕೊಂಡು ಹೋಯಿತು. ಎಚ್ಚರಾದ ಮೇಲೆ ಈಸುತ್ತ ದಂಡೆಗೆ ಬಂದರು. ಚಂದ್ರನ ಹ್ರಾಸವೃದ್ಧಿಗನುಸಾರವಾಗಿ ತಮ್ಮ ಆಹಾರದಲ್ಲಿ ಹೆಚ್ಚುಕಡಿಮೆ ಮಾಡಿ ಕೆಲವು ದಿನ ಅವರು ಚಾಂದ್ರಾಯಣ ವ್ರತವನ್ನು ಆಚರಿಸುತ್ತಿದ್ದರು. ನಾಗಮಹಾಶಯರು ತಂತ್ರಮಾರ್ಗವಾಗಿಯೂ ಸಾಧನೆ ಮಾಡುತ್ತಿದ್ದರೆಂದು ಸುರೇಶರು ಹೇಳುತ್ತಾರೆ. ನಾಗಮಹಾಶಯರು ಎಂದೂ ಹೂ, ಗಂಧ ಮೊದಲಾದವುಗಳನ್ನು ಏರಿಸಿ ಬಾಹ್ಯಪೂಜೆಯನ್ನು ಮಾಡಲಿಲ್ಲ ದೀಕ್ಷೆಯನ್ನು ಗ್ರಹಿಸಿದ ಬಳಿಕ ಜಪ-ತಪ-ಧ್ಯಾನ ಮಾಡುತ್ತಿದ್ದರು. ಆದರೆ ಅವರ ಸ್ವಾಭಾವಿಕ ಪ್ರವೃತ್ತಿಯು ಭಕ್ತಿಮಾರ್ಗದಲ್ಲಿತ್ತು. ಆ ಕಾಲದಲ್ಲಿ ನಾಗಮಹಾಶಯರು ದೇವಿಯ ವಿಷಯವಾಗಿ ಅನೇಕ ಹಾಡುಗಳನ್ನು ರಚಿಸಿದರು. ಧ್ಯಾನವು ಮುಗಿದ ಮೇಲೆ ಅವುಗಳಲ್ಲಿ ಯಾವುದಾದರೊಂದನ್ನು ಹಾಡುತ್ತಿದ್ದರು.

ಕ್ರಮಶಃ ಅವರ ವ್ಯವಸಾಯಕ್ಕೆ ಬಾಧೆ ಬರಹತ್ತಿತ್ತು. ಕರೆಯ ಬಂದ ಜನರು ನಾಗಮಹಾಶಯರನ್ನು ಕಾಣದೆ ಅನಿವಾರ್ಯವಾಗಿ ಬೇರೆ ಡಾಕ್ಟರರ ಕಡೆಗೆ ಹೋಗಹತ್ತಿದರು. ಆದ್ದರಿಂದ ನಾಗಮಹಾಶಯರ ಗಳಿಕೆಯು ಕಡಿಮೆಯಾಗಹತ್ತಿತು.

ಮತ್ತೆ ಸರ್ವನಾಶವು ಒದಗಿತೆಂದು ದೀನದಯಾಲರು ಭಾವಿಸಿದರು. ಸುರೇಶಚಂದ್ರರೊಡನೆ ಮಗನ ಮೈತ್ರಿಯನ್ನು ಕಂಡು ಅವರು ಒಂದು ಬಗೆಯಿಂದ ನಿಶ್ಚಿಂತರಾಗಿದ್ದರು. ಸೋದರತ್ತೆಯ ಮೃತ್ಯುವಿನ ನಂತರ ನಾಗಮಹಾಶಯರಲ್ಲಿ ಉದಯಿಸಿದ ವೈರಾಗ್ಯವು ಸುರೇಶಚಂದ್ರರ ಉಪದೇಶದಿಂದಲೇ ದೂರಾಗಿತ್ತು. ಸುರೇಶಚಂದ್ರರಿಗೆ ಧರ್ಮದ ಬಗ್ಗೆ ಬಹು ಆಸ್ಥೆಯಿತ್ತು. ಇಂಥ ವಿಚಕ್ಷಣ ವ್ಯಕ್ತಿಯ ಸಾನ್ನಿಧ್ಯದಲ್ಲಿರುವುದರಿಂದ ನೊಂದುವದರಲ್ಲಿರುವ ಮಗನ ವೈರಾಗ್ಯದ ಅಗ್ನಿಯು ಪುನಃ ಪ್ರಜ್ವಲಿತವಾಗುವದೆಂದು ಅವರು ತಿಳಿದಿರಲಿಲ್ಲ. ದೀನದಯಾಲರು ಜನರೆದುರಿಗೆ " ಸುರೇಶರೊಡನೆ ಇರುವ ಗೆಳೆತನವು ಮಗನಿಗೆ ಬಹು ಕಲ್ಯಾಣಕರವಾಗಿದೆ. " ಎಂದು ಹೇಳುತ್ತಿದ್ದರು. ಈಗ ಸುರೇಶಚಂದ್ರರಿಂದಲೂ ಏನೂ ಆಗದೆಂದು ಅವರಿಗೆ ಗೊತ್ತಾಯಿತು. ನಿರುಪಾಯರಾಗಿ ಅವರು ತಮ್ಮ ಸೊಸೆಗೆ, ಮಗನ ಮನವು ಸಂಸಾರಧರ್ಮದಲ್ಲಿ ತೊಡಗುವಂತೆ ಮಾಡಲು ಅನೇಕ ವಿಧವಾದ ಉಪದೇಶ ಮಾಡಹತ್ತಿದರು. ಆದರೆ ಅವಳಾದರೂ ಏನು ಉಪಾಯವನ್ನು ಯೋಚಿಸಬಲ್ಲಳು? ಪತಿಯ ಪ್ರವೃತ್ತಿಯನ್ನು ಅವಳು ಕಂಡು ಹಿಡಿದಿದ್ದಳು. ಸಾಮಾನ್ಯ ಪ್ರಪಂಚ—ತಂದೆ ಮಕ್ಕಳ ಗಳಿಕೆಯಿಂದ ಸಹಜವೇ ಸಾಗುತ್ತಿತ್ತು. ಅನ್ನವಸ್ತ್ರಕ್ಕೆ ಕೊರತೆಯಿದ್ದಿಲ್ಲ. ಆದರೆ ಅಷ್ಟರಿಂದಲೇ ಹೃದಯದ ತಲ್ಲಣಿಕೆಯು ಪೂರ್ಣವಾಗದು. ಪತಿಯ ಅನುರಾಗವೇ ನಾರೀ ಜೀವನದ ಮುಖ್ಯ ಅವಲಂಬನೆಯು.

ವೃದ್ಧ ಪಿತನಿಗೆ ವಿಶ್ರಮಿಸಲು ಹೇಳಿ ನಾಗಮಹಾಶಯರು ಸಂತೆ ಪೇಟೆ ಮೊದಲಾದ ಸಂಸಾರದ ಎಲ್ಲ ಕೆಲಸಗಳನ್ನೂ ತಾವೇ ಮಾಡುತ್ತಿದ್ದರು. ಆದರೆ ಎಲ್ಲವೂ ಪ್ರಾಣಹೀನ ಗೊಂಬೆಯು ಯಂತ್ರಚಾಲಿತವಾಗಿ ಕೈಕಾಲು ಆಡಿಸುವಂತೆ ಯಾವುದರಲ್ಲಿಯೂ ಅವರ ಮನವಿರಲಿಲ್ಲ. ಉಡಿಗೆತೊಡಿಗೆಯ ಪರಿವೆಯೇ ಇದ್ದಿಲ್ಲ. ವೈದ್ಯಕಿಯನ್ನಾದರೂ ತಂದೆಯ ಆಗ್ರಹದ ಮೂಲಕ ಮಾಡುತ್ತಿದ್ದರು ನಾಗಮಹಾಶಯರ ಪತ್ನಿಯು ತನ್ನ ಮಾವನ ಉಪದೇಶವನ್ನು ಆಲಿಸುತ್ತಿದ್ದಳೇನೋ ನಿಜ. ಆದರೆ

ಮನಸಿನಲ್ಲಿಯೇ "ಗೃಹವಾಸೀ ಸನ್ಯಾಸಿಯ ಮನವನ್ನು ಮೋಹಿಸುವ ರಮಣಿಯು ಇನ್ನೂ ಜನ್ಮಗ್ರಹಣ ಮಾಡಿಲ್ಲ" ವೆಂದು ಯೋಚಿಸುತ್ತಿದ್ದಳು. ಮಾಯಿಕ ಪ್ರೇಮವಿಲ್ಲದಿದ್ದರೂ ನಾಗಮಹಾಶಯರು ಸದಾ ತಮ್ಮ ಸಹಧರ್ಮಿಣಿಯ ಅಭೀಷ್ಟ ಚಿಂತನೆಯನ್ನು ಮಾಡುತ್ತಿದ್ದರು; 'ಕಾಯಿಕ ಅಥವಾ ಮಾಯಿಕ ಸಂಬಂಧವು ಎಂದೂ ಚಿರಸ್ಥಾಯಿಯಾಗಲಾರದು. ಭಗವಂತನನ್ನು ಪ್ರೇಮಾತಿಶಯದಿಂದ ಭಜಿಸುವವರು ತಮ್ಮ ನರಜನ್ಮವನ್ನು ಸಾರ್ಥಕ ಮಾಡಿಕೊಳ್ಳುವರು. ಈ ಮಾಯಾ ಸಂಬಂಧದಲ್ಲಿ ಒಮ್ಮೆ ಮನುಷ್ಯನು ಲಿಪ್ತನಾದನೆಂದರೆ ಜನ್ಮಜನ್ಮಾಂತರಗಳಲ್ಲಿಯೂ ಅವನ ಮೋಹವು ತೊಲಗುವದಿಲ್ಲ. ಸಂಸಾರ ನರಕದಲ್ಲಿ ಪುನಃ ಪುನಃ ತೊಳಲಾಡಬೇಕಾಗುವದು. ಈ ಎಲಬು ಮಾಂಸಗಳ ಹಂದರದಲ್ಲಿ ಆಸಕ್ತಳಾಗಬೇಡ. ನನ್ನನ್ನು ಮರೆತು ಮಹಾಮಾಯೆಗೆ ಶರಣು ಹೋಗು. ಇಹಪರಗಳಲ್ಲಿಯೂ ಸುಖವಾಗುವದು" ಎಂದು ನಾಗಮಹಾಶಯರು ಅವಳಿಗೆ ಉಪದೇಶ ಮಾಡುತ್ತಿದ್ದರು. ಕಡೆಗೆ ತಾಪಸನ ಗೃಹಿಣಿಯು ತಪಸ್ವಿನಿಯಾದಳು.

ನಾಗಮಹಾಶಯರ ಪತ್ನಿಯು ಕಲಕತ್ತೆಯಲ್ಲಿರುವಾಗ ಸಹ ಸುರೇಶಚಂದ್ರರು ಅವರ ಮನೆಗೆ ಹೋಗಿಬರುವದನ್ನು ಒಂದು ದಿನವೂ ಬಿಟ್ಟಿದ್ದಿಲ್ಲ. ಒಂದೊಂದು ದಿನ ನಾಗಮಹಾಶಯರ ಮನೆಯಲ್ಲಿಯೇ ಊಟ ಮಾಡುತ್ತಿದ್ದರು. ಹೆಂಡತಿಯು ಮನೆಗೆ ಬಂದಿದ್ದರೂ ನಾಗಮಹಾಶಯರ ಧರ್ಮಭಾವದಲ್ಲಿ ಯಾವ ತರಹದಲ್ಲಿ ಪರಿವರ್ತನೆಯೂ ಆಗಲಿಲ್ಲ. ದೇವತೆಯು ಯಾವಾಗಲೂ ದೇವತೆಯೆ. ಎಂಥ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಅದರ ದೇವತ್ವವು ನಷ್ಟವಾಗುವದಿಲ್ಲ. ನಾಗಮಹಾಶಯರು ಹೀಗೆಯೇ ಇದ್ದರು. ಹೆಂಡತಿಯ ವಿಷಯವಾಗಿ ಏನೂ ಆಕರ್ಷಣೆಯಿದ್ದಿಲ್ಲ.

ನಾಗಮಹಾಶಯರು ಕ್ರಮಶಃ ಉಗ್ರತರ ಸಾಧನೆಯಲ್ಲಿ ನಿಮಗ್ನರಾಗಹತ್ತಿದರು. ಇತ್ತ ದೀನದಯಾಲರ ಶರೀರವು ದಿನದಿನಕ್ಕೆ ಕ್ಷೀಣವಾಗಹತ್ತಿತು. ವೃದ್ಧ ವಯಸ್ಸಿನಲ್ಲಿ ಅವರು ಪಾಲಬಾಬುಗಳ ಕಡೆಗೆ ನೌಕರಿಯನ್ನು ಮಾಡುತ್ತಿದ್ದರು. ಅವರು ತಮ್ಮ ಊರಿಗೆ ಹೋದಾಗ್ಗೆ ನಾಗಮಹಾಶಯರು ತಂದೆಯ ಕೆಲಸವನ್ನು ನಿರ್ವಹಿಸುತ್ತಿದ್ದರು. ಹೀಗೆಯೇ

ಎಷ್ಟೋ ದಿನ ಸಾಗಿತು. ಆದರೆ ದೀನದಯಾಲರ ತ್ರಾಣವು ಕುಂದಿತು. ತಂದೆಯಿನ್ನು ಊರಿಗೆ ಹೋಗಿ ಭಗವಚ್ಚಿಂತನೆಯಲ್ಲಿ ತೊಡಗಬೇಕೆಂದು ನಾಗಮಹಾಶಯರ ತೀವ್ರ ಇಚ್ಛೆಯಿತ್ತು. ಕಲಕತ್ತೆಯಲ್ಲಿಯ ತಮ್ಮ ಮನೆಯಲ್ಲಿಯೂ ಇರಬಹುದಾಗಿತ್ತು. ಸೇವಾಶುಶ್ರೂಷೆಗಾಗಿ ಸೊಸೆಯೂ ಇದ್ದಳು. ಆದರೆ ಕಲಕತ್ತೆಯಲ್ಲಿರುವದರಿಂದ ದೀನದಯಾಲರ ಇಷ್ಟಚಿಂತನೆಯಲ್ಲಿ ಅನೇಕ ವಿಘ್ನಗಳು ಬರಬಹುದೆಂದು ನಾಗಮಹಾಶಯರಿಗೆ ಭಯವಿತ್ತು. ದೀನದಯಾಲರ ಕಡೆಗೆ ಅನೇಕ ತರದ ಜನರು ಬಂದು ನಾನಾ ವಿಷಯಗಳ ಬಗ್ಗೆ ಹರಟೆ ಹೊಡೆಯುತ್ತಿದ್ದರು ದೀನದಯಾಲರು ಅದರಲ್ಲಿ ಭಾಗ ತೆಗೆದುಕೊಳ್ಳುತ್ತಿದ್ದರು. ಮುಂಜಾನೆ ಎಲ್ಲ ಕೆಲಸಗಳಿಗಿಂತ ಮೊದಲು ದೀನದಯಾಲರು ದುರ್ಗಾನಾಮವನ್ನು ಬರೆಯುತ್ತಿದ್ದರು. ಅದರೊಡನೆ ತಮ್ಮ ಕಡೆಗೆ ಬಂದ ಜನರ ಕೂಡ ಮಾತುಕಥೆಯೂ ನಡೆಯುತ್ತಿತ್ತು. ನಾಗಮಹಾಶಯರಿಗೆ ಇದು ಬಹು ವಿಚಿತ್ರವಾಗಿ ಕಾಣುತ್ತಿತ್ತು. ತಂದೆಗೆ ಅನ್ನುತ್ತಿದ್ದರು. “ಇನ್ನೂ ವಿಷಯ ಚಿಂತನೆಯನ್ನು ಬಿಡುವದಾಗುವದಿಲ್ಲವೇ? ದುರ್ಗಾನಾಮವನ್ನು ಬರೆಯುತ್ತಿರುವಾಗ್ಗೆ ಪ್ರಾಪಂಚಿಕ ವಿಷಯಗಳನ್ನು ಕುರಿತು ಮಾತನಾಡುವದು ವಿಹಿತವೇ?” ಆಗಾಗ್ಗೆ ಈ ರೀತಿಯಾಗಿ ತಂದೆಮಕ್ಕಳ ನಡುವೆ ಮಾತಾಗುತ್ತಿತ್ತು. ಕಡೆಗೆ ನಾಗಮಹಾಶಯರು ತಂದೆಯನ್ನು ತಮ್ಮ ಊರಿಗೆ ಕಳುಹಬೇಕೆಂದು ನಿಶ್ಚಯಿಸಿದರು. ದೀನದಯಾಲರ ಕೆಲಸವನ್ನು ತಾವು ವಹಿಸಿದರು. ಮಾವನ ಸೇವಾಶುಶ್ರೂಷೆಗಾಗಿ ಸೊಸೆಯೂ ಹೊರಟು ಹೋದಳು.

ತಂದೆ ಹಾಗೂ ಹೆಂಡತಿಯು ಊರಿಗೆ ಹೋದ ಮೇಲೆ ನಾಗಮಹಾಶಯರು ಕುಮಾರಟುಲಿಯ ಮನೆಯಲ್ಲಿ ವಾಸಿಸಹತ್ತಿದರು. ಸುರೇಶಚಂದ್ರರು ಯಥಾಪ್ರಕಾರ ಅವರ ಕಡೆಗೆ ಬರುತ್ತಿದ್ದರು. ಇಬ್ಬರೂ ಕೂಡಿ ಶಾಂತರೀತಿಯಿಂದ ಧರ್ಮಚರ್ಚೆಯನ್ನು ಮಾಡುತ್ತಿದ್ದರು. ಆದರೆ ಇಷ್ಟರಿಂದಲೇ ನಾಗಮಹಾಶಯರು ತೃಪ್ತರಾಗಲಿಲ್ಲ. “ಮಾತಿನಲ್ಲಿಯೇ ಆಯುಷ್ಯವು ಕಳೆಯುತ್ತಿದೆ. ಏನಾದರೂ ಪ್ರತ್ಯಕ್ಷ ಕಾಣದಿದ್ದರೆ ಜೀವನಧಾರಣೆಯು ನಿಷ್ಫಲ” ವೆಂದು ಅನ್ನಹತ್ತಿದರು.



ಭಗವಾನ್ ಶ್ರೀರಾಮಕೃಷ್ಣ ಪರಮಹಂಸರು.

nt Printing Works, Dharwar.

ಇದೇ ಸಮಯದಲ್ಲಿ ಸುರೇಶಚಂದ್ರರೊಮ್ಮೆ ಶ್ರೀ. ಕೇಶವಚಂದ್ರರ ಬ್ರಹ್ಮಸಮಾಜದ ಮಂದಿರಕ್ಕೆ ಹೋಗಿದ್ದರು. ಆಗ ದಕ್ಷಿಣೇಶ್ವರದಲ್ಲಿ ಕಾಮಕಾಂಚನ ತ್ಯಾಗಿಯಾದ, ಪರಮಾತ್ಮನ ಧ್ಯಾನದಲ್ಲಿ ಸದಾ ತನ್ಮಯನಾದ, ಮೇಲಿಂದಮೇಲೆ ಭಾವಸಮಾಧಿಯನ್ನು ಹೊಂದುವ ಮಹಾಸಾಧುವು ಇರುವನೆಂದು ಕೇಳಿದರು. ನಾಗಮಹಾಶಯರನ್ನು ಆ ಸಾಧುವಿನ ಕಡೆಗೆ ಕರೆದುಕೊಂಡು ಹೋಗಬೇಕೆಂದು ಸುರೇಶಬಾಬುಗಳ ಮನಸ್ಸಿನಲ್ಲಿ ಬಂದಿತು. ಆದರೆ ಏನೇನೋ ಕಾರಣಗಳ ಮೂಲಕ ನಾಗಮಹಾಶಯರ ಮುಂದೆ ಈ ವಿಷಯವನ್ನು ಹೇಳುವದಾಗಿದ್ದಿಲ್ಲ. ಹೀಗೆ ಎರಡು ತಿಂಗಳುಗಳು ಕಳೆದ ನಂತರ ಸುರೇಶಚಂದ್ರರು ನಾಗಮಹಾಶಯರಿಗೆಂದರು. “ದಕ್ಷಿಣೇಶ್ವರದಲ್ಲಿ ಒಬ್ಬ ಅತ್ಯುಚ್ಚ ಸಾಧುವು ಇದ್ದಾನಂತೆ. ಅವನನ್ನು ನೋಡಲು ಹೋಗೋಣವೇ?” ಇನ್ನು ತಡಮಾಡುವದು ನಾಗಮಹಾಶಯರಿಗೆ ಅಸಾಧ್ಯವಾಯಿತು. “ಇಂದೇ ಹೋಗುವ” ಎಂದರು. ಅಂದೇ ಇಬ್ಬರೂ ಊಟ ಮೊದಲಾದವುಗಳನ್ನು ತೀರಿಸಿಕೊಂಡು ಹೊರಟರು. ಕಲಕತ್ತೆಯ ಉತ್ತರಕ್ಕೆ ದಕ್ಷಿಣೇಶ್ವರವು ಇರುವದೆಂದು ಅವರು ಕೇಳಿದ್ದರು. ಸಾಗಿದರು ಉತ್ತರ ದಿಕ್ಕಿಗೆ! ಚೈತ್ರಮಾಸ, ಉರಿ ಬಿಸಿಲು, ಆಕಾಶ-ಅಂತರಿಕ್ಷ-ಪೃಥ್ವಿಯನ್ನೆಲ್ಲ ವ್ಯಾಪಿಸಿದೆ! ಇಂಥ ಹೊತ್ತಿನಲ್ಲಿ ಹೇಗೆ ಸಾಗಿದ್ದರೋ ಏನೋ? ಯಾವ ಅದೃಶ್ಯ ಶಕ್ತಿಯು ಅವರನ್ನು ಆಕರ್ಷಿಸುತ್ತಿರಬಹುದು! ದಕ್ಷಿಣೇಶ್ವರವು ಎಷ್ಟು ದೂರದಲ್ಲಿದೆ ಎಂಬುದು ಒಬ್ಬರಿಗೂ ಗೊತ್ತಿದ್ದಿಲ್ಲ; ಹಾಗೆಯೇ ಉತ್ತರ ದಿಕ್ಕಿನ ಕಡೆಗೆ ನಡೆದಿದ್ದರು. ಬಹುದೂರ ಹೋದ ಮೇಲೆ ಒಬ್ಬ ದಾರಿಕಾರನನ್ನು ವಿಚಾರಿಸಲಾಗಿ ಆತನು ನೀವು ದಕ್ಷಿಣೇಶ್ವರ ಬಿಟ್ಟು ಬಂದಿರುವಿರೆಂ” ದು ಹೇಳಿ ಅದರ ದಾರಿಯನ್ನು ತೋರಿಸಿದನು. ಕಡೆಗೆ ಮಧ್ಯಾಹ್ನ ೨ ಗಂಟೆಯ ಸುಮಾರಿಗೆ ದಕ್ಷಿಣೇಶ್ವರದ ರಾಣೀ ರಾಸಮಣಿಯ ಕಾಲೀ ಮಂದಿರಕ್ಕೆ ಬಂದರು.

ಎಂಥ ಮನೋಹರವಾದ ಸ್ಥಾನವಿದು! ಭೂಲೋಕದಲ್ಲಿಯ ನಂದನವನವೋ ಎಂಬಂತಿದೆ. ಸಂಸಾರದ ಕೋಲಾಹಲವು ಕೇಳಬರುವದಿಲ್ಲ! ಮಧುರ ಪುಷ್ಪ ಸೌರಭದಿಂದ ಉದ್ಯಾನವೆಲ್ಲವೂ ತುಂಬಿದೆ. ತಂಗಾಳಿಯು ಸುಳಿಯುತ್ತಿದೆ. ಸುಂದರವಾದ ಪುಷ್ಕರಿಣಿ. ಅಲ್ಲಲ್ಲಿ ಉಚ್ಚ ಶಿಖರಗಳುಳ್ಳ

ದೇವಮಂದಿರಗಳು. ಅಲ್ಲಲ್ಲಿ ನವಪಲ್ಲವಿತ ವೃಕ್ಷರಾಜಿಯು ಶಾಖೆಗಳನ್ನು ಅಲ್ಲಾಡಿಸುತ್ತ ಸಂಸಾರ ಸಂತಪ್ತ ಪಥಿಕರನ್ನು ಕರೆಯುವಂತಿದೆ!

ನೋಡನೋಡುವಷ್ಟರಲ್ಲಿ ಇಬ್ಬರೂ ಶ್ರೀರಾಮಕೃಷ್ಣರು ಇರುವಮನೆಯ ಪೂರ್ವದಿಕ್ಕಿನ ಬಾಗಿಲದಲ್ಲಿ ಬಂದರು. ಬಾಗಿಲ ಬಳಿಯಲ್ಲಿ ಒಬ್ಬ ಶ್ಮಶ್ರುಧಾರೀ ಮನುಷ್ಯನು ಕುಳಿತುಕೊಂಡಿದ್ದನು. ಅವನಿಗೆ ನಾಗಮಹಾಶಯರು "ಸ್ವಾಮಿಾ, ಇಲ್ಲಿ ಒಬ್ಬ ಬ್ರಹ್ಮಚಾರಿಗಳಿರುವರಂತೆ, ಅವರೆಲ್ಲಿ?" ಎಂದು ಕೇಳಿದರು. ಅದಕ್ಕೆ ಆ ಗೃಹಸ್ಥನು "ಅಹುದು ಒಬ್ಬರಿರುತ್ತಾರೆ; ಆದರೆ ಅವರು ಈ ದಿನ ಚಂದ್ರನಗರಕ್ಕೆ ಹೋಗಿರುವರು. ನೀವು ಮತ್ತೊಂದು ದಿನ ಬನ್ನಿರಿ" ಎಂದು ಹೇಳಿದನು.

ಇಷ್ಟು ಕಷ್ಟಪಟ್ಟು ಇಲ್ಲಿಯವರೆಗೆ ಬಂದದ್ದು ವ್ಯರ್ಥವಾಯಿತೆಂದು ಇಬ್ಬರಿಗೂ ಮರ್ಮಾಂತಿಕ ವ್ಯಥೆಯುಂಟಾಯಿತು. ಹತಾಶರಾಗಿ ಅಲ್ಲಿಯೇ ಕುಳಿತುಕೊಂಡರು. ಇನ್ನು ಮುಂದೇನು? ಶಿಷ್ಟಾಚಾರಾನುಸಾರವಾಗಿ ಆ ಗೃಹಸ್ಥನಿಗೆ ತಿಳಿಸಿ, ಇನ್ನು ಹೊರಡಬೇಕೆನ್ನುವಷ್ಟರಲ್ಲಿ ನಾಗಮಹಾಶಯರು, ಬಾಗಿಲೊಳಗಿಂದ ಒಬ್ಬರು ಕೈಸನ್ನೆ ಮಾಡಿ ತಮ್ಮನ್ನು ಕರೆಯುತ್ತಿರುವದನ್ನು ಕಂಡರು. ಇವರೇ ಆ ಸಾಧುಗಳೆಂದು ನಾಗಮಹಾಶಯರಿಗೆ ಮನವರಿಕೆಯಾಯಿತು. ಶ್ಮಶ್ರುಧಾರಿಯ ಮಾತನ್ನು ಉಪೇಕ್ಷಿಸಿ ಇಬ್ಬರೂ ಶ್ರೀರಾಮಕೃಷ್ಣರಿರುವ ಕೋಣೆಯನ್ನು ಪ್ರವೇಶಿಸಿದರು.

ಈ ಶ್ಮಶ್ರುಧಾರೀ ಮನುಷ್ಯನ ಹೆಸರು ಪ್ರತಾಪಚಂದ್ರಹ ಜರಾ. ಭಗವಂತನ ಮಾಯೆಯು ಎಷ್ಟು ಅದ್ಭುತವಾಗಿದೆ! ಹನ್ನೆರಡು ವರ್ಷ ಶ್ರೀರಾಮಕೃಷ್ಣರ ಸನ್ನಿಧಿಯಲ್ಲಿದ್ದರೂ ಅವರನ್ನು ತಿಳಿಯುವದು ಈತನಿಗೆ ಸಾಧ್ಯವಾಗಲಿಲ್ಲ! ಎಲ್ಲವೂ ಅವರ ಕೈಯಲ್ಲಿದೆ ಅವನನ್ನು ಯಾರೂ ಅರಿಯಲಾರರು. ನೂರಾರು ವರ್ಷ ಜಪಧ್ಯಾನ ಮಾಡಿದರೂ ಅವನ ಅನುಗ್ರಹವಾಗದಿದ್ದರೆ ಅವನನ್ನು ತಿಳಿಯುವದು ಶಕ್ಯವಿಲ್ಲ.

ಶ್ರೀರಾಮಕೃಷ್ಣರ ನಿಜ ಜೀವನದಲ್ಲಿಯೇ ಒಂದು ಘಟನೆ ಸಂಭವಿಸಿತು. ಶ್ರೀರಾಮಕೃಷ್ಣರ ಸೋದರಳಿಯನಾದ ಹೃದಯ ಮುಖೋಪಾಧ್ಯಾಯನೊಡನೆ ಒಂದು ದಿನ ಕಾಲೀಘಟ್ಟಕ್ಕೆ ಹೋದರು ಶ್ರೀಮಂದಿರದ ಪೂರ್ವದಿಕ್ಕಿನಲ್ಲಿ ಆಗ ಸಣ್ಣ ಗಿಡಗಂಟಿಗಳಿಂದ ತುಂಬಿದ ವಿಸ್ತಾರ

ವಾದ ವನವಿತ್ತು. (ಈಗ ಚಿಕ್ಕ ಪುಷ್ಕರಣಿಯಿದೆ.) ಶ್ರೀರಾಮಕೃಷ್ಣರು ಅಂದು ಶ್ರೀ ಜಗನ್ಮಾತೆಯು ಕೆಂಪು ಸೀರೆಯನ್ನುಟ್ಟುಕೊಂಡು ಕುಮಾರೀ ವೇಷದಲ್ಲಿ ಮತ್ತನೇಕ ಕುಮಾರಿಯರೊಡನೆ ಪಾತರಗಿತ್ತಿಯನ್ನು ಹಿಡಿಯುತ್ತ ಆಟವಾಡುತ್ತಿರುವದನ್ನು ಕಂಡರು. ಕೂಡಲೇ ಶ್ರೀರಾಮಕೃಷ್ಣರು "ತಾಯಿ ತಾಯಿ" ಎನ್ನುತ್ತ ಸಮಾಧಿಸ್ಥರಾದರು. ಸಮಾಧಿಯು ಇಳಿದಮೇಲೆ ಶ್ರೀಮಂದಿರದ ಕಡೆಗೆ ಹೋಗಿ ನೋಡಿದರು. ದೇವಿಯು ಕುಮಾರೀ ವೇಷದಲ್ಲಿ ಯಾವ ವಸ್ತ್ರವನ್ನು ಧರಿಸಿ ಆಟವಾಡುತ್ತಿದ್ದಳೋ ಅದೇ ವಸ್ತ್ರವು ಶ್ರೀ ವಿಗ್ರಹದ ಮೇಲೆ ಶೋಭಿಸುತ್ತಿತ್ತು. ಶ್ರೀರಾಮಕೃಷ್ಣರ ಬಾಯಿಂದ ಇದೆಲ್ಲ ಕೇಳಿ ಹೃದಯನೆಂದ, "ಮಾವ, ಆಗಲೇ ಹೇಳಿದ್ದರೆ ಓಡಿಹೋಗಿ ಅವಳನ್ನು ಹಿಡಿತರುತ್ತಿದ್ದೆನಲ್ಲ! ಶ್ರೀರಾಮಕೃಷ್ಣರು ಅವರಿಗೆ ಹೇಳಿದರು." ಅಯ್ಯಾ, ಅದು ಹೇಗೆ ಸಾಧ್ಯವಿದೆ? ಅವಳು ಹಿಡಿಯಕೊಡದಿದ್ದರೆ ಯಾರು ತಾನೇ ಅವಳನ್ನು ಹಿಡಿಯಬಲ್ಲರು! ಅವಳ ಕೃಪೆಯಾಗದ ಹೊರ್ತು ಯಾರಿಗೂ ಅವಳ ದರ್ಶನವಾಗದು.

ಮೊದಲಿನ ದಿವಸದಿಂದಲೇ ಹಾಜರಾನ ವಿಷಯವಾಗಿ ನಾಗಮಹಾಶಯರು ವಿರೂಪ ಭಾವನೆಯನ್ನು ತಳೆದರು. ಅವರು ಹೇಳುತ್ತಿದ್ದರು. "ಶ್ರೀ ರಾಮಕೃಷ್ಣರ ಸಾನಿಧ್ಯದಲ್ಲಿದ್ದರೂ ಅವನಿಗೆ ಸತ್ಯದ ಬಗ್ಗೆ ಭಕ್ತಿಯಿದ್ದಿಲ್ಲ. ಆ ದಿನ ಸುಳ್ಳು ಹೇಳಿ ನಮ್ಮನ್ನು ಹಾಗೆಯೇ ಅಟ್ಟಬೇಕೆಂದು ಮಾಡಿದ್ದನು. ಆದರೆ ದಯಾಮಯ ಶ್ರೀ ರಾಮಕೃಷ್ಣರು ತಾವಾಗಿಯೇ ತಮ್ಮ ಅಡಿದಾವರೆಗಳಲ್ಲಿ ನಮಗೆ ಆಶ್ರಯಕೊಟ್ಟರು."

# ೫ನೇ ಪ್ರಕರಣ.

## ಶ್ರೀ ರಾಮಕೃಷ್ಣರ ದರ್ಶನ.

ಸುರೇಶರೂ ನಾಗಮಹಾಶಯರೂ ಕೋಣೆಯನ್ನು ಪ್ರವೇಶಿಸಿ ನೋಡಿದರು. ಭಗವಾನ್ ಶ್ರೀರಾಮಕೃಷ್ಣರು ಉತ್ತರಾಭಿಮುಖರಾಗಿ ಸಣ್ಣದೊಂದು ಪಲ್ಲಂಗದ ಮೇಲೆ ಕಾಲು ಚಾಚಿ ಕುಳಿತಿರುವರು. ಮೊಗದಲ್ಲಿ ಮುಗುಳುನಗೆ. ಸುರೇಶ ಬಾಬುಗಳು ಕೈಮುಗಿದು ಅಲ್ಲಿಯೇ ಚಾಪೆಯಮೇಲೆ ಕುಳಿತುಕೊಂಡರು. ನಾಗಮಹಾಶಯರು ತಲೆಬಾಗಿಸಿ ಪ್ರಣಾಮ ಮಾಡಿದರು. ಆದರೆ ಅವರ ಪಾದಧೂಳಿಯನ್ನು ತೆಗೆದುಕೊಳ್ಳಹೋಗಲು ಶ್ರೀರಾಮಕೃಷ್ಣರು ಕಾಲುಗಳನ್ನು ಹಿಂದೆ ತೆಗೆದುಕೊಂಡರು. ಈ ಪವಿತ್ರ ಸಾಧುವಿನ ಚರಣ ಸ್ಪರ್ಶ ಮಾಡಲು ತಾವಿನ್ನೂ ಯೋಗ್ಯರಾಗಿಲ್ಲವೆಂದು ಭಾವಿಸಿ ನಾಗಮಹಾಶಯರು ಮೂಲೆಯಲ್ಲಿ ಕುಳಿತುಕೊಂಡರು.

ಶ್ರೀರಾಮಕೃಷ್ಣರು ಉಭಯತರ ಪರಿಚಯ ಕೇಳಿದರು— ಎನು ಹೆಸರು, ಎಲ್ಲಿ ಮನೆ, ಏನು ಮಾಡುತ್ತಿರುವಿರಿ, ಪ್ರಪಂಚವೆಷ್ಟು, ಮದುವೆಯಾಗಿದೆಯೋ ಇಲ್ಲವೋ ಎಂಬುದಾಗಿ ಶ್ರೀರಾಮಕೃಷ್ಣರು ಕೇಳಹತ್ತಿದರು. “ಸಂಸಾರದಲ್ಲಿರಬೇಕು; ಪಾಕಾಲ ಮೀನದಂತೆ. ಪಾಕಾಲ ಮೀನವು ಕೆಸರಿನಲ್ಲಿರುತ್ತದೆ. ಆದರೆ ಅದರ ಮೈಗೆ ಕೆಸರು ಹತ್ತುವದಿಲ್ಲ. ಅದರಂತೆಯೇ ಪ್ರಪಂಚದಲ್ಲಿರಬೇಕು; ಆದರೆ ಸಂಸಾರದ ಮಲಿನತೆಯು ಮನದಲ್ಲಿ ಮೂಡಬಾರದು.” ನಾಗಮಹಾಶಯರು ಶ್ರೀರಾಮಕೃಷ್ಣರ ಮುಖವನ್ನು ಒಂದೇಸವನೆ ನೋಡುತ್ತಿರುವದನ್ನು ಕಂಡು ಅವರು ಹಾಗೇಕೆ ನೋಡುವಿ? ಎಂದು ಕೇಳಿದರು. ನಾಗಮಹಾಶಯರು ಅದಕ್ಕೆ ತಮ್ಮನ್ನೇ ನೋಡಬಂದಿರುವೆನು. ಆದ್ದರಿಂದ ನೋಡುತ್ತಿರುವೆನು ಎಂದು ನುಡಿದರು.



ಭಾವಸಮಾಧಿಯಲ್ಲಿದ್ದ ರಾಮಕೃಷ್ಣ ಪರಮಹಂಸರು

Vasant Printing Works Dharwar.

ತುಸು ಹೊತ್ತು ಈ ರೀತಿಯಾಗಿ ಮಾತುಕಥೆಯಾದಮೇಲೆ ಶ್ರೀರಾಮಕೃಷ್ಣರು ಇಬ್ಬರಿಗೂ ಪಂಚವಟಿಗೆ ಹೋಗಿ ಧ್ಯಾನಮಾಡಿ ಬರಲು ಹೇಳಿದರು.

ಸುಮಾರು ಅರ್ಧ ತಾಸು ಧ್ಯಾನಮಾಡಿ ಇಬ್ಬರೂ ಶ್ರೀರಾಮಕೃಷ್ಣರ ಕೋಣೆಗೆ ಬಂದರು. ಆನಂತರ ಶ್ರೀರಾಮಕೃಷ್ಣರು ಅವರಿಗೆ ಎಲ್ಲ ದೇವ ಮಂದಿರಗಳನ್ನು ತೋರಿಸಲು ಕರೆದುಕೊಂಡು ಹೋದರು.

ಶ್ರೀರಾಮಕೃಷ್ಣರ ಹಿಂದಿನಿಂದ ಸುರೇಶರೂ ನಾಗಮಹಾಶಯರೂ ಹೊರಟರು. ಮೊದಲು ಶ್ರೀರಾಮಕೃಷ್ಣರ ಮನೆಗೆ ಹೊಂದಿರುವ ದ್ವಾದಶ ಶಿವಮಂದಿರವು. ಶ್ರೀರಾಮಕೃಷ್ಣರು ಮಂದಿರವನ್ನು ಪ್ರವೇಶಿಸಿ ಹೇಗೆ ಶಿವ ಲಿಂಗ ಪ್ರದಕ್ಷಿಣೆಯನ್ನು ಮಾಡುತ್ತಿದ್ದರೋ ಹಾಗೆಯೇ ನಾಗಮಹಾಶಯರು ಪ್ರಣಾಮ ಪ್ರದಕ್ಷಿಣೆ ಮಾಡುತ್ತಿದ್ದರು. ಸುರೇಶ ಬಾಬುಗಳು ನಿರಾಕಾರ ಬ್ರಹ್ಮವಾದಿಗಳಷ್ಟೇ. ದೇವತೆಗಳನ್ನವರು ಮಾನ್ಯ ಮಾಡುತ್ತಿದ್ದಿಲ್ಲ. ಆದ್ದರಿಂದ ಅವರು ಸುಮ್ಮನೆ ಎಲ್ಲವನ್ನೂ ನೋಡುತ್ತ ನಿಲ್ಲುತ್ತಿದ್ದರು. ಅದಾದನಂತರ ವಿಷ್ಣುಮಂದಿರ. ಇಲ್ಲಿಯೂ ಶ್ರೀರಾಮಕೃಷ್ಣರು ಪ್ರಣಾಮ ಪ್ರದಕ್ಷಿಣೆ ಮಾಡಿ ಆಮೇಲೆ ಶ್ರೀ ಭವತಾರಿಣಿಯ ಮಂದಿರದ ಕಡೆಗೆ ಸಾಗಿದರು.

ಶ್ರೀ ಭವತಾರಿಣಿಯ ಮಂದಿರವನ್ನು ಪ್ರವೇಶಿಸಿದ ಕೂಡಲೇ ಶ್ರೀರಾಮಕೃಷ್ಣರಲ್ಲಿ ಭಾವಾಂತರವುಂಟಾಗಿದ್ದನ್ನು ಸುರೇಶ ಹಾಗೂ ನಾಗಮಹಾಶಯರು ವಿಸ್ಮಿತರಾಗಿ ನೋಡಿದರು. ಅಶಾಂತ ಬಾಲಕನು ತಾಯಿಯ ಸೆರಗು ಹಿಡಿದು ಅವರ ಸುತ್ತಲೂ ತಿರುಗುವಂತೆ ಶ್ರೀರಾಮಕೃಷ್ಣರು ದೇವಿಯ ಪ್ರದಕ್ಷಿಣೆ ಹಾಕಹತ್ತಿದರು. ಆಮೇಲೆ ಶ್ರೀ ಮಹಾದೇವ ಹಾಗೂ ಶ್ರೀ ಕಾಲಿ ಮಾತೆಯ ಪಾದಪದ್ಮಗಳಲ್ಲಿ ತಲೆಯಿಟ್ಟು ನಮಸ್ಕರಿಸಿ ಅವರು ತಮ್ಮ ಕೋಣೆಗೆ ತಿರುಗಿ ಬಂದರು.

ಸುಮಾರು ೫ ಗಂಟೆಗೆ ಸುರೇಶ ನಾಗಮಹಾಶಯರು ಶ್ರೀರಾಮಕೃಷ್ಣರಿಗೆ ಹೊರಡಲು ಅಪ್ಪಣೆ ಕೇಳಿದರು. ಶ್ರೀರಾಮಕೃಷ್ಣರು "ಮತ್ತೆ ಬನ್ನಿರಿ! ಆಗಾಗ್ಗೆ ಬರಹೋಗುತ್ತಿದ್ದರೆ ಪರಿಚಯವು ಬೆಳೆಯುವದೆ''ಂದು ಹೇಳಿದರು.

ದಾರಿಯಲ್ಲಿ ನಾಗಮಹಾಶಯರ ಮನದಲ್ಲಿ ಒಂದೇ ಒಂದು ವಿಚಾರ. "ಇವರು ಯಾರು? ಸಾಧುಗಳೋ? ಸಿದ್ಧ ಮಹಾಪುರುಷರೋ? ಅಥವಾ ಮತ್ತಾರು?"

ಅಂದಿನ ಆ ಭಾವಭಕ್ತಿಯ ಚಿತ್ರವು ತಮ್ಮ ಹೃದಯದಲ್ಲಿ ಚಿರವಾಗಿ ಮೂಡಿಬಿಟ್ಟಿದೆಯೆಂದು ಸುರೇಶರು ಹೇಳುತ್ತಿದ್ದರು ಆಹುತಿಯು ಬಿದ್ದ ಕೂಡಲೇ ಅಗ್ನಿಯು ಮತ್ತಿಷ್ಟು ಪ್ರಜ್ವಲಿಸುವಂತೆ ಶ್ರೀ ರಾಮಕೃಷ್ಣರ ದರ್ಶನದಿಂದ ಒಂದು ತೀವ್ರವಾದ ಪಿಪಾಸೆಯು ಹುಟ್ಟಿತು. ಈಶ್ವರ ಲಾಭಲಾಲಸೆಯಿಂದ ಅವರು ಹುಚ್ಚರಾದರು. ಊಟ ಮರೆಯಿತು. ನಿದ್ದೆ ಹಾರಿತು. ಎರಡನೆಯವರ ಕೂಡ ಮಾತುಕಥೆ ನಿಂತಿತು. ಕೇವಲ ಸುರೇಶ ರೊಡನೆ ಶ್ರೀರಾಮಕೃಷ್ಣರ ವಿಷಯವಾಗಿಯೇ ಮಾತಾಡುತ್ತಿದ್ದರು.

ಒಂದು ವಾರವಾದ ಮೇಲೆ ಮತ್ತೆ ಇಬ್ಬರೂ ಶ್ರೀ ರಾಮಕೃಷ್ಣರನ್ನು ಕಾಣಲು ಹೋದರು. ಉನ್ಮಾದಪ್ರಾಯ ನಾಗಮಹಾಶಯರನ್ನು ನೋಡಿ ದಕೂಡಲೇ ಶ್ರೀರಾಮಕೃಷ್ಣರಿಗೆ ಭಾವಾವೇಶವುಂಟಾಯಿತು. ಶ್ರೀರಾಮ ಕೃಷ್ಣರೆಂದರು, "ಬಂದೆಯಾ ಬಹು ಚೆನ್ನಾಯಿತು, ನಾನು ನಿನಗಾಗಿ ಇಷ್ಟು ದಿನ ಕಾಯ್ದುಕೊಂಡು ಕುಳಿತಿದ್ದೆನು." ಆ ಮೇಲೆ ನಾಗಮಹಾ ಶಯರನ್ನು ಬಳಿಯಲ್ಲಿ ಕೂಡಿಸಿಕೊಂಡು ಹೇಳಿದರು. 'ಭಯವೇಕೆ? ನೀನು ಬಹು ಉಚ್ಚ ಅವಸ್ಥೆಯಲ್ಲಿರುವಿ." ಆ ದಿನವೂ ಅವರು ಇಬ್ಬರಿಗೂ ಪಂಚವಟಿಗೆ ಹೋಗಿ ಧ್ಯಾನ ಮಾಡಿ ಬರಲು ಹೇಳಿದರು. ಆ ಪ್ರಕಾರ ಅವರು ಧ್ಯಾನ ಮಾಡಲು ಹೋದ ಮೇಲೆ ಶ್ರೀರಾಮಕೃಷ್ಣರು ಅಲ್ಲಿಗೆ ಹೋಗಿ ನಾಗಮಹಾಶಯರಿಗೆ ಒಂದಿಷ್ಟು ತಂಬಾಕವನ್ನು ಮೆದ್ದು ತರಲು ಹೇಳಿದರು. ನಾಗಮಹಾಶಯರು ಅದಕ್ಕಾಗಿ ಹೋಗಲು ಸುರೇಶರಿಗೆ ಶ್ರೀರಾಮಕೃಷ್ಣರೆಂದರು, "ನೋಡಿದಿಯಾ ಇವನನ್ನು! ಜ್ವಲಂತ ಅಗ್ನಿ ಯಂತಿರುವನು!" ಅಷರಲ್ಲಿ ನಾಗಮಹಾಯರು ತಂಬಾಕವನ್ನು ತಂದರು. ಆ ಮೇಲೆ ಶ್ರೀರಾಮಕೃಷ್ಣರು ಅವರಿಗೆ ಒಮ್ಮೆ ಪಂಜೆ ತರಲು ಹೇಳಿದರು. ಮತ್ತೆ ನೀರಿನ ಪಾತ್ರೆಯನ್ನು ತರಲು ಹೇಳಿದರು. ಶ್ರೀರಾಮಕೃಷ್ಣರ ಸೇವೆ ಮಾಡುವ ಸಂಧಿಯೊದಗಿದಕ್ಕಾಗಿ ನಾಗಮಹಾಶಯರಿಗೆ ಹಿಡಿ

ಸಲಾರದಷ್ಟು ಆನಂದವಾಯಿತು. ಆದರೆ ಗುರುದೇವನ ಪಾದಧೂಲಿ ಮಾತ್ರ ದೊರೆಯಲಿಲ್ಲವೆಂದು ನಾಗಮಹಾಶಯರ ಮನಸ್ಸಿಗೆ ಸಮಾಧಾನವಾಗಲಿಲ್ಲ.

ಆ ನಂತರ ನಾಗಮಹಾಶಯರು ದಕ್ಷಿಣೇಶ್ವರಕ್ಕೆ ಹೋದದ್ದು ಏಕಾಕಿಯಾಗಿ: ಕೆಲಸದಲ್ಲಿ ತೊಡಗಿದ್ದರಿಂದ ಸುರೇಶ ಬಾಬುಗಳಿಗೆ ಹೋಗುವದಾಗಲಿಲ್ಲ. ಆ ದಿನವಾದರೂ ನಾಗಮಹಾಶಯರನ್ನು ನೋಡಿ ಶ್ರೀರಾಮಕೃಷ್ಣರಿಗೆ ಭಾವಾವೇಶವುಂಟಾಯಿತು. ಕುಳಿತುಕೊಂಡವರು ಏನೇನೋ ವಟಗುಡುತ್ತ ಎದ್ದು ನಿಂತರು. ಅವರ ಆ ಅವಸ್ಥೆಯನ್ನು ಕಂಡು ನಾಗಮಹಾಶಯರ ಮನಸ್ಸಿನಲ್ಲಿ ವಿಷಮಭಯವುಂಟಾಯಿತು. ಶ್ರೀ ರಾಮಕೃಷ್ಣರು ಅವರಿಗೆಂದರು. "ಏನಯ್ಯಾ, ನೀನು ವೈದ್ಯಕಿಯನ್ನು ಮಾಡುತ್ತೀಯಷ್ಟೆ! ನನ್ನ ಕಾಲಿಗೆ ಏನಾಗಿರುವದು ನೋಡು" ಶ್ರೀರಾಮಕೃಷ್ಣರು ಆಡಿದ ಮಾತು ಕೇಳಿ ನಾಗಮಹಾಶಯರ ಮನಸ್ಸಿನಲ್ಲಿ ಧೈರ್ಯವುಂಟಾಯಿತು. ಅವರ ಕಾಲಮೇಲೆ ಕೈಯಾಡಿಸಿ ಚೆನ್ನಾಗಿ ಪರೀಕ್ಷಿಸಿ ನಾಗಮಹಾಶಯರು "ಎಲ್ಲಿಯೂ ಏನೂ ಕಾಣುವದಿಲ್ಲ" ವೆಂದು ಹೇಳಿದರು. ನೆಟ್ಟಗೆ ನೊಡು, ಏನಾಗಿರುವದು!" ಎಂದು ಮತ್ತೆ ಶ್ರೀರಾಮಕೃಷ್ಣರೆಂದರು. ನಾಗಮಹಾಶಯರ ಮನದ ದುಗುಡವು ಇಂದು ದೂರಾಯಿತು. ಚರಣಸ್ಪರ್ಶ ಮಾಡುವ ಅಧಿಕಾರವನ್ನು ಹೊಂದಿ ಧನ್ಯನಾದೆನೆಂದು ತಿಳಿದು ಆನಂದಾಶ್ರುಗಳನ್ನು ಸುರಿಸುತ್ತ ವಾಂಛಿತ ಚರಣಗಳನ್ನು ಹೃದಯದಲ್ಲಿಯೂ ಮಸ್ತಕದಲ್ಲಿಯೂ ಧರಿಸಿದರು. ಅವರು ಹೀಗೆ ಅನ್ನುತ್ತಿದ್ದರು, "ಗುರುದೇವನ ಬಳಿಗೆ ಯಾರೂ ಏನೂ ಬೇಡಬೇಕಾಗುತ್ತಿದ್ದಿಲ್ಲ. ಆತ ತಾನೇ ಅವರ ಮನೋಭಾವನೆಗಳನ್ನು ತಿಳಿದುಕೊಂಡು ಅವರ ಅಭಿಲಾಷೆಯನ್ನು ಪೂರ್ಣ ಮಾಡುತ್ತಿದ್ದನು. ಭಗವಾನ ಶ್ರೀರಾಮಕೃಷ್ಣರೆಂದರೆ ಪ್ರತ್ಯಕ್ಷ ಕಲ್ಪತರು. ಯಾರು ಯಾವುದನ್ನು ಪ್ರಾರ್ಥಿಸಿದರೂ ಅದನ್ನು ಪಡೆಯುತ್ತಿದ್ದರು."

ಅಂದಿನಿಂದ ಶ್ರೀರಾಮಕೃಷ್ಣರೆಂದರೆ ಸಾಕ್ಷಾತ್ ನಾರಾಯಣನೇ ಎಂದು ನಾಗಮಹಾಶಯರ ಧ್ರುವಧಾರಣೆಯಾಯಿತು. "ಶ್ರೀರಾಮಕೃಷ್ಣರ ಕಡೆಗೆ ಕೆಲವುದಿನ ಹೋಗಿ ಬಂದ ಮೇಲೆ, ಸಾಕ್ಷಾತ್ ನಾರಾಯಣನೇ

ದಕ್ಷಿಣೇಶ್ವರದಲ್ಲಿ ಗೌಪ್ಯವಾಗಿ ಕುಳಿತುಕೊಂಡು ಲೀಲೆ ಮಾಡುತ್ತಿದ್ದಾನೆಂದು ತಿಳಿದುಬಂದಿತು'' ಎಂದು ಅವರು ಅನ್ನುತ್ತಿದ್ದರು. "ಇದು ಹೇಗೆ ತಿಳಿಯಿತೆಂದು ಕೇಳಲು ಅವರು ಹೀಗೆ ಹೇಳಿದರು.'' ಶ್ರೀರಾಮಕೃಷ್ಣರು ಕೃಪಾವಿಷ್ಟರಾಗಿ ತಾವು ಯಾರೆಂಬುದನ್ನು ತಿಳಿಸಿಕೊಟ್ಟರು. ಅವರ ಅನುಗ್ರಹವಾಗದಿದ್ದರೆ ಯಾರೂ ಅವರನ್ನು ಅರಿಯಲಾರರು. ಸಾವಿರಾರು ವರ್ಷ ಕಠೋರ ತಪಸ್ಸು ಮಾಡಿದರೂ ಅವರ ಅನುಗ್ರಹವಾಗದೆ ಅವರನ್ನು ಯಾರೂ ತಿಳಿಯಲಾರರು.''

ಶ್ರೀ ರಾಮಕೃಷ್ಣರೊಂದು ದಿನ ತಮ್ಮ ಮೈಯನ್ನು ನಾಗಮಹಾಶಯರಿಗೆ ತೋರಿಸಿ "ಇದು ನಿನಗೆ ಏನೆಂದೆನಿಸುವದು?'' ಎಂದು ಕೇಳಿದರು. ನಾಗಮಹಾಶಯರು ಕೈಮುಗಿದು "ತಮಗೆ ನಾನಿನ್ನೇನು ಹೇಳಬೇಕು? ತಾವೇ ಆತನೆಂದು ತಮ್ಮ ಕೃಪೆಯಿಂದಲೇ ತಿಳಿಯಲು ಸಮರ್ಥನಾಗಿರುವೆನೆ''ಂದು ನಾಗಮಹಾಶಯರು ನುಡಿದರು. ಕೂಡಲೇ ಶ್ರೀರಾಮಕೃಷ್ಣರು ಸಮಾಧಿಸ್ಥರಾಗಿ ನಾಗಮಹಾಶಯರ ಹೃದಯದ ಮೇಲೆ ತಮ್ಮ ಬಲಗೈಯನ್ನಿಟ್ಟರು. ಸಹಸಾ ನಾಗಮಹಾಶಯರಲ್ಲಿ ಒಂದು ತರದ ಭಾವಾಂತರವುಂಟಾಯಿತು. ಸಮಸ್ತ ಸ್ಥಾವರ ಜಂಗಮ ಚರಾಚರಗಳಲ್ಲಿ ಅದೊಂದು ದಿವ್ಯ ಜ್ಯೋತಿಯು ಹೊರಸೂಸುತ್ತಿದೆಂದು ಅವರು ಕಂಡರು.

ನಾಗಮಹಾಶಯರು "ಶ್ರೀ ರಾಮಕೃಷ್ಣರ ಆಗಮನದಿಂದ ಜಗತ್ತಿನಲ್ಲಿ ಒಂದು ಮಹಾಪೂರು ಬಂದಿದೆ. ಎಲ್ಲವೂ ತೇಲಿ ಹೋಗುವದು! ಎಲ್ಲವೂ ತೇಲಿ ಹೋಗುವದು! ಶ್ರೀರಾಮಕೃಷ್ಣರು ಪೂರ್ಣಾವತಾರಿಗಳು. ಇಂಥ ಸರ್ವಭಾವಗಳ ಸಮನ್ವಯವು ಈ ವರೆಗೆ ಯಾವ ಅವತಾರದಲ್ಲಿಯೂ ಆಗಿರುವದಿಲ್ಲ'' ಎಂದು ನುಡಿಯುತ್ತಿದ್ದರು.

ಹೀಗೆ ಕೆಲವು ದಿನ ಹೋಗಿ ಬರುತ್ತಿದ್ದ ಮೇಲೆ ಒಂದು ದಿನ ನಾಗಮಹಾಶಯರು ದಕ್ಷಿಣೇಶ್ವರಕ್ಕೆ ಹೋಗಿ ನೋಡಲಾಗಿ ಶ್ರೀ ರಾಮಕೃಷ್ಣರು ಊಟ ಮಾಡಿ ವಿಶ್ರಮಿಸುತ್ತಿದ್ದುದನ್ನು ಕಂಡರು. ಆಗ ಜ್ಯೇಷ್ಠಮಾಸ; ಅತಿಶಯ ಶಕೆಯಾಗುತ್ತಿತ್ತು. ನಾಗಮಹಾಶಯರ ಕೈಯಲ್ಲಿ ಒಂದು ಬೀಸಣಿಕೆಯನ್ನು ಕೊಟ್ಟು ಶ್ರೀ ರಾಮಕೃಷ್ಣರು ಮಲಗಿದರು. ಕೆಲಹೊತ್ತು ಗಾಳಿ

ಹಾಕಿದ ಮೇಲೆ ನಾಗಮಹಾಶಯರ ಕೈಯು ಬಹು ಸೋತುಬಂದಿತು. ಆದರೆ ಗುರುದೇವರ ಅಪ್ಪಣೆಯಾಗದೆ ಹೇಗೆ ನಿಲ್ಲಬೇಕು! ಕಡೆಗೆ ತೀರ ಸೋತು ಕೈ ಸಾಗದಾಯಿತು! ಶ್ರೀ ರಾಮಕೃಷ್ಣರು ಅಷ್ಟರಲ್ಲಿ ನಾಗಮಹಾಶಯರ ಕೈಹಿಡಿದರು. ನಾಗಮಹಾಶಯರು ಹೇಳುತ್ತಿದ್ದರು· " ಭಗವಾನ ಶ್ರೀ ರಾಮಕೃಷ್ಣರ ನಿದ್ರಾವಸ್ಥೆಯು ಸಾಮಾನ್ಯ ಜನರಂತೆ ಅಲ್ಲ. ಅವರು ಯಾವಾಗಲೂ ಜಾಗ್ರತರಾಗಿಯೇ ಇರುತ್ತಿದ್ದರು. ಭಗವಂತನಲ್ಲದೆ ಬೇರೆ ಯಾವ ಸಾಧಕ ಅಥವಾ ಸಿದ್ಧ ಪುರುಷರಿಗೆ ಇಂಥ ಅವಸ್ಥೆಯು ಎಂದಿಗೂ ಸಾಧ್ಯವಿಲ್ಲ. "

ನಾಗಮಹಾಶಯರೊಂದು ದಿನ ಶ್ರೀ ರಾಮಕೃಷ್ಣರ ಬಳಿಯಲ್ಲಿ ಕುಳಿತುಕೊಂಡಾಗ್ಗೆ ಸ್ವಾಮಿ ವಿವೇಕಾನಂದರು ( ಆಗ ನರೇಂದ್ರ ) " ಚಿದಾನಂದ ರೂಪಃ ಶಿವೋಹಂ ಶಿವೋಹಮ್ " ಎನ್ನುತ್ತ ಪ್ರವೇಶಿಸಿದರು· ಶ್ರೀ ರಾಮಕೃಷ್ಣರು ಅವರಿಗೆ ನಾಗಮಹಾಶಯರನ್ನು ತೋರಿಸಿ " ಅದ್ಭುತ ದೀನತೆಯಿವನದು! ಸ್ವಲ್ಪವೂ ಕುಂದು ಇಲ್ಲ " ಎಂದರು. " ತಾವು ಹೀಗೆನ್ನುತ್ತಿದ್ದ ಮೇಲೆ ಹಾಗಿರಲಿಕ್ಕೆ ಸಾಕು " ಎಂದು ನರೆಂದ್ರ ನುಡಿದು ಇಬ್ಬರಲ್ಲಿಯೂ ಮಾತು ನಡೆಯಿತು.

ಹಾಗೆಯೇ ಮಾತು ನಡೆದಿರಲಾಗಿ ನಾಗಮಹಾಶಯರು ಅಂದರು. " ಎಲ್ಲವೂ ನಿನ್ನ ಇಚ್ಛೆ! ಇಚ್ಛಾಮಯಿಯು ನೀನು! ತಾಯಿ, ನೀನೆ ಎಲ್ಲವನ್ನು ಮಾಡುತ್ತಿದ್ದರೂ ಜನರು ತಾವು ಮಾಡಿದೆವೆನ್ನುವರು. "

ನರೇಂದ್ರ—ನನಗೆ ಅದೆಲ್ಲವೂ ಗೊತ್ತಿಲ್ಲ! ನಾನೇ ಪ್ರತ್ಯಕ್ಷ ಪರಮಾತ್ಮನು. ನನ್ನೊಳಗೆ ನಿಖಿಲ ಬ್ರಹ್ಮಾಂಡವು ಏಳುತ್ತಿದೆ, ತೇಲುತ್ತಿದೆ, ಮುಳುಗುತ್ತಿದೆ!

ನಾಗಮಹಾಶಯಃ— ತಮಗೆ ಒಂದು ಕೂದಲೆಳೆಯನ್ನು ಸರಿಸುವದು ಸಾಧ್ಯವಿಲ್ಲ. ವಿಶ್ವಬ್ರಹ್ಮಾಂಡದ ಮಾತು ದೂರ ಉಳಿಯಿತು! ಅವಳ ಇಚ್ಛೆಯಾಗದೆ ಒಂದು ಹುಲ್ಲು ಗರಿಯು ಸಹ ಚಲಿಸದು.

ನರೇಂದ್ರಃ— ನನ್ನ ಇಚ್ಛೆಯಿಲ್ಲದೆ ಹೋದರೆ ಸೂರ್ಯ ಚಂದ್ರರ ಗತಿಯು ತಡೆಯುವದು. ನನ್ನ ಇಚ್ಛೆಯಿಂದಲೇ ಈ ವಿರಾಟ ಬ್ರಹ್ಮಾಂಡವು ಯಂತ್ರದಂತೆ ನಡೆಯುತ್ತಿದೆ!

ಶ್ರೀರಾಮಕೃಷ್ಣರು ಚಿಕ್ಕ ಪಲ್ಲಂಗದ ಮೇಲೆ ಕುಳಿತುಕೊಂಡು ಉಭಯತರ ಸಂಭಾಷಣೆಯನ್ನು ಕೇಳುತ್ತಿದ್ದರು. ಅವರು ನಗನಗುತ್ತ ನಾಗಮಹಾಶಯರಿಗೆ ಹೇಳಿದರು, "ನಿನಗೆ ಗೊತ್ತಿಲ್ಲ; ಆತನು ಒರೆ ಹಿರಿದ ಖಡ್ಗದಂತಿರುವನು; ಅವನ ಮಾತು ಅವನಿಗೆ ಶೋಭಿಸುವದು; ಆತ ನರೇಂದ್ರ; ಅವನು ಹಾಗೆ ಹೇಳಬಲ್ಲ." ನಾಗಮಹಾಶಯರ ಧಾರಣೆಯೂ ಹಾಗೆಯೇ ಆಯಿತು. ನರೇಂದ್ರನಾಥನು ಮನುಷ್ಯನಲ್ಲ. ರಾಮಕೃಷ್ಣ ಲೀಲೆಯಲ್ಲಿ ಮಹಾದೇವನೇ ನರಶರೀರದಲ್ಲಿ ಅವತೀರ್ಣನಾಗಿರುವನು. ಕಡೆಯ ವರೆಗೂ ನಾಗಮಹಾಶಯರ ಈ ವಿಶ್ವಾಸದಲ್ಲಿ ಪರಿವರ್ತನೆಯಾಗಲಿಲ್ಲ. ಒಬ್ಬ ವಿಶಿಷ್ಟ ಗೃಹಸ್ಥನೊಬ್ಬನು ನಾಗಮಹಾಶರಿಗೆ ಕೇಳಿದನು "ಯಾವನಾದರೊಬ್ಬ ಮುಕ್ತ ಪುರುಷನನ್ನು ಕಂಡಿರುವಿರಾ?" ನಾಗಮಹಾಶಯರು ನುಡಿದರು, "ಸಾಕ್ಷಾತ್ ಮುಕ್ತಿದಾತ ಶ್ರೀರಾಮಕೃಷ್ಣದೇವನನ್ನೇ ಕಂಡಿರುವೆನು. ಮತ್ತು ಅವರ ಸರ್ವಪ್ರಧಾನ ಪಾರ್ಷದನಾದ ಶಿವಾವತಾರ ಸ್ವಾಮಿಜಿಯನ್ನೂ ಕಂಡಿರುವೆನು"

ಶ್ರೀರಾಮಕೃಷ್ಣರು ಏನೇ ನುಡಿದರೂ ಅದು ವೇದವಾಕ್ಯವೆಂದು ನಾಗಮಹಾಶಯರು ತಿಳಿಯುತ್ತಿದ್ದರು. ಅನ್ನುತ್ತಿದ್ದರು. "ಗುರುದೇವನು ಪರಿಹಾಸದಿಂದ ಸಹ ಏನಾದರೂ ನುಡಿದರೆ ಅದರಲ್ಲಿಯೂ ಒಂದು ಗೂಢ ರಹಸ್ಯವಿರುತ್ತಿತ್ತು. ನಾನು ಮಂದ ಬುದ್ಧಿಯವನು. ಅವರ ಮಾತಿನ ಮರ್ಮವನ್ನು ಹೇಗೆ ತಿಳಿಯಬಲ್ಲೆನು?"

ಹೀಗೆ ಕೆಲವು ತಿಂಗಳುಗಳು ಕಳೆದ ಮೇಲೆ ಶ್ರೀರಾಮಕೃಷ್ಣರು ಒಬ್ಬ ಭಕ್ತನಿಗೆ "ನೋಡು, ಡಾಕ್ಟರ, ವಕೀಲ, ದಲಾಲ ಮೊದಲಾದವರಿಗೆ ಧರ್ಮಲಾಭವಾಗುವದು ಬಹಳ ಕಠಿಣವು" ಎಂದು ಹೇಳುತ್ತಿದ್ದುದು ನಾಗಮಹಾಶಯರಿಗೆ ಕೇಳಬಂದಿತು. ವಿಶೇಷತಃ ಡಾಕ್ಟರರ ವಿಷಯವಾಗಿ ಶ್ರೀರಾಮಕೃಷ್ಣರು ಹೀಗೆ ನುಡಿದರು. "ಹನಿ ಔಷಧದಲ್ಲಿಯೇ ಮನಸ್ಸು ತೊಡಗಿದ ಮೇಲೆ ವಿರಾಟ ಬ್ರಹ್ಮಾಂಡದ ಧಾರಣೆಯು ಹೇಗಾಗುವದು?" ಇದಕ್ಕೆ ಮೊದಲು ಕೆಲವು ದಿನಗಳಿಂದ ನಾಗಮಹಾಶಯರಿಗೆ ತಮ್ಮ ಚಿಕಿತ್ಸೆಗೊಳಪಟ್ಟ ರೋಗಿಗಳ ಮೂರ್ತಿಗಳು ಸದಾ ತಮ್ಮ ಕಣ್ಣೆದು

ರಿಗೆ ಕಟ್ಟಿದಂತಾಗಿತ್ತು. ಹೀಗಾಗಿ ಅವರ ಧ್ಯಾನದಲ್ಲಿ ವ್ಯತ್ಯಯ ಬರುತ್ತಿತ್ತು. ಶ್ರೀರಾಮಕೃಷ್ಣರ ಮಾತು ಕೇಳಿ ನಾಗಮಹಾಶಯರು, "ಯಾವ ವೃತ್ತಿಯು ಈಶ್ವರ ಲಾಭದಲ್ಲಿಯ ಮಹಾ ಆತಂಕವೆಂದು ಗುರುದೇವನು ಹೇಳುತ್ತಿರುವನೋ ಆ ವೃತ್ತಿಯಿಂದ ಅನ್ನ ವಸ್ತ್ರಗಳಿಸುವದು ಏನೂ ಪ್ರಯೋಜನವಿಲ್ಲ" ವೆಂದು ನಿಶ್ಚಯಿಸಿದರು. ಅದೇ ದಿನ ಮನೆಗೆ ಬಂದು ಔಷಧಗಳ ಪೆಟ್ಟಿಗೆಯನ್ನೂ ಚಿಕಿತ್ಸೆಯ ವಿಷಯವಾಗಿ ಬರೆಯಲ್ಪಟ್ಟ ಪುಸ್ತಕಗಳನ್ನೂ ಗಂಗಾನದಿಯಲ್ಲಿ ಚಲ್ಲಿಬಿಟ್ಟರು. ಆ ಮೇಲೆ ಗಂಗಾಸ್ನಾನ ಮಾಡಿ ಮನೆಗೆ ಬಂದರು. ಆ ಮೇಲೆ ನೌಕರಿಯೇ ಅವರ ಜೀವಿಕೆಯ ಸಾಧನವಾಯಿತು.

ನಾಗಮಹಾಶಯರು ವೈದ್ಯಕೀಯ ವ್ಯವಸಾಯವನ್ನು ಬಿಟ್ಟುಕೊಟ್ಟಿರುವರೆಂದು ದೀನದಯಾಲರಿಗೆ ಕರ್ಣೋಪಕರ್ಣವಾಗಿ ತಿಳಿದುಬಂದಿತು. ಅವರು ಬಹು ಉದ್ವಿಗ್ನರಾಗಿ ಕಲಕತ್ತೆಗೆ ಬಂದರು. ಇಷ್ಟು ದಿನಗಳ ವರೆಗೆ ನಾಗಮಹಾಶಯರು ತಂದೆಯ ಪ್ರತಿನಿಧಿಯಾಗಿ ಪಾಲಬಾಬುಗಳಲ್ಲಿ ನೌಕರಿಯನ್ನು ಮಾಡುತ್ತಿದ್ದರಷ್ಟೆ. ದೀನದಯಾಲರು ತಮ್ಮ ಮಗನನ್ನೇ ತಮ್ಮ ಸ್ಥಾನದಲ್ಲಿ ನಿಯಮಿಸಿ ಊರಿಗೆ ಹೊರಟು ಹೋದರು. ಕಲಕತ್ತೆಗೆ ಅವರು ಬಂದದ್ದು ಇದೇ ಕಡೆಯ ಸಾರೆ.

ನಾಗಮಹಾಶಯರ ನೌಕರಿಯು ವಿಶೇಷ ಪರಿಶ್ರಮದ್ದಿದ್ದಿಲ್ಲ. ಯಾವಾಗಲಾದರೊಮ್ಮೆ ಬಾಗ ಬಾಜಾರದ ಅಥವಾ ಖಿದರಪುರದ ಕಾಲುವೆಗಳ ನಿರೀಕ್ಷಣೆಗೆ ಹೋಗಬೇಕಾಗುತ್ತಿತ್ತು. ವೈದ್ಯಕಿಯನ್ನು ಬಿಟ್ಟದ್ದರಿಂದ ಜಪತಪಕ್ಕೆಷ್ಟೋ ಅನುಕೂಲವಾಯಿತು; ದಕ್ಷಿಣೇಶ್ವರಕ್ಕೆ ಹೋಗಲಿಕ್ಕೆ ವಿಶೇಷ ಸಮಯ ದೊರೆಯಹತ್ತಿತು. ಮನೆಯ ಪರಿಷ್ಕಾರವಾದ ಒಂದು ಸ್ಥಳದಲ್ಲಿ ಗಂಗಾಜಲವನ್ನಿಟ್ಟು ಅದರ ಹತ್ತಿರದಲ್ಲಿಯೇ ಕುಳಿತುಕೊಂಡು ಧ್ಯಾನ ಮಾಡುತ್ತಿದ್ದರು. ಎಂದು ತಮ್ಮ ಕೆಲಸಕ್ಕಾಗಿ ಬಾಗ ಬಾಜಾರಕ್ಕೆ ಹೋಗಬೇಕಾಗುತ್ತಿತ್ತೋ ಆ ದಿನ ಕಾಲುವೆಯ ಆಚೆಗಿರುವ ವನ ಅಥವಾ ತೋಟದಲ್ಲಿ ಒಂದು ನಿರ್ಜನ ಸ್ಥಾನವನ್ನು ಹುಡುಕಿಕೊಂಡು ಅಲ್ಲಿ ಧ್ಯಾನ ಮಾಡುತ್ತಿದ್ದರು. ಹೀಗೆ ಒಂದು ದಿನ ಧ್ಯಾನ ಮಾಡುತ್ತಿರ

ಲಾಗಿ ಅವರಿಗೆ ಅನೇಕ ಅದ್ಭುತ ದರ್ಶನಗಳಾದವು. ಮನೆಗೆ ಬಂದ ಮೇಲೆ ಸುರೇಶಬಾಬುಗಳ ಮುಂದೆ "ಅಂದಿನ ಧ್ಯಾನದಲ್ಲಿ ಆದಷ್ಟು ಆನಂದವು ಎಂದೂ ಆಗಲಿಲ್ಲವೆಂ" ದು ಹೇಳಿದರು.

ಕ್ರಮವಾಗಿ, ಶ್ರೀರಾಮಕೃಷ್ಣರ ಕಡೆಗೆ ಬಹಳವಾಗಿ ಹೋಗಿ ಬರಹತ್ತಿದ ಮೇಲೆ ನಾಗಮಹಾಶಯರ ಮನಸ್ಸಿನಲ್ಲಿ ತೀವ್ರವಾದ ವೈರಾಗ್ಯದ ಸಂಚಾರವಾಯಿತು. ಸಂಸಾರವನ್ನು ತ್ಯಜಿಸಬೇಕೆಂದು ನಿಶ್ಚಯಿಸಿ ಅಪ್ಪಣೆ ದೊರಕಿಸಲು ದಕ್ಷಿಣೇಶ್ವರಕ್ಕೆ ಹೋದರು. ಆದರೆ ಶ್ರೀ ರಾಮಕೃಷ್ಣರ ಮನೆಗೆ ಹೋಗಲಾಗಿ ಶ್ರೀ ರಾಮಕೃಷ್ಣರು ಭಾವಾವೇಶದಲ್ಲಿ "ಗೃಹಸ್ಥಾಶ್ರಮದಲ್ಲಿ ದೋಷವೇನು? ಅದರಲ್ಲಿ ಮನಸ್ಸು ತೊಡಗಿದರೆ ದೋಷವಷ್ಟೆ? ಗೃಹಸ್ಥಾಶ್ರಮವೆಂದರೆ ಏನೆಂಬುದು ಗೊತ್ತಿದೆಯೋ? ಕೋಟೆಯಲ್ಲಿದ್ದು ಯುದ್ಧ ಮಾಡುವದು" ಎಂದು ನುಡಿಯುತ್ತಿದ್ದುದನ್ನು ಕೇಳಿದರು. ಎಂಥ ವಿಡಂಬನೆಯು! ಯಾರು ವೈರಾಗ್ಯದ ಕಿಡಿಯನ್ನು ಊದಿ ಅದು ದಾವಾನಲ ಸ್ವರೂಪವನ್ನು ಧರಿಸುವಂತೆ ಮಾಡಿದರೋ ಅವರೇ "ನೀನು ಜನಕನಂತೆ ಗೃಹಸ್ಥಾಶ್ರಮದಲ್ಲಿರು. ನಿನ್ನನ್ನು ನೋಡಿ ಬೇರೆ ಗೃಹಸ್ಥಾಶ್ರಮಿಗಳು ಯಥಾರ್ಥ ಗೃಹಸ್ಥ ಧರ್ಮವನ್ನು ಕಲಿಯುವರು ಎಂಬುದಾಗಿ ಹೇಳುತ್ತಿರುವರು! ಇನ್ನೇನು ಉಪಾಯ? "ಗುರುದೇವನ ಶ್ರೀ ಮುಖದಿಂದ ಒಮ್ಮೆ ಹೊರಟ ಮಾತಿನ ವಿಪರೀತವಾಗಿ ನಡೆಯುವದು ಯಾರಿಗೂ ಸಾಧ್ಯವಿಲ್ಲ. ಯಾರದು ಯಾವ ಹಾದಿ ಎಂಬುದನ್ನು ಎರಡೇ ಮಾತುಗಳಲ್ಲಿಯೇ ಆತನು ಹೇಳಿಬಿಡುತ್ತಾನೆ" ಎಂದು ನಾಗಮಹಾಶಯರು ಹೇಳುತ್ತಿದ್ದರು.

ಶ್ರೀರಾಮಕೃಷ್ಣರ ಅಪ್ಪಣೆಯನ್ನು ಶಿರಸಾವಹಿಸಿ ನಾಗಮಹಾಶಯರು ಮನೆಗೆ ಹಿಂದಿರುಗಿದರು. ಆದರೆ ಬಹು ವ್ಯಾಕುಲರಾದರು. ಹಗಲಿರುಳೂ 'ಹಾಯ್ ಭಗವಾನ್' ಎಂದು ದುಃಖಿಸುತ್ತಿದ್ದರು. ಒಮ್ಮೊಮ್ಮೆ ಧೂಳಿಯಲ್ಲಿ ಬಿದ್ದು ಬಿಡುತ್ತಿದ್ದರು. ಒಮ್ಮೊಮ್ಮೆ ಮುಳ್ಳುಗಳಲ್ಲಿ ಬಿದ್ದು ಮೈಯೆಲ್ಲ ಗಾಯವಾಗುತ್ತಿತ್ತು. ಊಟದ ಕಡೆಗೆ ಲಕ್ಷ್ಯವಿದ್ದಿಲ್ಲ. ಸುರೇಶಬಾಬುಗಳು ಪ್ರಯತ್ನಪೂರ್ವಕ ಅವರಿಗೆ ಉಣ್ಣ ಹಚ್ಚಿದರೆ ಸ್ವಲ್ಪ ಊಟ

ಮಾಡುತ್ತಿದ್ದರು. ಇಲ್ಲದಿದ್ದರೆ ಊಟವೇ ಇಲ್ಲ! ಹೇಗೆ ದಿನಗಳೆಯುತ್ತಿದ್ದರೋ ಎಲ್ಲಿ ಇರುತ್ತಿದ್ದರೋ ಯಾವುದನ್ನೂ ಹೇಳಲಿಕ್ಕೆ ಬರುವಂತಿಲ್ಲ. ಮನೆಗೆ ಬಂದಾಗ್ಗೆ ಒಮ್ಮೊಮ್ಮೆ ರಾತ್ರಿ ೧೨ ಅಥವಾ ೨ ಗಂಟೆಯಾಗಿರುತ್ತಿತ್ತು! ಸಾಮಾನ್ಯ ಕೆಲಸವನ್ನು ಮಾಡುವದು ಸಹ ನಾಗಮಹಾಶಯರಿಗೆ ದುರ್ಧರವಾಯಿತು. ಕೆಲವು ದಿನಗಳ ಹಿಂದೆ ರಣಜಿತ ಹಾಜರಾ ಎಂಬ ವ್ಯಕ್ತಿಯು ಪರಿಚಯವು ನಾಗ ಮಹಾಶಯರಿಗಾಗಿತ್ತು ರಣಜಿತನು ಬಡವ; ಆದರೆ ಮಹಾ ಧರ್ಮಭೀರು. ನಾಗಮಹಾಶಯರು ನೌಕರಿ ಮಾಡುವದು ಸಾಧ್ಯವಿರದ ದಿನ ಈತನು ಅವರ ಕೆಲಸವನ್ನು ಸಾಗಿಸುತ್ತಿದ್ದನು.

ನಾಗಮಹಾಶಯರ ಮನೆಯ ಬದಿಗಿರುವ ಭೂಮಿಯಲ್ಲಿ ಅವರ ತಂಗಿಯಾದ ಶಾರದಾ ಮಣಿಯು ಒಂದು ಕುಂಬಳ ಬಳ್ಳಿಯನ್ನು ಹಚ್ಚಿದ್ದಳು. ಬಳ್ಳಿಯು ಒಳ್ಳೇ ಭರದಿಂದ ಬೆಳೆದಿತ್ತು. ಒಂದು ದಿನ ನೆರೆಯವನೊಬ್ಬನು ಆ ಬಳ್ಳಿಯ ಸಮೀಪದಲ್ಲಿ ಒಂದು ಆಕಳವನ್ನು ಕಟ್ಟಿದ್ದನು. ಆಕಳು ಆ ಬಳ್ಳಿಯನ್ನು ತಿನ್ನಬೇಕೆಂದು ಹವಣಿಸಿ ಅವರ ಕಡೆಗೆ ಮೇಲಿಂದ ಮೇಲೆ ಹೋಗಹತ್ತಿತು; ಆದರೆ ಹಗ್ಗವು ಚಿಕ್ಕದಾದ್ದರಿಂದ ಅದರ ಹವಣಿಕೆಯು ವ್ಯರ್ಥವಾಯಿತು. ನಾಗಮಹಾಶಯರು ಇದನ್ನು ಕಂಡರು. "ತಿನ್ನು, ತಾಯಿ, ತಿನ್ನು" ಎಂದು ಅದರ ಹಗ್ಗವನ್ನು ಬಿಚ್ಚಿ ಬಿಟ್ಟರು. ಆಕಳು ತಿಂದು ತೃಪ್ತವಾಯಿತು. ದೀನದಯಾಲರು ಮಗನ ಈ ಕೆಲಸವನ್ನು ನೋಡಿ ಬೆದರಿದರು. ಆ ಮೇಲೆ ಸಿಟ್ಟಿಗೆದ್ದು ಕೇಳಿದರು "ಏನಯ್ಯಾ ನೀನಂತೂ ಈಗ ಏನೂ ಗಳಿಸುವದಿಲ್ಲ. ಇದ್ದುದನ್ನಾದರೂ ಸುಸೂತ್ರವಾಗಿ ಸಾಗಿಸಿಕೊಂಡು ಹೋಗುವದನ್ನು ಬಿಟ್ಟು ಅನಿಷ್ಟವನ್ನೇಕೆ ಮಾಡುವಿ?" ಎಂದು ಮತ್ತೆ ನುಡಿದರು. "ವೈದ್ಯಕಿಯನ್ನಂತೂ ಬಿಟ್ಟುಕೊಟ್ಟೆ. ಇನ್ನೇನು ತಿಂದು ಬಾಳುವಿ?"

ನಾಗಮಹಾಶಯ:— ಭಗವಂತನು ಎಲ್ಲವನ್ನು ನೋಡಿಕೊಳ್ಳುವನು. ಆ ಬಗ್ಗೆ ನೀವೇನೂ ಚಿಂತಿಸಬೇಕಾಗಿಲ್ಲ.

ದೀನದಯಾಲ:— ಅದು ನನಗೆ ಗೊತ್ತು. ಇನ್ನು ಮೇಲೆ ಬತ್ತ

ಲಿಯಾಗಿ ತಿರುಗಬೇಕಾಗುವದು. ಮತ್ತು ಕಪ್ಪೆಯನ್ನು ತಿಂದು ಜೀವಿಸಬೇಕಾಗುವದು.

ನಾಗಮಹಾಶಯರು ಎದುರು ನುಡಿಯಲಿಲ್ಲ. ಉಟ್ಟ ವಸ್ತ್ರವನ್ನು ಕಳೆದು, ಅಲ್ಲಿಯೇ ಅಂಗಳದಲ್ಲಿ ಸತ್ತು ಬಿದ್ದಿರುವ ಕಪ್ಪೆಯನ್ನು ತಿನ್ನುತ್ತ ತಂದೆಗೆಂದರು. "ತಮ್ಮ ಅಪ್ಪಣೆಯನ್ನು ಈಗಲೇ ಪಾಲಿಸಿದೆನು. ಹೊಟ್ಟೆ ಬಟ್ಟೆಯ ವಿಷಯವಾಗಿ ತಾವೇನೂ ಚಿಂತಿಸುವ ಕಾರಣವಿಲ್ಲ. ಸುಮ್ಮನೇ ತಾವು ಇಷ್ಟನಾಮ ಜಪದಲ್ಲಿ ತೊಡಗಿರಿ. ತಮ್ಮ ಕೈಕಾಲು ಬಿದ್ದು ಹೇಳುವೆನು; ಇನ್ನು ತಾವು ಪ್ರಪಂಚದ ವಿಚಾರ ಮಾಡಬೇಡಿರಿ." ಮಗನಿಗೆ ಹುಚ್ಚು ಹಿಡಿದಿದೆಯೆಂದು ಯೋಚಿಸಿ ದೀನದಯಾಲರು ಸೊಸೆಗೆ, ನಾಗಮಹಾಶಯರ ಮನಸ್ಸಿನ ವಿರುದ್ಧ ಏನೂ ಮಾಡಬಾರದೆಂದು ಹೇಳಿದರು.

ನಾಗಮಹಾಶಯರು ಊರಲ್ಲಿರುವಾಗ ದೀನದಯಾಲರ ಮನವು ಸಂಸಾರ ಚಿಂತೆಯಲ್ಲಿ ತೊಡಗಲು ಸಮಯವೇ ಇಲ್ಲದಂತೆ ಮಾಡಿಬಿಟ್ಟಿದ್ದರು. ಯಾವಾಗಲೂ ಶಾಸ್ತ್ರಪುರಾಣಗಳನ್ನೋದಿ ತಂದೆಗೆ ಕೇಳಹಚ್ಚುತ್ತಿದ್ದರು. ದೀನದಯಾಲರ ಕಡೆಗೆ ಹಾಳುಹರಟೆ ಹೊಡೆಯಲಿಕ್ಕೆ ಬರುವ ಜನರಿಗೆಲ್ಲ ಸಿಟ್ಟು ಮಾಡಿ ತಮ್ಮ ತಂದೆಯ ಕೂಡ ಹರಟೆಗಾಗಿ ಬರಬೇಡಿರೆಂದು ಸ್ಪಷ್ಟವಾಗಿ ಹೇಳಿದ್ದರು.

ನಾಗಮಹಾಶಯರು ಕಲಕತ್ತೆಗೆ ಬಂದಾಗ ಸುರೇಶ ಬಾಬುಗಳು ದೀನದಯಾಲರ ಸುದ್ದಿಯನ್ನು ಕೇಳಲು ನಾಗಮಹಾಶಯರು ಹೇಳಿದರು. "ಸಂಸಾರ ರೂಪೀ ಕಾಲಸರ್ಪವು ಒಮ್ಮೆ ಕಚ್ಚಿತೆಂದರೆ ಉಳಿಯುವದು ಸಾಧ್ಯವಿಲ್ಲ. ಮಹಾಮಾಯೆಯ ಅನುಗ್ರಹವಾಗದೇ ಏನೂ ಆಗದು" ಆ ಮೇಲೆ ಅವರು "ಜಯ ರಾಮಕೃಷ್ಣ! ಜಯ ರಾಮಕೃಷ್ಣ! ನನ್ನ ತಂದೆಯ ಮೇಲೆ ಕೃಪೆ ಮಾಡಿರಿ" ಎನ್ನುತ್ತ ಆಕುಲರಾಗಿ ಅಳಹತ್ತಿದರು. ಸ್ವಲ್ಪ ಶಾಂತರಾದ ಮೇಲೆ "ಈ ವರೆಗೂ ತಂದೆಯ ವಿಷಯಚಿಂತನೆಯು, ಈ ಹಾಳು ಸಂಸಾರದ ವಿಚಾರವು ತೊಲಗಿಲ್ಲ. ನಿರ್ಬಲರಾಗಿರುವರು. ತಾವೇ ಎಲ್ಲಿಗಾದರೂ ನಡೆಯುತ್ತ ಹೋಗುವದು ಆಗುವದಿಲ್ಲ; ಹೀಗಿದ್ದರೂ ಊರೊಳಗಿನ ಯಾವನಾದರೂ ಗೃಹಸ್ಥನು ಭೆಟ್ಟಿಗಾಗಿ ಬಂದರೆ

ಅವನ ಕೂಡ ಸಂಸಾರದ ಅನೇಕ ವಿಷಯಗಳ ಬಗ್ಗೆ ಮಾತನಾಡಹತ್ತುವರು.''

ಊರಿಂದ ತಿರುಗಿ ಬಂದ ಮೇಲೆ ನಾಗಮಹಾಶಯರೊಮ್ಮೆ ಶ್ರೀರಾಮಕೃಷ್ಣರಿಗೆ "ಈಶ್ವರನಿಗೆ ಸಂಪೂರ್ಣವಾಗಿ ಆತ್ಮಸಮರ್ಪಣೆ ಮಾಡುವದೇಕೆ ನನ್ನಿಂದಾಗಲೊಲ್ಲದು? ನಾನು ಮಾಡುವದೆಂಬ ಸ್ವಪ್ರಯತ್ನವು ಇನ್ನೂ ತಪ್ಪಲಿಲ್ಲವೇಕೆ? ಎಂದು ಕೇಳಿದರು. ಶ್ರೀರಾಮಕೃಷ್ಣರು ತಮ್ಮ ಶರೀರವನ್ನು ತೋರಿಸಿ "ಈ ಕಡೆಗೆ ಆಕರ್ಷಣೆಯಿದ್ದರೆ ತೀರಿತು. ಎಲ್ಲವೂ ಸರಿ ಹೋಗುವದು.'' ಎಂದು ನುಡಿದರು. ನಾಗಮಹಾಶಯರು ಹೇಳುತ್ತಿದ್ದರು. "ಶ್ರೀರಾಮಕೃಷ್ಣರ ಆಕಾಂಕ್ಷೆಯ ವಿರುದ್ಧ ಯಾರೂ ಏನೂ ಮಾಡುವದು ಸಾಧ್ಯವಿಲ್ಲ. ಅವರು ತಮ್ಮ ಇಚ್ಛೆಯಂತೆ ಮನುಷ್ಯನ ಮನದಲ್ಲಿ ಪ್ರವೃತ್ತಿಯನ್ನಾಗಲಿ ನಿವೃತ್ತಿಯನ್ನಾಗಲಿ ಉಂಟು ಮಾಡುತ್ತಿದ್ದರು. ಇದು ಮಾನವನಿಗೆ ಸಾಧ್ಯವಿದೆಯೋ?''

ನಾಗಮಹಾಶಯರ ತೀವ್ರ ವೈರಾಗ್ಯವನ್ನು ನೋಡಿ ಶ್ರೀರಾಮಕೃಷ್ಣರು ಮತ್ತೆ ಅವರಿಗೆ ಹೇಳಿದರು, "ನೀನು ಮನೆಯಲ್ಲಿಯೇ ಇರು. ನಿನ್ನ ಅನ್ನವಸ್ತ್ರದ ವಿಷಯವು ಅಂತೂ ಇಂತೂ ಸಾಗಿಹೋಗುವದು.''

ನಾಗಮಹಾಶಯರು— ಮನೆಯಲ್ಲಿ ಯಾವ ರೀತಿಯಾಗಿ ಇರಬೇಕು? ಪರರ ದುಃಖವನ್ನು ನೋಡಿ ಹೇಗೆ ಸುಮ್ಮನಿರಲು ಆಗುವದು?

ಶ್ರೀರಾಮಕೃಷ್ಣ— ನಿಜವಾಗಿಯೂ ಹೇಳುವೆನು, ನೀನು ಮನೆಯಲ್ಲಿದ್ದರೆ ನಿನಗೇನು ದೋಷ ತಟ್ಟುವದಿಲ್ಲ. ನಿನ್ನನ್ನು ನೋಡಿ ಜನರು ಬೆರಗಾಗುವರು.

ನಾಗಮಹಾಶಯರು— ಗೃಹಸ್ಥಾಶ್ರಮದಲ್ಲಿ ಹೇಗೆ ದಿನಗಳೆಯಬೇಕು.?

ಶ್ರೀರಾಮಕೃಷ್ಣ— ನೀನು ಮತ್ತೇನೂ ಮಾಡಬೇಕಾಗಿಲ್ಲ. ಕೇವಲ ಸಾಧುಗಳ ಸಹವಾಸ ಮಾಡು.

ನಾಗಮಹಾಶಯ— ನಾನು ಮೂಢ ಮನುಷ್ಯ; ಸಾಧುಗಳನ್ನು ಹೇಗೆ ಕಂಡು ಹಿಡಿಯಬೇಕು?

ಶ್ರೀರಾಮಕೃಷ್ಣ— ನೀನು ಸಾಧುಗಳನ್ನು ಹುಡುಕಬೇಕಾಗಿಲ್ಲ. ನೀನು ಸುಮ್ಮನೆ ಮನೆಯಲ್ಲಿರು. ನಿಜವಾದ ಸಾಧುಗಳೇ ನಿನ್ನನ್ನು ಹುಡುಕಿಕೊಂಡು ಬರುವರು.

ದಿನಗಳು ಕಳೆಯಹತ್ತಿದವು. ನಾಗಮಹಾಶಯರು ಯೋಚಿಸಿದರು. "ಸಂಸಾರದ ಕಾರ್ಯದಲ್ಲಿ ತೊಡಗಿರುವ ವರೆಗೆ ಶಾಂತಿಯು ದೊರಕುವದು ಅಸಾಧ್ಯ." ನೌಕರಿ ಬಿಟ್ಟು ರಣಜಿತನನ್ನೇ ತಮ್ಮ ಸ್ಥಾನದಲ್ಲಿ ನಿಯಮಿಸಿ ನಿಶ್ಚಿಂತರಾಗಿ ಭಗವಚ್ಚಿಂತನೆಯಲ್ಲಿ ಮಗ್ನರಾಗಬೇಕೆಂದು ನಿಶ್ಚಯಿಸಿದರು. ಅನುಕೂಲ ಸಮಯ ನೋಡಿ ಪಾಲಬಾಬುಗಳಿಗೆ ಈ ವಿಷಯವನ್ನು ತಿಳಿಸಿದರು. ಪಾಲಬಾಬುಗಳು ಅವರಿಗೆ "ಹೀಗಾದರೆ ನಿಮ್ಮ ಪ್ರಪಂಚ ಹೇಗೆ ಸಾಗಬೇಕು? ಎಂದು ಕೇಳಿದರು. ನಾಗಮಹಾಶಯರು ನುಡಿದರು. "ರಣಜಿತನು ದಯಾಪರವಶನಾಗಿ ಏನು ಕೊಡುವನೋ ಅದರಿಂದ ಹೇಗಾದರೂ ಸಾಗುವದು"

ನಾಗಮಹಾಶಯರ ಕಡೆಯಿಂದ ಇನ್ನು ಸಂಸಾರದ ಯಾವ ಕೆಲಸವೂ ಆಗುವದು ಅಸಂಭವವೆಂದೂ ತಮ್ಮಿಂದ ಪ್ರತಿಪಾಲಿತವಾದ ಪರಿವಾರವು ಅನ್ನ ವಸ್ತ್ರಗಳಿಲ್ಲದೇ ಕಷ್ಟಪಡಬಾರದೆಂದೂ ಯೋಚಿಸಿ ಪಾಲಬಾಬುಗಳು ರಣಜಿತನನ್ನು ಕರೆದು ಅವನಿಗೆ ತನ್ನ ಪ್ರಾಪ್ತಿಯ ಅರ್ಧವನ್ನು ನಾಗಮಹಾಶಯರಿಗೆ ಕೊಡಲು ಹೇಳಿ ಅವನನ್ನು ಆ ಕಾರ್ಯದಲ್ಲಿ ನಿಯಮಿಸಿದರು. ರಣಜಿತನು ನಾಗಮಹಾಶಯರ ಸ್ವಭಾವವನ್ನು ಅರಿತಿದ್ದನು. ಹತ್ತರ ಇದ್ದರೆ ಎಲ್ಲವನ್ನು ಖರ್ಚು ಮಾಡಬಹುದೆಂದು ತಿಳಿದು ಅವನು ಎಲ್ಲ ಹಣವನ್ನು ನಾಗಮಹಾಶಯರಿಗೆ ಒಮ್ಮೆಲೇ ಕೊಡುತ್ತಿದ್ದಿಲ್ಲ. ನಾಗಮಹಾಶಯರ ಮನೆಯ ಖರ್ಚಿಗೆ ಸಾಕಾಗಿ ಉಳಿದ ಹಣವನ್ನು ದೀನದಯಾಲರಿಗೆ ಕೊಟ್ಟು ಕಳಿಸುತ್ತಿದ್ದನು.

ಈ ಏರ್ಪಾಡಿನ ಸುದ್ದಿಯನ್ನು ಕೇಳಿ ಶ್ರೀರಾಮಕೃಷ್ಣರು ನುಡಿದರು. "ಇದು ಚೆನ್ನಾಯಿತು, ಚೆನ್ನಾಯಿತು!"

ಎಲ್ಲ ಚಿಂತೆ ಉಪಾಧಿಗಳಿಂದಲೂ ಮುಕ್ತರಾಗಿ ನಾಗಮಹಾಶಯರು ಧಾರ್ಮಿಕ ಸಾಧನೆಗಳಲ್ಲಿ ನಿಶ್ಚಿಂತ ಮನಸ್ಸಿನಿಂದ ಧುಮುಕಲು ಅನುಕೂ

ಲವಾಯಿತು; ಮತ್ತು ಅವರು ರಾಮಕೃಷ್ಣ ಪರಮಹಂಸರ ಕಡೆಗೆ ಆಗಿಂದಾಗ್ಗೆ ಹೋಗತೊಡಗಿದರು. ಆದಿತ್ಯವಾರ ಮತ್ತು ಹಬ್ಬ ಹುಣ್ಣಿವೆಯ ದಿನಗಳಲ್ಲಿ ರಾಮಕೃಷ್ಣರನ್ನು ಕಾಣಲಿಕ್ಕೆಂದು ದೊಡ್ಡ ಪ್ರತಿಷ್ಠಿತ ಜನರೂ ಅಧಿಕಾರಸ್ಥರೂ ಹೋಗುತ್ತಿದ್ದುದರಿಂದ, ಅಂಥ ದೊಡ್ಡವರ ಕೂಡ ಬೆರೆತು ಮಾತನಾಡಲು ತಮಗೆ ಯೋಗ್ಯತೆಯಿಲ್ಲೆಂದು ತಿಳಿದು ನಾಗಮಹಾಶಯರು ಆ ದಿನಗಳಲ್ಲಿ ಮಾತ್ರ ಅಲ್ಲಿಗೆ ಹೋಗುತ್ತಿದ್ದಿಲ್ಲ. ಆದರೆ ಈಗ ದಿನಾಲು ಅವರ ದರ್ಶನಕ್ಕೆ ಹೋಗತೊಡಗಿದ್ದರಿಂದ ಆ ಪ್ರತಿಷ್ಠಿತ ಜನರಲ್ಲನೇಕರ ಪರಿಚಯವು ನಾಗಮಹಾಶಯರಿಗೆ ಆಯಿತು

ಬಂಗಾಲದ ಶ್ರೇಷ್ಠ ನಟರೂ ನಾಟಕಕಾರರೂ ಎಂದು ಆ ಕಾಲದಲ್ಲಿ ವಿಖ್ಯಾತರಾದ ಗಿರೀಶಚಂದ್ರ ಘೋಷರು ಮತ್ತೀರ್ವರು ಗೃಹಸ್ಥರೊಡನೆ ಒಂದು ದಿನ ರಾತ್ರಿ ದಕ್ಷಿಣೇಶ್ವರಕ್ಕೆ ಹೋದರು. ಶ್ರೀರಾಮಕೃಷ್ಣರ ಮನೆಯನ್ನು ಪ್ರವೇಶಿಸಿ ಅವರು ನೋಡಿದರು. ಕೋಣೆಯ ಮೂಲೆಯಲ್ಲಿ, ಕೃತಾಂಜಲಿ ಬದ್ಧನಾಗಿ ಅತಿ ದೀನ, ಹೀನ ಭಾವದಿಂದ ಒಬ್ಬ ವ್ಯಕ್ತಿಯು ಕುಳಿತಿರುವನು. ಅವನ ಕಣ್ಣುಗಳು ನಕ್ಷತ್ರಗಳಂತೆ ಥಳಥಳ ಹೊಳೆಯುತ್ತಿವೆ! ಶ್ರೀರಾಮಕೃಷ್ಣರು ಗಿರೀಶಚಂದ್ರರಿಗೆ ಈ ವ್ಯಕ್ತಿಯ ಪರಿಚಯ ಮಾಡಿಕೊಟ್ಟರು. ಆ ಶುಭ ಕ್ಷಣದಲ್ಲಿ ಆದ ಪ್ರಥಮ ಪರಿಚಯದಿಂದಲೇ ಗಿರೀಶಚಂದ್ರ ಹಾಗೂ ನಾಗಮಹಾಶಯರಲ್ಲಿ ಅತ್ಯಂತ ಸ್ನೇಹವು ಬೆಳೆಯಿತು.

ನಾಗಮಹಾಶಯರು ಬಹುಶಃ ಮಧ್ಯಾಹ್ನದ ನಂತರ ಗಂಗಾ ತೀರದಲ್ಲಿ ತಿರುಗಾಡುತ್ತಿದ್ದರು. ಹೀಗೆಯೇ ಒಂದು ದಿನ ಅಲೆಯುತ್ತಿದ್ದಾಗ, ಸೌಮ್ಯ ಮೂರ್ತಿಯಾದ ಒಬ್ಬ ಯುವಕನು ಅಲ್ಲಿ ಸಂಚರಿಸುತ್ತಿರುವದನ್ನು ಅವರು ಕಂಡರು. ಈ ಯುವಕನು ಬಹುಶಃ ಶ್ರೀರಾಮಕೃಷ್ಣರ ಭಕ್ತನಿರಬೇಕೆಂದು ನಾಗಮಹಾಶಯರ ಭಾವನೆಯಾಯಿತು. ಆತನೊಡನೆ ನಡೆದ ಮಾತು ಕತೆಯಿಂದ ತಮ್ಮ ಅನುಮಾನವು ಸತ್ಯವೆಂದು ನಾಗಮಹಾಶಯರಿಗೆ ಗೊತ್ತಾಯಿತು. ಈ ಯುವಕನೆಂದರೆ ಸ್ವಾಮಿ ತುರಿಯಾನಂದ (ಆಗ ಹರಿನಾಥ). ಸ್ವಾಮಿ ತುರಿಯಾನಂದರ ಶರೀರ ಬೃಹ

ಚರ್ಯೆಯನ್ನು ವರ್ಣಿಸಿ ನಾಗಮಹಾಶಯರು, "ಹೀಗಿರದಿದ್ದರೆ ಶ್ರೀರಾಮಕೃಷ್ಣರ ಕೃಪಾಪಾತ್ರರಾಗುವದು ಸಾಧ್ಯವಿತ್ತೇ?" ಎಂದು ನುಡಿಯುತ್ತಿದ್ದರು.

ನಾಗಮಹಾಶಯರು ಅಂಗಿ ತೊಟ್ಟುಕೊಳ್ಳುವದನ್ನೂ ಪಾದತ್ರಾಣಗಳನ್ನು ಮೆಟ್ಟುವದನ್ನೂ ಬಿಟ್ಟು ಬಿಟ್ಟರು. ಹನ್ನೆರಡು ತಿಂಗಳೂ ಭಾಗಲಪುರದ ಒಂದು ಕಂಬಳಿಯನ್ನು ಹೊದ್ದುಕೊಂಡಿರುತ್ತಿದ್ದರು. ಆಹಾರದ ವಿಷಯವಾಗಿಯಂತೂ ಶ್ರೀರಾಮಕೃಷ್ಣರು ಅವರಿಗೆ, "ಈಶ್ವರೇಚ್ಛೆಯಿಂದ ನಿನಗೇನು ಅನ್ನ ದೊರಕುವದೋ ಅದನ್ನೇ ತಿನ್ನು; ವಿಧಿನಿಷೇಧಗಳ ಬಗ್ಗೆ ನೀನು ಗಮನ ಕೊಡಬೇಕಾಗಿಲ್ಲ; ಅದರಿಂದ ನಿನಗೇನೂ ದೋಷ ತಗಲದು." ಎಂದು ಹೇಳಿ ಬಿಟ್ಟಿದ್ದರು. ಹೀಗಾಗಿ ಅವರು ಆಹಾರದ ವಿಷಯವಾಗಿ ವಿಶೇಷ ನಿರ್ಬಂಧವನ್ನಿಟ್ಟುಕೊಂಡಿದ್ದಿಲ್ಲ. ಯಾವಾಗ ಏನು ದೊರೆಯುತ್ತಿತ್ತೋ ಅದನ್ನೇ ತಿನ್ನುತ್ತಿದ್ದರು. ಮೇಲಾಗಿ ಅವರು ಉಣ್ಣುತಿದ್ದುದಾದರೂ ತೀರ ಕಡಿಮೆ. ಸಾಧಾರಣವಾಗಿ ಸಂಜೆಯ ಮುಂದೆ ಎರಡು ತುತ್ತು ಅನ್ನ ಉಣ್ಣುತ್ತಿದ್ದರು. "ದೇಹವಿರುವವರೆಗೆ ಕರ ಕೊಡಬೇಕಲ್ಲವೆ?" ಎಂದು ಅವರು ನುಡಿಯುತ್ತಿದ್ದರು. ಜಿಹ್ವೇಂದ್ರಿಯದ ಲಾಲಸೆಯನ್ನು ತಗ್ಗಿಸಬೇಕೆಂದು ಅವರು ತಾವು ತಿನ್ನುವ ಸಾಮಾನುಗಳಲ್ಲಿ ಉಪ್ಪು ಬೆರಿಸುತ್ತಿದ್ದಿಲ್ಲ- ವ್ಯಂಜನ ಪದಾರ್ಥಗಳನ್ನು ಮುಟ್ಟುತ್ತಿದ್ದಿಲ್ಲ. "ನಾಲಿಗೆಯ ಸುಖೇಚ್ಛೆಯನ್ನು ಬೆಳೆಯಗೊಡಬಾರದೆಂದು" ಅವರು ಹೇಳುತ್ತಿದ್ದರು.

ನಾಗಮಹಾಶಯರು ತಮ್ಮ ಅರ್ಧ ಮನೆಯನ್ನು ಬಾಡಿಗೆಯಿಂದ ಕೊಟ್ಟಿದ್ದರು ಮೇದಿನೀ ಪುರದ ಕೀರ್ತಿವಾಸನೆಂಬ ಗೃಹಸ್ಥನು ತನ್ನ ಪರಿವಾರದೊಡನೆ ಆ ಮನೆಯಲ್ಲಿರುತ್ತಿದ್ದನು. ಅವನು ಅಕ್ಕಿಯ ವ್ಯಾಪಾರವನ್ನು ಮಾಡುತ್ತಿದ್ದನು. ಆದ್ದರಿಂದ ಮನೆಯಲ್ಲಿ ಎಷ್ಟೋ ಸಾರೆ ತೌಡಿನ ರಾಶಿ ಬಿಟ್ಟಿರುತ್ತಿತ್ತು. ಈ ತೌಡು ತಿಂದು ಇರಬೇಕೆಂದು ನಾಗಮಹಾಶಯರ ಮನಸಿನಲ್ಲಿ ಒಮ್ಮೆ ವಿಚಾರ ಬಂದಿತು. "ಏನಾದರೂ ತಿಂದು ಹೊಟ್ಟೆ ದುಕಿದರೆ ತೀರಿತು, ಸಿಹಿ ಕಹಿಯನ್ನು ನೋಡುವದೇಕೆ?" ಎಂದು

ಯೋಚಿಸಿ ಆ ತೌಡನ್ನು ಗಂಗಾಜಲದಲ್ಲಿ ಕಲೆಸಿ ಉಪ್ಪು ಅಥವಾ ಬೆಲ್ಲ ಏನನ್ನೂ ಬೆರೆಸದೆ ಹಾಗೆಯೇ ತಿಂದು ಬಿಟ್ಟರು. ಹೀಗೆ ಎರಡು ದಿನ ತಿಂದ ಮೇಲೆ ಕೀರ್ತಿವಾಸನಿಗೆ ಈ ಸುದ್ದಿಯು ತಿಳಿಯಲಾಗಿ ಅವನು ಎಲ್ಲ ತೌಡನ್ನೂ ಮಾರಿಬಿಟ್ಟನು; ಹಾಗೂ, ಅಂದಿನಿಂದ ಮನೆಯಲ್ಲಿ ತೌಡು ಕೂಡಿಬೀಳದಂತೆ ಯೋಜನೆ ಮಾಡಿದನು. "ತೌಡು ತಿಂದದರಿಂದ ನನ ಗೇನೂ ಬಾಧೆಯಾಗಲಿಲ್ಲ; ಪ್ರೈಯ್ಯು ಮತ್ತಿಷ್ಟು ಹಸುರಾಗಿತ್ತು! ಹಗ ಲಿರುಳೂ ಊಟದ ಚಿಂತೆಯಲ್ಲಿ ಮಗ್ನರಾದರೆ ಭಗವಚ್ಚಿಂತನೆಗೆ ಅವಕಾಶ ಹೇಗೆ ದೊರೆಯುವದು?" ಎಂದು ಅವರು ಅನ್ನುತ್ತಿದ್ದರು. ನಾಗಮ ಹಾಶಯರು ಮಹಾ ಸಾಧುಗಳೆಂದು ಕೀರ್ತಿವಾಸನಿಗ ಅವರ ಮೇಲೆ ಒಳ್ಳೆ ಶ್ರದ್ಧೆಯಿತ್ತು. ಯಾವನಾದರೂ ಭಿಕ್ಷುಕನು ನಾಗಮಹಾಶಯರ ಮನೆಗೆ ಬಂದಾಗ ಅವರ ಮನೆಯಲ್ಲಿ ಕಾಳು ಕಡಿಯೇನಾದರೂ ಇರದಿದ್ದರೆ ತಾನು ಅವರಿಗೆ ಸಹಾಯ ಮಾಡುತ್ತಿದ್ದನು. ನಾಗಮಹಾಶಯರ ಮನೆಯು ಮುಖ್ಯ ಬೀದಿಯಲ್ಲಿದ್ದುದರಿಂದ ದಿನಾಲು ಅನೇಕ ಭಿಕ್ಷುಕರು ಬರುತ್ತಿದ್ದರು. ಆದರೆ ಯಾರೂ ಬರಿಗೈಯಿಂದ ಹೋಗುತ್ತಿದ್ದಿಲ್ಲ. ಒಂದು ದಿನ ಒಬ್ಬ ವೃದ್ಧ ವೈಷ್ಣವನು ಭಿಕ್ಷೆಗಾಗಿ ಅವರ ಮನೆಗೆ ಬಂದನು. ಆಗ ಮುಷ್ಟಿ ಅಕ್ಕಿಯ ಹೊರತಾಗಿ ಮನೆಯಲ್ಲಿ ಏನೂ ಇದ್ದಿಲ್ಲ. ಕೀರ್ತಿವಾಸನೂ ಆಗ ಮನೆಯಲ್ಲಿದ್ದಿಲ್ಲ. ನಾಗಮಹಾಶಯರು ಆ ಭಿಕ್ಷುಕನ ಕಡೆಗೆ ಬಂದು ಅತಿ ವಿನೀತ ಭಾವದಿಂದ "ಇಂದು ನಮ್ಮ ಮನೆಯಲ್ಲೇನೂ ಇಲ್ಲ; ನಾಲ್ಕು ಕಾಳು ಅಕ್ಕಿ ಮಾತ್ರ ಇವೆ. ಹಾಕಿಸಿಕೊಳ್ಳಬಹುದಲ್ಲವೇ?" ಎಂದು ಕೇಳಿದರು. ವೃದ್ಧ ವೈಷ್ಣವನು ಅವರ ಶ್ರದ್ಧೆಯನ್ನು ನೋಡಿ ಪರಮ ಪ್ರೀತನಾಗಿ ಆ ಅಕ್ಕಿಯನ್ನು ಹಾಕಿಸಿಕೊಂಡು ಹೋದನು.

ಸುರೇಶ ಬಾಬುಗಳು ಹೀಗೆ ಹೇಳುತ್ತಾರೆ:— "ಮೂವತ್ತು ವರ್ಷ ಗಳಿಂದ ನನಗೆ ನಾಗಮಹಾಶಯರ ಪರಿಚಯವಿದೆ. ಆದರೆ ಅವರು ತಿಂಡಿ ತಿನಸುಗಳನ್ನು ತಿನ್ನುವದನ್ನೆಂದೂ ನೋಡಿಲ್ಲ. ದೇವರ ಪ್ರಸಾದ ಹಾಗೂ ಶ್ರೀರಾಮಕೃಷ್ಣರ ಮಹೋತ್ಸವದ ಪ್ರಸಾದವಾಗಿದ್ದರೆ ಮಾತ್ರ ಅವರು ಸಂದೇಶ ಮೊದಲಾದ ಮಿಠಾಯಿಗಳನ್ನು ತಿನ್ನುತ್ತಿದ್ದರು. ತಾವು ಈ ರೀತಿ

ಯಾಗಿ ಬಹು ಕಷ್ಟಗಳನ್ನಿಟ್ಟುಕೊಂಡಿದ್ದರೂ ಎಡೆಡನೆಯುವವರನ್ನು ವಿವಿಧ ಪಕ್ವಾನ್ನಗಳಿಂದ ತಣಿಸುವುದರಲ್ಲಿ ಅವರು ಹಿಂದೆ ಮುಂದೆ ನೋಡುತ್ತಿದ್ದಿಲ್ಲ.

ನಾಗಮಹಾಶಯರು ಪ್ರಾಪಂಚಿಕ ವಿಷಯಗಳ ಬಗ್ಗೆ ಎಂದೂ ಮಾತಾಡುತ್ತಿದ್ದಿಲ್ಲ. ಯಾರಾದರೂ ಅಂಥ ಮಾತು ತೆಗೆದರೆ ಯುಕ್ತಿಯಿಂದ ಅದನ್ನು ನಿಲ್ಲಿಸುತ್ತಿದ್ದರು. ಅವರಿಗೆ "ಜಯರಾಮಕೃಷ್ಣ, ಇದೇನು ಹಾಳು ಕತೆ ನಡಿಸಿರುವಿರಿ? ಶ್ರೀರಾಮಕೃಷ್ಣರ ನಾಮಸ್ಮರಣೆ ಮಾಡಿರಿ. ಜಗನ್ಮಾತೆಯ ನಾಮಸ್ಮರಣೆ ಮಾಡಿರಿ' ಎಂದು ಹೇಳುತ್ತಿದ್ದರು. ಏನಾದರೊಂದು ಕಾರಣದಿಂದ ಯಾರ ಮೇಲಾದರೂ ಸಿಟ್ಟು ಅಥವಾ ತಿರಸ್ಕಾರ ಉಂಟಾದರೆ, ಹತ್ತರ ಏನು ಸಿಗುತ್ತಿತ್ತೋ ಅದರಿಂದಲೇ ತಮ್ಮ ತಲೆಯನ್ನು ಘಟ್ಟಿಸಿಕೊಳ್ಳುತ್ತಿದ್ದರು. ಅವರು ಯಾರನ್ನೂ ನಿಂದಿಸುತ್ತಿದ್ದಿಲ್ಲ. ಯಾರ ವಿರುದ್ಧವಾಗಿಯೂ ಏನೂ ಮಾತಾಡುತ್ತಿದ್ದಿಲ್ಲ. ಒಮ್ಮೆ ತಪ್ಪಿ ಯಾವನೋ ಒಬ್ಬನ ವಿರುದ್ಧವಾಗಿ ಅವರ ಬಾಯಿಂದ ಮಾತು ಹೊರಬಿತ್ತು. ಕೂಡಲೇ ಅಲ್ಲಿಯೇ ಬಿದ್ದಿರುವ ಒಂದು ದೊಡ್ಡ ಕಲ್ಲನ್ನು ತೆಗೆದುಕೊಂಡವರೇ ತಲೆಗೆ ಹೊಡೆದುಕೊಳ್ಳಹತ್ತಿದರು. ತಲೆ ಒಡೆದು ರಕ್ತ ಹರಿಯುತ್ತಿತ್ತು. ಆ ಗಾಯ ಮಾಯಲು ಒಂದು ತಿಂಗಳು ಹಿಡಿಯಿತು. "ನೆಟ್ಟಗಾಯಿತು; ಅಪರಾಧಕ್ಕೆ ತಕ್ಕ ದಂಡನೆಯಾಗುವದು ಅವಶ್ಯ" ವೆಂದು ಅವರು ಹೇಳುತ್ತಿದ್ದರು.

ಷಡ್ರಿಪುಗಳ ಜಯಕ್ಕಾಗಿ ಅವರು ದೀರ್ಘಲಂಘನವನ್ನು ಮಾಡುತ್ತಿದ್ದರು. ಐದಾರು ದಿನಗಳ ವರಗೆ ನೀರು ಸಹ ಕುಡಿಯುತ್ತಿದ್ದಿಲ್ಲ! ಹೀಗೊಮ್ಮೆ ದೀರ್ಘವಾದ ಉಪವಾಸವನ್ನು ಮಾಡಿ ನಾಗಮಹಾಶಯರು ಅಡಿಗೆ ಮಾಡಲು ಕುಳಿತಿರುವಾಗ ಸುರೇಶಚಂದ್ರರು ಅವರ ಕಡೆಗೆ ಬಂದರು. ಅವರನ್ನು ನೋಡಿ ನಾಗಮಹಾಶಯರ ಮನದಲ್ಲಿ ಏನು ವಿರೂಪಭಾವನೆಯುಂಟಾಯಿತೊ ಏನೋ "ನನ್ನ ಅಪರಾಧವಿನ್ನೂ ದೂರಾಗಲಿಲ್ಲೆ"ಂದು ಅಂದು ಅಡಿಗೆಯ ಪಾತ್ರೆಯನ್ನು ಒಡೆದು ಚಲ್ಲಿಬಿಟ್ಟರು. ಸುರೇಶಬಾಬುಗಳಿಗೆ ನಮಸ್ಕಾರ ಮಾಡಹತ್ತಿದರು. ಆ ದಿನ ಅವರು ಊಟಮಾಡಲಿಲ್ಲ. ಒಂದು ದುಡ್ಡಿನ ಚುರಮುರಿ ಬತ್ತಾಸಗಳನ್ನು ತಿಂದು ಮಲಗಿದರು.

ತಲೆಶೂಲೆಯ ಮೂಲಕ ನಾಗಮಹಾಶಯರು ಸ್ನಾನ ಮಾಡುವದನ್ನು ಬಿಡಬೇಕಾಯಿತು. ಆಗಿನಿಂದ ಕಡೆಯ ಇಪ್ಪತ್ತು ವರ್ಷಗಳ ವರೆಗೆ ಅವರು ಸ್ನಾನವನ್ನೇ ಮಾಡಲಿಲ್ಲ. ಹೀಗಾಗಿ ಅವರ ದೇಹವು ಬಹು ರುಕ್ಷವಾಗಿ ಕಾಣುತ್ತಿತ್ತು. ಕಠೋರ ಸಾಧನೆಗಳಿಂದ ಅವರ ದೀನತೆಯು ಅಂಗಪ್ರತ್ಯಂಗಗಳಿಂದ ಹೊರಸೂಸುತ್ತಿತ್ತು. ನಾಗಮಹಾಶಯರು ಅಹಂಕಾರವು ತಲೆಯೆತ್ತದಂತೆ ಮಾಡಿಬಿಟ್ಟಿದ್ದರೆಂದು, ಗಿರೀಶಚಂದ್ರರು ಹೇಳುತ್ತಾರೆ

ದಾರಿಯಲ್ಲಿ ನಡೆಯುತ್ತಿದ್ದಾಗ್ಗೆ ನಾಗಮಹಾಶಯರು ಎಂದೂ ಮುಂದೆ ಹೋಗುತ್ತಿದ್ದಿಲ್ಲ. ಅತಿ ಸಾಮಾನ್ಯ ಮನುಷ್ಯನಿಗೂ ಸಹ ದಾರೀ ಬಿಟ್ಟು ಅವನ ಹಿಂದಿನಿಂದ ಹೋಗುತ್ತಿದ್ದರು. ಅವರು ಯಾರ ನೆರಳನ್ನೂ ತುಳಿಯುತ್ತಿದ್ದಿಲ್ಲ. ಯಾರಾದರೂ ತಂಬಾಕನ್ನು ಕೊಟ್ಟರೆ ತಾವು ಸೇದುತ್ತಿದ್ದಿಲ್ಲ. ಆದರೆ ಎರಡನೆಯವರಿಗೆ ಚಿಲಿಮೆಯನ್ನು ಸಜ್ಜುಗೊಳಿಸಿ ಸೇದಲು ಕೊಡುತ್ತಿದ್ದರು. ತಮ್ಮ ಒಲವಿನ ಜನರು ಬಂದರಂತೂ ಒಂದರ ಮೇಲೊಂದು ಚಿಲಿಮೆಯನ್ನು ಅವರಿಗೆ ಕೊಡುತ್ತಿದ್ದರು. ಹಾಗೂ ತಾವೂ ಸೇದುತ್ತಿದ್ದರು. ಸಾಕು ಸಾಕೆಂದರೂ ಬಿಡದೆ ಪುನಃ ಪುನಃ ಚಿಲಿಮೆಗಳನ್ನು ಕೊಟ್ಟು ಸೇದಲು ಆಗ್ರಹಪಡಿಸುತ್ತಿದ್ದರು. "ನಾನು ಕೀಳ ಮನುಷ್ಯ ನನ್ನಿಂದ ಏನೂ ಆಗದು. ತಮ್ಮಂಥವರ ಸೇವೆ ಮಾಡಿ ಕೃಪಾಲಾಭ ಹೊಂದಿದರೆ ಧನ್ಯನಾಗುವೆನು" ಎಂದು ನಾಗಮಹಾಶಯರು ನುಡಿಯುತ್ತಿದ್ದರು.

ನಾಗಮಹಾಶಯರು ಭಕ್ತಿಮಾರ್ಗದ ಸಾಧಕರಾಗಿದ್ದರೂ ವೈಧೀಭಕ್ತಿಯ ಕಡೆಗೆ ವಿಶೇಷ ಅನುರಾಗವುಳ್ಳವರಾಗಿದ್ದರು. ತಾವು ಹೇಗೆ ಉಗ್ರ ಸಾಧನೆಯನ್ನು ಮಾಡುತ್ತಿದ್ದರೋ ಹಾಗೆಯೇ ಇತರರಿಗೂ ಸಾಧನೆ ಮಾಡಲು ಹೇಳುತ್ತಿದ್ದರು. ಗಿರೀಶ ಹಾಗೂ ನಾಗಮಹಾಶಯರ ನಡುವೆ ಈ ಬಗ್ಗೆ ವಾದವಿವಾದಗಳಾಗುತ್ತಿದ್ದವು. ನಾಗಮಹಾಶಯರ ಕೂಡ ಏಳೆಂಟು ದಿನ ದಕ್ಷಿಣೇಶ್ವರಕ್ಕೆ ಹೋಗಿ ಬಂದ ಮೇಲೆ ಸುರೇಶಬಾಬುಗಳಿಗೆ ತಮ್ಮ ಕೆಲಸಕ್ಕಾಗಿ ಕ್ವೇಟಾಕ್ಕೆ ಹೋಗುವ ಪ್ರಸಂಗ ಬಂದಿತು. ಅಲ್ಲಿಗೆ ಹೋ

ಗುವ ಮೊದಲು ಶ್ರೀರಾಮಕೃಷ್ಣರಿಂದ ದೀಕ್ಷೆ ಹೊಂದಲು ಹಾಗೂ ಸಾಧನೆಯ ವಿಷಯವಾಗಿ ಉಪದೇಶ ಪಡೆಯಲು, ಸುರೇಶಬಾಬುಗಳಿಗೆ ನಾಗಮಹಾಶಯರು ಎಡೆಬಿಡದೆ ಗಂಟುಬಿದ್ದಿದ್ದರು. ಮಂತ್ರದಲ್ಲಿ ಆಗ ಸುರೇಶಚಂದ್ರರಿಗೆ ವಿಶ್ವಾಸವಿದ್ದಿಲ್ಲ. ಆದ್ದರಿಂದ ಅವರು ನಾಗಮಹಾಶಯರೊಡನೆ ಎದುರು ವಾದಿಸುತ್ತಿದ್ದರು. ಕಡೆಗೆ ಶ್ರೀರಾಮಕೃಷ್ಣರ ಸಲಹೆಯಂತೆ ಮಾಡಬೇಕೆಂದು ಗೊತ್ತು ಮಾಡಿದರು. ಮರುದಿನ ಇಬ್ಬರೂ ದಕ್ಷಿಣೇಶ್ವರಕ್ಕೆ ಹೋದರು. ಹೋದ ಕೂಡಲೇ ನಾಗಮಹಾಶಯರು ಸುರೇಶಚಂದ್ರರ ದೀಕ್ಷೆಯ ಪ್ರಸ್ತಾಪವನ್ನೆತ್ತಿದರು. ಶ್ರೀರಾಮಕೃಷ್ಣರು "ಈ ವಿಚಾರವು ಬಹು ಯೋಗ್ಯವಾಗಿದೆ. ದೀಕ್ಷೆ ಹೊಂದಿದ ಬಳಿಕ ಸಾಧನೆ ಮಾಡಬೇಕು. ಇದಕ್ಕೆ ನೀನೇಕೆ ಒಪ್ಪುವದಿಲ್ಲ?'' ಎಂದು ಸುರೇಶಚಂದ್ರರಿಗೆ ಕೇಳಿದರು. "ಮಂತ್ರದಲ್ಲಿ ನನಗೆ ಶ್ರದ್ಧೆಯಿಲ್ಲ''ಎಂದು ಸುರೇಶಚಂದ್ರರು ನುಡಿದರು. ಆ ಮೇಲೆ ಶ್ರೀರಾಮಕೃಷ್ಣರು ನಾಗಮಹಾಶಯರಿಗೆ "ಇವನಿಗೀಗ ದೀಕ್ಷೆಯು ಅವಶ್ಯಕತೆಯೆನಿಸುವದಿಲ್ಲ. ಆಗಲಿ. ಮುಂದೆ ಅವನು ಹಾತೊರೆಯುವನು'' ಎಂದು ಹೇಳಿದರು.

ಕೆಲವು ದಿನ ಕ್ವೇಟಾದಲ್ಲಿ ವಾಸವಾದ ಮೇಲೆ ಸುರೇಶಚಂದ್ರರು ದೀಕ್ಷಾಗ್ರಹಣಕ್ಕಾಗಿ ಹಂಬಲಿಸಹತ್ತಿದರು. ಕಲಕತ್ತೆಗೆ ಹೋಗಿ ಗುರುದೇವನಿಂದ ದೀಕ್ಷೆ ಹೊಂದಬೇಕೆಂದು ನಿಶ್ಚಯಿಸಿದರು. ಆದರೆ ಅವರು ಕಲಕತ್ತೆಗೆ ಬಂದಾಗ್ಗೆ ಶ್ರೀರಾಮಕೃಷ್ಣರ ಲೀಲಾ ಸಮಯವು ಮುಗಿಯಲಿಕ್ಕೆ ಬಂದಿತ್ತು. ಅನುಕೂಲ ಸಮಯವಿದ್ದಾಗ್ಗೆ ನಾಗಮಹಾಶಯರ ಮಾತು ಲಕ್ಷಿಸಲಿಲ್ಲವೆಂದು ಅವರು ಬಹು ವಿಷಾದಪಡಹತ್ತಿದರು. ಶ್ರೀರಾಮಕೃಷ್ಣರು ಸ್ವಸ್ವರೂಪ ಸಂವರಣ ಮಾಡಿದ ಮೇಲಂತೂ ಅವರು ಹುಚ್ಚರಂತಾದರು. ರಾತ್ರಿ ಗಂಗಾತೀರಕ್ಕೆ ಹೋಗಿ ಪತಿತಪಾವನೆಯಾದ ಜಾನ್ಹವಿಯೆದುರಿಗೆ ತಮ್ಮ ದುಃಖವನ್ನು ಹೇಳಿಕೊಳ್ಳುತ್ತಿದ್ದರು ಒಂದು ದಿನವಂತೂ ಅವರು ಅಲ್ಲಿಯೇ ಗಟ್ಟಿಯಾಗಿ ಕುಳಿತುಕೊಂಡರು. ಇರುಳು ಕಳೆಯುತ್ತಿರುವ ಸಮಯದಲ್ಲಿ, ಶ್ರೀರಾಮಕೃಷ್ಣರು ನಡು ನದಿಯೊಳಗಿಂದೆದ್ದು ತಮ್ಮ ಕಡೆಗೆ ಬರುತ್ತಿರುವುದನ್ನು ನೋಡಿದರು! ಸುರೇಶಚಂದ್ರ

ರಿಗೆ ಅತ್ಯಂತ ವಿಸ್ಮಯವಾಯಿತು ಶ್ರೀರಾಮಕೃಷ್ಣರು ಅವರ ಬಳಿಗೆ ಬಂದು ಕಿವಿಯಲ್ಲಿ ಬೀಜಮಂತ್ರವನ್ನು ಸುರಿದರು. ಆದರೆ ಸುರೇಶಚಂದ್ರರು ಅವರ ಪಾದಧೂಲಿಯನ್ನು ತೆಗೆದುಕೊಳ್ಳಲು ಹೋಗುವಷ್ಟರಲ್ಲಿಯೇ ಶ್ರೀರಾಮಕೃಷ್ಣರು ಅಂತರ್ಧಾನ ಹೊಂದಿದರು.

ಹೀಗೆ ನಾಲ್ಕು ವರ್ಷಗಳು ಗತಿಸಿದವು. ಶ್ರೀರಾಮಕೃಷ್ಣರ ಲೀಲಾವಸಾನದ ಸಮಯವು ಸಮೀಪಿಸಿತು. ದಕ್ಷಿಣೇಶ್ವರದ ಆ ಆನಂದದ ಸಂತೆಯು ಮುರಿಯಿತು. ಕಲಕತ್ತೆಯ ಉತ್ತರದಲ್ಲಿರುವ ಕಾಶೀಪುರದ ಉಪವನದಲ್ಲಿ ಶ್ರೀರಾಮಕೃಷ್ಣರು ರುಗ್ಣಶಯ್ಯೆಯ ಮೇಲೆ ಮಲಗಿರುವರು. ಇನ್ನು ತಡವಿಲ್ಲೆಂದು ನಾಗಮಹಾಶಯರಿಗೆ ತಿಳಿಯಿತು. ಶ್ರೀರಾಮಕೃಷ್ಣರ ಬಳಲಿಕೆಯನ್ನು ನೋಡಲಾರದೆ ಅವರ ಕಡೆಗೆ ಹೋಗುವಿಕೆಯನ್ನು ನಾಗಮಹಾಶಯರು ಕಡಿಮೆ ಮಾಡಿದರು. "ಶ್ರೀರಾಮಕೃಷ್ಣರ ರೋಗಯಂತ್ರಣೆಯನ್ನು ನೋಡಿ ನನಗೆ ಸಹಿಸುವದಾಗುವದಿಲ್ಲ. ನೋಡಿ ನನ್ನೆದೆ ಕರಗಿ ನೀರಾಗುವದು. ಗುರುದೇವನು ಸ್ವೇಚ್ಛೆಯಿಂದಲೇ ತನ್ನ ದೇಹದಲ್ಲಿ ರೋಗವನ್ನು ಬರಮಾಡಿಕೊಂಡದ್ದರಿಂದ ಹಾಗೂ ನೋವು ಕಳೆಯುವದಾಗುವದಿಲ್ಲವೆಂದ ಮೇಲೆ ಅವನ ಕಡೆಗೆ ಮೇಲಿಂದ ಮೇಲೆ ಹೋಗುವದು ಅನುಚಿತವೆಂದು ಭಾವಿಸಿದೆನು. ಏನೋ ಯಾವಾಗಲಾದರೊಮ್ಮೆ ಅವನ ದರ್ಶನಕ್ಕೆ ಹೋಗುತ್ತಿದ್ದೆನೆಂ''ದು ನಾಗಮಹಾಶಯರು ನುಡಿಯುತ್ತಿದ್ದರು ಮೈಯೆಲ್ಲ ಹಗಲಿರುಳೂ ಉರಿಯುತ್ತಿದ್ದಾಗ ಶ್ರೀರಾಮಕೃಷ್ಣರೊಂದು ದಿನ ನಾಗಮಹಾಶಯರನ್ನು ಕಂಡು, "ಬಾ ಬೇಗ ಬಾ. ನನ್ನ ಮೈಗೆ ಹತ್ತಿಕೊಂಡು ಕೂಡು. ನಿನ್ನ ಶೀತಲ ಸ್ಪರ್ಶದಿಂದ ನನಗೆಷ್ಟೋ ಸಮಾಧಾನವೆನಿಸುವದು'' ಎಂದು ನಾಗಮಹಾಶಯರನ್ನು ಎಷ್ಟೋ ಹೊತ್ತಿನವರೆಗೆ ಆಲಿಂಗಿಸಿಕೊಂಡಿದ್ದರು.

ಸುರೇಶಬಾಬುರವರು ಕ್ವೇಟಾದಿಂದ ಬಂದ ಮೇಲೆ ಶ್ರೀರಾಮಕೃಷ್ಣರನ್ನು ಕಾಣಲು ಹೋದಾಗ ಶ್ರೀರಾಮಕೃಷ್ಣರು ಅವರಿಗೆ, "ಡಾಕ್ಟರನೆಲ್ಲಿರುವನು? ಅವನೊಳ್ಳೇ ಪ್ರವೀಣನಿರುವನಲ್ಲವೇ? ಅವನಿಗೊಂದು ದಿನ ಇಲ್ಲಿಗೆ ಬರಹೇಳು'' ಎಂದರು. ಸುರೇಶರು ಬಂದು ನಾಗಮಹಾಶಯರಿಗೆ

ಇದನ್ನು ತಿಳಿಸಿದರು. ನಾಗಮಹಾಶಯರು ಆ ಪ್ರಕಾರ ಕಾಶೀಪುರಕ್ಕೆ ಹೋಗಲು ಶ್ರೀರಾಮಕೃಷ್ಣರು ಅವರನ್ನು ಕಂಡು, "ಬಂದೆಯಾ, ಚೆನ್ನಾಯಿತು. ನೋಡು ಡಾಕ್ಟರರು, ವೈದ್ಯರಾಜರು ಎಲ್ಲರೂ ತಮ್ಮ ಕೈನಿಂತಿತೆಂದು ಹೇಳಿದರು. ನಿನಗೇನಾದರೂ ಔಷಧ ಗೊತ್ತಿದ್ದರೆ ನನ್ನ ರೋಗವನ್ನು ಗುಣ ಮಾಡುವದು ಸಾಧ್ಯವಿದೆಯೋ?'' ಎಂದು ಕೇಳಿದರು. ನಾಗಮಹಾಶಯರು ನತಮುಖರಾಗಿ ತುಸು ಹೊತ್ತು ಯೋಚಿಸಿ ಶ್ರೀರಾಮಕೃಷ್ಣರ ಭೀಕರವಾದ ವ್ಯಾಧಿಯನ್ನು ಮಾನಸಿಕ ಶಕ್ತಿಯ ಬಲದಿಂದ ತಮ್ಮ ಶರೀರದಲ್ಲಿ ಆಕರ್ಷಿಸಿಕೊಳ್ಳಬೇಕೆಂದು ನಿರ್ಧರಿಸಿದರು! ಒಮ್ಮಿಂದೊಮ್ಮೆ ಅವರ ದೇಹದಲ್ಲಿ ಅಪೂರ್ವವಾದ ಚೈತನ್ಯವು ಸಂಚರಿಸಿದಂತಾಯಿತು "ನಾನು ಬಲ್ಲೆ. ತಮ್ಮ ಕೃಪೆಯಿಂದ ಎಲ್ಲವನ್ನು ತಿಳಿದಿರುವೆನು. ಈಗಿಂದೀಗಲೇ ತಮ್ಮ ರೋಗವನ್ನೋಡಿಸುವೆನು'' ಎಂದು ನಾಗಮಹಾಶಯರು ನುಡಿದರು. ಹಾಗೂ ಶ್ರೀರಾಮಕೃಷ್ಣರ ಕಡೆಗೆ ಸಾಗಹತ್ತಿದರು. ನಾಗಮಹಾಶಯರ ಕಂಚಿಕೆಯನ್ನು ತಿಳಿದು ಭಗವಾನ್ ಶ್ರೀರಾಮಕೃಷ್ಣರು ಅವರನ್ನು ಹಿಂದೂಡಿ "ನಿನಗೆ ಸಾಧ್ಯವಿದೆ, ನೀನು ರೋಗವನ್ನು ಪರಿಹರಿಸಬಲ್ಲಿ'' ಎಂದರು

ಶ್ರೀರಾಮಕೃಷ್ಣರು ಸಮಾಧಿಸ್ಥರಾಗುವ ಐದಾರು ದಿನ ಮೊದಲು ನಾಗಮಹಾಶಯರು ಅವರನ್ನು ಕಾಣಲು ಹೋಗಿದ್ದರು. ಮನೆಯೊಳಗೆ ಹೋಗಲಾಗಿ ಶ್ರೀರಾಮಕೃಷ್ಣರು "ಈಗೆಲ್ಲಿಯಾದರೂ ನೆಲ್ಲಿಸುಕಾಯಿ ದೊರೆಯಬಹುದೋ? ನಾಲಿಗೆಯ ರುಚಿಯೇ ಅಳಿದು ಹೋಗಿದೆ. ನೆಲ್ಲೀಕಾಯಿ ತಿಂದರೇನಾದರೂ ರುಚಿ ಹುಟ್ಟೀತು'' ಎಂದು ನುಡಿಯುತ್ತಿರುವದನ್ನು ಕೇಳಿದರು. ಆಗ ನೆರೆದ ಭಕ್ತರಲ್ಲೊಬ್ಬನು "ಸ್ವಾಮಿ, ನೆಲ್ಲೀಕಾಯಿ ಸಿಗುವ ದಿನಗಳಲ್ಲಿವು. ಆದ್ದರಿಂದ ಅದು ಹೇಗೆ ದೊರೆಯಬೇಕು?'' ಎಂದು ಅಂದನು. ನಾಗಮಹಾಶಯರು ಯೋಚಿಸಹತ್ತಿದರು — ಗುರುದೇವನ ಶ್ರೀಮುಖದಿಂದ ನೆಲ್ಲೀಕಾಯಿಯ ಮಾತು ಹೊರಟಿದೆಯೆಂದಮೇಲೆ ನಿಶ್ಚಯವಾಗಿ ಅದು ಎಲ್ಲಿಯಾದರೂ ದೊರೆಯಲೇ ಬೇಕು. ಶ್ರೀರಾಮಕೃಷ್ಣರ ಮನೋಭಿಲಾಷೆಯು ಏನಾದರೊಂದು ಪ್ರಕಾರದಿಂದ ಪೂರ್ಣವಾ

ಗುತ್ತದೆಂದು ನಾಗಮಹಾಶಯರು ಅರಿತಿದ್ದರು. ಒಮ್ಮೆ ಶ್ರೀರಾಮಕೃಷ್ಣರು ತಮಗೆ ಕಿತ್ತಳೆಹಣ್ಣು ತಿನ್ನುವ ಇಚ್ಛೆಯಾಗಿದೆಯೆಂದು ಸ್ವಾಮಿ ಅದ್ಭುತಾನಂದರಿಗೆ ಹೇಳುತ್ತಿದ್ದರು. ತುಸು ಹೊತ್ತಿನಲ್ಲಿಯೇ ನಾಗಮಹಾಶಯರು ಹಣ್ಣುಗಳನ್ನು ತೆಗೆದುಕೊಂಡು ಅಲ್ಲಿಗೆ ಬಂದರು. ಶ್ರೀರಾಮಕೃಷ್ಣರು ಬಹು ಸಂಭ್ರಮದಿಂದ ಅವುಗಳನ್ನು ತಿಂದರು. ಅಂದಿನ ಸಂಗತಿಯನ್ನೇ ಯೋಚಿಸುತ್ತ ನಾಗಮಹಾಶಯರು ಯಾರಿಗೂ ತಿಳಿಸದೆ ಹೊರಬಿದ್ದರು. ಎರಡು ಮೂರು ದಿನಗಳಾದರೂ ನಾಗಮಹಾಶಯರು ಯಾರ ಕಣ್ಣಿಗೂ ಬೀಳಲಿಲ್ಲ. ಈ ಸಮಯದಲ್ಲಿ ಅವರು ನೆಲ್ಲೀಕಾಯಿಯನ್ನು ಹುಡುಕುತ್ತ ಒಂದು ತೋಟದಿಂದ ಮತ್ತೊಂದು ತೋಟಕ್ಕೆ ಅಲೆಯುತ್ತಿದ್ದರು. ಮೂರು ದಿನಗಳ ಮೇಲೆ ನೆಲ್ಲೀಕಾಯಿಯನ್ನು ಶ್ರೀರಾಮಕೃಷ್ಣರ ಕಡೆಗೆ ತೆಗೆದುಕೊಂಡು ಬಂದರು. ಆ ನೆಲ್ಲೀಕಾಯಿಯನ್ನು ಕಂಡು ಶ್ರೀರಾಮಕೃಷ್ಣರು ಬಾಲಕರಂತೆ ಬಹು ಸಂತೋಷಗೊಂಡು "ಆಹಾ! ಇಂಥ ಸುಂದರ ನೆಲ್ಲೀಕಾಯಿಯನ್ನು ಎಲ್ಲಿಂದ ತಂದಿ?" ಎಂದರು. ಆ ಮೇಲೆ ಅವರು ಸ್ವಾಮಿ ರಾಮಕೃಷ್ಣಾನಂದರಿಗೆ (ಆಗ ಶಶೀ ಬಾಬು) ನಾಗಮಹಾಶಯರಿಗಾಗಿ ಊಟದ ಸಿದ್ಧತೆಯನ್ನು ಮಾಡಲು ಹೇಳಿದರು. ನಾಗಮಹಾಶಯರು ಅವರ ಹತ್ತಿರ ಕುಳಿತುಕೊಂಡು ಗಾಳಿ ಹಾಕುತ್ತಿದ್ದರು. ಅಡಿಗೆಯಾಗಲು ರಾಮಕೃಷ್ಣಾನಂದರು ನಾಗಮಹಾಶಯರಿಗೆ ಊಟಕ್ಕೇಳಲು ಹೇಳಿಕಳುಹಿದರು. ಆದರೆ ಅವರು ಏಳಲಿಲ್ಲ. ಕಡೆಗೆ ಶ್ರೀರಾಮಕೃಷ್ಣರು ಅವರಿಗೆ ಊಟಮಾಡಲು ಕೆಳಗೆ ಹೋಗಲು ಹೇಳಿದರು. ನಾಗಮಹಾಶಯರು ಕೆಳಗೆ ಬಂದು ಮಣೆಯ ಮೇಲೆ ಕುಳಿತುಕೊಂಡರು. ಆದರೆ ಅನ್ನಕ್ಕೆ ಕೈ ಹಚ್ಚಲಿಲ್ಲ. ಎಲ್ಲರೂ ಎಷ್ಟು ಆಗ್ರಹಪಟ್ಟರೂ ಅವರು ಸುಮ್ಮನೆ ಕುಳಿತುಕೊಂಡು ಬಿಟ್ಟರು. ಅಂದು ಏಕಾದಶಿಯಾಗಿತ್ತು. "ಗುರುದೇವನಾದರೂ ಅನುಗ್ರಹಮಾಡಿ ಪ್ರಸಾದವಿತ್ತರೇನೇ ವ್ರತಭಂಗ ಮಾಡಬೇಕು; ಇಲ್ಲವಾದರೆ ಇಲ್ಲ" ಎಂದು ನಾಗಮಹಾಶಯರ ಎಣಿಕೆಯಿತ್ತು. ಎಷ್ಟು ಹೇಳಿದರೂ ನಾಗಮಹಾಶಯರು ಉಣ್ಣದಿರುವುದನ್ನು ನೋಡಿ ರಾಮಕೃಷ್ಣಾನಂದರು ಶ್ರೀರಾಮಕೃಷ್ಣರಿಗೆ ಈ ಸುದ್ದಿಯನ್ನು ತಿಳಿಸಿದರು. ನಾಗಮಹಾ

ಶಯರಿಗಾಗಿ ಬಡಿಸಿದ ಎಲೆಯನ್ನು ತಮ್ಮ ಕಡೆಗೆ ತರಲು ಶ್ರೀರಾಮಕೃಷ್ಣರು ಹೇಳಿದರು. ಆ ಪ್ರಕಾರ ರಾಮಕೃಷ್ಣಾನಂದರು ಆ ಎಲೆಯನ್ನು ಶ್ರೀರಾಮಕೃಷ್ಣರೆದುರಿಗೆ ಹಿಡಿಯಲಾಗಿ ಅವರು ಅದರಲ್ಲಿಯ ಪ್ರತಿಯೊಂದು ವಸ್ತುವನ್ನು ತಮ್ಮ ನಾಲಿಗೆಯಿಂದ ಸ್ಪರ್ಶಿಸಿ ''ಇನ್ನು ಇದನ್ನು ತೆಗೆದುಕೊಂಡು ಹೋಗು; ಅವನುಣ್ಣುವನು'' ಎಂದರು- ರಾಮಕೃಷ್ಣಾನಂದರು ಆ ಮೇಲೆ ಆ ಎಲೆಯನ್ನು ಪುನಃ ನಾಗಮಹಾಶಯರೆದುರಿಗಿಡಲು ಅವರು 'ಪ್ರಸಾದ, ಪ್ರಸಾದ, ಮಹಾಪ್ರಸಾದ' ಎನ್ನುತ್ತ ಸಾಷ್ಟಾಂಗ ನಮಸ್ಕಾರಮಾಡಿ ಆ ಮೇಲೆ ಉಣಹತ್ತಿದರು. ಉಣಹತ್ತುತ್ತ ಬಡಿಸಿದ ಎಲೆಯನ್ನು ಸಹ ತಿಂದು ಬಿಟ್ಟರು! ಪ್ರಸಾದವೆಂದೇನಾದರೂ ಕೊಟ್ಟರೆ ನಾಗಮಹಾಶಯರು ಏನೂ ಬಿಡುತ್ತಿದ್ದಿಲ್ಲ. ರಾಮಕೃಷ್ಣಾನಂದರು, ''ನಾಗಮಹಾಶಯರ ಅದ್ಭುತ ನಿಷ್ಠೆಯನ್ನು ಕಂಡು ಬೆರಗಾದೆ''ನೆಂದು ಹೇಳುತ್ತಿದ್ದರು. ಅಂದಿನಿಂದ ಶ್ರೀರಾಮಕೃಷ್ಣರ ಭಕ್ತರು ನಾಗಮಹಾಶಯರಿಗೆ ಎಲೆಯಲ್ಲಿ ಪ್ರಸಾದ ಕೊಡುವುದನ್ನು ಬಿಟ್ಟರು. ಎಂದಾದರೂ ಎಲೆಯಲ್ಲಿ ಪ್ರಸಾದ ಕೊಟ್ಟರೆ ಎಲ್ಲರೂ ಬಹು ಜಾಗರೂಕರಾಗಿರುತ್ತಿದ್ದರು. ನಾಗಮಹಾಶಯರು ಪ್ರಸಾದವನ್ನು ತಿಂದಕೂಡಲೇ ಎಲೆಯನ್ನು ಜಗ್ಗಿಕೊಂಡು ಬಿಡುತ್ತಿದ್ದರು. ವಂಗ ಶಕೆ ೧೨೯೩, ಶ್ರಾವಣಮಾಸ, ಸಂಕ್ರಾಂತಿಯ ದಿನ ಶ್ರೀರಾಮಕೃಷ್ಣರು ಸಮಾಧಿಸ್ಥರಾದರು (ಇಸ್ವಿ ೧೮೮೬). ಈ ಸುದ್ದಿಯನ್ನು ಕೇಳಿ ನಾಗಮಹಾಶಯರು ಸ್ಮಶಾನಕ್ಕೆ ಹೋದರು. ಆ ಮೇಲೆ ಮನೆಗೆ ಬಂದು ಉಪವಾಸ ಮಾಡಹತ್ತಿದರು.

ಶ್ರೀರಾಮಕೃಷ್ಣರ ಅವತಾರ ಸಮಾಪ್ತಿಯನಂತರ ಸ್ವಾಮಿ ವಿವೇಕಾನಂದರು ಎಲ್ಲ ಭಕ್ತರ ಆಶ್ರಯಸ್ಥಾನರಾದರು. ಅವರೇ ಎಲ್ಲರಿಗೂ ಮಾರ್ಗದರ್ಶಕರಾದರು. ನಾಗಮಹಾಶಯರು ಒಂದೇ ವಸ್ತ್ರವನ್ನು ಹೊದ್ದುಕೊಂಡು ಉಪವಾಸ ಮಲಗಿರುವರೆಂದೂ ಸ್ನಾನ ಶೌಚಾದಿಗಳಿಗಾಗಿ ಸಹ ಏಳುವದಿಲ್ಲವೆಂದೂ ಸ್ವಾಮೀಜಿಯವರಿಗೆ ಸುದ್ದಿ ಬಂದಿತು ಆಗ ಅವರು ಸ್ವಾಮಿ ಅಖಂಡಾನಂದ ಹಾಗೂ ಸ್ವಾಮಿ ತುರೀಯಾನಂದರನ್ನು ಕರೆದುಕೊಂಡು ನಾಗಮಹಾಶಯರ ಮನೆಗೆ ಹೋದರು. ಚನ್ನಾಗಿ

ಕೂಗಿದ ಮೇಲೆ ನಾಗಮಹಾಶಯರು ಎದ್ದು ಕುಳಿತುಕೊಂಡರು. ಸ್ವಾಮೀ ವಿವೇಕಾನಂದರು "ಇಂದು ತಮ್ಮ ಮನೆಗೆ ಭಿಕ್ಷೆಗಾಗಿ ಬಂದಿರುವೆವೆಂ''ದು ನುಡಿದರು. ನಾಗಮಹಾಶಯರು ತತ್‌ಕ್ಷಣವೇ ಎದ್ದು ಅನೇಕ ವಿಧದ ಸಾಮಾನುಗಳನ್ನು ಪೇಟೆಯಿಂದ ತೆಗೆದುಕೊಂಡು ಬಂದರು. ಅಷ್ಟರಲ್ಲಿ ಈ ಮೂರು ಅತಿಥಿಗಳು ಸ್ನಾನ ಮಾಡಿದ್ದರು. ಹಾಗೂ ಒಂದು ಮುರಕು ಪಲ್ಲಂಗದ ಮೇಲೆ ಕುಳಿತುಕೊಂಡು ಶ್ರೀರಾಮಕೃಷ್ಣರ ವಿಷಯವಾಗಿ ಮಾತನಾಡುತ್ತ ಕುಳಿತಿದ್ದರು ಮೂರು ಎಲೆಗಳು ಬಡಿಸಲ್ಪಟ್ಟವು. ಸ್ವಾಮೀಜಿಯವರು ಮತ್ತೊಂದು ಎಲೆ ಬಡಿಸಲು ಹೇಳಿದರು. ಆ ಮೇಲೆ ಆ ಎಲೆಯ ಮೇಲೆ ಕೂಡಲು ನಾಗಮಹಾಶಯರಿಗೆ ಅವರು ಎಷ್ಟು ಹೇಳಿದರೂ ಅವರು ಕೂಡಲಿಲ್ಲ. ಆಗ ಸ್ವಾಮೀಜಿಯವರು "ಆಗಲಿ, ಅವರು ಕಡೆಗೆ ಊಟ ಮಾಡುವರು'' ಎಂದರು. ಊಟವಾದ ಮೇಲೆ ವಿಶ್ರಮಿಸಿಕೊಳ್ಳುತ್ತಿರುವಾಗ್ಗೆ ಅವರು ನಾಗಮಹಾಶಯರಿಗೆ ಊಟ ಮಾಡಲು ಮತ್ತೆ ಹೇಳಿದರು. ನಾಗಮಹಾಶಯರು "ಹಾಯ್ ಹಾಯ್, ಈ ದೇಹದ ಮೇಲೆ ಇನ್ನೂ ಭಗವಂತನ ಕೃಪೆಯಾಗಿಲ್ಲ. ಇಂಥ ದೇಹಕ್ಕೆ ಮತ್ತೆ ಅನ್ನ ಹಾಕಬೇಕೇ? ಇದು ನನ್ನಿಂದಾಗದು'' ಎಂದು ಹೇಳಿಬಿಟ್ಟರು. "ತಾವು ಊಟಮಾಡಲಿಕ್ಕೇ ಬೇಕು. ಇಲ್ಲವಾದರೆ ನಾವು ಇಲ್ಲಿಂದ ಹೋಗುವದಿಲ್ಲ'' ವೆಂದು ಸ್ವಾಮೀಜಿಯವರು ನುಡಿದರು ಅಂತೂಇಂತೂ ಕಡೆಗೊಮ್ಮೆ ನಾಗಮಹಾಶಯರು ಊಟಮಾಡಿದರು.

ಶ್ರೀ ರಾಮಕೃಷ್ಣರು ಸಮಾಧಿಸ್ಥರಾದಮೇಲೆ ಬಾಗಬಾಜಾರದಲ್ಲಿರುವ ಅವರ ಪ್ರಸಿದ್ಧ ಭಕ್ತರಾದ ಬಲರಾಮ ಬಸು ಇವರು ನಾಗಮಹಾಶಯರಿಗೆ ಪುರಿಗೆ ಬರಲು ಆಮಂತ್ರಣಕೊಟ್ಟರು. ಪಾಲ ಬಾಬುಗಳು ಅವರಿಗೆ ನವದ್ವೀಪದಲ್ಲಿರಲು ಬಹು ಆಗ್ರಹಪಟ್ಟರು. ಅವರ ಎಲ್ಲ ವೆಚ್ಚವನ್ನು ತಾವೇ ನೋಡಿಕೊಳ್ಳಲು ಇಬ್ಬರೂ ಸಿದ್ಧರಿದ್ದರು. ಆದರೆ ನಾಗಮಹಾಶಯರು, "ಗುರುದೇವನು ನನಗೆ ಮನೆಯಲ್ಲಿ ಇರಲು ಅಪ್ಪಣೆ ಕೊಟ್ಟಿರುವನು. ಅವನ ಆಜ್ಞೆಯನ್ನುಲ್ಲಂಘಿಸುವದು ಎಳ್ಳಷ್ಟೂ ಸಾಧ್ಯವಿಲ್ಲ'' ಎಂದು ಹೇಳಿದರು. ಯಾರ ಆಗ್ರಹಕ್ಕೂ ಒಡಂಬಡದೆ ನಾಗಮಹಾಶಯರು ತಮ್ಮ

ಹುಟ್ಟಿದೂರಾದ ದೇವಭೋಗಕ್ಕೆ ಹೋಗಿ ಮನೆಯಲ್ಲಿರಹತ್ತಿದರು.

ಈ ಸಮಯದಲ್ಲಿ ಭಾಗ್ಯಕುಲದ ಕುಂಡೂ ಬಾಬುಗಳು ನಾಗಮಹಾಶಯರಿಗೆ ಪ್ರತಿ ತಿಂಗಳು ಐವತ್ತು ರೂಪಾಯಿಗಳ ವೇತನ ತೆಗೆದುಕೊಂಡು ತಮ್ಮ ಪರಿವಾರದ ಚಿಕಿತ್ಸಕರಾಗಿರಲು ಹೇಳಿದರು. ಇದಕ್ಕೂ ನಾಗಮಹಾಶಯರು ಒಪ್ಪಲಿಲ್ಲ.

---

## ೬ ನೆಯ ಪ್ರಕರಣ

### ದೇವಭೋಗದಲ್ಲಿ ವಾಸ



ಮನೆಯಲ್ಲಿದ್ದುಕೊಂಡು ನಾಗಮಹಾಶಯರು ಬಹು ಶ್ರದ್ಧೆಯಿಂದ ಪಿತೃಸೇವೆಯನ್ನು ಮಾಡಹತ್ತಿದರು. ದೀನದಯಾಲರೀಗ ಬಹು ನಿರ್ಬಲರಾಗಿದ್ದರು. ನಾಗಮಹಾಶಯರು ಅವರನ್ನು ಕೈಹಿಡಿದು ಕರೆದುಕೊಂಡು ಹೋಗಿ ಸ್ನಾನಶೌಚಾದಿಗಳನ್ನು ಮಾಡಿಸುತ್ತಿದ್ದರು. ಅವರ ಹಾಸಿಗೆಯನ್ನು ಪರಿಷ್ಕಾರವಾಗಿ ಹಾಸಿಕೊಡುತ್ತಿದ್ದರು. ದೀನದಯಾಲರು ತಿನ್ನಬೇಕೆಂದು ಬಯಸಿದ ವಸ್ತುಗಳನ್ನು ಪ್ರಯತ್ನಪೂರ್ವಕವಾಗಿ ತಂದು ಕೊಡುತ್ತಿದ್ದರು. ದೀನದಯಾಲರೊಮ್ಮೆ "ದುರ್ಗಾಚರಣನು ಹಣಗಳಿಸಲಿಲ್ಲ. ಎಷ್ಟು ಜನರು ಬಹು ವೈಭವದಿಂದ ದೇವಿಯ ಪೂಜೆಯನ್ನು ಮಾಡುವರು! ನನ್ನಲ್ಲಿ ದುಡ್ಡಿದ್ದರೆ ನಾನೂ ಮಾಡುತ್ತಿದ್ದೆ. ಆ ಸೌಭಾಗ್ಯ ನನಗಿಲ್ಲ" ಎಂದು ಆಕ್ಷೇಪಿಸುತ್ತಿರುವುದನ್ನು ಕೇಳಿದರು. ತಂದೆಯನ್ನು ಸಂತೋಷಪಡಿಸುವದಕ್ಕಾಗಿ ನಾಗಮಹಾಶಯರು ಅದೇ ವರ್ಷದಿಂದ ಪ್ರತಿವರ್ಷ ಶ್ರೀ ದುರ್ಗಾಪೂಜೆ, ಕಾಲೀಪೂಜೆ, ಜಗದ್ಧಾತ್ರಿಯ ಪೂಜೆ, ಸರಸ್ವತಿಯ ಪೂಜೆ ಮೊದಲಾದವುಗಳ ಯೋಜನೆಯನ್ನು ಮಾಡಿದರು. ದೀನದಯಾಲರಿಗೆ ಕ್ಷಣವಾದರೂ ಸಂಸಾರಚಿಂತೆಗೆ ಎಡೆ ಇರದಂತೆ ಮಾಡಿಬಿಟ್ಟಿದ್ದರು. ನಿತ್ಯ ಅವರ ಬಳಿಯಲ್ಲಿ ಕುಳಿತುಕೊಂಡು ಭಾಗವತ ಪುರಾಣ ಮೊದಲಾದವುಗಳನ್ನು ಓದಿ, ಕೇಳಹಚ್ಚು

ತ್ತಿದ್ದರು. ಮಗನ ನಿರಂತರ ಪ್ರಯತ್ನದಿಂದ ತಂದೆಯ ಮನವು ಕ್ರಮವಾಗಿ ಪರಿವರ್ತನೆ ಹೊಂದಹತ್ತಿತು. ನಾಗಮಹಾಶಯರು ಪ್ರತಿವರ್ಷವೂ ಶಾರದೀಯ ಪೂಜೆಗೆ ಅವಶ್ಯವಿರುವ ಸಾಮಗ್ರಿಗಳನ್ನು ಕೊಳ್ಳಲು ಪೂಜೆಯ ಮೊದಲು ಕಲಕತ್ತೆಗೆ ಬರುವ ವಾಡಿಕೆ ಇತ್ತು. ಈ ಸಾರಿ ಬಂದಾಗ್ಗೆ ಸುರೇಶ ಬಾಬುಗಳಿಗೆ "ತಂದೆಯವರ ಮನವು ಸುಧಾರಿಸುತ್ತಿದೆ. ಸಂಸಾರದ ಚಿಂತೆಯು ಅವರ ಮೇಲೆ ಈಗ ಆಕ್ರಮಣ ಮಾಡಲಾರದು. ಹಗಲಿರುಳೂ ಅವರು ಭಗವಚ್ಚಿಂತನೆಯಲ್ಲಿ ಹಾಗೂ ಪರಮಾತ್ಮನ ಸಂಬಂಧದ ಮಾತುಕತೆಗಳಲ್ಲಿ ನಿಮಗ್ನರಾಗಿರುತ್ತಾರೆ" ಎಂದು ಹೇಳಿದರು.

ಪೂರ್ವವಂಗವೆಂದರೆ ತಂತ್ರಪ್ರಧಾನದೇಶವು. ಶುದ್ಧಭಕ್ತಿಗಿಂತ ಸಿದ್ಧಿಗಳ ಪ್ರಾಬಲ್ಯವೇ ಅಲ್ಲಿ ವಿಶೇಷ. ಸ್ವಾಮೀವಿವೇಕಾನಂದರು "ಪೂರ್ವ-ಬಂಗಾಲದಲ್ಲಿ ಕೇವಲ ವೈಷ್ಣವರ ಹಾಗೂ ತಾಂತ್ರಿಕರ ಪ್ರಭುತ್ವವನ್ನೇ ಕಂಡೆನು. ಇಂಥ ವಾಮಾಚಾರಿಗಳ ಹಾಗೂ ಸಿದ್ಧರ ದೇಶವು ನನ್ನ ಕಣ್ಣಿಗೆಲ್ಲಿಯೂ ಬಿದ್ದಿಲ್ಲ" ಎಂದು ಹೇಳುತ್ತಿದ್ದರು. ಶ್ರೀರಾಮಕೃಷ್ಣರು ನಾಗಮಹಾಶಯರಿಗೊಮ್ಮೆ "ಏನಯ್ಯಾ, ನಿಮ್ಮ ದೇಶದಲಿ ಎಂಥ ಸಾಧುಗಳಿರುವರು?" ಎಂದು ಕೇಳಿದರು. ನಾಗಮಹಾಶಯರು "ಅಂಥ ಸಾಧುವನ್ನು ಕಾಣಲಿಲವೆ" ಎಂದು ಹೇಳಿದರು. "ಪುಣ್ಯ ಸಲಿಲೆಯಾದ ಗಂಗೆಯು ಹರಿಯುವ ದೇಶದಲ್ಲಿ ಯಾವ ಭಕ್ತನೂ ಜನ್ಮತಾಳಲು ಬಯಸುವದಿಲ್ಲ. ತಾರ್ಕಿಕರಾಗಬಹುದು. ಪಂಡಿತರಾಗಬಹುದು; ಆದರೆ ಭಾಗೀರಥೀ ತೀರದಲ್ಲಿ ಜನ್ಮಗ್ರಹಣ ಮಾಡದಿದ್ದರೆ ಶುದ್ಧ ಭಕ್ತಿಯು ಲಾಭವಾಗದು" ಎಂದು ಅವರು ಹೇಳುತ್ತಿದ್ದರು. ನಾಗಮಹಾಶಯರು ತಮ್ಮ ಊರಿಗೆ ಹೋಗುವ ಕೆಲವು ದಿನ ಪೂರ್ವದಲ್ಲಿ ಶ್ರೀ. ನಟವರ ಗೋಸ್ವಾಮಿ ಹಾಗೂ ಶ್ರೀ. ವಿಜಯಕೃಷ್ಣ ಗೋಸ್ವಾಮಿ ಇವರು ಆ ಭಾಗದಲ್ಲಿ ಭಕ್ತಿತತ್ವದ ಪ್ರಚಾರವನ್ನು ಪ್ರಾರಂಭಿಸಿದ್ದರು.

ವಿಜಯಕೃಷ್ಣರು ಶ್ರೀರಾಮಕೃಷ್ಣರ ಭಕ್ತರೆಂಬುದನ್ನು ನಾಗಮಹಾಶಯರು ಅರಿತಿದ್ದರು. ನಾಗಮಹಾಶಯರಿಗೊಮ್ಮೆ ಡಾಕಾಕ್ಕೆ ಹೋಗುವ ಪ್ರಸಂಗ ಒದಗಿತು. ಈ ಸಂಧಿಯ ಸಾಧಿಸಿ ಅವರು ವಿಜಯಕೃಷ್ಣರನ್ನು

ಕಾಣಲು ಹೋದರು. ವಿಜಯಕೃಷ್ಣರಿಗೆ ನಾಗಮಹಾಶಯರು ಯಾರೆಂಬುದು ಗೊತ್ತಿದ್ದಿಲ್ಲ. ಆದರೆ, ಅವರು ಸಾಧನೆಯಿಂದು ದಯಿಸಿದ ಸೂಕ್ಷ್ಮ ಅಂತರ್ದೃಷ್ಟಿಯ ಬಲದಿಂದ ಈ ದೀನ, ಹೀನ ಹುಚ್ಚು ವೇಷದಲ್ಲಿ ಯಾವನೋ ಒಬ್ಬ ಮಹಾಪುರುಷನು ತಮಗೆ ದರ್ಶನ ಕೊಡಲು ಬಂದಿರುವನೆಂದು ಕಂಡುಹಿಡಿದರು. ಪರಸ್ಪರ ಸಂಭಾಷಣೆಯಲ್ಲಿ ನಾಗಮಹಾಶಯರು ಶ್ರೀರಾಮಕೃಷ್ಣರ ಭಕ್ತರೆಂಬುದು ತಿಳಿಯಲಾಗಿ ವಿಜಯರಿಗೆ ಅಪರಿಮಿತ ಆನಂದವಾಯಿತು. ಬಹು ಪ್ರೀತಿಯಿಂದ ನಾಗಮಹಾಶಯರನ್ನು ಅವರು ಆಲಂಗಿಸಿದರು; ಮತ್ತು ಅವರ ವಿಷಯವಾಗಿ ಅತ್ಯಂತ ಭಕ್ತಿಯನ್ನೂ ಆದರವನ್ನೂ ತೋರಿಸಿದರು. ವಿಜಯರನ್ನು ಕಂಡು ನಾಗಮಹಾಶಯರಿಗಾದರೂ ಬಹು ಆಲ್ಹಾದವಾಯಿತು. ಆದರೆ "ಶ್ರೀರಾಮಕೃಷ್ಣರನ್ನು ಕಂಡಮೇಲೆ ಸಹ ವಿಜಯಕೃಷ್ಣರು ಅನ್ಯ ಸಾಧುಗಳ ಕಡೆಗೆ ಅಂಡಲೆಯುವದು ಆಶ್ಚರ್ಯಕರ" ಎಂದು ನುಡಿಯುತ್ತಿದ್ದರು. ವಿಜಯಕೃಷ್ಣರು ಬಾರದಿಯ ಪ್ರಸಿದ್ಧ ಬ್ರಹ್ಮಚಾರಿಯ ಕಡೆಗೆ ಹೋಗಿ ಬರುತ್ತಿದ್ದರು "ಗೋಸ್ವಾಮಿಯವರಂಥ ಮಹಾಜನರೇ ಹೀಗೆ ಭ್ರಮೆಗೊಳ್ಳುತ್ತಿದ್ದ ಮೇಲೆ ಸರ್ವಸಾಧಾರಣ ಜನರ ಪಾಡೇನು?" ಎಂದು ಮತ್ತೆ ನಾಗಮಹಾಶಯರು ನುಡಿದರು. ವಿಜಯಕೃಷ್ಣರು ಶ್ರೀರಾಮಕೃಷ್ಣರ ಬಳಿಯಲ್ಲಿ ಕುಳಿತುಕೊಂಡು ಕಣ್ಣು ಮುಚ್ಚಿ ಧ್ಯಾನ ಮಾಡುತ್ತಿರುತ್ತಾರೆಂಬುದನ್ನು ಗಿರೀಶಚಂದ್ರರು ಕೇಳಿ, "ಯಾರನ್ನು ಎವೆಯಿಕ್ಕದೆ ನೋಡಬೇಕೋ ಅಂಥವರೆದುರಿಗೆ ಕಣ್ಣು ಮುಚ್ಚಿಕೊಂಡು ಕೂಡುವವನು ಎಂಥ ವಿಚಿತ್ರ ಮನುಷ್ಯನಾಗಿರಬಹುದು!" ಎಂದು ನುಡಿದರು. ಈ ಮಾತನ್ನು ಉಲ್ಲೇಖಿಸಿ ನಾಗಮಹಾಶಯರು ಗಿರೀಶಚಂದ್ರರ ವಿದ್ಯಾಬುದ್ಧಿಯನ್ನು ವಿಶೇಷವಾಗಿ ಪ್ರಶಂಸಿಸುತ್ತಿದ್ದರು. ಹಾಗೂ "ಜಯರಾಮಕೃಷ್ಣ ಜಯರಾಮಕೃಷ್ಣ" ಎನ್ನುತ್ತ ಗಿರೀಶರನ್ನುದ್ದೇಶಿಸಿ ನಮಸ್ಕಾರ ಮಾಡುತ್ತಿದ್ದರು.

ಬಾರದಿಯ ಬ್ರಹ್ಮಚಾರಿಯ ಖ್ಯಾತಿಯೂ ಪ್ರತಿಷ್ಠೆಯೂ ಪೂರ್ವಬಂಗಾಲದಲ್ಲಿ ಬಹಳವಿತ್ತು. ಆ ಬ್ರಹ್ಮಚಾರಿಯ ಶಿಷ್ಯನಾದ ಬ್ರಹ್ಮಾನಂದ ಭಾರತಿಯ ಅತೀವ ಆಗ್ರಹದ ಮೂಲಕ ನಾಗಮಹಾಶಯರೊಮ್ಮೆ ಬಾರದಿಗೆ ಹೋಗಿದ್ದರು. ಬ್ರಹ್ಮಾನಂದನ ಮೊದಲಿನ ಹೆಸರು ತಾರ

ಕಾಂತ ಗಂಗೋಪಾಧ್ಯಾಯನೆಂದು. ತಾರಾಕಾಂತನು ವಕೀಲಿಯಿಂದ ತಿಂಗಳಿಗೆ ಎರಡು ಮೂರು ನೂರು ರೂಪಾಯಿಗಳನ್ನು ಗಳಿಸುತ್ತಿದ್ದನು. ಸಂಕೀರ್ತನ, ಸಾಧುಸೇವೆ ಹಾಗೂ ಸಾಧನಭಜನೆಗಳಲ್ಲಿ ಅವನಿಗೆ ವಿಶೇಷ ಉತ್ಸಾಹವಿತ್ತು. ಕಡೆಗೆ ತನ್ನ ವ್ಯವಸಾಯವನ್ನೂ ಬಿಟ್ಟು ಕ್ರಮವಾಗಿ ಸಾಧನಭಜನೆಗಳಲ್ಲಿ ನಿರತನಾಗಹತ್ತಿದನು. ತಾರಾಕಾಂತನು ನಾಗಮಹಾಶಯರ ಕಡೆಗೆ ಆಗಾಗ ಬರಹತ್ತಿದನು; ಹಾಗೂ ಒಮ್ಮೊಮ್ಮೆ ದೇವಭೋಗದಲ್ಲಿ ಹತ್ತು ಹದಿನೈದು ದಿನಗಳವರೆಗೆ ಇರುತ್ತಿದ್ದನು. ಕೆಲವು ದಿನಗಳ ನಂತರ ಅವನು ಆ ಬ್ರಹ್ಮಚಾರಿಯ ಬಳಿಗೆ ಹೋಗಹತ್ತಿದನು. ತಾರಾಕಾಂತನು ಒಮ್ಮೆ ತಾನು ಬ್ರಹ್ಮಚಾರಿಯ ಶಿಷ್ಯನೆಂದು ಮತ್ತೊಮ್ಮೆ ತಾನು ಬ್ರಹ್ಮಚಾರಿಯ ಪೂರ್ವಜನ್ಮದ ಗುರುವು, ಎಂದು ಹೇಳಿಕೊಳ್ಳುತ್ತಿದ್ದನು. ತಾರಾಕಾಂತನೊಂದು ಸಾರೆ ದೇವಭೋಗಕ್ಕೆ ಬಂದು ನಾಗಮಹಾಶಯರಿಗೆ, ತನಗೆ ಪೂರ್ವಜನ್ಮದ ಸ್ಮರಣೆಯಾಗಿರುವದೆಂದೂ ತಾನೀಗ ಚಂದ್ರ-ಸೂರ್ಯ-ಬ್ರಹ್ಮಲೋಕಗಳಿಗೆ ಹೋಗಿ ಬರಬಲ್ಲೆನೆಂದೂ ಧರ್ಮಾಧರ್ಮವೆಲ್ಲ ಅಸತ್ಯ, ಜ್ಞಾನವೊಂದೇ ಸತ್ಯವೆಂದೂ ಹೇಳಿದನು. ತಾರಾಕಾಂತನಲ್ಲಾದ ಈ ಪರಿವರ್ತನೆಯನ್ನು ಕಂಡು ನಾಗಮಹಾಶಯರು "ಯಥಾರ್ಥ ಗುರುವಿನ ಹಾಗೂ ಉಪದೇಶದ ಆಶ್ರಯ ಹೊಂದದಿದ್ದರೆ ಉಚ್ಚ ಸಾಧಕನು ಸಹ ಅಡ್ಡ ದಾರೀ ಬೀಳುವನೆಂ"ದು ಹೇಳುತ್ತಿದ್ದರು. ಬ್ರಹ್ಮಚಾರಿಯನ್ನು ನೋಡಲು ಹೋಗುವದಕ್ಕೆ ನಾಗಮಹಾಶಯರಿಗೆ ತಾರಾಕಾಂತನು ಬಹಳ ಸಾರೆ ಆಗ್ರಹ ಮಾಡಿದನು. ಕಡೆಗೊಮ್ಮೆ ಬೇಸತ್ತು ನಾಗಮಹಾಶಯರದಕ್ಕೊಪ್ಪಿದರು ಸಾಧುದರ್ಶನಕ್ಕೆ ಹೋಗುವದಿದ್ದುದರಿಂದ ನಾರಾಯಣ ಗಂಜದಿಂದ ಹಣ್ಣು ಹಂಪಲಗಳನ್ನು ಕೊಂಡುಕೊಂಡು ಹೋದರು ಬ್ರಹ್ಮಚಾರಿಯ ಬಳಿಗೆ ಹೋದ ಮೇಲೆ ಅವುಗಳನ್ನವರಿಗೆ ಉಪಹಾರವಾಗಿ ಕೊಟ್ಟರು ಆದರೆ ಬ್ರಹ್ಮಚಾರಿಯು ಆದರಲ್ಲಿಯ ಒಂದು ಕಣವನ್ನು ಸಹ ಮುಟ್ಟದೆ, ಎಲ್ಲವನ್ನು ಅಲ್ಲಿಯೇ ಇದ್ದ ಒಂದು ಎತ್ತಿನ ಮುಂದೆ ಚಲ್ಲಿಕೊಟ್ಟನು. ಮತ್ತೆ, ನಾಗಮಹಾಶಯರ ಶುಷ್ಕ ದೇಹವನ್ನೂ ರುಕ್ಷ ಕೂದಲುಗಳನ್ನೂ ದೀನ, ಹೀನ ವೇಷವನ್ನೂ ನೋಡಿ ಅವರಿಗೆ ಉಪಹಾಸ್ಯ ಮಾಡಹತ್ತಿದನು! ನಾಗ

ಮಹಾಶಯರು ತಲೆ ತಗ್ಗಿಸಿಕೊಂಡು ಸುಮ್ಮನೇ ಕುಳಿತಿದ್ದರು. ಅವರು ನಿರುತ್ತರರಾಗಿರುವದನ್ನು ಕಂಡು ಬ್ರಹ್ಮಚಾರಿಗೆ ಮತ್ತಿಷ್ಟು ಹುರುಪು ಬಂದಿತು. ಅವನು ಶ್ರೀರಾಮಕೃಷ್ಣರನ್ನು ಸಿಕ್ಕಾಪಟ್ಟೆಯಾಗಿ ನಿಂದಿಸ ಹತ್ತಿದನು. ನಾಗಮಹಾಶಯರಿಗೆ ಇದನ್ನು ಮಾತ್ರ ಸೈರಿಸುವದಾಗಲಿಲ್ಲ. ಸಿಟ್ಟಿನಿಂದ ಅವರ ಮೈಯಿಂದ ಕಿಡಿಗಳು ಚಿಮ್ಮಹತ್ತಿದವು. ಒಮ್ಮಿಂದೊಮ್ಮೆ ನಾಗಮಹಾಶಯರು ತಮ್ಮ ಸಮೀಪದಲ್ಲಿ ಭೀಷಣಾಕೃತಿಯುಳ್ಳ ಕೃಷ್ಣಪಿಂಗಲ ಭೈರವ ಮೂರ್ತಿಯು ಪ್ರಕಟವಾಗಿ ಆ ಬ್ರಹ್ಮಚಾರಿಯನ್ನು ತೂರಿ ಬಿಸಾಡಲು ತಮ್ಮ ಅನುಮತಿಯನ್ನು ಕೇಳುತ್ತಿರುವದನ್ನು ನೋಡಿದರು. ನಾಗಮಹಾಶಯರು ತಮ್ಮ ಸಿಟ್ಟನ್ನು ತಡೆ ಹಿಡಿದರು; ಹಾಗೂ "ಗುರುದೇವನೆ! ನಿನ್ನ ಅಪ್ಪಣೆಯನ್ನು ಮೀರಿ ಸಾಧುದರ್ಶನಕ್ಕಾಗಿ ನಾನೇಕೆ ಬಂದೆ! ನಾನು ಮತಿಭ್ರಷ್ಟನಾದೆನು!'' ಎನ್ನುತ್ತ ತಲೆ ಘಟ್ಟಿಸಿಕೊಳ್ಳಹತ್ತಿದರು. ಆ ಮೇಲೆ "ಹಾ ರಾಮಕೃಷ್ಣ ಹಾ ರಾಮಕೃಷ್ಣ'' ಎನ್ನುತ್ತ ಅಲ್ಲಿಂದ ಕಾಲ್ತೆಗೆದರು. ಬ್ರಹ್ಮಚಾರಿಯು ಕಣ್ಣಿಗೆ ಕಾಣದಂತಾದ ಮೇಲೆ ಅವರಿಗೆ ತುಸು ಸಮಾಧಾನವಾಯಿತು. ಮನೆಗೆ ಬಂದ ಮೇಲೆ ಇನ್ನೆಂದೂ ಸಾಧುಗಳ ದರ್ಶನಕ್ಕೆ ಹೋಗುವದಿಲ್ಲವೆಂದು ಪ್ರತಿಜ್ಞೆ ಮಾಡಿದರು.

ನಾಗಮಹಾಶಯರು ಸಂಸಾರದ ಯಾವ ಘಟನೆಯಿಂದಲೂ ವಿಚಲಿತರಾಗುತ್ತಿದ್ದಿಲ್ಲ. ಆದರೆ ಗುರುನಿಂದೆಯನ್ನು ಕೇಳಿದರೆ ಮಾತ್ರ ಈ 'ಅಕ್ರೋಧ ಪರಮಾನಂದ' ನಿಗೆ ತಡೆಯುವದಾಗುತ್ತಿದ್ದಿಲ್ಲ. ಒಮ್ಮೆ ನಾರಾಯಣಗಂಜದ ಒಬ್ಬ ಪ್ರತಿಷ್ಠಿತ ಮನುಷ್ಯನು ನಾಗಮಹಾಶಯರ ಮಾವನ ಮನೆಯಲ್ಲಿ ಕುಳಿತುಕೊಂಡು ಶ್ರೀರಾಮಕೃಷ್ಣರ ಮೇಲೆ ಸುಳ್ಳುಸುಳ್ಳೇ ದೋಷಾರೋಪಣೆಯನ್ನು ಮಾಡುತ್ತಿದ್ದನು. ಹಾಗೆ ಮಾಡಬಾರದಾಗಿ ನಾಗಮಹಾಶಯರು ಬಹು ವಿನೀತರಾಗಿ ಅವನಿಗೆ ಹೇಳಿದರು. ಆದರೆ ಅವರು ಹೇಳಿದಂತೆ ಆ ಗೃಹಸ್ಥನು ಮತ್ತಿಷ್ಟು ನಾಲಿಗೆಯನ್ನು ಸಡಿಲು ಬಿಟ್ಟನು. ನಾಗಮಹಾಶಯರು "ಈ ಮನೆಯಲ್ಲಿ ಕುಳಿತುಕೊಂಡು ಗುರುದೇವನನ್ನು ನಿಂದಿಸಬೇಡಿ'' ರೆಂದು ಹೇಳಿದರು. ಆದರೆ ಅವನು ಕಿವಿಗೊಡಲಿಲ್ಲ. ಕಡೆಗೆ ನಾಗಮಹಾಶಯರು ಅವನಿಗೆ "ಇಲ್ಲಿಂದ

ಸುಮ್ಮನೇ ಹೊರಟು ಹೋಗಿರಿ. ಇಲ್ಲವಾದರೆ ನಿಮಗೆ ಬಹು ಕೆಡಕಾಗುವದೆ'' ಎಂದು ಸ್ಪಷ್ಟವಾಗಿ ಹೇಳಿದರು. ಇಷ್ಟಾದರೂ ಅವನಿಗೆ ಎಚ್ಚರ ಹುಟ್ಟಲಿಲ್ಲ. ಆ ಗೃಹಸ್ಥನ ಒಂದೊಂದೇ ಮನೆ ದಾಟಹತ್ತಿತು; ಎತ್ತೆ ಒಂದು ಮನೆಯನ್ನು ದಾಟಿತು! ನಾಗಮಹಾಶಯರು ಸಿಟ್ಟಿನಿಂದ ಕಣ್ಣುಗಳಿಂದ ಕಿಡಿಗಳನ್ನು ಸುರಿಸುತ್ತ ಜ್ಞಾನಶೂನ್ಯರಾಗಿ "ಮೂರ್ಖಾ ಲ್ಲಿಂದ ಹೊರಬೀಳು. ಇಲ್ಲಿ ಕುಳಿತುಕೊಂಡು ಗುರುನಿಂದೆಯನ್ನು ಮಾಡುತ್ತೀಯಾ? ನಡೆ ಹೊರಗೆ'' ಎನ್ನುತ್ತ ಅಲ್ಲಿಯೇ ಇದ್ದ ಮೆಟ್ಟುಗಳಿಂದ ಆ ಗೃಹಸ್ಥನನ್ನು ಥಳಿಸಹತ್ತಿದರು. ಆ ಗೃಹಸ್ಥನು ದೇವಭೋಗದಲ್ಲಿ ಬಹು ಪ್ರತಿಷ್ಠೆಯುಳ್ಳವನಾಗಿದ್ದನು. ಹೊಡತತಿಂದು ಅವನು ಬಹು ಅಪಮಾನಿತನಾಗಿ "ನೋಡುವೆನು ನೀನೆಂಥ ಸಾಧುವೆಂದು, ಇದರ ಸೇಡು ತೀರಿಸಿಕೊಳ್ಳದೇ ಬಿಡಲಿಕ್ಕಿಲ್ಲ'' ವೆಂದು ನುಡಿದು ಹೊರಟುಹೋದನು. ಅವನ ಮಾತುಗಳ ಕಡೆಗೆ ನಾಗಮಹಾಶಯರ ಲಕ್ಷವೇ ಇದ್ದಿಲ್ಲ. "ಗುರುದೇವನೇ, ಇಂಥ ಜನರನ್ನು ಇಲ್ಲೇಕೆ ಕರೆತರುವಿ? ಇವರು ನಿನ್ನ ನಿಂದೆ ಮಾಡುವರು! ಧಿಕ್ಕಾರವೀಗೃಹಸ್ಥಾಶ್ರಮಕ್ಕೆ'' ಎನ್ನುತ್ತ ಚಿಂತಾಮಗ್ನರಾಗಿದ್ದರು. ಕೆಲಹೊತ್ತಿನ ಮೇಲೆ ನಾಗಮಹಾಶಯರು ಶಾಂತರಾದರು. ಕೆಲವು ದಿವಸಗಳಾದ ಮೇಲೆ ಆ ಗೃಹಸ್ಥನು ನಾಗಮಹಾಶಯರ ಬಳಿಗೆ ಒಂದು ಕ್ಷಮೆ ಬೇಡಿದನು. ನಾಗಮಹಾಶಯರು ಹೂವಿನಂಥ ಹೃದಯದವರು! ಅವನಿಗೆ ಅಭಯ ಕೊಟ್ಟು, ಹತ್ತಿರ ಕುಳ್ಳಿರಿಸಿಕೊಂಡು ತಂಬಾಕ ಸೇದಲು ಕೊಟ್ಟರು. ಅವನು ಮನೆಗೆ ಹಿಂದಿರುಗಿದಾಗ್ಗೆ ಎಷ್ಟೋ ದೂರದ ವರೆಗೆ ದೀಪ ಹಿಡಿದುಕೊಂಡು ಹೋಗಿ ಕಳಿಸಿಬಂದರು. ಸಾಧುವಿನ ಪಾದುಕಾಘಾತದಿಂದ ಅವನಿಗೆ ತಿಳುವಳಿಕೆ ಹುಟ್ಟಿತು. ಈ ಸುದ್ದಿಯನ್ನು ಕೇಳಿ ಗಿರೀಶಘೋಷರು, ನಾಗಮಹಾಶಯರು ಕಲಕತ್ತೆಗೆ ಬಂದಾಗ್ಗೆ, "ತಾವಂತೂ ಪಾದತ್ರಾಣ ಮೆಟ್ಟುವದಿಲ್ಲ. ಆದರೆ ಆ ಗೃಹಸ್ಥನನ್ನು ಹೊಡೆಯುವಾಗ ಅವು ಎಲ್ಲಿಂದ ಬಂದವು?'' ಎಂದು ಚೇಷ್ಟೆಮಾಡಿದರು. "ಅದೇಕೆ, ಅವನ ಪಾದತ್ರಾಣಗಳಿಂದಲೇ ಅವನಿಗೆ ಹೊಡೆದೆ'' ನೆಂದು ನಾಗಮಹಾಶಯರು ನುಡಿದರು. ಆ ಮೇಲೆ "ಜಯರಾಮಕೃಷ್ಣ ಜಯ ರಾಮಕೃಷ್ಣ'' ಎನ್ನುತ್ತ ನಮಸ್ಕರಿಸಹತ್ತಿದರು. "ನಾಗಮಹಾ

ಶಯರೆಂದರೆ ಹೆಡೆ ಹಿರಿದ ಹಾವಿನಂತೆ '' ಎಂದು ಗಿರೀಶಚಂದ್ರರು ಅನ್ನು ತ್ತಿದ್ದರು.

ನಾಗಮಹಾಶಯರೊಮ್ಮೆ ಬೇಲೂರ ಮಠಕ್ಕೆ ಹೋಗಬೇಕೆಂದು ಹೊರಬಿದ್ದರು ಈ ಮಠವು ಗಂಗಾ ತೀರದಲ್ಲಿದೆ. ಡೋಣಿಯಲ್ಲಿ ಕುಳಿತುಕೊಂಡು ನಾಗಮಹಾಶಯರು ಸಾಗಿದ್ದರು. ಡೋಣಿಯಲ್ಲಿ ಜನರ ದಟ್ಟಣಿಯಾಗಿದ್ದರಿಂದ ನಾಗಮಹಾಶಯರು ಹುದುಗಿಕೊಂಡು ಕುಳಿತಿದ್ದರು. ಡೋಣಿಯು ಲಾಲಬಾಬುಗಳ ಘಾಟವನ್ನು ಸಮೀಪಿಸಿದ ಕೂಡಲೆ ಮಠವು ಕಾಣಹತ್ತಿತು. ನಾಗಮಹಾಶಯರು ಅದನ್ನು ನೋಡಿ ಪ್ರಣಾಮ ಮಾಡಹತ್ತಿದರು. ಅದನ್ನು ನೋಡಿ ಡೋಣಿಯಲ್ಲಿ ಕುಳಿತ ಪ್ರವಾಸಿಯೊಬ್ಬನು ಮಠವನ್ನು ಅನೇಕ ವಿಧವಾಗಿ ನಿಂದಿಸಹತ್ತಿದನು ಇದರಿಂದೊಳ್ಳೆ ಹುರುಪಿಗೆದ್ದು ಮತ್ತಿಬ್ಬರು ಅವನೊಡನೆ ದನಿಗೂಡಿಸಿದರು! ನಾಗಮಹಾಶಯರು ಇದನ್ನು ಸಹಿಸುವರೆ? ಆ ನಿಂದಕನ ಬಳಿಗೆ ಹೋಗಿ ತಮ್ಮ ಎರಡೂ ಮುಷ್ಟಿಗಳನ್ನು ಅವನೆದುರಿಗೆ ಹಿಡಿದು "ನಿಮಗೆ ಹೇಗಾದರೂ ಮಾಡಿ ರೊಕ್ಕ ಗಳಿಸುವದು ಮಾತ್ರ ಗೊತ್ತಿದೆ. ಮಠದ ಬಗ್ಗೆ ತಮಗೇನು ಗೊತ್ತಿದೆ? ಸುಮ್ಮನೆ ಕಣ್ಣುಮುಚ್ಚಿ ಕುಳಿತುಕೊಳ್ಳಿರಿ ನಿರರ್ಥಕವಾಗಿ ಸಾಧುಗಳ ನಿಂದೆ ಮಾಡುವ ನಿಮಗೆ ಧಿಕ್ಕಾರವಿರಲಿ" ಎಂದು ಗರ್ಜಿಸಹತ್ತಿದರು. ಆ ನಿಂದಕನು ಹೆದರಿ ನಾವಾಡಿಗನಿಗೆ 'ನಾನಿಲ್ಲಿಯೇ ಇಳಿಯುವೆನು; ಬೇಗನೆ ನೌಕೆಯನ್ನು ದಂಡೆಗೆ ಒಯ್ಯಿ' ಂದು ಹೇಳಿದನು. ಪೂಜ್ಯರಾದ ಸ್ವಾಮಿ ವಿವೇಕಾನಂದರು ಇದನ್ನು ಕೇಳಿ "ಪ್ರಸಂಗ ವಿಶೇಷದಲ್ಲಿ ನಾಗಮಹಾಶಯರಂತೆ ಹೀಗೆ ಸಿಂಹನಂತಾಗುವದ ಅವಶ್ಯ''ವೆಂದು ನುಡಿದರು. ಮತ್ತೆ "ನಾಗಮಹಾಶಯರೆಂದರೆ ಚೊಕ್ಕ ಚಿನ್ನ"ವೆಂದು ನುಡಿದರು.

ಬಾರದಿಯ ಬ್ರಹ್ಮಚಾರಿಯ ಶಿಷ್ಯನೊಬ್ಬನು ನಾಗಮಹಾಶಯರ ಕಡೆಗೆ ಯಾವಾಗಲಾದರೊಮ್ಮೆ ಬರುತ್ತಿದ್ದನು. ಹಿಂದೆ ಹೇಳಿದ ಘಟನೆಯು ಸಂಭವಿಸಿದ ನಂತರ ಅವನು ನಾಗಮಹಾಶಯರಿಗೆ "ನೀವು ರಕ್ತಕಾರಿ ಒಂದು ವರ್ಷದಲ್ಲಿ ಸಾಯುವಿರೆಂದು ಬ್ರಹ್ಮಚಾರಿಯು ಶಾಪ ಕೊಟ್ಟಿರುವನೆಂ''ದು ಹೇಳಿದನು. ನಾಗಮಹಾಶಯರು ನಕ್ಕು "ನನ್ನದೊಂದು

ಕೂದಲೆಳೆಯು ಸಹ ಅಳಿಯುವದಿಲ್ಲ'' ಎಂದು ನುಡಿದರು. ಒಂದು ವರ್ಷವಾಯಿತು; ಬ್ರಹ್ಮಚಾರಿಯ ಶಾಪವು ವಿಫಲವಾದುದನ್ನು ಕಂಡು ಆ ಶಿಷ್ಯನು ಬ್ರಹ್ಮಚಾರಿಯ ಸಂಸರ್ಗವನ್ನು ಬಿಟ್ಟುಬಿಟ್ಟನು. ಹಾಗೂ ನಾಗಮಹಾಶಯರನ್ನು ಹಿಂಬಾಲಿಸಿ, ಜ್ಞಾನಮಾರ್ಗವನ್ನು ಬಿಟ್ಟು ಭಕ್ತಿ ಮಾರ್ಗದಲ್ಲಿ ಶೀಘ್ರವಾಗಿಯೇ ಉನ್ನತಿಯನ್ನು ಹೊಂದಿದನು. "ಬಾರದಿಯ ಬ್ರಹ್ಮಚಾರಿಯು ಅನೇಕ ಗೃಹಸ್ಥರಿಗೆ ತನ್ನ ವೇದಾಂತಜ್ಞಾನವನ್ನುಪದೇಶಮಾಡಿ ಅವರ ತಲೆ ಕೆಡಿಸಿ ಬಿಟ್ಟನು. ಪ್ರಾಪಂಚಿಕರಿಗೆ ಜ್ಞಾನ ಮಾರ್ಗದಂತೆ ನಡೆಯುವದು ಅಸಾಧ್ಯ'' ಎಂದು ನಾಗಮಹಾಶಯರು ಹೇಳುತ್ತಿದ್ದರು.

ನಾಗಮಹಾಶಯರ ಮನೆಗೊಮ್ಮೆ ಒಬ್ಬ ಸನ್ಯಾಸಿಯು ಬಂದಿದ್ದನು. ವಸ್ತ್ರಹೀನನಾಗಿದ್ದರಿಂದಲೇ ಆವನು ತ್ಯಾಗಿಯೆನ್ನಬಹುದಾಗಿತ್ತು! ಬಡ ಗೃಹಸ್ಥರ ಬಗ್ಗೆ ಅವನೊಳ್ಳೇ ವಿರಕ್ತಭಾವವನ್ನು ತೋರಿಸುತ್ತಿದ್ದನು! ಈಶ್ವರಾನುರಾಗವು ಎಷ್ಟಿತ್ತೋ ಏನೋ, ಗಾಂಜಿಯ ಮೇಲೆ ಮಾತ್ರ ಅಸಾಧಾರಣ ಭಕ್ತಿಯಿತ್ತು! ಗಾಂಜಿ ಸೇದುವದರಲ್ಲಿ ಅವನ ಸರಿ ಯಾರೂ ಇರಲಿಲ್ಲ! ಸನ್ಯಾಸಿಯು ನುಗ್ನನಾಗಿಯೇ ಬರುತ್ತಿದ್ದನು. ಆದರೆ ದೂರದಿಂದ ನಾಗಮಹಾಶಯರನ್ನು ನೋಡಿ ತುಸು ಸಂಕೋಚವೆನಿಸಿ ಅರಿವೆಯೊಂದನ್ನು ಸುತ್ತಿಕೊಂಡನು. ಆ ಮೇಲೆ ಅವರೊಡನೆ ಸಿದ್ಧಿಗಳ ವಿಷಯವಾಗಿ ಮಾತನಾಡಹತ್ತಿದನು ನಾಗಮಹಾಶಯರು ಅವನಿಗೆ "ಇವೆಲ್ಲ ವಿಚಾರಗಳು ಶುದ್ಧ ಭಕ್ತಿಗೆ ವಿರೋಧಕವಾಗಿರುವವು'' ಎಂದು ಹೇಳಿದರು. ಸನ್ಯಾಸಿಯು ಅವರ ಮಾತಿಗೆ ಕಿವಿಗೊಡದೆ "ನಾನು ವಿಷ್ಟೆಯನ್ನು ತಿಂದು ಏಳು ದಿನ ಇರಬಲ್ಲೆನೆಂ''ದು ನುಡಿದನು.

ನಾಗಮಹಾಶಯ:— ಅದೇನು ಅಂಥ ಮಹತ್ಕೃತ್ಯವಲ್ಲ! ನಾಯಿಯು ಅದನ್ನೇ ತಿಂದು ಬದುಕುವದಿಲ್ಲವೇ?

ಸನ್ಯಾಸಿ:— ನಾನು ನಗ್ನನಾಗಿಯೇ ಇರುತ್ತಿರುವೆನು.

ನಾಗಮಹಾಶಯ:— ಹುಚ್ಚರು, ಪಶುಪಕ್ಷಿಗಳು ಹಾಗು ಇನ್ನೆಷ್ಟೋ ಜಂತುಗಳು ನಗ್ನವಾಗಿಯೇ ಇರುತ್ತವೆ. ಇದರಲ್ಲಿ ಆಶ್ಚರ್ಯಪಡಬೇಕಾದದ್ದೇನು?

ಸನ್ಯಾಸಿ:— ನಾನು ಗಿಡದಡಿಯಲ್ಲಿ ಜೀವಿಸುತ್ತಿರುವೆನು.

ನಾಗಮಹಾಶಯ:— ಎಷ್ಟೋ ಜಂತುಗಳು ಗಿಡಗಳನ್ನೇ ಆಶ್ರಯಿಸಿರುತ್ತವೆ. ಎಂದ ಮೇಲೆ ನಿನ್ನನ್ನು ಹೊಗಳಬೇಕೇ?

ಸನ್ಯಾಸಿಯು ಈ ರೀತಿಯಾಗಿ ಏನೇನೋ ಹೇಳುತ್ತ ಕುಳಿತಿದ್ದನು; ನಾಗಮಹಾಶಯರ ಭಕ್ತನಾದ ನಟವರನು ಅವನಿಗೆ ಮತ್ತೆ ಮಾತೆತ್ತಗೊಡದೆ, ಹೊರಟುಹೋಗಲು ಸನ್ಯಾಸಿಗೆ ಸನ್ನೆಮಾಡಿದನು. ಸಿದ್ಧಿಗಳ ವಿಷಯವಾಗಿ ನಾಗಮಹಾಶಯರು "ಅದೇನು ಐದು ನಿಮಿಷಗಳ ಕೆಲಸ; ಐದೇ ನಿಮಿಷ ಕುಳಿತುಕೊಂಡರೆ ಬೇಕಾದ ಸಿದ್ಧಿಯನ್ನು ಪಡೆಯಬಹುದು" ಎಂದು ಹೇಳುತ್ತಿದ್ದರು

ಪೂರ್ವಬಂಗಾಲದಲ್ಲಿ ಬಹುಶಃ ಇಂಥ ಸಾಧುಗಳೇ ಕಾಣಬರುತ್ತಿದ್ದರು. ಹಾಗೂ ಅವರ ಪ್ರತಿಷ್ಠೆಯೇ ಅಲ್ಲಿ ವಿಶೇಷವಾಗಿತ್ತು. ನಾಗಮಹಾಶಯರ ದೀನಹೀನಭಾವ. ಮಲಿನವೇಷ ಹಾಗೂ ಅವರು ಇತರ ಸರ್ವಸಾಧಾರಣ ಜನರಂತೆ ಪ್ರಪಂಚಿಗರಾಗಿರುವದನ್ನು ನೋಡಿ ಇವರು ಅಂಥ ಮಹಾಪುರುಷರಿರುವರೆಂದು ಯಾರಿಗೂ ಮೊದಲು ಮೊದಲು ತಿಳಿದಿರಲಿಲ್ಲ; ಆದರೆ ಒಂದು ಸಾರೆ ಇವರೊಡನೆ ಮಾತನಾಡಿದರೆ ಸಾಕು. ಇವರು ಮಾನವರೂಪೀ ದೇವತೆಯೆಂದು ಸಹಜವಾಗಿ ಅನಿಸುತ್ತಿತ್ತು. ದೀನಬಂಧು ಮುಖೋಪಾಧ್ಯಾಯರೆಂಬುವವರೊಮ್ಮೆ ದೇವಭೋಗಕ್ಕೆ ಹೋಗಿದ್ದರು. ದೀನಬಂಧುಗಳೊಳ್ಳೇ ಗಾಯಕರಾಗಿದ್ದರು ರಾಮಪ್ರಸಾದ ಕವಿಯಿಂದ ರಚಿತವಾದ ಒಂದು ಹಾಡನು ಅವರು ಹಾಡಿದರು. ನಾಗಮಹಾಶಯರು ಅದನ್ನು ಕೇಳಿ ಬಹು ಭಾವಸ್ಥರಾದರು. ದೀಬಂಧುಗಳು ಅನ್ನುತ್ತಾರೆ, "ಇಂಥ ಮಹಾಪುರುಷನನ್ನು ನಾನೆಂದಿಗೂ ಕಂಡಿಲ್ಲ. ಪುರಾಣಗಳಲ್ಲಿ ವಿದುರ ಮೊದಲಾದ ಮಹಾತ್ಮರ ಕಥೆಗಳನ್ನು ಕೇಳುತ್ತೇವೆ ನಾಗಮಹಾಶಯರು ಅವರಿಗಿಂತ ಕಡಿಮೆ ಯೋಗ್ಯತೆಯವರಲ್ಲ. ವಿದುರನೇ ನಾಗಮಹಾಶಯರ ಅವತಾರ ತಾಳಿರುವನೇನೋ ಎಂದು ನನಗನಿಸುತ್ತದೆ!"

ನಾಗಮಹಾಶಯರ ಮೂಲ ಬಂಗಾಲಿ ಚರಿತ್ರಕಾರರಾದ ಶ್ರೀ. ಶರಚ್ಚಂದ್ರ ಚಕ್ರವರ್ತಿಯವರ ಮಾವಂದಿರಾದ ಮದನಮೋಹನ ಬಾದುರೀ

ಯುವರು ನಾಗಮಹಾಶಯರ ಸಹವಾಸದ ಪ್ರಭಾವದಿಂದ ತಮ್ಮ ಅಳಿಯನು ಓದುಬರಹದಲ್ಲಿ ಮನಸ್ಸು ಹಾಕುವದಿಲ್ಲವೆಂದೂ ಪ್ರಪಂಚದಲ್ಲಿ ಆಸ್ಥೆಹೀನನಾಗಿರುವನೆಂದೂ ಕರ್ಣೋಪಕರ್ಣವಾಗಿ ಕೇಳಿದರು. ಅಳಿಯನ ಅವಸ್ಥೆಯನ್ನು ನೋಡಬೇಕೆಂದು ಅವರು ಒಂದು ದಿನ ದೇವಭೋಗಕ್ಕೆ ಹೋದರು. ನಾಗಮಹಾಶಯರನ್ನು ನೋಡಿ ಅವರ ಮನಸ್ಸಿನ ಉದ್ವೇಗವೆಲ್ಲವೂ ದೂರಾಯಿತು. ನಾಗಮಹಾಶಯರ ಶಾಲೀನತೆಯನ್ನೂ ಸರಲ ಅಮಾಯಿಕ ವ್ಯವಹಾರವನ್ನೂ, ಅತಿಥಿಸತ್ಕಾರವನ್ನೂ ನೋಡಿ ಅವರು ಅತ್ಯಂತ ಸಂತುಷ್ಟರಾಗಿ "ಅಳಿಯನು ಮಹಾಪುರುಷನ ಅನುಯಾಯಿಯಾಗಿರುವನೆಂದಮೇಲೆ ಎಳ್ಳಷ್ಟೂ ಚಿಂತಿಸಬೇಕಾಗಿಲ್ಲ'' ಎಂದು ನುಡಿದರು.

"ಹೂವು ಅರಳಿದ ಮೇಲೆ ಭ್ರಮರಗಳನ್ನು ಕರೆಯಬೇಕಾಗಿಲ್ಲ'' ವೆಂದು ಶ್ರೀರಾಮಕೃಷ್ಣರು ಅನ್ನುತ್ತಿದ್ದರು. ನಿಜವಾಗಿಯೂ ಸಾಧುಸಂಗ ಪ್ರಿಯರಾದ, ಧರ್ಮಾನುರಾಗಿಗಳಾದ ಜನರು ಒಬ್ಬೊಬ್ಬರಾಗಿ ನಾಗಮಹಾಶಯರನ್ನು ಕಾಣಲು ಬರಹತ್ತಿದರು. ಕ್ರಮವಾಗಿ ದೂರದ ಜನರು ಸಹ ಬರಹತ್ತಿದರು ಒಂದೊಂದು ಸಾರೆ ಮುನಸುಫ್, ಡೆಪ್ಯುಟಿ ಕಲೆಕ್ಟರ ಮೊದಲಾದ ಉಚ್ಚ ಸರಕಾರೀ ಅಧಿಕಾರಿಗಳು ಸಹ ಬರುತ್ತಿದ್ದರು. ನಾಗಮಹಾಶಯರು ತಮ್ಮ ಹೆಂಡತಿಗೆ "ನೋಡು, ಗುರುದೇವನ ಆಶೀರ್ವಾದವು ಈಗ ಪೂರ್ಣವಾಯಿತು! ಇಲ್ಲಿಗೆ ಬರುವವರೆಲ್ಲರೂ ನಿಜವಾಗಿಯೂ ಧರ್ಮಪ್ರಿಯರೆಂದು ಗುರುದೇವನು ಹೇಳಿದ್ದಾನೆ. ಅವರ ಸೇವೆ ಮಾಡು; ಅದರಿಂದ ಮಂಗಲವಾಗುವದು'' ಎಂದು ಹೇಳುತ್ತಿದ್ದರು.

ತಮ್ಮನ್ನು ಕಾಣಲಿಕ್ಕೆ ಬಂದವರಿಗೆಲ್ಲರಿಗೂ ಊಟ ಮಾಡಿ ಹೋಗಲು ನಾಗಮಹಾಶಯರು ಆಗ್ರಹಪಡುತ್ತಿದ್ದರು. ದೂರದಿಂದ ಬಂದ ಜನರಿಗೆ ಮಲಗಲು ಸ್ಥಳವನ್ನು ಕೊಡಬೇಕಾಗುತ್ತಿತ್ತು. ತಮ್ಮ ಇಚ್ಛೆಯಿದ್ದಷ್ಟು ದಿನ ಜನರಿರಬಹುದಾಗಿತ್ತು. ಪೂಜಾ ಮಂಟಪದ ಎದುರಿಗೆ ಅತಿಥಿಗಳಿಗಾಗಿ ಸ್ಥಳವನ್ನು ಗೊತ್ತುಮಾಡಿದರು. ಅತಿಥಿ ಸತ್ಕಾರದ ಬಗ್ಗೆ ಈ ಗೃಹಸ್ಥ ಪರಿವಾರಕ್ಕೆ ಅಸಾಧಾರಣ ಉತ್ಸಾಹವಿತ್ತು. ದೀನದಯಾಲರು "ಛಲಬಲದಿಂದ ಸಹ ಬ್ರಾಹ್ಮಣನು ಉಂಡರೆ ಸ್ವರ್ಗಪ್ರಾಪ್ತಿಯಾಗುವದು. ಈ ಬಡವನ ಗುಡಿಸಲಕ್ಕೆ ಅತಿಥಿ ನಾರಾಯಣರು ಬರುವದೇ ಪರಮ

ಸೌಭಾಗ್ಯವು'' ಎಂದೆನ್ನುತ್ತಿದ್ದರು "ಇದೆಲ್ಲವೂ ಗುರುದೇವನ ಲೀಲೆ!
ಗುರುದೇವನು ಲೀಲಾಶರೀರದಲ್ಲಿ ಒಬ್ಬನೇ ಇದ್ದನು. ಈಗ ಅವನು
ವಿವಿಧ ರೂಪದಲ್ಲಿ ನನ್ನ ಮೇಲೆ ಕೃಪೆ ಮಾಡಲು ಬರುತ್ತಿದ್ದಾನೆಂ''ದು
ನಾಗಮಹಾಶಯರು ನುಡಿಯುತ್ತಿದ್ದರು. ನಾಗಮಹಾಶಯರು ಅತಿಥಿ
ಗಳೆಂದರೆ ನಾರಾಯಣಸ್ವರೂಪರೆಂಬ ಭಾವನೆಯಿಂದಲೇ ಅವರ ಸೇವೆ
ಮಾಡುತ್ತಿದ್ದರು.

ನಾಗಮಹಾಶಯರೊಮ್ಮೆ ಉದರಶೂಲಿಯಿಂದ ಅತಿಶಯ ಪೀಡಿತ
ರಾದರು. ನಡುನಡುವೆ ಎಚ್ಚರದಪ್ಪಿ ಬೀಳುತ್ತಿದ್ದರು. ಮನೆಯಲ್ಲಿ
ಅಕ್ಕಿ ಇದ್ದಿಲ್ಲ. ಆಕಸ್ಮಿಕವಾಗಿ ಎಂಟುಹತ್ತು ಜನ ಅತಿಥಿಗಳು ಬಂದರು.
ನೋವಿನಿಂದ ನರಳುತ್ತಿದ್ದರೂ ಹಾಗೆಯೇ ಪೇಟೆಗೆ ಹೊರಟರು. ಅವ
ರೆಂದಿಗೂ ಕೂಲಿಯವನ ಮೇಲೆ ಒಜ್ಜೆಯನ್ನು ಹೊರಿಸುತ್ತಿದ್ದಿಲ್ಲ. ಎಲ್ಲ
ಸಾಮಾನುಗಳನ್ನು ತಾವೇ ಹೊತ್ತುಕೊಂಡು ಬರುತ್ತಿದ್ದರು. ಆ ದಿನ
ಅಕ್ಕಿಯ ಚೀಲವನ್ನು ಹೊತ್ತುಕೊಂಡು ಬರುತ್ತಿದ್ದಾಗ ನೋವು ಬಹಳ
ಹೆಚ್ಚಾಗಿ ಹಾದಿಯಲ್ಲಿಯೇ ಬಿದ್ದುಬಿಟ್ಟರು. ಹಾಗೂ "ಹಾಯ ಹಾಯ
ಗುರುದೇವನಿಂದೇನು ಮಾಡಿದನು! ಮನೆಗೆ ನಾರಾಯಣರು ಬಂದಿರು
ವರು; ಅವರ ಸೇವೆಗೆ ತಡವಾಗುತ್ತದೆ. ಭಗವಂತನ ಸೇವೆಯನ್ನು
ಮಾಡಲಾಗದ ಈ ಶರೀರಕ್ಕೆ ಧಿಃಕಾರವಿರಲಿ" ಎಂದು ದುಃಖಿಸಹತ್ತಿದರು.
ನೋವು ತುಸು ಕಡಿಮೆಯಾದ ಮೇಲೆ ಅಕ್ಕಿಯನ್ನು ತೆಗೆದುಕೊಂಡು
ಮನೆಗೆ ಬಂದರು. ಆ ಮೇಲೆ ಮನೆಗೆ ಬಂದ ಅಥಿತಿಗಳೆಲ್ಲರಿಗೂ ನಮ
ಸ್ಕಾರಮಾಡಿ "ತಮ್ಮ ಸೇವೆಗೆ ತಡವಾಯಿತು; ನನ್ನ ಅಪರಾಧವನ್ನು
ಕ್ಷಮಿಸಬೇಕು'' ಎಂದು ಬೇಡಿಕೊಂಡರು.

ಒಂದು ದಿನ ರಾತ್ರಿ ಐದಾರು ಜನ ಅತಿಥಿಗಳು ಬಂದರು. ನಾಗಮ
ಹಾಶಯರ ಮನೆಯಲ್ಲಿ ಅಕ್ಕಿ ಇದ್ದಿಲ್ಲ; ಉರುವಲವೂ ಇದ್ದಿಲ್ಲ.
ಅಂಗಡಿಗಳೆಲ್ಲವೂ ಮುಚ್ಚಿದ್ದವು. ನಾಗಮಹಾಶಯರ ಪತ್ನಿಯು ಅಕ್ಕಿ
ಯನ್ನು ಕೈಗಡ ತರಲು ಹೋದಳು. ಶರಚ್ಚಂದ್ರರಿಗೆ ಇದನ್ನು ನೋಡಿ
ಬಹು ಸಿಟ್ಟು ಬರುತ್ತಿತ್ತು. ಆಗ ನಾಗಮಹಾಶಯರು ಅವರಿಗೆ "ಇದೆ
ಲ್ಲವೂ ಗುರುದೇವನ ಇಚ್ಛೆ, ಆತನ ಅನುಗ್ರಹ ನನ್ನ ಪರೀಕ್ಷೆ ಮಾತ್ರ'
ಎಂದು ತಿಳಿಹೇಳುತ್ತಿದ್ದರು.

ಮಳೆಗಾಲದಲ್ಲೊಂದು ದಿನ ಅವರ ಮನೆಗೆ ಇಬ್ಬರು ಅತಿಥಿಗಳು ಬಂದರು. ಆ ದಿನ ಸಂತತಧಾರೆಯಾಗಿ ಮಳೆ ಸುರಿಯುತ್ತಿತ್ತು. ನಾಗ ಮಹಾಶಯರ ಮನೆಯಲ್ಲಿ ನಾಲ್ಕು ಕೋಣೆಗಳು ಮಾತ್ರ ಇದ್ದವು. ಅವು ಗಳಲ್ಲಿಯೂ ಮೂರು ಕೋಣೆಗಳ ಮಾಳಿಗೆಯಿಂದ ನೀರು ಸೋರುತ್ತಿತ್ತು. ಒಂದೇನೋ ಚನ್ನಾಗಿತ್ತು. ಅದರಲ್ಲಿ ನಾಗಮಹಾಶಯರು ಮಲಗುತ್ತಿದ್ದರು. ಅತಿಥಿಗಳಿಬ್ಬರ ಊಟವೂ ಆಯಿತು. ಆದರೆ ಅವರಿಗೆ ಮಲಗಲು ಸ್ಥಳವೆಲ್ಲಿ? ನಾಗಮಹಾಶಯರು ತಮ್ಮ ಹೆಂಡತಿಗೆ ''ಇಂದು ನಮ್ಮ ಪರಮಸೌಭಾಗ್ಯವು! ಈ ಸಾಕ್ಷಾತ್ ನಾರಾಯಣರಿಗಾಗಿ ನಾವು ಕಷ್ಟವನ್ನೇಕೆ ಸಹಿಸಬಾರದು? ಬಾ, ನಾವಿಬ್ಬರೂ ಮನೆಯ ಸೂರಿನ ಬುಡಕ್ಕೆ ಕುಳಿತುಕೊಂಡು ದೇವರ ನಾಮವನ್ನು ಜಪಿಸುತ್ತ ರಾತ್ರಿಯನ್ನು ಕಳೆಯುವ'' ಎಂದು ಹೇಳಿದರು. ಅತಿಥಿಗಳಿಗೆ ಕೋಣೆಯನ್ನು ತೆರವು ಮಾಡಿಕೊಟ್ಟು ಮನೆಯ ಸೂರಿನ ಬುಡಕ್ಕೆ ಕುಳಿತುಕೊಂಡು ಶ್ರೀರಾಮಕೃಷ್ಣರ ನಾಮಸ್ಮರಣೆಮಾಡುತ್ತ ಇರುಳು ಕಳೆದರು

ನಾಗಮಹಾಶಯರ ಮಾಸಿಕ ಆಯುವ್ಯಯವು ಸಾಮಾನ್ಯ ಗೃಹಸ್ಥರಂತೆ ನಿರ್ಧಾರಿತವಾಗಿದ್ದಿಲ್ಲ. ನಾಗಮಹಾಶಯರು ಮೊದಲು ಪಾಲಬಾಬುಗಳ ಅಧೀನತೆಯಲ್ಲಿ ನೀರದಾರಿಯ ( waterway ) ಮೇಲಿನ ಸುಂಕದ ಕಟ್ಟೆಯಲ್ಲಿ ಕೆಲಸಮಾಡುತ್ತಿದ್ದರಷ್ಟೆ. ಈ ಕೆಲಸವನ್ನು ಅವರು ರಣಜಿತನಿಗೆ ಒಪ್ಪಿಸಿದ್ದೂ ರಣಜಿತನು ಪ್ರಾಪ್ತಿಯ ಅರ್ಧ ಹಣವನ್ನು ನಾಗಮಹಾಶಯರಿಗೆ ಸಲ್ಲಿಸುತ್ತಿದ್ದುದೂ ಹಿಂದೆಯೇ ಬಂದಿದೆ. ಈ ಸುಂಕದ ಕಟ್ಟೆಯಿಂದ ಪ್ರತಿವರ್ಷ ಸಮಾನ ಲಾಭವಾಗುತ್ತಿದ್ದಿಲ್ಲ. ಅತಿಥಿಗಳ ಸಂಖ್ಯೆಯೂ ನಿರ್ದಿಷ್ಟವಿದ್ದಿಲ್ಲ. ಹೀಗಾಗಿ ಒಂದೊಂದು ಸಾರೆ ಸಂಸಾರದ ಅನೇಕ ಸಾಮಾನುಗಳ ಕೊರತೆಯಾಗುತ್ತಿತ್ತು. ಇಂಥ ಪ್ರಸಂಗಗಳಲ್ಲಿ ನಾಗಮಹಾಶಯರು ನಾರಾಯಣಗಂಜದ ತಮ್ಮ ಪರಿಚಿತ ವ್ಯಾಪಾರಸ್ಥರ ಕಡೆಯಿಂದ ಅವಶ್ಯಕ ಸಾಮಾನುಗಳನ್ನು ಉದ್ದರಿ ತರುತ್ತಿದ್ದರು; ಹಾಗೂ ವರ್ಷದ ಕಡೆಗೆ ರಣಜಿತನು ಹಣ ಕಳುಹಿಸಿದ ನಂತರ ಸಾಧ್ಯವಾದಷ್ಟು ಅವರ ಹಣ ಮುಟ್ಟಿಸುತ್ತಿದ್ದರು. ಪೇಟೆಯಲ್ಲಿ ನಾಗಮಹಾಶಯರಿಗಿದ್ದ ಆದರವು ದೊಡ್ಡ ಶ್ರೀಮಂತನಿಗೆ ಸಹ ಇದ್ದಿಲ್ಲ! ಒಂದೇ ಅಂಗಡಿಯಿಂದ ಸಾಮಾನುಗಳನ್ನು ತರುವದು ನಾಗಮಹಾಶಯರ ನಿಯ:

ಮವಾಗಿತ್ತು. "ಸತ್ಯವನ್ನು ನಾವು ಎತ್ತಿಹಿಡಿದರೆ ಅದು ಸದಾ ನಮ್ಮನ್ನು ರಕ್ಷಿಸುವದು. ಭಗವಂತನು ಕೃಪೆಮಾಡುವನು" ಎಂದು ಅವರು ನುಡಿಯುತ್ತಿದ್ದರು. ಯಾರ ಬಳಿಗೆ ಅವರು ಸಾಮಾನುಗಳನ್ನು ಕೊಳ್ಳುತ್ತಿದ್ದರೋ ಅವನು ಅವರ ವಿಷಯವಾಗಿ ಬಹು ಶ್ರದ್ಧೆಯನ್ನು ತೋರಿಸುತ್ತಿದ್ದನು. ಬೇರೆ ಜನರಿಗಿಂತ ಅವರಿಗೆ ಹೆಚ್ಚು ಸಾಮಾನು ಕೊಡುತ್ತಿದ್ದನು. ನಾಗಮಹಾಶಯರಿಗೆ ಇದು ಗೊತ್ತಾದರೆ ಅವರು "ಇತರ ಜನರಿಗೆ ಕೊಡುವಷ್ಟೇ ಸಾಮಾನು ನನಗೆ ಕೊಡಿರಿ, ಹೆಚ್ಚಿಗೆ ಬೇಡ" ಎಂದು ಹೇಳುತ್ತಿದ್ದರು. ನಾಗಮಹಾಶಯರೊಳ್ಳೇ ಭಾಗ್ಯಶಾಲಿಗಳೆಂದೂ ಅವರು ಬೋಣಿಗೆ ಮಾಡಿದ ದಿನ ತಮ್ಮ ವ್ಯಾಪಾರವು ಹೆಚ್ಚಾಗುವದೆಂದೂ ಪೇಟೆಯಲ್ಲಿಯ ಎಲ್ಲ ವ್ಯಾಪಾರಸ್ಥರು ತಿಳಿದಿದ್ದರು. ಆದ್ದರಿಂದ ಎಲ್ಲರೂ ಮೊದಲು ಅವರಿಗೆ ಸಾಮಾನು ಕೊಡಲಿಕ್ಕೆ ಮುಂದಾಗುತ್ತಿದ್ದರು.

ನಾಗಮಹಾಶಯರಿಗೆ ಒಂದು ದಿನ ಹೆಚ್ಚಿಗೆ ಹಾಲು ಬೇಕಾಗಲು ಅವನೊಬ್ಬ ಗವಳಿಗನ ಕಡೆಯಲ್ಲಿ ಹಾಲು ಕೊಂಡರು. ಹಾಗೂ ಬಿಡಿ ರೊಕ್ಕವಿಲ್ಲದ್ದರಿಂದ ಅವನಿಗೆ ಒಂದು ರೂಪಾಯಿ ಕೊಟ್ಟರು. ಉಳಿದ ಹಣವನ್ನು ನಾಗಮಹಾಶಯರು ಯಾವಾಗಲೂ ತಿರುಗಿ ಕೇಳುತ್ತಿದ್ದಿಲ್ಲ. ಅವರೂ ಕೇಳಲಿಲ್ಲ. ಗವಳಿಗನೂ ಉಳಿದ ಹಣ ಕೊಡಲಿಲ್ಲ; ಮತ್ತೊಂದು ದಿನ ಇದೇ ಗವಳಿಗನ ಕಡೆಗೆ ನಾಗಮಹಾಶಯರು ಹಾಲುಕೊಂಡು ಅದರ ಬೆಲೆಯನ್ನು ಆಗಿಂದಾಗ ಕೊಟ್ಟುಬಿಟ್ಟರು. ಹಿಂದಿನ ಹಣದ ವಿಷಯವಾಗಿ ಏನೂ ಕೇಳಲಿಲ್ಲ. ಈ ಮನುಷ್ಯನು ಹುಚ್ಚನಿರಬಹುದು ಅಥವಾ ಮರತಿ ಬಹುದೆಂದು ಗವಳಿಗನು ಭಾವಿಸಿದನು. ತಾನು ಕೊಡಬೇಕಾದ ಹಣ ಕೊಡದೆ ಅವತ್ತಿನ ರೊಕ್ಕವನ್ನು ಮಾತ್ರ ಅವರ ಕಡೆಯಿಂದ ತೆಗೆದುಕೊಂಡುಬಿಟ್ಟನು.

ನಾಗಮಹಾಶಯರು ಪೇಟೆಗೆ ಹೋದಾಗ್ಗೆ ಸರಕುಗಳ ಬೆಲೆಯ ಬಗೆ ಏನೂ ಆಕ್ಷೇಪಣೆ ಮಾಡುತ್ತಿದ್ದಿಲ್ಲ. ಅಂಗಡಿಕಾರನು ಹೇಳಿದ ದರವನ್ನು ಕೊಡುತ್ತಿದ್ದರು. ಒಂದು ದಿನ ನಾಗಮಹಾಶಯರನ್ನು ಕಾಣಲು ಬಂದ ಒಬ್ಬ ಗೃಹಸ್ಥನು ಬೇನೆಬಿದ್ದನು. ನಾಗಮಹಾಶಯರು ಬಹು ಪರಿಶ್ರಮದಿಂದ ರೋಗಿಯ ಶುಶ್ರೂಷೆ ಮಾಡಿದರು. ಆ ಗೃಹಸ್ಥನಿಗೆ ಗುಣವಾಗಲು ಅವನನ್ನು ಆತನ ಊರಿಗೆ ಕಳಿಸಬೇಕೆಂದು, ಅವನಿಗಾಗಿ ಒಂದು ದೋಣಿ

ಯನ್ನು ಬಾಡಿಗೆ ಮಾಡಲು ಹೋದರು. ಅವರ ಶಿಷ್ಯರಾದ ಶರಚ್ಚಂದ್ರರೂ ಊರಿಗೆ ಹೋಗುವವರಿದ್ದರು. ನಾಗಮಹಾಶಯರು ಅಂಬಿಗನಿಗೆ ದೋಣಿಯ ಬಾಡಿಗೆ ಕೇಳಲು ಅವನು ವಿಪರೀತ ದರವನ್ನು ಹೇಳಿದನು. ಅದು ಅತ್ಯಂತ-ಅಸಂಗತವೆಂದೆನಿಸಿ ಶರಚ್ಚಂದ್ರರು ಅವನ ಮೇಲೆ ಒದರಾಡಹತ್ತಿದರು. ನಾಗಮಹಾಶಯರು ಅವರಿಗೆ ಸಿಟ್ಟು ಮಾಡಿ "ಸುಮ್ಮನೇ ಏಕೆ ಜಗಳಾಡುವದು ? ಇವರೆಂದೂ ಸುಳ್ಳಾಡುವದಿಲ್ಲ'' ಎಂದು ಹೇಳಿದರು. ಅಂಬಿಗನು ಬೇಡಿದಷ್ಟು ಹಣವನ್ನೇ ಕೊಡುವದು ಗೊತ್ತಾಯಿತು ರೋಗಿಯನ್ನು ಕರೆದುಕೊಂಡು ಬಂದು ಅದರಲ್ಲಿ ಕುಳ್ಳಿರಿಸಿದರು. ಅವನ ಕಡೆಗೆ ಏನೂ ಹಣವಿದ್ದಿಲ್ಲ. ಹೀಗಾಗಿ ನಾಗಮಹಾಶಯರೇ ಅವನ ಬಾಡಿಗೆಯನ್ನು ಕೊಟ್ಟರು. ಈ ರೀತಿಯಾಗಿ ಅನೇಕ ಜನರ ಹಾದಿಯಾ ಖರ್ಚನ್ನು ಕೊಡಬೇಕಾಗುತ್ತಿತ್ತು.

ಈ ರೀತಿಯಾಗಿ ಅಪರಿಮಿತ ಹಣವನ್ನು ವೆಚ್ಚ ಮಾಡುತ್ತಿದ್ದ ಕಾರಣ ನಾಗಮಹಾಶಯರು ಎಷ್ಟೋ ಸಲ ಸಾಲ ಮಾಡಬೇಕಾಯಿತು. ಅವರ ಆ ಸಾಲವನ್ನು ಯಾರಾದರೂ ತೀರಿಸಬೇಕೆನ್ನುತ್ತಿದ್ದರೆ ನಾಗಮಹಾಶಯರು ಅದಕ್ಕೊಪ್ಪುತ್ತಿದ್ದಿಲ್ಲ; ಪೂಜ್ಯ ಸ್ವಾಮಿ ವಿವೇಕಾನಂದರು ಅಮೇರಿಕೆಯಿಂದ ಬಂದ ಮೇಲೆ ನಾಗಮಹಾಶಯರ ಸಾಲದ ಸುದ್ದಿಯನ್ನು ಕೇಳಿ ತಾವಷ್ಟು ಸಹಾಯ ಮಾಡಬೇಕೆಂದರು. ಆದರೆ ನಾಗಮಹಾಶಯರು "ತಾವು ನನ್ನ ಮೆಲೆ ಇಷ್ಟು ಕೃಪೆ ಮಾಡುವದೇ ಸಾಕು; ಪಾಲಬಾಬುಗಳಿಂದ ಕೊಡಲ್ಪಡುವ ಹಣದಿಂದ ನನ್ನ ಪ್ರಪಂಚವು ಹೇಗಾದರೂ ಸಾಗುತ್ತಿದೆ'' ಎಂದರು. ನಾಗಮಹಾಶಯರು ಶಿಷ್ಯರಾದ ಶರಚ್ಚಂದ್ರರು ಸಾಲದ ವಿಷಯವಾಗಿ ಚಿಂತಿತರಾಗಿದ್ದುದನ್ನು ನೋಡಿ "ಏನೂ ದೊರೆಯದಿದ್ದರೆ ಉಪವಾಸ ಮಾಡಬಹುದ; ಆದರೆ ಗೃಹಸ್ಥ ಧರ್ಮವನ್ನೆಂದಿಗೂ ಬಿಡಬಾರದು. ಅದೆಲ್ಲ ಹಾಳು ಲಗಳೆಯನ್ನು ತೆಗೆದು ಚಿಂತೆ ಮಾಡಬಾರದು. ಶ್ರೀರಾಮಕೃಷ್ಣರು ತಮ್ಮ ಇಚ್ಛೆಯಂತೆ ಎಲ್ಲವನ್ನೂ ಮಾಡುವರು'' ಎಂದು ನುಡಿದರು.

ನಾಗಮಹಾಶಯರೆಂದೂ ಆಳನ್ನಿಟ್ಟುಕೊಳ್ಳುತ್ತಿದ್ದಿಲ್ಲ. ಅವರು ಊರಲ್ಲಿದ್ದಾಗ್ಗೆ ಮನೆಗೆಲಸಕ್ಕಾಗಿ ಆಳು ಹಚ್ಚುವದು ಸಾಧ್ಯವಿದ್ದಿಲ್ಲ. ಅವರು ಬೇರೂರಿಗೆ ಹೋದಾಗ ಅವರ ಹೆಂಡತಿಯು ಹಿತ್ತಲದಲ್ಲಿಯ ಗಿಡ

ಗಂಟೆಗಳನ್ನು ಕಿತ್ತಿಸಿ, ಮನೆ ಹೊಚ್ಚಿಸಿ ಎಲ್ಲವನ್ನೂ ಸ್ವಚ್ಛವಾಗಿಡುತ್ತಿದ್ದಳು. ಒಂದು ಸಾರೆ ನಾಗಮಹಾಶಯರು ಬಹಳ ದಿನಗಳ ವರೆಗೆ ತಮ್ಮ ಊರಲ್ಲಿಯೇ ಇರಲಾಗಿ ಅವರ ಮನೆಯೆಲ್ಲ ನಿರುಪಯೋಗವಾಯಿತು. ಮನೆಯ ಮಾಳಿಗೆಯಿಂದ ನೀರು ಸೋರಹತ್ತಿತು. ಕಡೆಗೆ ಮನೆಯನ್ನು ಹೊಚ್ಚಿಸಬೇಕೆಂದು ಅವರ ಹೆಂಡತಿಯು ಒಂದು ಆಳನ್ನು ಗೊತ್ತು ಮಾಡಿದಳು. ಆ ಆಳು ಮನೆಯಲ್ಲಿ ಕಾಲಿಡುವಷ್ಟರಲ್ಲಿಯೇ ನಾಗಮಹಾಶಯರು "ಹಾಯ್ ಹಾಯ್" ಎಂದು ಅನ್ನಹತ್ತಿದ್ದರು. ಅವನನ್ನು ಕುಳ್ಳಿರಿಸಿ ಅವನಿಗೆ ತಂಬಾಕವನ್ನು ಸೇದಲು ಕೊಟ್ಟರು. ತುಸು ಹೊತ್ತಿನ ಮೇಲೆ ಆ ಆಳು ಕೆಲಸವನ್ನಾರಂಭಿಸಿದನು. "ಹಾಯ್ ಹಾಯ್" ಎಂದೆನ್ನುತ್ತ ನಾಗಮಹಾಶಯರು ಅವನಿಗೆ ಇಳಿದು ಬರಲು ಹೇಳಿದರು. ಆದರೆ ಅವನು ಏನಾದರೂ ಇಳಿಯಲಿಲ್ಲ. ಆಗ ನಾಗಮಹಾಶಯರಿಗೆ ತಡೆಯದಾಯಿತು. ಕಪಾಳಕ್ಕೆ ಹೊಡಕೊಳ್ಳಹತ್ತಿದರು. ಹಾಗೂ, "ಗುರುದೇವನೆ, ನೀನು ನನಗೆ ಗೃಹಸ್ಥಾಶ್ರಮವನ್ನಾಳಲು ಏಕೆ ಆಜ್ಞಾಪಿಸಿದೆ? ನನ್ನ ಸುಖಕ್ಕಾಗಿ ಎರಡನೇಯವರು ಕಷ್ಟಪಡುವದನ್ನು ನೋಡಬೇಕಾಯಿತು. ಈ ಗೃಹಸ್ಥಾಶ್ರಮಕ್ಕೆ ಧಿಃಕ್ಕಾರವಿರಲಿ!" ಎಂದು ದುಃಖಿಸಹತ್ತಿದರು. ಅವರ ಈ ವ್ಯಾಕುಲತೆಯನ್ನು ನೋಡಲಾರದೆ ಆ ಆಳು ಇಳಿದು ಬಂದನು. ಅವನು ಇಳಿಯುವದಷ್ಟೇ ತಡ ನಾಗಮಹಾಶಯರು ಅವನಿಗೆ ಪತ್ತೆ ತಂಬಾಕ ಕೊಟ್ಟರು ಮತ್ತು ಅವನಿಗೆ ಗಾಳಿ ಹಾಕಹತ್ತಿದರು. ಇದಲ್ಲದೆ ಅವನಿಗೆ ಇಡೀ ದಿನದ ಸಂಬಳವನ್ನು ಕೊಟ್ಟರು!

ಡೋಣಿಯಲ್ಲಿ ಕುಳಿತುಕೊಂಡರೆ ನಾಗಮಹಾಶಯರು ಅಂಬಿಗನಿಗೆ ಹುಟ್ಟು ಹಾಕಲು ಹಚ್ಚದೆ ತಾವೇ ಹುಟ್ಟು ಹಾಕುತ್ತಿದ್ದರು. ಅವರ ಕುಳಿತುಕೊಂಡ ಇತರ ಜನರು ಅವರನ್ನು ತಡೆಯಬೇಕೆಂದು ಎಷ್ಟು ಯತ್ನ ಮಾಡಿದರೂ ನಾಗಮಹಾಶಯರು ಅದಕ್ಕೆ ಕಿವಿಗೊಡುತ್ತಿದ್ದಿಲ್ಲ. ಹೀಗಾಗಿ ಯಾರೂ ಅವರಿಗೆ ಡೋಣಿಯಲ್ಲಿ ಹತ್ತಗೊಡುತ್ತಿದ್ದಿಲ್ಲ! ಮಳೆಗಾಲದಲ್ಲಿ ದೇವಭೋಗವು ನೀರಲ್ಲಿ ಮುಳುಗಿದಂತಾಗಿರುತ್ತಿತ್ತು. ಡೋಣಿಯಿಂದಲ್ಲದೆ ಹಾಗೆಯೇ ಒಂದು ಮನೆಯಿಂದ ಮತ್ತೊಂದು ಮನೆಗೆ ಹೋಗುವದು ಸಾಧ್ಯವಿದ್ದಿಲ್ಲ. ನಾಗಮಹಾಶಯರ ಸ್ವತಃದ ಡೋಣಿಯಿದ್ದಿಲ್ಲ. ಅವರ ಹೆಂಡತಿಯು ನೆರೆಹೊರೆಯವರ ಸಹಾಯದಿಂದ ಉರುವಲು ಮೊದಲಾದುದನ್ನು ಸಂಗ್ರಹಿಸಿಡುತ್ತಿದ್ದಳು.

ಪ್ರತಿದಿನ ಸಂಜೆಯ ಮುಂದೆ ನಾಗಮಹಾಶಯರು ಧೂಪವನ್ನು ಹಾಕಿ ಶ್ರೀರಾಮಕೃಷ್ಣರ ಚಿತ್ರವನ್ನು ಪೂಜಿಸುತ್ತಿದ್ದರು. ಭಕ್ತರು ಕೂಡಿದರೆ ಬಹುಶಃ ಸಂಕೀರ್ತನೆಯಾಗುತ್ತಿತ್ತು. ಸಂಕೀರ್ತನೆಯಲ್ಲಿ ನಾಗಮಹಾಶಯರು ಬಹುತರವಾಗಿ ಸೇರುತ್ತಿದ್ದಿಲ್ಲ; ಯಾವದಾದರೊಂದು ಮೂಲೆಯಲ್ಲಿ ಕುಳಿತುಕೊಂಡು ನೆರೆದ ಜನರಿಗೆ ತಂಬಾಕವನ್ನು ಸಿದ್ಧಪಡಿಸಿಕೊಡುತ್ತಿದ್ದರು. ಅವರು ಅಲ್ಲಿ ಉಪಸ್ಥಿತರಿರುತ್ತಿದ್ದರೆ ಕೀರ್ತನಕ್ಕೆ ಒಳ್ಳೇ ಕಳೆಯೇರುತ್ತಿತ್ತು. ಕೀರ್ತನಾಂತದಲ್ಲಿ ನಾಗಮಹಾಶಯರು ಶ್ರೀರಾಮಕೃಷ್ಣರ ಜಯಧ್ವನಿಯನ್ನು ಮಾಡುತ್ತಿದ್ದರು.

ಕೇವಲ ಕೀರ್ತನೆಯೊಂದೇ ಅಲ್ಲ, ನಾಗಮಹಾಶಯರ ಮನೆಯ ಪ್ರತಿಯೊಂದು ಕಾರ್ಯಕಲಾಪದಲ್ಲಿಯೂ ಭಕ್ತಿಯ ಪೂರ್ಣ ಉಚ್ಛ್ವಾಸವು ಕಂಡುಬರುತ್ತಿತ್ತು. ಒಂದು ವರ್ಷ ಸರಸ್ವತೀ ಪೂಜೆಯ ದಿನ ಶರಚ್ಚಂದ್ರರು ಅವರ ಮನೆಗೆ ಹೋದರು. ನಾಗಮಹಾಶಯರು ಆಗಾಗ ಇವರ ಬಾಯಿಂದ ಶಾಸ್ತ್ರವ್ಯಾಖ್ಯೆಯನ್ನು ಕೇಳುತ್ತಿದ್ದರು. ಒಂದೇ ಶ್ಲೋಕದ ಬೇರೆ ಬೇರೆ ವ್ಯಾಖ್ಯೆಯನ್ನು ಕೇಳಿ "ಇದೂ ಸರಿ; ಅದಾದರೂ ಸರಿ. ಅಧಿಕಾರಿಗೆ ತಕ್ಕಂತೆ ಶಾಸ್ತ್ರದಲ್ಲಿ ವ್ಯಾಖ್ಯೆಯು ಮಾಡಲ್ಪಟ್ಟಿದೆ. ಇದರಲ್ಲಿ ವ್ಯಾಖ್ಯಾನಕಾರನ ದೋಷವಿಲ್ಲ" ಎಂದನ್ನುತ್ತಿದ್ದರು. ಶ್ರೀರಾಮಕೃಷ್ಣರ ಬಹುರೂಪಿಯ ಕಥೆಯನ್ನುಲ್ಲೇಖಿಸಿ "ಈಶ್ವರನಿಗೆ ಅನಂತ ರೂಪಗಳು. ಭಕ್ತರು ತಮ್ಮ ತಮ್ಮ ಭಾವನೆಯಂತೆ ಅವನನ್ನು ಬಣ್ಣಿಸಿದ್ದಾರೆ. ಆದರೆ ಅವನ ನಿಜಸ್ವರೂಪವು ಯಾವುದೆಂಬುದು ತಿಳಿಯುವದು ಅಸಾಧ್ಯ" ಎಂದು ಹೇಳಿದರು. ಆ ಮೇಲೆ ಮಂಡಪದಲ್ಲಿ ವಿರಾಜಿಸುತ್ತಿದ್ದ ದೇವೀ ಮೂರ್ತಿಯನ್ನು ತೋರಿಸಿ "ಇದೂ ಸತ್ಯ. ಈ ದೇವದೇವಿಯರನ್ನು ಆರಾಧಿಸಿ ಎಷ್ಟೋ ಜನರು ಮುಕ್ತಿಯನ್ನು ಪಡೆದಿರುವರು." ಎಂದು ನುಡಿದು ಪುನಃ ಪುನಃ ದೇವಿಯನ್ನು ಅಭಿವಂದಿಸಹತ್ತಿದರು. ಪೂಜಾಸಾಹಿತ್ಯದಿಂದ ಮಂಡಪವು ತುಂಬಿದೆ. ಪುರೋಹಿತನು ಪೂಜೆ ಮಾಡುತ್ತಿದ್ದಾನೆ. ನಾಗಮಹಾಶಯರು ಪುನಃ ದೇವಿಯನ್ನು ತೋರಿಸಿ ನುಡಿದರು— "ತಾಯಿಯು (ದೇವಿಯು) ಸಾಕ್ಷಾತ್ ವಿದ್ಯಾರೂಪಿಣಿಯು. ಇವಳ ಕೃಪೆಯಾಗದೆ ಅವಿದ್ಯೆಯನ್ನಾರು ಪಾರಾಗಬಲ್ಲರು? ತಾಯಿಯು ನನ್ನನ್ನು ಮೂರ್ಖನ

ನ್ನಾಗಿ ಮಾಡಿ ಶೂದ್ರರ ಮನೆಗೆ ತಂದಿರುವಳು. ನನಗೆ ಶಾಸ್ತ್ರಾಧಿಕಾರ ವಿಲ್ಲ. ನೀವು ದಯಮಾಡಿ ಶಾಸ್ತ್ರಗಳ ವ್ಯಾಖ್ಯೆಯನ್ನು ತಿಳಿಸಿಕೊಡಿರಿ.'' ದೇವತೆಗಳ ಮೇಲಿನ ಅವರ ಗಾಢ ಶ್ರದ್ಧೆಯನ್ನು ನೋಡಿ ಶರಚ್ಚಂದ್ರರು ನಾಗಮಹಾಶಯರೆಂದರೆ ದೇವತಾಸಿದ್ಧರು, ಬ್ರಹ್ಮಜ್ಞಾನಿಗಳಲ್ಲವೆಂದು ಭಾವಿಸಿದರು. ಅವರು ಹೀಗೆ ವಿಚಾರಿಸುತ್ತಿರುವಷ್ಟರಲ್ಲಿಯೇ ನಾಗಮಹಾ ಶಯರು ಎಲ್ಲಿಯೋ ಹೊರಟುಹೋಗಿದ್ದರು. ಹುಡುಕಿ ನೋಡುವಷ್ಟರಲ್ಲಿ ಅವರು ಅಡಿಗೆಯ ಮನೆಯ ಹಿಂಬದಿಯಲ್ಲಿರುವ ಮಾವಿನ ಗಿಡದ ಬುಡದಲ್ಲಿ ನಿಂತುಕೊಂಡಿದರು. ಆಗ ಅವರು ಪೂರ್ಣ ಭಾವಾವೇಶದಲ್ಲಿದ್ದರು. ಹಾಗೂ "ತಾಯಿಯೇನು ಈ ಮಣ್ಣಿನ ಮೂರ್ತಿಯಲ್ಲಿ ಬದ್ಧಳಾಗಿರುವಳೇ? ಅವಳು ಅನಂತ ಸಚ್ಚಿದಾನಂದಮಯಿಯು. ಅವಳು ಮಹಾವಿದ್ಯಾಸ್ವರೂ ಪಿಣಿಯು'' ಎಂದು ನುಡಿದರು. ಹೀಗೆ ನುಡಿಯುತ್ತಲೇ ಅವರು ಗಭೀರ ವಾದ ಸಮಾಧಿಯಲ್ಲಿ ಮಗ್ನರಾದರು. ಅರ್ಧತಾಸಿನ ಮೇಲೆ ಅವರ ಸಮಾಧಿಯು ಭಂಗವಾಯಿತು. ಇದನ್ನು ಶರಚ್ಚಂದ್ರರು ನಾಗಮಹಾಶ ಯರ ಹೆಂಡತಿಯ ಮುಂದೆ ಹೇಳಲು ಅವಳು, "ಅಯ್ಯಾ ನೀನೇನೋ ಅವರ ಈ ಅವಸ್ಥೆಯನ್ನು ಇಂದು ಹೊಸದಾಗಿ ನೋಡಿದೆ. ಒಂದೊಂದು ದಿನ ಅವರಿಗೆ ಎರಡು ಮೂರು ತಾಸುಗಳಾದರೂ ಎಚ್ಚರವೇ ಆಗುವದಿಲ್ಲ. ಒಂದು ದಿನವಂತೂ ಅವರು ದೇಹವನ್ನಿಲ್ಲಿ ವಿಸರ್ಜಿಸುವರೋ ಎಂದು ಸಂಶಯ ಬರುವಂತಾಗಿತ್ತು!'' ಎಂದು ಹೇಳಿದಳು.

ಒಂದೊಂದು ಸಾರೆ ಬಹಳ ಜನರು ನೆರೆದುದನ್ನು ನೋಡಿ ಅವರು, "ತಾಯಿ, ಇದೇನಾಯಿತು'' ಎಂದನ್ನುತ್ತ ಕಲಕತ್ತೆಗೆ ಓಡಿಹೋಗುತ್ತಿದ್ದರು! ಇದಲ್ಲದೆ ಶ್ರೀರಾಮಕೃಷ್ಣರ ಭಕ್ತವೃಂದವನ್ನು ನೋಡಲು ಮನವು ವ್ಯಾಕುಲವಾದಾಗ್ಗೆ ಅವರು ಕಲಕತ್ತೆಗೆ ಹೊರಟುಬರುತ್ತಿದ್ದರು. ಮತ್ತೆ ಪ್ರತಿವರ್ಷವೂ ದುರ್ಗಾಪೂಜೆಯ ಮೊದಲು ಕಲಕತ್ತೆಗೆ ಸಾಮಾನುಗ ಳನ್ನು ತರುವದಕ್ಕಾಗಿ ಹೋಗಿ ಬರುತ್ತಿದ್ದರು.

ನವದ್ವೀಪದಿಂದೊಂದು ಸಾರೆ ಇಬ್ಬರು ಸಾಧುಗಳು ಪ್ರತ್ಯಾದಿಷ್ಟ ರಾಗಿ ನಾಗಮಹಾಶಯರ ದರ್ಶನಕ್ಕಾಗಿ ದೇವಭೋಗಕ್ಕೆ ಬಂದರು.

ಆದರೆ ನಾಗಮಹಾಶಯರು ಆಗ ಊರಲ್ಲಿರದೇ ಇದ್ದ ಕಾರಣ ಅವರು ಮೂರು ದಿನ ಅಲ್ಲಿ ನಿಂತು ತಿರುಗಿ ನವದ್ವೀಪಕ್ಕೆ ಹೋದರು.

ಸ್ವಾಮೀ ತುರಿಯಾನಂದರು ಜ್ಞಾನಾನಂದರೊಡನೆ ದೇವಭೋಗಕ್ಕೆ ನಾಗಮಹಾಶಯರನ್ನು ಕಾಣಲು ಒಂದು ದಿನ ಬಂದರು. ಆಗ ಮಳೆಗಾಲವಾಗಿತ್ತು. ದೇವಭೋಗವೆಲ್ಲ ನೀರೇ ನೀರಾಗಿತ್ತು. ಸ್ವಾಮಿಗಳಿಬ್ಬರೂ ಡೋಣಿಯಿಂದಿಳಿದು ಮನೆಯೊಳಗೆ ಪ್ರವೇಶಿಸಿದರು. ನಾಗಮಹಾಶಯರು ಅವರನ್ನು ನೋಡಿದ ಕೂಡಲೇ “ ಜಯರಾಮಕೃಷ್ಣ ಜಯರಾಮಕೃಷ್ಣ ” ಎನ್ನುತ್ತ ನೀರಿನಲ್ಲಿಯೇ ಹಾರಿಬಿಟ್ಟರು! ಎಚ್ಚರವೇ ತಪ್ಪಿತು! ಸ್ವಾಮಿಗಳು ಅವರನ್ನು ನೀರೊಳಗಿಂದ ಹೊರಗೆತ್ತಿ ತೆಗೆದರು.

ಅಮೇರಿಕೆಯಿಂದ ತಿರುಗಿ ಬಂದ ಮೇಲೆ ಸ್ವಾಮೀ ವಿವೇಕಾನಂದರು ದೇವಭೋಗಕ್ಕೆ ಹೋಗಿ ಹಳ್ಳಿಯ ಜೀವನದ ಸುಖಸ್ವಾಚ್ಛಂದ್ಯವನ್ನು ಉಪಭೋಗಿಸಬೇಕೆಂದು ಬಯಸಿದರು. ನಾಗಮಹಾಶಯರು ಅವರು ಬರುವರೆಂದು ಎಲ್ಲ ಏರ್ಪಾಡನ್ನೂ ಮಾಡಿದ್ದರು. ಆದರೆ ನಾಗಮಹಾಶಯರು ಜೀವಿಸಿರುವ ವರೆಗೂ ದೇವಭೋಗಕ್ಕೆ ಸ್ವಾಮೀಜಿಯವರ ಶುಭಾಗಮನವಾಗಲಿಲ್ಲ.

---

# ೭ನೆಯ ಪ್ರಕರಣ.

## ಗೃಹಸ್ಥಾಶ್ರಮ ಹಾಗೂ ಗುರುಸ್ಥಾನ.

ಕಲಕತ್ತೆಗೆ ಬಂದಾಗ ನಾಗಮಹಾಶಯರು ಎಲ್ಲಕ್ಕೂ ಮೊದಲು ಕಾಲೀಘಾಟಕ್ಕೆ ಹೋಗಿ ದೇವಿಯ ದರ್ಶನವನ್ನು ತೆಗೆದುಕೊಳ್ಳುತ್ತಿದ್ದರು. ಆಮೇಲೆ ಕುಮಾರಟುಲಿಯಲ್ಲಿರುವ ಮನೆಗೆ ಹೋಗಿ ಅರಿವೆಯ ಗಂಟನ್ನಿಟ್ಟು ಹಾಗೆಯೇ ಗಿರೀಶಚಂದ್ರ ಘೋಷ ಇವರ ಮನೆಗೆ ಹೋಗುತ್ತಿದ್ದರು. ಅವರು “ ಐದೇ ನಿಮಿಷ ಗಿರೀಶ ಬಾಬುಗಳ ಬಳಿಯಲ್ಲಿ ಕುಳಿತರೆ ಭವರೋಗವು ದೂರಾಗುವದೆಂ ” ದು ಅನ್ನುತ್ತಿದ್ದರು. ಮತ್ತೆ, “ ಗಿರೀಶ ಬಾಬುಗಳು ಮಹಾ ಬುದ್ಧಿಶಾಲಿಗಳು; ದೃಷ್ಟಿಮಾತ್ರದಿಂದಲೇ ಜನರ

ಅಂತರಂಗವನ್ನು ತಿಳಿದುಕೊಳ್ಳಬಲ್ಲರು. ಈ ಬುದ್ಧಿಬಲದಿಂದಲೇ ಅವರು, ಶ್ರೀರಾಮಕೃಷ್ಣರು ದೇವರ ಅವತಾರವೆಂದು ಎಲ್ಲರಿಗಿಂತಲೂ ಮೊದಲು ಕಂಡು ಹಿಡಿದರೆಂದು ಹೇಳುತ್ತಿದ್ದರು. ಗಿರೀಶಚಂದ್ರರ ವಿಷಯವಾಗಿ ಯಾರಾದರೂ ಮಾತನಾಡಿದಾಗ ನಾಗಮಹಾಶಯರು ಬಹು ಸಂಭ್ರಮದಿಂದ ಅವರನ್ನು (ಗಿರೀಶಚಂದ್ರರನ್ನು) ನಮಸ್ಕರಿಸುತ್ತಿದ್ದರು. ಅವರು ಗಿರೀಶಚಂದ್ರರಿಗೆ ಶ್ರೀರಾಮಕೃಷ್ಣರ ಭಕ್ತವೃಂದದಲ್ಲಿ ಅತಿ ಉಚ್ಚ ಸ್ಥಾನವನ್ನು ಕೊಡುತ್ತಿದ್ದರು.

ನಾಗಮಹಾಶಯರು ಪೂಜೆಯ ಮೊದಲು ಒಂದು ಸಾರೆ ಕಲಕತ್ತೆಗೆ ಹೋದಾಗ್ಗೆ ಅವರೊಡನೆ ಶರಚ್ಚಂದ್ರರೂ ಗಿರೀಶಚಂದ್ರರ ಮನೆಗೆ ಹೋಗಿದ್ದರು. ನಾಗಮಹಾಶಯರನ್ನು ನೋಡಿದ ಕೂಡಲೇ ಗಿರೀಶಚಂದ್ರರು ಮೇಲಿನಿಂದ ಕೆಳಗಿಳಿದು ಬಂದು ಅತ್ಯಂತ ಆದರಪೂರ್ವಕವಾಗಿ ಇಬ್ಬರನ್ನೂ ಅಟ್ಟದ ಮೇಲೆ ಕರೆದುಕೊಂಡು ಹೋದರು. ನಾಗಮಹಾಶಯರ ಗಾದಿಯ ಮೇಲೆ ಕೂಡುವದನ್ನು ಬಿಟ್ಟುಕೊಟ್ಟಿದ್ದರು. ಹೀಗಾಗಿ ಅವರು ನೆಲದಮೇಲೆಯೇ ಕುಳಿತುಕೊಂಡರು. ಅಲ್ಲಿದ್ದ ಸದ್ಗೃಹಸ್ಥರನೇಕರು ಅವರಿಗೆ ಗಾದಿಯ ಮೇಲೆ ಕುಳಿತುಕೊಳ್ಳಲು ಬಹಳ ಹೇಳಿದರು. ಆಗ ಗಿರೀಶ ಬಾಬುಗಳು, "ಅವರಿಗೆ ಆಗ್ರಹ ಮಾಡಬೇಕಾಗಿಲ್ಲ; ಅವರು ತಮ್ಮಿಷ್ಟವಿದ್ದ ಪ್ರಕಾರ ಕುಳಿತುಕೊಳ್ಳಲಿ" ಎಂದು ಹೇಳಿದರು. ನಾಗಮಹಾಶಯರು ಕುಳಿತುಕೊಂಡ ಬಳಿಕ ಗಿರೀಶಚಂದ್ರರು ಅವರೊಡನೆ ಶ್ರೀರಾಮಕೃಷ್ಣರ ವಿಷಯವಾಗಿ ಮಾತಾಡಹತ್ತಿದರು. ನಾಗಮಹಾಶಯರು "ನಾನು ಹುಂಬ ಮನುಷ್ಯ; ಗುರುದೇವನ ಸ್ವರೂಪವನ್ನು ನಾನು ಹೇಗೆ ಕಂಡು ಹಿಡಿಯಬಲ್ಲೆ? ತಾವು ದಯಮಾಡಿ, ಗುರುದೇವನ ಅಡಿದಾವರೆಗಳಲ್ಲಿ ನನಗೆ ಭಕ್ತಿ ಹುಟ್ಟುವಂತೆ ಅನುಗ್ರಹ ಮಾಡಿರಿ" ಎಂದು ನುಡಿದರು.

ನಾಗಮಹಾಶಯರ ಅದ್ಭುತ ದೀನತೆಯನ್ನು ನೋಡಿ ನೆರೆದ ಗೃಹಸ್ಥರು ಆಶ್ಚರ್ಯಚಕಿತರಾಗಿ ಅವರನ್ನೇ ನೋಡಹತ್ತಿದರು. ಆಗ ಗಿರೀಶ ಬಾಬುಗಳು, "ಶ್ರೀರಾಮಕೃಷ್ಣರು ಅವತಾರಿಕರೆಂದು ನಾನು ಸುಮ್ಮನೆ

ಅನ್ನುವೆನೇ? ಯಾರ ಕೃಪಾಬಲದಿಂದ ಮನುಷ್ಯನು ಇಂಥ ಉಚ್ಚ ಅವಸ್ಥೆಯನ್ನು ಹೊಂದುವನೋ ಅವರಿಗೆ ಭಗವಂತನೆಂದಲ್ಲದೆ ಮತ್ತೇನೆಂದು ಕರೆಯಬೇಕು?'' ಎಂದು ನುಡಿದರು.

ಸುರೇಶ ಹಾಗೂ ಶರಚ್ಚಂದ್ರರನ್ನು ಕರೆದುಕೊಂಡು ನಾಗಮಹಾಶಯರೊಂದು ದಿನ ಆಲಮ ಬಾಜಾರದ ಮಠಕ್ಕೆ ಹೋದರು. ಅಲ್ಲಿ ಸ್ವಾಮೀ ತುರೀಯಾನಂದ, ಪ್ರೇಮಾನಂದ ಹಾಗೂ ತ್ರಿಗುಣಾತೀತ ಮೊದಲಾದವರಿದ್ದರು. ನಾಗಮಹಾಶಯರು ಎಲ್ಲರಿಗೂ ಸಾಷ್ಟಾಂಗ ಪ್ರಣಾಮ ಮಾಡಿದರು. ನಾಗಮಹಾಶಯರನ್ನು ಕಂಡು ಮಠದಲ್ಲಿ ಆನಂದದ ಕೋಲಾಹಲವೇ ಎದ್ದಿತು. ಸ್ವಾಮೀ ರಾಮಕೃಷ್ಣಾನಂದರಾಗ ಆರತಿಯನ್ನು ಬೆಳಗುತ್ತಿದ್ದರು. ಆದಾದ ಮೇಲೆ ಎಲ್ಲರೂ ಪ್ರಸಾದಕ್ಕಾಗಿ ಕುಳಿತರು. ಎಲೆಯಲ್ಲಿ ಪ್ರಸಾದವನ್ನು ಕೊಟ್ಟರೆ ಅದನ್ನು ನಾಗಮಹಾಶಯರು ತಿಂದುಬಿಡುವರೆಂದು ತಿಳಿದು ಅವರಿಗೆ ಬೇರೆ ಪಾತ್ರೆಯಲ್ಲಿ ಪ್ರಸಾದ ಕೊಟ್ಟರು. ಪ್ರಸಾದವನ್ನು ಗ್ರಹಿಸಿ, ಬೇಡವೆಂದರೂ ಆ ಪಾತ್ರೆಯನ್ನು ತೊಳೆದೇ ತೆಗೆದುಕೊಂಡು ಬಂದರು. ಆ ದಿನ ರಾತ್ರಿ ಮಠದಲ್ಲಿಯೇ ಇದ್ದು ಮರುದಿನ ಮುಂಜಾನೆ ಮನೆಗೆ ಹೋದರು.

ಅನೇಕ ದಿನಗಳಿಂದ ನಾಗಮಹಾಶಯರಿಗೆ ದಕ್ಷಿಣೇಶ್ವರಕ್ಕೆ ಹೋಗುವದಾಗಿದ್ದಿಲ್ಲ; ಒಂದು ದಿನ ಸುರೇಶಚಂದ್ರರನ್ನು ಕರೆದುಕೊಂಡು ಅಲ್ಲಿಗೆ ಹೊರಟರು. ದಾರಿಯಲ್ಲಿ ಶ್ರೀರಾಮಕೃಷ್ಣರ ಕಡೆಯ ಲೀಲಾಸ್ಥಲವಾದ ಕಾಶೀಪುರದ ತೋಟವನ್ನು ಸುರೇಶಚಂದ್ರರು ಶರಚ್ಚಂದ್ರರಿಗೆ ತೋರಿಸುತ್ತ ನಡೆದಿದ್ದರು. ಕಾಶೀಪುರದ ಹೆಸರು ಕೇಳಿದ ಕೂಡಲೇ ನಾಗಮಹಾಶಯರಿಗೆ ಅತ್ಯಂತ ವ್ಯಥೆಯಾಗುತ್ತಿತ್ತು; ಅವರು ನಡುಗುತ್ತಿದ್ದರು. ಅವರು ಆ ತೋಟದ ಕಡೆಗೆ ಹಣಿಕೆ ಸಹ ಹಾಕಲಿಲ್ಲ. ಆದರೆ ಅವರ ಮೋರೆಯು ಮಾತ್ರ ವಿವರ್ಣವಾಯಿತು. ಕಂಠರೋಗದಿಂದ ಶ್ರೀರಾಮಕೃಷ್ಣರ ದೇಹಾಂತವಾಯಿತೆಂಬ ಮಾತು ಹೊರಡಲು ನಾಗಮಹಾಶಯರು "ಇದೆಲ್ಲವೂ ಅವನ ಲೀಲೆ, ಲೀಲೆ! ಜೀವನ ಉದ್ಧಾರಕ್ಕಾಗಿಯೇ ಗುರುದೇವನು ರೋಗಧಾರಣೆಯನ್ನು ಮಾಡಿದ್ದನೆಂ" ದು ನುಡಿದರು. ನಾಗಮಹಾಶಯರು ಕಾಶೀಪುರದ ಕಡೆಗೆ ಹೋದದ್ದು ಇದೇ ಕಡೆಯ ಸಾರೆ.

ಯಥಾಸಮಯದಲ್ಲಿ ಎಲ್ಲರೂ ದಕ್ಷಿಣೇಶ್ವರವನ್ನು ಮುಟ್ಟಿದರು. ಮಹಾದ್ವಾರದೆದುರಿಗೆ ನಾಗಮಹಾಶಯರು ಸಾಷ್ಟಾಂಗ ನಮಸ್ಕಾರ ಮಾಡಿದರು. ಶರಚ್ಚಂದ್ರರು ದಕ್ಷಿಣೇಶ್ವರವನ್ನು ಈ ಮೊದಲು ನೋಡಿದ್ದಿಲ್ಲವಾದ್ದರಿಂದ ಸುರೇಶಚಂದ್ರರು ಅವರಿಗೆ ಶ್ರೀರಾಮಕೃಷ್ಣರ ಸಾಧನಸ್ಥಲಗಳಾದ ಬಿಲ್ವಮೂಲ, ಪಂಚವಟಿ ಮೊದಲಾದವುಗಳನ್ನು ತೋರಿಸಹತ್ತಿದರು. ನಾಗಮಹಾಶಯರು ಇವರ ಹಿಂದಿನಿಂದ ಯಂತ್ರವಂತೆ ಸಾಗಿದ್ದರು. ಅವರ ಮನಸ್ಸು ಎಲ್ಲಿ ಇತ್ತೋ ಏನೋ! ಕಡೆಗೆ ಮೂವರೂ ಶ್ರೀರಾಮಕೃಷ್ಣರ ಕೋಣೆಯ ಕಡೆಗೆ ಹೊರಟರು. ಕೋಣೆಯ ಬಳಿಗೆ ಹೋದ ಕೂಡಲೇ ನಾಗಮಹಾಶಯರು "ನಾನಿಲ್ಲೇನು ನೋಡಲಿಕ್ಕೆ ಬಂದೆ" ಎಂದನ್ನುತ್ತ ಮುಗ್ಗರಿಸಿ ಬಿದ್ದುಬಿಟ್ಟರು. ಶರಚ್ಚಂದ್ರರು ಅವರನ್ನೆಬ್ಬಿಸಿದರು. ಶರಚ್ಚಂದ್ರರು ಅವರನ್ನು ಕೋಣೆಯೊಳಗೆ ಕರೆದೊಯ್ಯಬೇಕೆಂದು ಎಷ್ಟು ಪ್ರಯತ್ನಿಸಿದರೂ ನಾಗಮಹಾಶಯರು ಒಪ್ಪಲಿಲ್ಲ. "ಅಲ್ಲಿ ಇನ್ನು ಏನು ನೋಡಲಿಕ್ಕೆ ಹೋಗಬೇಕು? ಈ ಜೀವನದಲ್ಲಿ ಎಲ್ಲವೂ ಮುಗಿದು ಹೋಗಿದೆ" ಎಂದು ಅಂದರು. ಬದುಕಿರುವ ವರೆಗೆ ಅವರು ಈ ಕೋಣೆಯಲ್ಲಿ ಎಂದೂ ಪ್ರವೇಶ ಮಾಡಲಿಲ್ಲ. ದಕ್ಷಿಣೇಶ್ವರಕ್ಕೆ ಯಾವಾಗಲಾದರೊಮ್ಮೆ ಹೋದಾಗ್ಗೆ ದೂರಿನಿಂದಲೇ ಈ ಕೋಣೆಯನ್ನು ನಮಸ್ಕರಿಸಿ ಹೊರಟು ಹೋಗುತ್ತಿದರು. ಆ ದಿನ ಶ್ರೀರಾಮಕೃಷ್ಣರ ಸೋದರಳಿಯ ಹೃದಯ ಮುಖ್ಯೋಪಾಧ್ಯಾಯನು ದಕ್ಷಿಣೇಶ್ವರಕ್ಕೆ ಬಂದಿದ್ದನು. (ಶ್ರೀರಾಮಕೃಷ್ಣರ ಸಾಧನೆಯ ದಿನಗಳಲ್ಲಿ ಹೃದಯನು ಅವರ ಪರಿಚಾರಕನಾಗಿದ್ದನು. ತನ್ನ ವೈಸೊಕ್ಕಿನ ಫಲವಾಗಿ ಆತನಿಗೆ ಅವರ ಸಂಬಂಧವು ತಪ್ಪಿತು.) ತನ್ನೊಡನೆ ಹೃದಯನೊಂದು ಅರಿವೆಯ ಗಂಟನ್ನು ತಂದಿದ್ದನು. ಆತನ ಮೋರೆಯು ತೀರಾ ಕಳೆಗುಂದಿತ್ತು. ನಾಗಮಹಾಶಯರು "ಹೃದಯನೀಗ ಊರಲ್ಲೆಲ್ಲ ತಿರುಗಾಡಿ ಅರಿವೆಯನ್ನು ಮಾರಿ ಹೊಟ್ಟೆ ಹೊರೆಯುತ್ತಿದ್ದಾನೆ" ಎಂದು ಹೇಳಿದರು. ಅವರಿಗೆ ಹೃದಯನ ಪರಿಚಯವಿದ್ದಿತು. ಇಬ್ಬರೂ ಶ್ರೀರಾಮಕೃಷ್ಣರ ವಿಷಯವಾಗಿ ಮಾತನಾಡಹತ್ತಿದರು. ಶ್ರೀರಾಮಕೃಷ್ಣರ ಕೋಣೆಯ ಎದುರಿಗೆ ಕುಳಿತುಕೊಂಡು ಹೃದಯನು ದೇವಿಯ ಮೂರು ನಾಲ್ಕು ಸ್ತೋತ್ರಗಳನ್ನು ಹಾಡಿದನು. ನಾಗಮಹಾಶಯರು

“ಗುರುದೇವನು ಇವೇ ಹಾಡುಗಳನ್ನು ಹಾಡುತ್ತಿದ್ದನೆಂ”ದರು. ಹೀಗೆಯೇ ಮಾತುಕತೆ ನಡೆದಮೇಲೆ ಹೃದಯನು “ಶ್ರೀರಾಮಕೃಷ್ಣರ ಅನುಗ್ರಹ ದಿಂದ ನೀವೆಲ್ಲರೂ ಎಂಥ ಯೋಗ್ಯತೆಯನ್ನು ಪಡೆದಿರುವಿರಿ! ನಾನು ಮಾತ್ರ ಇನ್ನೂ ಊರಲ್ಲೆಲ್ಲ ತಿರುತಿರುಗಿ ಅರಿವೆ ಮಾರಿ, ಹೊಟ್ಟೆ ತುಂಬಿಕೊಳ್ಳಬೇ ಕಾಗಿದೆ. ಶ್ರೀರಾಮಕೃಷ್ಣರು ನನ್ನ ಮೇಲೆ ಕೃಪೆ ಮಾಡಲಿಲ್ಲ” ಎಂದೆ ನ್ನುತ್ತ ಹುಡುಗರಂತೆ ಅಳಹತ್ತಿದನು. ದಕ್ಷಿಣೇಶ್ವರದಿಂದ ಎಲ್ಲರೂ ಆಲಮ ಬಾಜಾರದ ಮಠಕ್ಕೆ ಹೋಗಿ ಅಲ್ಲಿ ಸಂಜೆಯ ಪೂಜೆಯ ಕಾಲದಲ್ಲಿ ಕೊಡ ಲ್ಪಡುವ ಪ್ರಸಾದವನ್ನು ತೆಗೆದುಕೊಂಡು, ಅಲ್ಲಿಂದ ಗಿರೀಶಬಾಬುಗಳ ಮನೆಗೆ ಹೋಗಿ, ಆ ಮೇಲೆ ಮನೆಗೆ ಬಂದರು.

ಶ್ರೀರಾಮಕೃಷ್ಣ ಭಕ್ತಜನನಿಯಾದ ಶ್ರೀ ಶಾರದಾದೇವಿಯವರು ಈ ಸಮಯದಲ್ಲಿ ನೀಲಾಂಬರ ಬಾಬುಗಳ ಗಂಗಾತೀರದಲ್ಲಿಯ ತೋಟದೊಳ ಗಿರುವ ಮನೆಯಲ್ಲಿರುತ್ತಿದ್ದರು. (ಶ್ರೀರಾಮಕೃಷ್ಣರು ಜೀವಿಸುತ್ತಿದ್ದಾಗ್ಗೆ ಇವರು ದಕ್ಷಿಣೇಶ್ವರದಲ್ಲಿಯೇ ಇರುತ್ತಿದ್ದರು.) ನಾಗಮಹಾಶಯರೊಂದು ದಿನ ಶರಚ್ಚಂದ್ರರೊಡನೆ ಅಲ್ಲಿಗೆ ಹೋದರು. ಶರಚ್ಚಂದ್ರರು ನಾಗಮ ಹಾಶಯರ ಮನೆಗೆ ಹೋದಾಗ ನಾಗಮಹಾಶಯರು ಉತ್ಕೃಷ್ಟ “ಸಂದೇಶ” ಗಳನ್ನೂ (ಒಂದು ಬಗೆಯ ಸೀ ಪದಾರ್ಥ) ಒಂದು ವಸ್ತ್ರವನ್ನೂ ತೆಗೆದು ಕೊಂಡು ಸಿದ್ಧರಾಗಿ ಕುಳಿತಿದ್ದರು. ಹಾಗೂ ನಡುನಡುವೆ ಹುಡುಗರಂತೆ “ತಾಯಿ, ತಾಯಿ,” ಎಂದೆನ್ನುತ್ತಿದ್ದರು. ಕುಮಾರಟುಲಿಯಿಂದ ಒಂದು ದೋಣಿಯೊಳಗೆ ಕುಳಿತುಕೊಂಡು ಇಬ್ಬರೂ ಅಲ್ಲಿಗೆಹೊರಟರು. ದೋಣಿಯು ಘಟ್ಟವನ್ನು ಮುಟ್ಟಿದ ಕೂಡಲೇ ನಾಗಮಹಾಶಯರು ಗಾಳಿಸೋಂಕಿದ ಬಾಳೆಯ ಎಲೆಯಂತೆ ಕಂಪಿಸಹತ್ತಿದರು. ಹಾಗೂ ಭಾವಾವೇಶದಲ್ಲಿ “ಜಯ ತಾಯಿ, ಜಯ ತಾಯಿ” ಎಂದೆನ್ನುತ್ತ ಹೊಯ್ದಾಡುತ್ತ ಹಾಗೆಯೇ ಸಾಗಿದರು. ದೂರದಿಂದಲೇ ಸ್ವಾಮೀ ಪ್ರೇಮಾನಂದರು ನಾಗಮಹಾಶ ಯರನ್ನು ನೋಡಿ ಶಾರದಾದೇವಿಯವರಿಗೆ ಈ ಸುದ್ದಿ ಹಚ್ಚಿದರು. ನಾಗ ಮಹಾಶಯರು ಘಟ್ಟವನ್ನೇರಹತ್ತಿದ ಕೂಡಲೇ ಪ್ರೇಮಾನಂದರು ಅವ ರನ್ನು ಕೈಹಿಡಿದುಕೊಂಡು ಶಾರದಾದೇವಿಯವರ ಕಡೆಗೆ ಕರೆದುಕೊಂಡು ಹೋದರು. ನಾಗಮಹಾಶಯರು ಅರ್ಧ ತಾಸಿನ ಮೇಲೆ ಅಲ್ಲಿಂದ ಹೊರ

ಬಿದ್ದರು. ಆಗಲೂ ಭಾವನೆಯ ಭರದಲ್ಲಿ "ತಂದೆಗಿಂತಲೂ ತಾಯಿಯ ದಯೆ ಮಿಗಿಲು" ಎಂದೆನ್ನುತ್ತಿದ್ದರು. ಸ್ವಾಮೀ ಪ್ರೇಮಾನಂದರು "ನಾಗಮಹಾಶಯರ ಮೇಲೆ ತಾಯಿಯವರು ಈ ದಿನ ಎಂಥ ಅನುಗ್ರಹ ವನ್ನು ಮಾಡಿದರು! ನಾಗಮಹಾಶಯರು ತಂದ "ಸಂದೇಶ" ಗಳನ್ನು ನಿಜಹಸ್ತದಿಂದ ಸ್ವೀಕರಿಸಿ ಸ್ವಹಸ್ತದಿಂದ ಅವರಿಗೆ ಪ್ರಸಾದವನ್ನು ತಿನ್ನಿಸಿ ದರು! ಆ ಮೇಲೆ ವೀಳ್ಯೆಯನ್ನು ಕೊಟ್ಟರು." ಎಂದು ಹೇಳಿದರು. ಶರಚ್ಚಂದ್ರರಿಗೆ ಮಾತ್ರ ಆ ದಿನ ದೇವಿಯವರ ದರ್ಶನವಾಗಲಿಲ್ಲ. ಆಮೇಲೆ ಇಬ್ಬರೂ ಮನೆಗೆ ಹೊರಟುಬಂದರು.

ಊರಿಗೆ ಹೋಗುವ ಐದಾರುದಿನ ಮೊದಲು ನಾಗಮಹಾಶಯರು ಶರ ಚ್ಚಂದ್ರರನ್ನು ಕರೆದುಕೊಂಡು ಆಲಮ ಬಾಜಾರದ ಮಠಕ್ಕೆ ಹೋದರು. ಶರಚ್ಚಂದ್ರರು ಮುಂಜಾನೆ ೧೧ ಘಂಟೆಗೆ ನಾಗಮಹಾಶಯರ ಮನೆಗೆ ಹೋಗಿ ನೋಡಲಾಗಿ ಅವರ ಊಟವಾಗಿದ್ದಿಲ್ಲ. ಊಟಮಾಡದೆ ಅವರೊ ಡನೆ ನಾಗಮಹಾಶಯರು ಹಾಗೆಯೇ ಹೊರಟರು. ನೈವೇದ್ಯಕ್ಕಾಗಿ ಹಣ್ಣುಹಂಪಲಗಳನ್ನು ಕೊಂಡರು. ಮಧ್ಯಾಹ್ನ ಒಂದೂವರೆಗೆ ಅಲ್ಲಿಗೆ ಮುಟ್ಟಿದರು. ಆಗ ಅಲ್ಲಿ ವಾಸಮಾಡುತ್ತಿದ್ದ ಸ್ವಾಮಿಯವರೆಲ್ಲರೂ ಊಟ ಮಾಡಿ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿದ್ದರು. ನಾಗಮಹಾಶಯರ ಊಟವಾಗಿಲ್ಲವೆಂಬದನ್ನು ಕೇಳಿ ಸ್ವಾಮೀ ಪ್ರೇಮಾನಂದರು ತತ್‌ಕ್ಷಣವೇ ಎದ್ದು ಅವರಿಗಾಗಿ "ಲುಚಿ" (ಒಂದು ತರದ ಖಾದ್ಯ) ಗಳನ್ನು ತಯಾರಿ ಸಿದರು. ಸ್ವಾಮೀ ರಾಮಕೃಷ್ಣಾನಂದರು ನೈವೇದ್ಯಮಾಡಿ ನಾಗಮಹಾ ಶಯರಿಗೆ ಕೊಟ್ಟರು. ಪ್ರಸಾದ ಕೊಟ್ಟ ಕೂಡಲೇ ನಾಗಮಹಾಶಯರು "ಜಯ ರಾಮಕೃಷ್ಣ" ಎನ್ನುತ್ತ ಕುಣಿಯಹತ್ತಿದರು. ವಸ್ತುತಃ ಮಹಾ ಪೂಜೆಯಾದ ಬಳಿಕ ನೈವೇದ್ಯಮಾಡಲಿಕ್ಕೆ ಬರುವದಿಲ್ಲ. ಪೂಜೆಯ ಹಾಗೂ ಇತರ ವಿಷಯಗಳ ನಿಯಮಾದಿಗಳಲ್ಲಿ ಸ್ವಲ್ಪಾದರೂ ಭಂಗ ಬಂದರೆ ಅತಿ ಶಯ ರುಷ್ಟರಾಗುವ ರಾಮಕೃಷ್ಣಾನಂದರು ತಾವೇ ಈ ದಿನ ನಿಯಮೋ ಲ್ಲಂಘನವನ್ನು ಮಾಡಿದರು. ಯಾವ ರಾಜ ಮಹಾರಾಜನು ಬಂದರೂ ರಾಮಕೃಷ್ಣಾನಂದರ ಕಟ್ಟಿನಲ್ಲಿ ಹೆಚ್ಚು ಕಡಿಮೆಯಾಗುತ್ತಿದ್ದಿಲ್ಲ. ಇಂಥ

ವರು ನಾಗಮಹಾಶಯರಿಗಾಗಿ ನಿಯಮನ್ನು ಮೀರುವದು, ನಾಗಮಹಾಶಯರ ಮಹಾತ್ಮ್ಯವನ್ನು ವ್ಯಕ್ತಪಡಿಸುತ್ತದೆ.

ಶಾರದಾದೇವಿಯವರು ನಾಗಮಹಾಶಯರಿಗೆ ಒಂದು ವಸ್ತ್ರವನ್ನು ಕೊಟ್ಟಿದ್ದರು. ನಾಗಮಹಾಶಯರು ಅದನ್ನು ತಲೆಗೆ ಸುತ್ತಿಕೊಂಡು "ಪೂಜೆಯ" ಸಾಮಾನುಗಳನ್ನು ಕೊಳ್ಳಲು ಹೋಗುತ್ತಿದ್ದರು. ಈ ಸಾರೆ ದೇವಿಯ ಆರ್ತಿಯ ಕಾಲಕ್ಕೆ ಬೇಕೆಂದು ಬೆಳ್ಳಿಯ ಹಿಡಿಕೆಯುಳ್ಳ ಬಿಳೀ ಚಾಮರವನ್ನು ಕೊಂಡರು. ಪಾಲ್ ಬಾಬುಗಳಿಂದ ಪ್ರತಿವರ್ಷ ಬರುತ್ತಿರುವ ಹಣದಿಂದಲೇ "ಪೂಜೆಯ" ಸಾಮಾನುಗಳ ವಿನಿಯೋಗವು ನಡೆಯುತ್ತಿತ್ತು. ನಾಗಮಹಾಶಯರು ಎಲ್ಲ ಸಾಮಾನುಗಳನ್ನು ಕೊಂಡು ಊರಿಗೆ ಹೊರಟರು. ಅವರ ಸಾಮಾನುಗಳನ್ನು ತೆಗೆದುಕೊಂಡು ಭಕ್ತನೊಬ್ಬನು ಸ್ಟೇಶನ್ನಕ್ಕೆ ಬಂದು ಗಾಡಿಯಲ್ಲಿ ಅವುಗಳನ್ನಿಟ್ಟನು. ಆದರೆ ತನ್ನ ಕೊಡೆಯನ್ನು ಮರೆತು ಅಲ್ಲಿಯೇ ಇಟ್ಟು ಹಾಗೆಯೇ ಮನೆಗೆ ಹೋದನು. ಕೊಡೆಯು ಭಕ್ತನದೆಂದು ತಿಳಿದು ನಾಗಮಹಾಶಯರು ತಮ್ಮ ಕಡೆಗೆ ಇಟ್ಟುಕೊಳ್ಳಹೋದರು. ಆದರೆ ಗಾಡಿಯಲ್ಲಿ ಕುಳಿತ ಗೃಹಸ್ಥನೊಬ್ಬನು ಆ ಕೊಡೆಯು ತನ್ನದೆಂದು ಸಾಧಿಸಹತ್ತಿದನು. ನಾಗಮಹಾಶಯರು ಕೊಡೆಯು ಆ ಭಕ್ತನದೆಂದು ಎಷ್ಟು ಹೇಳಿದರೂ ಆ ಗೃಹಸ್ಥನು ಕೇಳಲಿಲ್ಲ. ಗಾಡಿಯು ಸಾಗಲಾಗಿ ಈ ಗೃಹಸ್ಥನಿಗೆ ನಿದ್ದೆ ಹತ್ತಿತು. ಅವನಿಳಿಯಬೇಕಾದ ಸ್ಟೇಶನ್ನು ಹಿಂದುಳಿದರೂ ಅವನಿಗೆ ಎಚ್ಚರವಾಗಲಿಲ್ಲ. ಮೂರು ನಾಲ್ಕು ಸ್ಟೇಶನ ಮುಂದೆ ಹೋದ ಮೇಲೆ ಅವನಿಗೆಚ್ಚರಾಯಿತು. ಅಲ್ಲಿ ಇಳಿದನು. ಆದರೆ ಹೆಚ್ಚಿನ ಹಣ ಕೊಡಲಿಕ್ಕೆ ಅವನ ಹತ್ತಿರ ರೊಕ್ಕವಿದ್ದಿಲ್ಲವಾದ್ದರಿಂದ ಸ್ಟೇಶನ್ ಮಾಸ್ತರನು ಅವನನ್ನು ಹಿಡಿದು ಕುಳ್ಳಿರಿಸಿದನು. ಈ ಘಟನೆಯನ್ನು ಲಕ್ಷಿಸಿ ನಾಗಮಹಾಶಯರು "ಅನ್ಯಾಯ ಕಾರ್ಯದ ಫಲವನ್ನು ಅನುಭೋಗಿಸಲೇಬೇಕಾಗುವದು. ಆದರೂ ಮನುಷ್ಯನಿಗೆ ಬುದ್ಧಿ ಬರುವದಿಲ್ಲವಲ್ಲ" ಎಂದು ನುಡಿಯುತ್ತಿದ್ದರು.

ಇದೇ ಗಾಡಿಯಲ್ಲಿ ಮತ್ತೊಬ್ಬನು ಒಬ್ಬ ವಾರಯೋಷಿತೆಯೊಡನೆ ಹೊರಬಿದ್ದನು. ಆತನ ಕಡೆಗೆ ನೋಡಿದ ಕೂಡಲೇ ಒಂದು ಪಿಶಾಚಿನೀ ಮೂರ್ತಿಯು ಅವನ ಮೈಯನ್ನಡರಿ ಅವನ ಮಾಂಸವನ್ನು ತಿನ್ನುತ್ತಿರು

ವದೂ ನೋಡನೋಡುವಷ್ಟರಲ್ಲಿ ಮಾಂಸವೆಲ್ಲವೂ ತೀರಿ ಕೇವಲ ಅಸ್ಥಿ ಪಂಜರವೊಂದು ಉಳಿದುದೂ ಅವರ ಕಣ್ಣಿಗೆ ಬಿತ್ತು. ನಾಗಮಹಾಶಯರು ಭಯಚಕಿತರಾಗಿ "ತಾಯಿ, ತಾಯಿ" ಎಂದು ಚೀರಿದರು. "ನಿಜವಾಗಿಯೂ ಇದೇ ಕಣ್ಣುಗಳಿಂದ ಆ ದೃಶ್ಯವನ್ನು ನೋಡಿದೆನೆಂದು" ನಾಗಮಹಾಶಯರು ಹೇಳುತ್ತಿದ್ದರು.

ನಾಗಮಹಾಶಯರು ಕಲಕತ್ತೆಗೆ ಬಂದರೆ ಆಲಮ ಬಾಜಾರದ ಮಠ ದಕ್ಷಿಣೇಶ್ವರ ಹಾಗೂ ಗಿರೀಶಬಾಬುಗಳ ಮನೆ ಇವುಗಳಿಗೆ ಹೋಗುವದು ಒಂದು ಕ್ರಮವೇ ಆಗಿತ್ತು. ಕುಮಾರಟುಲಿಯಲ್ಲಿರುವ ಅವರ ಮನೆಗೆ ಅವರನ್ನು ಕಾಣಲು ಅನೇಕ ಜನರು ಬರುತ್ತಿದ್ದರು. ತಮ್ಮ ಬಗ್ಗೆ ಯಾರಾದರೂ ಸನ್ಮಾನವನ್ನು ಪ್ರದರ್ಶಿಸಿದರೆ ನಾಗಮಹಾಶಯರು ಅಸ್ಥಿರರಾಗಿ "ಈ ಹಾಳು ಎಲುಬಿನ ಪಂಜರವನ್ನೇಕೆ ನೋಡಬರುವಿರಿ? ಗುರುದೇವನ ಸ್ತುತಿಸ್ತೋತ್ರವನ್ನು ಪಾಡಿ ನನಗೆ ಸುಖವೆನಿಸುವಂತೆ ಮಾಡಿರಿ" ಎಂದು ಹೇಳುತ್ತಿದ್ದರು. ಗಿರೀಶಬಾಬುಗಳು ಆಗಾಗ ಅವರಿಗೆ ತಮ್ಮ ಮನೆಗೆ ಊಟಕ್ಕೆ ಬರಲು ಆಮಂತ್ರಣ ಕೊಡುತ್ತಿದ್ದರು. ಗಿರೀಶಚಂದ್ರರ ಅನ್ನವನ್ನು ಅವರು ಬಹು ಆದರದಿಂದ ಗ್ರಹಣ ಮಾಡುತ್ತಿದ್ದರು. "ಗಿರೀಶಬಾಬುಗಳ ಮನೆಯಲ್ಲಿ ಊಟಮಾಡಿದರೆ ಭವರೋಗವು ದೂರಾಗುವದೆಂ" ದು ಅವರು ಅನ್ನುತ್ತಿದ್ದರು. ಶ್ರೀರಾಮಕೃಷ್ಣರ ಯಾವುದೇ ಭಕ್ತನ ಮನೆಯಲ್ಲಿ ಅವರು ಅನ್ನ ಗ್ರಹಣ ಮಾಡುತ್ತಿದ್ದರು. ಅವನ ವರ್ಣಾಶ್ರಮ ಧರ್ಮವನ್ನು ಲಕ್ಷಿಸುತ್ತಿದ್ದಿಲ್ಲ. "ಶ್ರೀರಾಮಕೃಷ್ಣರ ಭಕ್ತವೃಂದವೆಂದರೆ ಪುರಿ ಕ್ಷೇತ್ರದಂತೆ. ಅಲ್ಲಿ ಊಟಮಾಡಲು ಏನೂ ಅಡ್ಡಿಯಿಲ್ಲ" ಎಂದು ಅವರು ನುಡಿಯುತ್ತಿದ್ದರು. (ಪುರಿ ಕ್ಷೇತ್ರದಲ್ಲಿ ಜಾತಿಭೇದವಿಲ್ಲ. ಎಲ್ಲ ಜಾತಿಯವರು ಅಸ್ಪೃಶ್ಯರು ಸಹ ಪಂಕ್ತಿಯಲ್ಲಿ ಕುಳಿತುಕೊಂಡು ಊಟಮಾಡುತ್ತಾರೆ. ಇದು ಅಲ್ಲಿಯ ಪುರಾತನ ಪರಂಪರೆ.)

ಗಿರೀಶಚಂದ್ರರ ಮನೆಗೆ ನಾಗಮಹಾಶಯರು ಊಟಕ್ಕೆ ಹೋದಾಗ ಅವರಿಗಾಗಿ ಒಂದೆಲೆಯಲ್ಲಿ ಅನ್ನವನ್ನೂ ಮತ್ತೊಂದರಲ್ಲಿ ವ್ಯಂಜನಾದಿಗಳನ್ನೂ ಬಡಿಸಿದ್ದರು. ವ್ಯಂಜನಗಳನ್ನು ನೋಡಿ ನಾಗಮಹಾಶಯರು "ಇವರಿಂದ ಸುಖೇಚ್ಛೆಯು ಬೆಳೆಯುವದೆಂ" ದು ಹೇಳಿ ಅದನ್ನು ಬದಿ

ಸರಿಸಿದರು. ಆ ಮೇಲೆ ಗಿರೀಶರೊಡನೆ ಊಟಮಾಡಹತ್ತಿದರು. ಎಲೆಯ ಮೇಲೆ ಉಪ್ಪು ಹಾಕಹೋಗಲು ನಾಗಮಹಾಶಯರು 'ಬೇಡ' ಎಂದರು.

ಚಳಿಗಾಲದಲ್ಲಿ ನಾಗಮಹಾಶಯರು ಶೀತವಸ್ತ್ರಗಳ ಅಭಾವದಿಂದ ಬಳಲುತ್ತಾರೆಂದು ಕೇಳಿ ಗಿರೀಶಚಂದ್ರರು ದೇವೇಂದ್ರನಾಥ ಎಂಬವರೊಡನೆ ಒಂದು ಕಂಬಳಿಯನ್ನು ಕೊಟ್ಟುಕಳಿಸಿದರು. ಗಿರೀಶಚಂದ್ರರು ಕಂಬಳಿಯನ್ನು ಕೊಟ್ಟಿರುವರೆಂದು ಕೇಳಿ ನಾಗಮಹಾಶಯರು ಅದಕ್ಕೆ ಪುನಃ ಪುನಃ ನಮಸ್ಕಾರ ಮಾಡಹತ್ತಿದರು. ಆ ಮೇಲೆ ಅದನ್ನು ತಲೆಯ ಮೇಲೆ ಇಟ್ಟುಕೊಂಡರು. ನಾಗಮಹಾಶಯರು ಪರರು ಕೊಡುವ ವಸ್ತುಗಳನ್ನು ಗ್ರಹಿಸುತ್ತಿದ್ದಿಲ್ಲ ಆದರೆ ತಾವು ಕಳಿಸಿದ ಕಂಬಳಿಯನ್ನವರು ಸ್ವೀಕರಿಸಿದರೆಂಬುದನ್ನು ಕೇಳಿ ಗಿರೀಶರು ನಿಶ್ಚಿಂತರಾದರು. ಆದರೆ ಕೆಲವು ದಿನಗಳ ಮೇಲೆ ನಾಗಮಹಾಶಯರು ಆ ಕಂಬಳಿಯನ್ನು ಹೊದ್ದುಕೊಳ್ಳದೆ ತಲೆಯ ಮೇಲಿಟ್ಟುಕೊಂಡು ತಿರುಗುತ್ತಿರುವರೆಂದು ಕೇಳಿ ಉತ್ಕಂಠಿತರಾಗಿ ಅವರನ್ನು ನೋಡಿ ಬರಲು ದೇವೇಂದ್ರನಾಥರನ್ನು ಮತ್ತೆ ಕಳಿಸಿದರು. ಅವರು ನೋಡಿಬಂದು ನಾಗಮಹಾಶಯರು ಕಂಬಳಿಯನ್ನು ತಲೆಯ ಮೇಲಿಟ್ಟುಕೊಂಡು ಕುಳಿತಿರುವರೆಂದು ಹೇಳಿದರು.

ಕಲಕತ್ತೆಯಲ್ಲಿ ಮೂರು ತಿಂಗಳಿದ್ದು ನಾಗಮಹಾಶಯರು ಊರಿಗೆ ತಿರುಗಿ ಹೋದರು. ದೀನ ದಯಾಲರ ಶರೀರವು ದಿನದಿನಕ್ಕೆ ಕ್ಷೀಣವಾಗ ಹತ್ತಿತು. ಅಂದಿನಿಂದ ನಾಗಮಹಾಶಯರಿಗೆ ಆಗಾಗ ಕಲಕತ್ತೆಗೆ ಹೋಗುವದು ತಪ್ಪಿತು.

ಸ್ವಾಮೀ ವಿವೇಕಾನಂದರು ಅಮೇರಿಕೆಯಿಂದ ಬಂದ ನಂತರ ಶರಚ್ಚಂದ್ರರು ಅವರನ್ನು ಕಾಣಲು ಹೋದರು. ಶರಚ್ಚಂದ್ರರು ನಾಗಮಹಾಶಯರ ಅನುಯಾಯಿಗಳೆಂಬುದನ್ನು ಕೇಳಿ ಸ್ವಾಮಿಜಿಯವರು ಅವರೆದುರಿಗೆ "वयं तत्त्वान्वेषात् मधुकर हतास्त्वं खलु कृती"—ತತ್ವಾನ್ವೇಷಣ ಮಾಡಮಾಡುತ್ತ ನಮ್ಮ ಜೀವನವು ಕಳೆದುಹೋಯಿತು. ನಾಗಮಹಾಶಯರೇ ನಿಜವಾಗಿಯೂ ಭಾಗ್ಯಶಾಲಿಗಳು ಎಂಬುದಾಗಿ ಉದ್ಗಾರ ತೆಗೆದರು. ಆ ಮೇಲೆ ನಾಗಮಹಾಶಯರ ಊರಿಗೆ ಹೋಗಿ ಅವರ ದರ್ಶನವನ್ನು ತೆಗೆ

ಮಾಡಿಕೊಳ್ಳುವ ಇಚ್ಛೆಯನ್ನು ಪ್ರಕಟಿಸಿ ಆ ಸ್ವಕಾರ್ಯಕ್ಕೆ ನಾಗಮಹಾಶಯರಿಗೆ ಪತ್ರ ಬರೆಯ ಹೇಳಿದರು.

ಸ್ವಾಮೀಜಿಯವರು ತಮ್ಮ ಊರಿಗೆ ಬರುವರೆಂಬ ಸುದ್ದಿಯನ್ನು ಕೇಳಿ ನಾಗಮಹಾಶಯರು ಅವರನ್ನು ಕಾಣಲು ಕಲಕತ್ತೆಗೆ ಹೋದರು. ಆಗ ಬೇಲೂರ ಮಠದ ಕಟ್ಟಡವು ಸಿದ್ಧವಾಗಿತ್ತು; ಹಾಗೂ ಸ್ವಾಮೀ ವಿವೇಕಾನಂದರು ಅದರಲ್ಲಿಯೇ ವಾಸ ಮಾಡುತ್ತಿದ್ದರು. ಇಳಿಹೊತ್ತಿನಲ್ಲಿ ನಾಗಮಹಾಶಯರು ಶರಚ್ಚಂದ್ರರೊಡನೆ ಬೇಲೂರ ಮಠಕ್ಕೆ ಹೋಗಿ ಸ್ವಾಮೀಜಿಯವರಿಗೆ ಭೂಮಿಷ್ಠರಾಗಿ ಪ್ರಣಾಮ ಮಾಡಿದರು. ಸ್ವಾಮೀಜಿಯವರ ಶರೀರಸ್ವಾಸ್ಥ್ಯವು ಚನ್ನಾಗಿಲ್ಲವೆಂಬುದನ್ನು ಕೇಳಿ ನಾಗಮಹಾಶಯರು ಅತಿಶಯ ವಿಚಲಿತರಾಗಿ "ಗುರುದೇವನೆನ್ನುತ್ತಿದ್ದ—ತಾವೆಂದರೆ ವರಹಗಳ ಪೆಟ್ಟಿಗೆ ಎಂದು; ತಮ್ಮ ಈ ದೇಹದ ರಕ್ಷಣೆಯಿಂದ ಜಗತ್ತಿನ ರಕ್ಷಣೆಯಾಗುವದು; ಜಗತ್ತಿಗೆ ಮಂಗಲವಾಗುವದು" ಎಂದು ನುಡಿದರು. ಅನೇಕ ಮಾತುಕತೆಗಳಾದ ಮೇಲೆ ಸ್ವಾಮೀಜಿಯವರು ಅವರಿಗೆ ಮಠದಲ್ಲಿಯೇ ಬಂದಿರಲು ಹೇಳಿದರು. ನಾಗಮಹಾಶಯರು "ಏನು ಮಾಡಲಿ! ಗುರುದೇವನ ಆಜ್ಞೆಯನ್ನು ಹೇಗೆ ಮೀರುವದು? ಮನೆಯಲ್ಲಿಯೇ ಇರಲು ಅವನು ಹೇಳಿರುವನಲ್ಲ!" ಎಂದು ನುಡಿದರು. ನಾಗಮಹಾಶಯರ ಸನ್ಮಾನಾರ್ಥವಾಗಿ ಸ್ವಾಮೀಜಿಯವರ ಅಪ್ಪಣೆಯ ಮೇರೆಗೆ ಮಠದಲ್ಲಿಯ ಪಠನ ಕಾಲವನ್ನು ನಿಲ್ಲಿಸಲ್ಪಟ್ಟಿತು. ಎಲ್ಲರೂ ಸ್ವಾಮೀಜಿ ಹಾಗೂ ನಾಗಮಹಾಶಯರನ್ನು ಸುತ್ತುಗಟ್ಟಿಕೊಂಡು ಕುಳಿತರು. ಸ್ವಾಮೀಜಿಯವರು ಶ್ರೀರಾಮಕೃಷ್ಣರ ನಾಮವನ್ನುಚ್ಚರಿಸಿದ ಕೂಡಲೇ ನಾಗಮಹಾಶಯರು ಎದ್ದು ನಿಂತು "ಜಯ ರಾಮಕೃಷ್ಣ ಜಯ ರಾಮಕೃಷ್ಣ" ಎಂದು ಜಯಘೋಷವನ್ನು ಮಾಡುತ್ತ "ಆ ದಿನ ದಕ್ಷಿಣೇಶ್ವರಕ್ಕೆ ಹೋಗಿ ನೋಡಿದೆನು, ಗುರುದೇವನಿದ್ದಿಲ್ಲ. ಗುರುದೇವನೀಗ ಈ ಮಠದಲ್ಲಿರುತ್ತಿರುವನೆಂ"ದರು. ಮಠ ಮಂದಿರಾದಿಗಳ ಆಯೋಜನೆಯು ಚೆನ್ನಾಗಿದೆಯೋ ಇಲ್ಲವೋ ಎಂದು ವಿವೇಕಾನಂದರು ಪ್ರಶ್ನೆ ಮಾಡಲಾಗಿ ನಾಗಮಹಾಶಯರು "ಶ್ರೀರಾಮಕೃಷ್ಣರ ಇಚ್ಛೆಯಿಂದಲೇ ಇದೆಲ್ಲವೂ ಆಗುತ್ತಿದೆ. ಇದರಿಂದ ಜಗತ್ತಿನ ಹಾಗೂ ಜೀವರ ಮಂಗಲವಾಗುವದು! ... ತಮ್ಮ ಆರೋಗ್ಯದ ಕಡೆಗೆ

ಮಾತ್ರ ಚೆನ್ನಾಗಿ ಲಕ್ಷವಿರಲಿ; ಈ ದೇಹವನ್ನು ರಕ್ಷಿಸುವದರಿಂದ ಜಗತ್ತಿಗೆ ಕಲ್ಯಾಣವಾಗುವದು" ಎಂದು ನುಡಿದರು. ಸ್ವಾಮೀಜಿಯವರು ನೆರೆದ ಭಕ್ತ ಸಮುದಾಯವನ್ನುದ್ದೇಶಿಸಿ "ಈಶಕೃಪೆಯಿಂದ ಮನುಷ್ಯನ ಅವಸ್ಥೆಯು ಎಷ್ಟು ಉನ್ನತವಾಗುವದೆಂಬುದು ನಾಗಮಹಾಶಯರನ್ನು ನೋಡಿದರೆ ಕಂಡುಬರುವದು! ತ್ಯಾಗದಲ್ಲಿ, ಇಂದ್ರಿಯ-ಸಂಯಮದಲ್ಲಿ ಇವರು ನನಗಿಂತಲೂ ಮಿಗಿಲಾಗಿರುವರು" ಎಂದು ಹೇಳಿದರು. ತುಸು ಹೊತ್ತಿನ ಮೇಲೆ ನಾಗಮಹಾಶಯರನ್ನು ಶ್ರೀರಾಮಕೃಷ್ಣ ಮಂದಿರಕ್ಕೆ ಕರೆದುಕೊಂಡು ಹೋದರು. ನಾಗಮಹಾಶಯರು "ಶ್ರೀಮಂದಿರ, ಶ್ರೀಮಂದಿರ" ಎನ್ನುತ್ತ ಬಾಗಿಲೆದುರಿಗೆ ನಮಸ್ಕರಿಸಹತ್ತಿದರು.

ದಿನಾಲು ಸಂಜೆಯಮುಂದೆ ಸ್ವಾಮೀಜಿಯವರು ಮಠದ ಬೈಲಿನಲ್ಲಿ ತಿರುಗಾಡಲು ಹೋಗುತ್ತಿದ್ದರು. ಈ ದಿನ ನಾಗಮಹಾಶಯರೂ ಅವರೊಡನೆ ಹೊದರು. ರಾತ್ರಿ ನಾಗಮಹಾಶಯರು ಮಠದಲ್ಲಿ ಉಳಿಯುವದಿಲ್ಲವೆಂದು ಕೇಳಿ ಸ್ವಾಮೀಜಿಯವರು ಡೋಣಿಯೊಂದನ್ನು ಗೊತ್ತು ಮಾಡಲು ಹೇಳಿದರು. ಹೊರಡುವ ಮುಂದೆ ನಾಗಮಹಾಶಯರು ಅವರಿಗೆ "ಜಯ ಶಿವ ಶಂಕ ಜಯ ಶಿವ ಶಂಕರ" ಎಂದೆನ್ನುತ್ತ ಮತ್ತೆ ನಮಸ್ಕಾರಮಾಡಿದರು. ಸ್ವಾಮೀಜಿ ಅವರನ್ನು ಕೈ ಹಿಡಿದೆಬ್ಬಿಸಿ "ಮೇಲಿಂದ ಮೇಲೆ ತಮ್ಮ ದರ್ಶನವನ್ನು ಕೊಟ್ಟು ನಮ್ಮ ಮೇಲೆ ಅನುಗ್ರಹಮಾಡಿರಿ" ಎಂದರು. ಯಾರಾದರೂ ಸ್ವಾಮೀಜಿಯವರ ನಾಮವನ್ನುಚ್ಚರಿಸಿದರೆ "ಜಯ ಶಿವ ಶಂಕರ" ಎಂದು ನಾಗಮಹಾಶಯರು ಅಭಿವಾದಿಸುತ್ತಿದ್ದರು ಪಾಶ್ಚಾತ್ಯ ದೇಶಗಳಲ್ಲಿ ಸ್ವಾಮೀ ವಿವೇಕಾನಂದರ ಧರ್ಮ ಪ್ರಚಾರ ಹಾಗೂ ದಿಗ್ವಿಜಯದ ಮಾತು ಹೊರಟರೆ "ಮಹಾವೀರ, ಮಹಾವೀರ" ಎಂದು ಘೋಷಿಸುತ್ತಿದ್ದರು.

ಬಾಗ ಬಾಜಾರದಲ್ಲಿಯ ಬಲರಾಮ ಬಸು ಇವರ ಮನೆಯು ಶ್ರೀರಾಮಕೃಷ್ಣರ ಅತಿಶಯ ಪ್ರಿಯವಾದ ಸ್ಥಾನವಾಗಿತ್ತು. ನಾಗಮಹಾಶರದಕ್ಕೆ "ಶ್ರೀ ವಾಸನ ಅಂಗಣ" ವೆಂದೆನ್ನುತ್ತಿದ್ದರು. (ಶ್ರೀವಾಸನು ಶ್ರೀ ಚೈತನ್ಯ ಮಹಾಪ್ರಭುಗಳ ಪ್ರಮುಖ ಶಿಷ್ಯನಾಗಿದ್ದನು.) ಶ್ರೀ ರಾಮಕೃಷ್ಣರ ಸನ್ಯಾಸೀ ಭಕ್ತಜನರು ಕಲಕತ್ತೆಗೆ ಹೋದಾಗ ಇಲ್ಲಿಯೇ ಇರುತ್ತಿ

ದ್ದರು. ನಾಗಮಹಾಶಯರೊಂದು ದಿನ ಅಲ್ಲಿಗೆ ಹೋದರು. ಆದಿನ ಸ್ವಾಮೀ ಬ್ರಹ್ಮಾನಂದ ಹಾಗೂ ಸ್ವಾಮೀ ಪ್ರೇಮಾನಂದರು ಅಲ್ಲಿಯೇ ಇದ್ದರು. ಇಬ್ಬರೂ ಕುಳಿತುಕೊಂಡು ಏನೇನೋ ಹರಟೆಹೊಡೆಯುತ್ತಿದ್ದರು. ನಾಗಮಹಾಶಯರು ಅಲ್ಲಿಗೆ ಬಂದಕೂಡಲೇ ಹರಟೆಯು ನಿಂತು ಕೇವಲ ಶ್ರೀರಾಮಕೃಷ್ಣರ ವಿಷಯವಾಗಿಯೇ ಮಾತು ನಡೆಯಹತ್ತಿತು. ಸ್ವಾಮೀ ಬ್ರಹ್ಮಾನಂದರು ಶರಚ್ಚಂದ್ರರೆದುರಿಗೆ "ನಾಗಮಹಾಶಯರು ಬಂದಕೂಡಲೇ ಎಲ್ಲ ವಿಷಯವೂ ಮರೆತು ಶ್ರೀರಾಮಕೃಷ್ಣರ ನೆನಪಾಯಿತು! ಇಂಥ ಮಹಾಪುರುಷರ ಪದಕ್ಷೇಪದಿಂದಲೇ ಇನ್ನೂ ಈ ಭಾರತ ವರ್ಷದಲ್ಲಿ ಧರ್ಮಕರ್ಮಗಳು ಜಾಗ್ರತವಾಗಿವೆ. ಧನ್ಯ ನಾಗಮಹಾಶಯ"! ಎಂದು ಉದ್ಗಾರ ತೆಗೆದರು. ಶ್ರೀರಾಮಕೃಷ್ಣರ ಭಕ್ತರ ವಿಷಯವಾಗಿ ನಾಗಮಹಾಶಯರು "ಇವರೆಲ್ಲರೂ ಗುರುದೇವನ ಲೀಲೆಯಲ್ಲಿ ಭಾಗಿಗಳಾಗಬೇಕೆಂದು ಜನ್ಮಗ್ರಹಣಮಾಡಿದ್ದಾರೆ. ಇವರನ್ನಾರು ಕಂಡುಹಿಡಿಯಬಲ್ಲರು"? ಎಂದು ನುಡಿಯುತ್ತಿದ್ದರು.

ದಿನದಯಾಳರ ಕಡೆಯ ದಿನಗಳು ಸಮೀಪಿಸಿದವು. ಈಚೆಗೆ ದೀನದಯಾಲರು ಪೂಜೆಯಲ್ಲಿಯೂ ಜಪದಲ್ಲಿಯೂ ಮಗ್ನರಾಗಿರುತ್ತಿದ್ದರು. ಸಂಸಾರದಲ್ಲಿ ಆಸಕ್ತಿಯಿದ್ದಿಲ್ಲ. ಅವರ ದೇಹದ ಮೇಲೆಯೂ ಯಾವ ರೋಗದ ಆಕ್ರಮಣವಾಗಲಿಲ್ಲ. ಒಂದು ದಿನ ಬೆಳಗಿನಲ್ಲಿ ನಾಗಮಹಾಶಯರು ಅವರನ್ನು ಕರೆದುಕೊಂಡು ಬರುತ್ತಿದ್ದಾಗ್ಗೆ ಅವರು ಆಕಸ್ಮಿಕವಾಗಿ ಬಿದ್ದುಬಿಟ್ಟರು. ನಾಗಮಹಾಶಯರು ಅವರನ್ನೆತ್ತಿಕೊಂಡು ಮನೆಯೊಳಗೆ ಕರೆದುಕೊಂಡು ಬಂದರು. ಅಷ್ಟರಲ್ಲಿಯೇ ದೀನದಯಾಲರು ಸಂಜ್ಞಾಹೀನರಾಗಿದ್ದರು. ತುಸುಹೊತ್ತಿನಮೇಲೆ ಎಚ್ಚರಾದರೂ ತಂದೆಯ ಅಂತ್ಯಕಾಲವು ಸಮೀಪಿಸಿತೆಂಬುದು ನಾಗಮಹಾಶಯರಿಗೆ ತಿಳಿಯಿತು. ಡಾಕ್ಟರರನ್ನು ಕರೆಕಳಿಸಿ ನಾಗಮಹಾಶಯರು ತಂದೆಯ ಕಿವಿಯಲ್ಲಿ ರಾಮನಾಮವನ್ನುಚ್ಚರಿಸಹತ್ತಿದರು. ದೀನದಯಾಲರೂ ನಾಮವನ್ನು ಜಪಿಸುತ್ತಿದರು. ಡಾಕ್ಟರರು ಬಂದು ನಾಡಿಯನ್ನು ಪರೀಕ್ಷಿಸಿ ದೀನದಯಾಲರ ಅಂತ್ಯ ಸಮಯವು ಒದಗಿತೆಂದು ಹೇಳಿದರು. ಇದಾದ ಸ್ವಲ್ಪ ಹೊತ್ತಿನ ಮೇಲೆ ದೀನದಯಾಲರು ಇಷ್ಟನಾಮವನ್ನು ಜಪಿಸುತ್ತ ಪರಲೋಕಗತ

ರಾದರು; ಪಿತೃವಿಯೋಗದಿಂದ ನಾಗಮಹಾಶಯರು ಕಾತರರಾಗಲಿಲ್ಲ. ಇಷ್ಟೇ ಅಲ್ಲ, ತಂದೆಯು ಸಾಯುವವರೆಗೂ ಎಚ್ಚರಿದ್ದು ಪ್ರಾಣಬಿಟ್ಟನೆಂದು ಸಂತೋಷಭರಿತರಾದರು.

ನಾಗಮಹಾಶಯರು ಯಥಾರೀತಿಯಾಗಿ ಉತ್ತರೀಯವನ್ನು ಧರಿಸಿದರು; ಉಪವಾಸ ಮಾಡಿ ಹವಿಷ್ಯಾಶಿಯಾಗಿ ಶಾಸ್ತ್ರನಿಯಮದಂತೆ ದಶಪಿಂಡ ದಾನಮಾಡಿದರು. ಆ ಮೇಲೆ ಶ್ರಾದ್ಧ. ಜೀವನದಲ್ಲಿಯ ಇದೇ ಕಡೆಯ ಕಾರ್ಯವೆಂದು ನಾಗಮಹಾಶಯರಿದನ್ನು ಒಳ್ಳೇ ವಿಜೃಂಭಣೆಯಿಂದ ಮಾಡಬೇಕೆಂದೆನ್ನುತ್ತಿದ್ದರು. ಆದರೆ ಹಣವೆಲ್ಲಿ?

ನಾಗಮಹಾಶಯರ ಸಹಾಯಾರ್ಥವಾಗಿ ರ್‍ಯಾಲೀ ಬ್ರದರ್ಸರ ಆಫೀಸಿನಲ್ಲಿರುವ ಕೆಲ ಗೃಹಸ್ಥರು ಗೌಪ್ಯವಾಗಿ ಹಣ ಕೂಡಿಸಹತ್ತಿದರು. ಆದರೆ ನಾಗಮಹಾಶಯರ ಕಿವಿಗಿದು ಬೀಳಲು ಅವರೆಲ್ಲರಿಗೂ ಹಾಗೆ ಮಾಡಬಾರದೆಂದು ಬಹು ವಿನೀತಭಾವದಿಂದ ಹೇಳಿ ಊರಲ್ಲಿಯ ಸಾವಕಾರನೊಬ್ಬನಲ್ಲಿ ಐದು ನೂರು ರೂಪಾಯಿ ಸಾಲ ಮಾಡಿದರು. ಅವರ ನೆರೆಮನೆಯವರೂ ತುಸು ಹಣ ಸಾಲಕೊಟ್ಟರು. ಶ್ರಾದ್ಧಕ್ಕಾಗಿ ಸುಮಾರು ಹನ್ನೆರಡು ನೂರು ರೂಪಾಯಿಗಳು ವೆಚ್ಚವಾದವು. ಆ ಮೇಲೆ ನಾಗಮಹಾಶಯರು ಗಯೆಗೆ ಹೋಗಿ ಪಿಂಡದಾನ ಮಾಡಿದರು.

ಪಿತೃಶ್ರಾದ್ಧದಿಂದ ನಾಗಮಹಾಶಯರು ಸಾಲಗಾರರಾಗಿರುವರೆಂದು ಪಾಲಬಾಬುಗಳಿಗೆ ತಿಳಿಯಲಾಗಿ ಅವರು ಎರಡು ನೂರು ರೂಪಾಯಿಗಳನ್ನು ಮುಂದಾಗಿ ತೆಗೆದುಕೊಂಡು ಹಾಗೂ ಬಾಡಿಗೆಯನ್ನೇರಿಸಿ ಕುಮಾರಟುಲಿಯ ಮನೆಯನ್ನು ಬೇರೊಬ್ಬರಿಗೆ ಕೊಡಬೇಕೆಂದು ಸೂಚನೆ ಮಾಡಿದರು. ರಣಜಿತನೂ ಇದಕ್ಕೆ ಅನುಮೋದನ ಕೊಟ್ಟನು. ಆದರೆ ನಾಗಮಹಾಶಯರು ಏನಾದರೂ ಇದಕ್ಕೊಪ್ಪಲಿಲ್ಲ. ಈ ಮೊದಲು ಆ ಮನೆಯಲ್ಲಿರುತ್ತಿದ್ದ ಕೀರ್ತಿವಾಸನು ನಾಗಮಹಾಶಯರ ಔದಾರ್ಯದ ಕತೆಯನ್ನು ಕೇಳಿ ಸ್ವೇಚ್ಛೆಯಾಗಿ ಹೆಚ್ಚಿಗೆ ಭಾಡಿಗೆ ಕೊಡಲು ಹೋದನು. ಆದರೆ ನಾಗಮಹಾಶಯರು, "ನೀವು ಹಗಲಿರುಳು ದುಡಿದರೂ ವಿಶೇಷ ಪ್ರಾಪ್ತಿಯಿಲ್ಲ. ಇಷ್ಟು ಭಾಡಿಗೆ ಕೊಡುವದೇ ನಿಮಗೆ ಕಷ್ಟ. ಏನಾ

ದರೂ ನಾನು ನಿಮ್ಮ ಕಡೆಯಿಂದ ಹೆಚ್ಚು ಭಾಡಿಗೆ ಕೇಳಲಾರೆ'' ಎಂದು ಸ್ಪಷ್ಟವಾಗಿ ಹೇಳಿಬಿಟ್ಟರು. ನಾಗಮಹಾಶಯರು ಕಲಕತ್ತೆಯಲ್ಲಿದ್ದಾಗ ಕೀರ್ತಿವಾಸನು ಬಹು ಶ್ರದ್ಧಾಭಕ್ತಿಯಿಂದ ಅವರ ಸೇವೆ ಮಾಡುತ್ತಿದ್ದನು. ಕೀರ್ತಿವಾಸನು ಈಗಲೂ ಅದೇ ಮನೆಯಲ್ಲಿರುತ್ತಿದ್ದಾನೆ. ನಾಗಮಹಾಶಯರು ಇರುತ್ತಿದ್ದ ಕೋಣೆ, ಅವರ ಮುರಕ ಪಲ್ಲಂಗ ಮೊದಲಾದವುಗಳನ್ನು ಕಾದಿಟ್ಟಿದ್ದಾನೆ.

ಶ್ರೀ ಶಾರದಾದೇವಿಯವರಾಗ ಬಾಗಬಾಜಾರದಲ್ಲಿರುತ್ತಿದ್ದರು. ನಾಗಮಹಾಶಯರೊಂದು ದಿನ ಮಿಠಾಯಿಯನ್ನೂ ಒಂದು ವಸ್ತ್ರವನ್ನೂ ತೆಗೆದುಕೊಂಡು ಅವರ ದರ್ಶನಕ್ಕಾಗಿ ಹೊರಟಿದ್ದರು; ಆದರೆ, ಶೂಲವೇದನೆಯೆದ್ದುದರಿಂದ ಮುಂದೆ ಸಾಗುವದು ಕಠಿಣವಾಯಿತು. ಅಚೇತನಪ್ರಾಯರಾಗಿ ಒಂದು ಮನೆಯ ಮಾಳಿಗೆಯ ಬುಡಕ್ಕೆ ನಿಂತುಬಿಟ್ಟರು. ಗಾಡಿಯನ್ನು ಭಾಡಿಗೆ ಮಾಡಿ ಮನೆಗೆ ಹೋಗಬಹುದಾಗಿತ್ತು. ಹತ್ತಿರ ಸಾಕಷ್ಟು ರೊಕ್ಕವೂ ಇತ್ತು. ಆದರೆ, ದೇವಿಯವರಿಗೆ ತಾವು ತಂದಿರುವದನ್ನು ಸಮರ್ಪಿಸದೆ ಹೇಗೆ ಮನೆಗೆ ಹೋಗಬೇಕು? ಕಡೆಗೆ ಅಲ್ಲಿಯೇ ದುಃಖಿಸುತ್ತ ಬಿದ್ದುಕೊಂಡರು. ಸುಮಾರು ಎರಡು ತಾಸಿನ ಮೇಲೆ ವೇದನೆಯು ನಿಲ್ಲಲು ಶಾರದಾದೇವಿಯವರ ದರ್ಶನ ತೆಗೆದುಕೊಂಡು ರಾತ್ರಿ ಒಂಬತ್ತಕ್ಕೆ ಮನೆಗೆ ಬಂದರು. ಈ ದಿನದ ಹಿಂದಿನ ದಿನವೂ ನಾಗಮಹಾಶಯರು ಶೂಲವೇದನೆಯಿಂದ ಪೀಡಿತರಾಗಿದ್ದರು.

ಆ ವರ್ಷ ಕಲಕತ್ತೆಯಲ್ಲಿ ಮೊಟ್ಟಮೊದಲು ಪ್ಲೇಗಿನ ಪ್ರಾದುರ್ಭಾವವಾಯಿತು. ಶ್ರೀಮಂತರು ಬಡವರು ಎಲ್ಲರೂ ಕಲಕತ್ತೆಯನ್ನು ಬಿಟ್ಟು ಓಡಹತ್ತಿದರು. ಆ ಮಹಾನಗರಿಯು ಬಹುತರವಾಗಿ ಜನಶೂನ್ಯವಾಯಿತು. ಪಾಲಬಾಬುಗಳು ಕಲಕತ್ತೆಯ ಮನೆಯ ರಕ್ಷಣೆಯ ಭಾರವನ್ನು ನಾಗಮಹಾಶಯರಿಗೆ ಒಪ್ಪಿಸಿ ಊರಿಗೆ ಹೊರಟುಹೋದರು. ಅಡಿಗೆಮಾಡುವ ಒಬ್ಬ ಬ್ರಾಹ್ಮಣ, ಒಬ್ಬ ಗುಮಾಸ್ತ, ಒಬ್ಬ ಚಾಕರ ಮನೆಯಲ್ಲುಳಿದರು. ಶರಚ್ಚಂದ್ರರೊಂದು ದಿನ ನಾಗಮಹಾಶಯರನ್ನು ಹುಡುಕುತ್ತ ಪಾಲಬಾಬುಗಳ ಮನೆಗೆ ಹೋಗಲಾಗಿ ನಾಗಮಹಾಶಯರು ಕನ್ನ

ಡಕವನ್ನು ಹಾಕಿಕೊಂಡು ಗೀತೆಯನ್ನೋದುತ್ತಿರುವದನ್ನು ಕಂಡರು. ಶರಚ್ಚಂದ್ರರನ್ನು ನೋಡಿ ನಾಗಮಹಾಶಯರು "ನನಗೆ ಗೀತೆಯಲ್ಲಿ ಏನು ತಿಳಿಯುವದು? ನೀವು ಬ್ರಾಹ್ಮಣರು, ಪಂಡಿತರು, ಇದೆಲ್ಲದರ ಮೇಲೆ ನಿಮ್ಮ ಅಧಿಕಾರವುಂಟು. ಗೀತೆಯನ್ನೋದಿ ಅದರ ಅರ್ಥವನ್ನು ವಿವರಿಸಿರಿ'' ಎಂದು ಹೇಳಿದರು. ಗೀತೆಯಲ್ಲಿಯ "ಕರ್ಮಣ್ಯಕರ್ಮ ಯಃ ಪಶ್ಯೇತ್'' ಎಂಬ ಶ್ಲೋಕದ ಐದು ತೆರದ ವ್ಯಾಖ್ಯೆಯನ್ನು ಶರಚ್ಚಂದ್ರರು ವಿವರಿಸಿದರು. ಎಲ್ಲ ವ್ಯಾಖ್ಯೆಗಳನ್ನು ಕೇಳಿ ನಾಗಮಹಾಶಯರು ಶ್ರೀಧರಸ್ವಾಮಿಗಳ ಟೀಕೆಯನ್ನು ವಿಶೇಷವಾಗಿ ಪ್ರಶಂಶಿಸಿದರು. ಇವಾದ ಮೂರು ದಿನಗಳ ಮೇಲೆ ಆ ಬಾಹ್ಮಣ ಗುಮಾಸ್ತನು ಪ್ಲೇಗಿನಿಂದ ಬೇನೆ ಬಿದ್ದ. ಚಿಕಿತ್ಸೆಗಾಗಿ ಡಾಕ್ಟರನು ಬಂದನು. ಆದರೆ ರೋಗಿಯ ಸೇವಾ ಶುಶ್ರೂಷೆಯನ್ನು ಮಾಡುವವರು ಯಾರು? ಪ್ಲೇಗಿನ ರೋಗಿಯನ್ನು ಮುಟ್ಟಲಿಕ್ಕೂ ಯಾರೂ ಒಲ್ಲರು. ನಾಗಮಹಾಶಯರೊಬ್ಬರೇ ರೋಗಿಯ ಪರಿಚರ್ಯೆಯನ್ನು ಮಾಡಹತ್ತಿದರು. ರೋಗಿಯು ಕುಸು ದಿನಗಳಲ್ಲಿಯೇ ತೀರಿಕೊಂಡನು. ಸಾಯುವ ಮೊದಲು ತನ್ನನ್ನು ಗಂಗಾತೀರಕ್ಕೊಯ್ಯಲು ಬೇಡಿಕೊಂಡನು. ಬೇರೆ ಯಾರೂ ಇಲ್ಲದ್ದರಿಂದ ನಾಗಮಹಾಶರೊಬ್ಬರೇ ಅವನನ್ನು ಹೊತ್ತುಕೊಂಡು ಗಂಗಾತೀರದ ಘಾಟಕ್ಕೆ ಹೋದರು. ಅಲ್ಲಿ ಅಲ್ಪಕ್ಷಣದಲ್ಲಿಯೇ "ಗಂಗಾ, ಗಂಗಾ'' ಎಂದೆನ್ನುತ್ತ ನಾಗಮಹಾಶಯರ ತೊಡೆಯ ಮೇಲೆ ಅವನು ಮೃತ್ಯುಗತನಾದನು. ಆ ಮೇಲೆ ನಾಗಮಹಾಶಯರು ಪಾಲಬಾಬುಗಳ ಮನೆಯಲ್ಲಿರುವ ಚಾಕರನಿಗೆ ಶವದ ಅಗ್ನಿಸಂಸ್ಕಾರಕ್ಕಾಗಿ ಕೆಲ ಬ್ರಾಹ್ಮಣರನ್ನು ಕರೆದುಕೊಂಡು ಬರಲು ಹೇಳಿದರು. ಪ್ಲೇಗಿನಿಂದ ಸತ್ತಿರುವನೆಂದು ತಿಳಿದು ಯಾರೂ ಬರಲು ಒಪ್ಪಲಿಲ್ಲ. ಕಡೆಗೆ ಪ್ರತಿಯೊಬ್ಬನಿಗೂ ನಾಲ್ಕು ರೂಪಾಯಿಗಳಂತೆ ಗೊತ್ತು ಮಾಡಿ ಬಹು ಕಷ್ಟದಿಂದ ನಾಲ್ಕೈದು ಬ್ರಾಹ್ಮಣರನ್ನು ಕರೆತಂದನು. ಈ ಕಾರ್ಯದಲ್ಲಿ ನಾಗಮಹಾಶಯರ ಕೈಯಿಂದ ಇಪ್ಪತ್ತೈದು ರೂಪಾಯಿಗಳು ವೆಚ್ಚವಾದವು. ಬಾಬು ಅಶುತೋಷ ಚೌಧರಿ, ನರೇಂದ್ರನಾಥ ಬಸು ಮೊದಲಾದವರು ಆ ದಿನ ನಾಗಮಹಾಶಯರನ್ನು ಕಾಣಲು ಹೋಗಿದ್ದರು. ಇದನ್ನೆಲ್ಲ ಕಂಡು ಅವರು ಬೆರಗಾದರು! ನರೇಂದ್ರನಾ

ಥರು ಮಾತ್ರ "ಈತನಿಗೆ ಹುಚ್ಚು ಹಿಡಿದಂತೆ ಕಾಣುತ್ತದೆ" ಎಂದು ಅಂದರು.

ನಾಗಮಹಾಶಯರು ಒಂದು ದಿನ ಕಾಲೀಘಾಟಕ್ಕೆ ಹೋಗಿದ್ದರು. ತಿರುಗಿ ಬರುವಾಗ್ಗೆ ಭಕ್ತನೊಬ್ಬನು ಅವರನ್ನು ಕಂಡು ಕಲಕತ್ತೆಯ ವಿಖ್ಯಾತವಾದ ಈಟನ್ನ ಉದ್ಯಾನವನ್ನು ತೋರಿಸಲು ಕರೆದುಕೊಂಡು ಹೋದನು. ನಾಗಮಹಾಶಯರು ಅದನ್ನು ನೋಡಿ ಬಹು ಸಂತೋಷಪಟ್ಟರು. ಆದರೆ ಮನೆಗೆ ಹೋಗುವ ಮುಂದೆ ಹೀಗೆ ಹೇಳಿದರು:—ಮನುಷ್ಯನು ಕೇವಲ ಭೋಗವಿಲಾಸದಲ್ಲಿಯೇ ಆಸಕ್ತನಾಗಿರುವನು. ಈ ದೇಹಧಾರಣೆ ಮಾಡಿದ ಮೇಲೆ ಜನ್ಮ-ಮೃತ್ಯುವಿನ ರಹಸ್ಯವನ್ನು ತಿಳಿದುಕೊಳ್ಳಲು ಯತ್ನಿಸದೆ ಕ್ಷಣಿಕ ಸುಖವನ್ನು ಕೊಡುವ ವಿಷಯಗಳಲ್ಲಿಯೇ ಮಗ್ನರಾಗಿ ಎಲ್ಲರೂ ಆತ್ಮವಿಸ್ಮೃತಿಯನ್ನು ಹೊಂದಿರುವರು. ಶೀಘ್ರದಲ್ಲಿಯೇ ಈ ಲೋಕವನ್ನು ಬಿಟ್ಟು ಹೊರಡಬೇಕಾಗುತ್ತಿದೆಯೆಂಬುದರ ಅರಿವೇ ಇಲ್ಲ! ಈ ಸಂಸಾರದಲ್ಲಿ ರಾಜಸಿಕ ಹಾಗೂ ತಾಮಸಿಕ ಪ್ರವೃತ್ತಿಯೇ ಹೆಚ್ಚು ಕಂಡುಬರುವದು. ಈ ಸಂಸಾರವೆಂದರೆ ಅದೊಂದು ಕೋಲಾಹಲ! ಕೇವಲ ಕಾಮಿನೀ ಕಾಂಚನದ ರಾಜ್ಯ. ದೇವರ ಲೀಲೆಯು ಎಷ್ಟು ವಿಚಿತ್ರವಾಗಿದೆ!

ಗಿರೀಶಚಂದ್ರರ ಮನೆಗೊಮ್ಮೆ ನಾಗಮಹಾಶಯರು ಹೋಗಿದ್ದರು. ಆಗ ಸ್ವಾಮೀ ನಿರಂಜನಾನಂದರು ಅವರಿಗೆ, "ತನ್ನನ್ನು ದೀನನೆಂದು, ಹೀನನೆಂದು ಭಾವಿಸಿದರೆ ಮನುಷ್ಯನು ನಿಜವಾಗಿಯೂ ಹೀನನಾಗುವನೆಂದು ಶ್ರೀರಾಮಕೃಷ್ಣರು ನುಡಿಯುತ್ತಿದ್ದರು; ತಾವು ಹಗಲಿರುಳೂ ತಮ್ಮನ್ನು ಹೀನನೆಂದೇಕೆ ಭಾವಿಸುವಿರಿ?" ಎಂದು ಕೇಳಿದರು. ನಾಗಮಹಾಶಯರು ಅದಕ್ಕೆ "ನನ್ನ ಈ ಕಣ್ಣುಗಳಿಂದಲೇ ನಾನು ಅತಿ ಹೀನ ಅಧಮನೆಂಬುದನ್ನು ನೋಡುತ್ತಿದ್ದೇನೆ; ನನ್ನನ್ನು 'ಶಿವ' ನೆಂದು ಹೇಗೆ ಭಾವಿಸಲಿ? ತಾವು ಹಾಗೂ ಗಿರೀಶ ಬಾಬುಗಳು ಹೀಗೆ ನುಡಿಯಬಹುದು ತಾವೆಲ್ಲರೂ ಗುರುದೇವನ ಪರಮಭಕ್ತರು. ನನ್ನಲ್ಲಿ ಅಂಥ ಭಕ್ತಿಯೆಲ್ಲಿದೆ? ನನ್ನ ಮೇಲೆ ತಮ್ಮ ಕೃಪೆಯಾದರೆ, ಗುರುದೇವನ ಕೃಪೆಯಾದರೆ ನಾನು ಧನ್ಯನಾಗುವೆನು" ಎಂದರು. ಬಹು ದೀನಭಾವದಿಂ

ನಾಗಮಹಾಶಯರು ಇಡುವ ಮಾತಿನ ಶೈಲಿಯನ್ನು ಕಂಡು ಸ್ವಾಮೀ ನಿರಂಜನಾನಂದರಿಗೆ ಅವರನ್ನು ಪ್ರತಿವಾದಿಸುವ ಇಚ್ಛೆಯೇ ಆಗಲಿಲ್ಲ. ಗಿರೀಶ ಬಾಬುಗಳು ಈ ಘಟನೆಯನ್ನುಲ್ಲೇಖಿಸಿ, "ನಿಜವಾಗಿಯೂ ದೀನತೆಯಿದ್ದರೆ, ಅಹಂಬುದ್ಧಿಯು ಪೂರ್ಣ ಉಚ್ಛೇದವಾಗಿದ್ದರೆ, ನಾಗಮಹಾಶಯರಂತೆ ಮನುಷ್ಯನ ಅವಸ್ಥೆಯಾಗುವದು. ಇಂಥವರ ಪಾದಸ್ಪರ್ಶದಿಂದ ಪೃಥ್ವಿಯು ಪುನೀತವಾಗುವದು" ಎಂದು ನುಡಿಯುತ್ತಿದ್ದರು.

ಅದೇ ದಿನ ಮನೆಯಲ್ಲಿ ಅನೇಕ ಗೃಹಸ್ಥರೆದುರಿಗೆ ನಾಗಮಹಾಶಯರು "ನಾನು ಪಾಪಿ, ಕ್ಷುದ್ರ, ಹುಳಕ್ಕಿಂತಲೂ ಕಡೆ" ಎಂದೆನ್ನುಕೊಳ್ಳುತ್ತಿದ್ದರು. ಅಷ್ಟರಲ್ಲಿ ನಿರಂಜನಾನಂದರ ಮಾತಿನ ನೆನಪಾಗಲು "ಇಂದೇ ಗಿರೀಶಬಾಬುಗಳ ಮನೆಯಲ್ಲಿ 'ತಾನು ಕ್ಷುದ್ರನೆಂದು ತಿಳಿದರೆ ಮನುಷ್ಯನು ಕ್ಷುದ್ರನೇ ಆಗುವನು. ತಾನು ಶಿವನೆಂದು ಭಾವಿಸಿದರೆ ಮನುಷ್ಯನು ಶಿವನೇ ಆಗುವನು' ಎಂದು ಕೇಳಿರುವೆನಲ್ಲವೇ? ಈಗ ಏನು ಮಾಡಬೇಕು" ಎಂದು ನುಡಿದು ತುಸು ಯೋಚಿಸಿ ಆ ಮೇಲೆ "ನಿಜವಾದುದನ್ನು ಆಡುವದರಲ್ಲಿ ದೋಷವಿಲ್ಲ. ನಾನು ನಿಜವಾಗಿಯೂ ಕ್ಷುದ್ರನಿರುವೆನು" ಎಂದು ಅನ್ನುತ್ತ ಎಲ್ಲರಿಗೂ ನಮಸ್ಕರಿಸಹತ್ತಿದರು. ಕೆಲ ಹೊತ್ತು ಕಣ್ಣು ಮುಚ್ಚಿಕೊಂಡು ಕುಳಿತು ಆ ಮೇಲೆ ಮತ್ತೆ "ಈ ಎಲುಬಿನ ಹಂದರವನ್ನು ತೆಗೆದುಕೊಂಡು ನಾನು ಶಿವನೆಂದು ಹೇಗೆ ಅಭಿಮಾನ ಪಡಲಿ? ಗಿರೀಶಬಾಬುಗಳು ಮಹಾ ವೀರರು, ಸಾಕ್ಷಾತ್ ಭೈರವರು. ಅವರು ವಾಸ್ತವವಾಗಿಯೂ ಶಿವಸ್ವರೂಪರು" ಎಂದು ನುಡಿಯುತ್ತ ಗಿರೀಶಬಾಬುಗಳನ್ನುದ್ದೇಶಿಸಿ ಪ್ರಣಾಮ ಮಾಡಿದರು. ಆ ನಂತರ ನೆರೆದ ಗೃಹಸ್ಥರಿಗೆ ತಂಬಾಕ ಕೊಟ್ಟು "ಇದಕ್ಕಿಂತ ಹೆಚ್ಚಿಗೆ ಏನು ಮಾಡಲಿ? ನಾನು ತಮ್ಮೆಲ್ಲರ ಸೇವಕ" ಎಂದರು.

ನಾಗಮಹಾಶಯರು ಊರಿಗೆ ಹೋಗುವ ಮೊದಲು ರಾಮಕೃಷ್ಣಪುರದಲ್ಲಿರುತ್ತಿದ್ದ ನವಗೋಪಾಲ ಘೋಷರ ಮನೆಯಲ್ಲಿ ಒಂದು ದಿನ ಶ್ರೀ ರಾಮಕೃಷ್ಣ ಉತ್ಸವವಾಯಿತು. "ವಸುಮತೀ" ಪತ್ರಿಕೆಯ ಒಡೆಯರಾದ ಉಪೇಂದ್ರನಾಥ ಮುಖ್ಯೋಪಾಧ್ಯಾಯರು ನಾಗಮಹಾಶಯರನ್ನು ಅಲ್ಲಿಗೆ

ಕರೆದುಕೊಂಡು ಹೋದರು. ಉತ್ಸವದ ದಿನ ಮುಂಜಾನೆ ನಾಗಮಹಾಶಯರು ಶರಚ್ಚಂದ್ರರೊಡನೆ ಉಪೇಂದ್ರನಾಥರ ಮನೆಗೆ ಹೋದರು. ಅಲ್ಲಿಂದ ನವಗೋಪಾಲರ ಮನೆಗೆ ಹೋಗಲು ಗಾಡಿಯೊಂದು ಗೊತ್ತಾಯಿತು. ಆಗ ನಾಗಮಹಾಶಯರು "ನಾನು ನಡೆಯುತ್ತ ಬರುವೆನು. ತಾವು ಗಾಡಿಯ ಮೇಲೆ ಕುಳಿತುಕೊಂಡು ಹೋಗಿರಿ" ಎಂದು ಹೇಳಿದರು. ಕುದುರೆಗೆ ಹೊಡೆದರೆ ನಾಗಮಹಾಶಯರಿಗೆ ವ್ಯಥೆಯಾಗುವದೆಂಬುದು ಉಪೇಂದ್ರನಾಥರಿಗೆ ಗೊತ್ತಿತ್ತು. ಆದ್ದರಿಂದ ಗಾಡಿಕಾರನಿಗೆ ಕುದುರೆಗೆ ಹೊಡೆಯಬಾರದಾಗಿ ತಿಳಿಸಿದರು. ಆಮೇಲೆ ವಿಶೇಷ ಆಗ್ರಹ ಮಾಡಿ ನಾಗಮಹಾಶಯರನ್ನು ಗಾಡಿಯಲ್ಲಿ ಕುಳ್ಳಿರಿಸಿದರು. ಗಾಡಿಯು ನವಗೋಪಾಲರ ಮನೆಯನ್ನು ಮುಟ್ಟಿದ ಕೂಡಲೇ ಅವರು ನಾಗಮಹಾಶಯರನ್ನು ಕಂಡು "ಜಯ ರಾಮ, ಜಯ ರಾಮ" ಎಂದು ಘೋಷಿಸಿದರು. ನಾಗಮಹಾಶಯರು ಅವರಿಗೆ ಭೂಮಿಷ್ಠರಾಗಿ ವಂದಿಸಿದರು. ಮನೆಯೊಳಗೆ ಹೋದ ಕೂಡಲೆ ನಾಗಮಹಾಶಯರು ಪಡಸಾಲೆಯ ಒಂದು ಮೂಲೆಯಲ್ಲಿ ನಿಂತುಕೊಂಡು ನಿಮಂತ್ರಿತ ಭಕ್ತವೃಂದಕ್ಕೆ ಗಾಳಿ ಬೀಸಹತ್ತಿದರು. ಬೇಡವೆಂದು ನವಗೋಪಾಲರೂ ಮತ್ತನೇಕ ಗ್ರಹಸ್ಥರೂ ಎಷ್ಟು ಹೇಳಿದರೂ ಕೇಳಲಿಲ್ಲ. ನಿರಂತರ ಶ್ರೀರಾಮಕೃಷ್ಣನಾಮಧ್ವನಿಯಿಂದ ರಾಮಕೃಷ್ಣಪುರವು ಪ್ರತಿಧ್ವನಿತವಾಗಿದೆ; ಉತ್ಸವದ ಉಲ್ಲಾಸದಲ್ಲಿ ಸಂಕೀರ್ತನೆಯ ಭರದಲ್ಲಿ ಎಲ್ಲ ಭಕ್ತರೂ ಮೈಮರೆತಿರುವರು; ಆದರೆ ನಾಗಮಹಾಶಯರಿಗೆ ಬೇರೆ ಕೆಲಸವಿಲ್ಲ! ಸ್ಥಿರ ಅವಿಚಲಿತ ಭಾವದಿಂದ ನಿಂತುಕೊಂಡು ಬರೀ ಗಾಳಿಯನ್ನು ಹಾಕುತ್ತಿದ್ದರು! ಸೇವೆಗಾಗಿ ಅವರ ಜೀವನವಲ್ಲವೇ? ಆ ಮೇಲೆ ಭಕ್ತರೆಲ್ಲರೂ ಪ್ರಸಾದಗ್ರಹಣಕ್ಕಾಗಿ ಕುಳಿತುಕೊಂಡರು. ನಾಗಮಹಾಶಯರು ಎಲ್ಲರ ಹಿಂದೆ ಕೈಜೋಡಿಸಿಕೊಂಡು ನಿಂತರು. ಎಲ್ಲರ ಆಗ್ರಹದ ಮೂಲಕ ಪ್ರಸಾದದ ತುಸು ಅಂಶವನ್ನು ಮಾತ್ರ ಸ್ವೀಕರಿಸಿದರು. ಊಟಕ್ಕೆ ಕುಳಿತುಕೊಳ್ಳಲಿಲ್ಲ. ಎಲ್ಲರೂ ಆಶ್ಚರ್ಯಾನ್ವಿತರಾಗಿ ನಾಗಮಹಾಶಯರನ್ನು ನೋಡಹತ್ತಿದರು. ತಿರುಗಿ ಬರುವಾಗ್ಗೆ ಎಷ್ಟು ಆಗ್ರಹಪಟ್ಟರೂ ನಾಗಮಹಾಶಯರು ಗಾಡಿಯ ಮೇಲೆ ಕೂಡಲಿಲ್ಲ. ನಡೆಯುತ್ತಲೇ ಮನೆಗೆ ಬಂದರು.

ಕೆಲ ದಿನಗಳ ಮೇಲೆ ನಾಗಮಹಾಶಯರು ಊರಿಗೆ ಹೊರಟು ಹೋದರು. ಕಲಕತ್ತೆಗೆ ಬಂದುದು ಇದೇ ಕಡೆಯ ಸಾರೆ.

ಭಗವಾನ್ ಶ್ರೀ ರಾಮಕೃಷ್ಣರ ಆದೇಶದಂತೆ ನಾಗಮಹಾಶಯರು ಊರಿಗೆ ಹೋದ ಮೇಲೆ ನಿರ್ಜನವಾದ ಸ್ಥಳದಲ್ಲಿ ಕುಟೀರವನ್ನು ಕಟ್ಟಿ ಕೊಂಡು ಅಲ್ಲಿಯೇ ಇರಬೇಕೆಂದು ವಿಚಾರಮಾಡಿದ್ದರು. ಅವರ ಪತ್ನಿಗೆ ಅವರ ಮನೋಭಾವವು ಗೊತ್ತಾಗಲು ಅವಳು "ಯಾವುದೇ ವಿಷಯದ ಲ್ಲಿಯೂ ತಮಗೆ ನಾನೇನು ಆಗ್ರಹ ಮಾಡಿಲ್ಲವೆಂದ ಮೇಲೆ ಬೇರೆಯಾಗಿ ರುವದರ ಪ್ರಯೋಜನವೇನು?" ಎಂದು ನುಡಿದಳು. ಸಾಧ್ವಿ ಸಹಧ ರ್ಮಿಣಿಯ ಮಾತಿನಿಂದ ನಾಗಮಹಾಶಯರು ಧೈರ್ಯಹೊಂದಿ ಪರಿವಾರ ದೊಡನೆ ಇರಹತ್ತಿದರು. ಅವರು ಗೃಹಸ್ಥಾಶ್ರಮಿಗಳಾಗಿದ್ದರೂ ಆಜೀವ ನವೂ ಸನ್ಯಾಸಿಯ ಧರ್ಮವನ್ನು ಪಾಲಿಸಿದರು. ಅವರ ಪತ್ನಿಯು, "ಅವರ (ನಾಗಮಹಾಶಯರ) ಶರೀರದಲ್ಲಿಯೂ ಮನದಲ್ಲಿಯೂ ಯಾವ ತೆರದ ಮಾನವೀಯ ವಿಕಾರವಾಗಲಿ ಅಥವಾ ಪರಿವರ್ತನೆಯಾಗಲಿ ಎಂದೂ ಕಂಡುಬಂದಿಲ್ಲ. 'ಜಯರಾಮಕೃಷ್ಣ' ಎನ್ನುತ್ತ ಅವರು ಜೀವಭಾವ (Animal Instinct) ವನ್ನು ಮೆಟ್ಟಿಬಿಟ್ಟಿದ್ದರು. ಅವರು ಅಗ್ನಿ ಮಧ್ಯದಲ್ಲಿರುತ್ತಿದ್ದರೂ ಅವರ ಶರೀರವು ಅಗ್ನಿಯಿಂದ ದಗ್ಧವಾಗಲಿಲ್ಲ." ಎಂದು ಹೇಳುತ್ತಿದ್ದರು.

ತಮ್ಮ ಪ್ರಧಾನ ಭಕ್ತನಾದ ಹರಪ್ರಸನ್ನನೆದುರಿಗೆ ನಾಗಮಹಾಶ ರೊಂದು ಸಾರೆ "ನೋಡು, ಪಶುಪಕ್ಷಿಗಳನ್ನು ಸಹ ನಾನು ಆಜನ್ಮವೂ ಮಾತೃಭಾವದಿಂದ ನೋಡಿರುವೆನು." ಎಂದು ನುಡಿದರು.

ನಾಗಮಹಾಶಯರ ಪುರೋಹಿತ ಮನೆತನದವರಿಬ್ಬರು ಅವರನ್ನು ಕಾಣಲು ಬಂದರು. ಅದರಲ್ಲಿ ನವೀನಚಂದ್ರ ಭಟ್ಟಾಚಾರ್ಯರೆಂಬುವವ ರೊಬ್ಬರು ಒಳ್ಳೇ ಸಾಧಕರಾಗಿದ್ದರು. ದೀನದಯಾಲರ ವಿಶೇಷ ಅನುರೋ ಧದ ಮೂಲಕ ನವೀನಚಂದ್ರರು ನಾಗಮಹಾಶಯರಿಗೆ ಗೃಹಸ್ಥಧರ್ಮ ವನ್ನವಲಂಬಿಸಿ ಸಂತಾನಕಾಮಿಯಾಗಲು ಹೇಳಿದರು. ಇದನ್ನು ಕೇಳಿದ ಕೂಡಲೇ ನಾಗಮಹಾಶಯರು ಮೂರ್ಚ್ಛಿತರಾಗಿ ಬಿದ್ದುಬಿಟ್ಟರು. ಮೈ ಯೆಲ್ಲ ಗಾಯವಾಯಿತು. "ಗುರುಗಳಾಗಿ ತಾವು ನನಗೆ ಹೀಗೆ ಅಯೋ

ಗ್ಯವಾದ ಕಾರ್ಯವನ್ನು ಮಾಡಲು ಹೇಳಬೇಕೆ?'' ಎಂದೆನ್ನುತ್ತ ಹತ್ತರ ಬಿದ್ದಿದ್ದ ಒಂದು ಕಲ್ಲನ್ನು ತೆಗೆದುಕೊಂಡು ತಮ್ಮ ತಲೆಗೆ ಹೊಡೆದುಕೊಳ್ಳ ಹತ್ತಿದರು. ತಲೆ ಒಡೆದು ರಕ್ತ ಸುರಿಯಹತ್ತಿತು. ನವೀನಚಂದ್ರರು ಅನುತಪ್ತರಾಗಿ ತಮ್ಮ ಆದೇಶವನ್ನು ಹಿಂತೆಗೆದುಕೊಂಡರು. ಆ ಮೇಲೆ ನಾಗಮಹಾಶಯರಿಗೆ ಸಮಾಧಾನವಾಗಿ ಅವರ ಪಾದಧೂಲಿಯನ್ನು ಗ್ರಹಿಸಿದರು.

ದೀನದಯಾಲರೊಂದು ದಿನ ನಾಗಮಹಾಶಯರಿಗೆ "ನಿನ್ನ ಜೀವನ ನಿವಹವು ಹೇಗೆ ಸಾಗಬೇಕಯ್ಯಾ?" ಎಂದು ಶಿಕ್ಷಿಸಿಂಪ ನುಡಿದರು. ನಾಗಮಹಾಶಯರು ಉತ್ತರ ಕೊಟ್ಟರು, "ಅಪ್ಪಾ, ಅದಕ್ಕೇಕೆ ಅಷ್ಟು ಚಿಂತೆ? ಗಿಡಗಳಲ್ಲಿ ಬೇಕಾದಷ್ಟು ಎಲೆಗಳಿರುವವು. ನಾನಂತೂ ಎಂದೂ ಸ್ತ್ರೀ ಸ್ಪರ್ಶ ಮಾಡಿಲ್ಲ; ಮಾತೃಗರ್ಭದಿಂದ ಹೇಗೆ ಹೊರಬಿದ್ದೆನೋ ಹಾಗೆಯೇ ಈ ವರೆಗೂ ಇರುವೆನು. ಆದ್ದರಿಂದ ವಸ್ತ್ರಗಳ ಅವಶ್ಯಕತೆ ಯಾದರೂ ಎಲ್ಲಿದೆ?''

ಒಬ್ಬನೇ ಒಬ್ಬ ಮಗನ ಸಂಸಾರ ವೈರಾಗ್ಯವನ್ನು ಕಂಡು ದೀನದಯಾಲರು ಆಗಾಗ ನಾಗಮಹಾಶಯರನ್ನು ಜರೆಯುತ್ತಿದ್ದರು. ಒಂದು ದಿನ ಮಾತಿಗೆ ಮಾತು ಬೆಳೆದು ನಾಗಮಹಾಶಯರು ಉತ್ತೇಜಿತರಾಗಿ "ನಾನೆಂದಿಗೂ ಸ್ತ್ರೀಯ ಸಹವಾಸವನ್ನು ಮಾಡಿಲ್ಲ. ನನಗೆ ಪ್ರಪಂಚದಲ್ಲಿರಬೇಕಾಗಿಲ್ಲ" ವೆಂದು ಹೇಳಿ "ನಾಹಂ, ನಾಹಂ'' ಎಂದೆನ್ನುತ್ತ ಉಟ್ಟ ವಸ್ತ್ರವನ್ನು ಚೆಲ್ಲಿಕೊಟ್ಟು ಮನೆಯಿಂದ ಹೊರಬಿದ್ದರು. ಅವರ ಪತ್ನಿಯು ಅಳಹತ್ತಿದಳು. ಅವಳ ವ್ಯಾಕುಲತೆಯನ್ನು ನೋಡಲಾರದೆ ನಾಗಮಹಾಶಯರ ಭಕ್ತರಲ್ಲೊಬ್ಬರಾದ ಅನ್ನದಾ ಎಂಬುವವರು ದೂರದಿಂದ ನಾಗಮಹಾಶಯರನ್ನು ಅಂತೂ ಇಂತೂ ಕರೆದುಕೊಂಡು ಬಂದರು.

ದೇವಭೋಗದಲ್ಲಿರುತ್ತಿದ್ದ ಪ್ರೌಢೆಯಾದ ಒಬ್ಬ ವಿಧವೆಯು ನಾಗಮಹಾಶಯರ ದರ್ಶನಕ್ಕಾಗಿ ಮೇಲಿಂದ ಮೇಲೆ ಬರುತ್ತಿದ್ದಳು. ಹಾಗೂ ಅವರ ಬಗ್ಗೆ ವಿಶೇಷ ಶ್ರದ್ಧೆಯನ್ನು ತೋರಿಸುತ್ತಿದ್ದಳು. ಆದರೆ ನಾಗಮಹಾಶಯರ ತೀಕ್ಷ್ಣ ಅಂತರ್ದೃಷ್ಟಿಗೆ ಅವಳ ಗೂಢ ದುರುದ್ದೇಶವು ಹೊಳೆಯದೇ ಹೋಗಲಿಲ್ಲ. ಪ್ರೌಢ ವಯಸ್ಸಿನಲ್ಲಿ ಅವಳ ದುರ್ಬುದ್ಧಿಯನ್ನು

ನೋಡಿ ನಾಗಮಹಾಶಯರು ಮನಸ್ಸಿನಲ್ಲಿಯೇ ಅವಳನ್ನು ಜರಿಯುತ್ತಿದ್ದರು. ನಾಗಮಹಾಶಯರ ಪತ್ನಿಗೂ ಆ ವಿಧವೆಯ ಮನೋಭಾವವು ಗೊತ್ತಾಗಲು ಅವಳಿಗೆ ಮನೆಗೆ ಬರಕೂಡದೆಂದು ಹೇಳಿಬಿಟ್ಟಳು. ನಾಗಮಹಾಶಯರೆನ್ನುತ್ತಿದ್ದರು, "ಹಾಯ್ ಹಾಯ್, ನಾಯಿ ನರಿಗಳೂ ಕೂಡ ಈ ಎಲುಬಿನ ಹಂದರದ ಮಾಂಸವನ್ನು ತಿನ್ನಲು ಹೇಸಬಹುದು. ಆದರೆ ಅವಳ ಭಾವನೆಯು ಮಾತ್ರ ಹೀಗೇಕಾಯಿತು? ಗುರುದೇವನು ಎಷ್ಟು ಪರಿಯಾಗಿ ನನ್ನನ್ನು ಪರೀಕ್ಷಿಸುತ್ತಿರುವನಲ್ಲ! ಜಯ ರಾಮಕೃಷ್ಣ, ಜಯ ರಾಮಕೃಷ್ಣ" ಆ ಮೇಲೆ ಮತ್ತೆ ನುಡಿದರು, "ಮನುಷ್ಯನಿಗೆ ನಾಲಿಗೆ ಹಾಗೂ ಇಂದ್ರಿಯ ಜಯಮಾಡುವದು ಅತ್ಯಂತ ಕಠಿಣವು. ಗುರುಕೃಪೆಯಿಲ್ಲದೆ ಅವುಗಳ ಸಂಯಮವನ್ನು ಮಾಡುವದು ಸಾಧ್ಯವಿಲ್ಲ. ಶ್ರೀ ರಾಮಕೃಷ್ಣರ ಸಣ್ಣ ಮಾತಿನಲ್ಲಿಯೂ ಸಹ ಎಂಥ ಮಹತ್ತ್ವವು ಅಡಕವಾಗಿರುತ್ತಿತ್ತು! ಅವರೆನ್ನುತ್ತಿದ್ದರು, "ರಾಮನಿಲ್ಲದಲ್ಲಿ ಕಾಮ, ಕಾಮನಿಲ್ಲದಲ್ಲಿ ರಾಮ".

ಕಾಮಿನಿಯಂತೆ ಕಾಂಚನದ ವಿಷಯವಾಗಿಯೂ ಸಹ ನಾಗಮಹಾಶಯರು ತೀರಾ ನಿರ್ಲಿಪ್ತರಾಗಿದ್ದರು. ಪಾಲಬಾಬುಗಳ ಅಪ್ಪನಿಗೊಮ್ಮೆ ಮೈಲಿ (Small Pox) ಎದ್ದವು. ಯಾರ ಔಷಧ ಕೊಡಿಸಿದರೂ ಅವನಿಗೆ ಗುಣವಾಗಲಿಲ್ಲ ಕಡೆಗೆ ಅವರು ನಾಗಮಹಾಶಯರನ್ನು ಮೊರೆ ಹೊಕ್ಕರು. ಹೋಮಿಯೋಪಥಿಯ ವಿಧಾನಕ್ಕನುಸಾರವಾಗಿ ನಾಗಮಹಾಶಯರು ಒಂದು ಔಷಧ ಕೊಡಲು ರೋಗಿಗೆ ಗುಣವಾಯಿತು. ಪಾಲಬಾಬುಗಳಿಗೆ ಬಹು ಸಂತೋಷವಾಗಿ ಅವರು ನಾಗಮಹಾಶಯರಿಗೆ ಮೂರುನೂರು ರೂಪಾಯಿಗಳನ್ನು ಪಾರಿತೋಷಕವೆಂದು ಕೊಡಹೋದರು. ಆದರೆ ನಾಗಮಹಾಶಯರು ಅದನ್ನು ಮುಟ್ಟಲಿಲ್ಲ. ಬಹಳ ಆಗ್ರಹಮಾಡಲು ಅವರು ಅಳಹತ್ತಿ "ದೇವಾ, ವೈದ್ಯನ ಈ ಹೀನವೃತ್ತಿಯನ್ನು ನನಗೇಕೆ ಕಲಿಯಹಚ್ಚಿದೆ? ಇದಕ್ಕಾಗಿ ನಾನೆಷ್ಟು ದುಃಖವನ್ನನುಭವಿಸಬೇಕಾಗಿದೆ!" ಎಂದು ನುಡಿದರು.

ಈ ಅಲೌಕಿಕ ಗೃಹಸ್ಥನ ಎಲ್ಲ ಆಚರಣೆಯೂ ಅಲೌಕಿಕವಾಗಿತ್ತು. ನಾಗಮಹಾಶಯರೊಮ್ಮೆ ಪಾಲಬಾಬುಗಳ ಬಿನ್ನಹದ ಮೂಲಕ ಭೋಜೇ

ಶ್ವರಕ್ಕೆ ಹೋಗಿದ್ದರು. ಕಲಕತ್ತೆಗೆ ತಿರುಗಿ ಹೋಗುವಾಗ ನಾಗಮಹಾಶಯರಿಗೆ ಅವರು ಉಗಿಹಡಗದ (Steamer) ಭಾಡಿಗೆಯೆಂದು ಎಂಟು ರೂಪಾಯಿಗಳನ್ನೂ ಒಂದು ಕಂಬಳಿಯನ್ನೂ ಕೊಟ್ಟರು. ಭೋಜೇಶ್ವರದಿಂದ ಆರು ಮೈಲುಗಳ ಆಚೆಗೆ ಉಗಿಹಡಗದ ನಿಲ್ದಾಣವು ಇತ್ತು. ನಾಗಮಹಾಶಯರು ಅಲ್ಲಿಗೆ ಹೋಗಿ ಟಿಕೀಟು ಕೊಳ್ಳಬೇಕೆನ್ನುವಷ್ಟರಲ್ಲಿ ನಾಲ್ಕು ಹುಡುಗರಿಂದೊಡಗೂಡಿದ ಒಬ್ಬ ಭಿಕ್ಷುಕಿಯು ಅತಿ ಕಾತರ ಸ್ವರದಿಂದ ತನ್ನ ದುಃಖವನ್ನವರಿಗೆ ಅರುಹಿ, ಭಿಕ್ಷೆ ಬೇಡಿದಳು. ಅವಳ ಕತೆಯನ್ನು ಕೇಳಿ ನಾಗಮಹಾಶಯರು ಕಣ್ಣೀರುದುರಿಸುತ್ತ, ಪಾಲಬಾಬುಗಳಿಂದ ಕೊಡಲ್ಪಟ್ಟ ಎಂಟೂ ರೂಪಾಯಿಗಳನ್ನೂ ಕಂಬಳಿಯನ್ನೂ ಅವಳಿಗೆ ಕೊಟ್ಟು "ತಾಯಿ, ಇವುಗಳನ್ನು ತೆಗೆದುಕೊಂಡು ನಿನ್ನನ್ನೂ ನಿನ್ನ ಮಕ್ಕಳನ್ನೂ ಕಾಪಾಡಿಕೋ" ಎಂದು ನುಡಿದರು. ಆ ಭಿಕ್ಷುಕಿಯು ನಾಗಮಹಾಶಯರನ್ನು ಹರಿಸಿ ಹೊರಟುಹೋದಳು. ದೂರದಿಂದ ನಡೆದು ಬಂದ ಕಾರಣ ಆಯಾಸವಾಗಿದ್ದರಿಂದ ನಾಗಮಹಾಶಯರು ನಿಲ್ದಾಣದಲ್ಲಿ ತುಸು ವಿಶ್ರಾಂತಿಯನ್ನು ತೆಗೆದುಕೊಂಡರು. ಹಡಗವು ಹೊರಟುಹೋದ ಮೇಲೆ ನಾಗಮಹಾಶಯರು ಹತ್ತರ ಹಣವಿಲ್ಲದ್ದರಿಂದ ಕಾಲುನಡಿಗೆಯಿಂದ ಕಲಕತ್ತೆಯ ಕಡೆಗೆ ಸಾಗಿದರು. ದಾರಿಯಲ್ಲಿ ಗುಡಿಗಳೇನಾದರೂ ಕಂಡರೆ ಅಲ್ಲಿ ಪ್ರಸಾದವನ್ನಿಸಕೊಂಡು, ಕೆಲವು ಸ್ಥಳಗಳಲ್ಲಿ ಮಂಡಕ್ಕಿಯನ್ನು ಕೊಂಡು ಹೊಟ್ಟೆತುಂಬಿಕೊಳ್ಳುತ್ತಿದ್ದರು. ಬಹಳ ಅಗಲವಾದ ಹೊಳೆಹಳ್ಳಗಳನ್ನು ಡೋಣಿಯ ಭಾಡಿಗೆ ಕೊಟ್ಟು ದಾಟುತ್ತಿದ್ದರು. ಆದರೆ ಅವು ಚಿಕ್ಕವಾಗಿದ್ದರೆ ಈಸಿ ದಾಟುತ್ತಿದ್ದರು. ಅವರ ಹತ್ತರ ಏಳುವರೆ ಆಣೆಗಳು ಮಾತ್ರ ಇದ್ದವು. ಇಷ್ಟು ಸ್ವಲ್ಪ ಹಣವನ್ನು ತೆಗೆದುಕೊಂಡು ಅವರು ಕಲಕತ್ತೆಗೆ ಹೊರಟಿದ್ದರು. ಹೀಗೆ ಕಾಲುನಡಿಗೆಯಿಂದಲೇ ಅವರು ಕಲಕತ್ತೆಗೆ ಇಪ್ಪತ್ತೊಂಬತ್ತು ದಿನಗಳ ಮೇಲೆ ಹೋಗಿ ಮುಟ್ಟಿದರು.

ನಾಗಮಹಾಶಯರು ಚಿಕ್ಕವರಿದ್ದಾಗ, ಬೆಕ್ಕು ಅಥವಾ ನಾಯಿಗಳು ಒದರಿದರೆ ಅವು ಹಸಿವೆಯಿಂದ ಅಳುತ್ತಿರುವವೆಂದು ಭಾವಿಸಿ, ತಮ್ಮ ತಾಯಿಗೆ "ಅವ್ವಾ, ಇವು ಏಕೆ ಅಳುತ್ತಿವೆ? ಅವಕ್ಕಷ್ಟು ಅನ್ನವನ್ನು ಹಾಕಬಾರದೆ?" ಎಂದು ಕೇಳುತ್ತಿದ್ದರು. ಆ ಮೇಲೆ ತಾವೇ ಅನ್ನವನ್ನು

ತೆಗೆದುಕೊಂಡು ಹೋಗಿ ಒಳ್ಳೇ ಅಕ್ಕರತೆಯಿಂದ "ಅಳಬೇಡವಯ್ಯಾ, ನಿನಗೆ ಅನ್ನವನ್ನು ತಂದಿರುವೆನೆಂ'' ದು ನುಡಿದು ಅವುಗಳಿಗೆ ಅನ್ನ ಹಾಕುತ್ತಿದ್ದರು.

ಅವರ ಮನೆಗೆ ಹೊಂದಿ ಒಂದು ಸಣ್ಣ ಹೊಂಡವಿತ್ತು. ಹದಿ ಮೂರು ಹದಿನಾಲ್ಕು ವರ್ಷದವರಿದ್ದಾಗ್ಗೆ ಅವರು ಪ್ರತಿದಿನ, ಊಟವಾದ ಮೇಲೆ ಕೈ ತೊಳೆದುಕೊಳ್ಳಲು ತುಸು ಅನ್ನ ಜೇಳೆ ತೆಗೆದುಕೊಂಡು ಅಲ್ಲಿಗೆ ಹೋಗುತ್ತಿದ್ದರು. ನಾಗಮಹಾಶಯರು ಆ ಹೊಂಡದಲ್ಲಿ ಕೆಲವು ಮೀನ ಗಳನ್ನು ಸಾಕಿದ್ದರು; ನಾಗಮಹಾಶಯರು ಕರೆದ ಕೂಡಲೇ ಅವು ಬಂದು ಅವರ ಕೈಯೊಳಗಿನ ಅನ್ನವನ್ನು ತಿಂದು ಹೋಗುತ್ತಿದ್ದವು. ಅವುಗಳ ಮೈಮೇಲೆ ಅವರು ಕೈಯಾಡಿಸುತ್ತಿದ್ದರು. ಕಲಕತ್ತೆಗೆ ಅಭ್ಯಾಸಕ್ಕಾಗಿ ಬರುವ ಮೊದಲು ಈ ರೀತಿಯಾಗಿ ಅವರು ಮೀನಗಳೊಡನೆ ಆಡುತ್ತಿದ್ದರು. "ಸಾಧಾರಣ ಜೀವಜಂತುಗಳಲ್ಲಿಯೂ ಅಲ್ಪಾಧಿಕವಾಗಿ ಜ್ಞಾನದ ವಿಕಾ ಸವು ಕಂಡುಬರುವದು. ಉತ್ಕ್ರಾಂತಿ ತತ್ವಕ್ಕನುಸಾರವಾಗಿ ಅವಾದರೂ ಶ್ರೇಷ್ಠತರ ಜನ್ಮವನ್ನು ಪಡೆದು ಕೊನೆಗೆ ಮುಕ್ತವಾಗುವವು'' ಎಂದು ನಾಗಮಹಾಶಯರು ಹೇಳುತ್ತಿದ್ದರು.

ಬೇಸಿಗೆಯಲ್ಲೊಂದು ದಿನ ನಾಗಮಹಾಶಯರು ಮನೆಯ ಕಟ್ಟೆಯ ಮೇಲೆ ತಂಬಾಕ ಸೇದುತ್ತ ಕುಳಿತಾಗ್ಗೆ ಎರಡು ಅಡಿವೆಯ ಹಕ್ಕಿಗಳು ಹಾರಿ ಬಂದು ಅವರ ಹತ್ತರ ಕುಳಿತುಕೊಂಡವು. ನಾಗಮಹಾಶಯರಿಗೆ ಅವು ಗಳ ಕಡೆಗೆ ಲಕ್ಷವಿದ್ದಿಲ್ಲ. ತಮ್ಮ ಕಡೆಗೆ ಅವರ ಲಕ್ಷವನ್ನೆಳೆಯಬೇಕೆಂದು ಆ ಹಕ್ಕಿಗಳು ಅವರ ಕಾಲನ್ನು ಕುಕ್ಕಹತ್ತಿದವು. ನಾಗಮಹಾಶಯರಾಗ ಅವುಗಳನ್ನು ನೋಡಿ "ಬಂದಿರಾ, ಚೆನ್ನಾಯಿತು; ತಡೆಯಿರಿ; ಇದೇ ಈಗ ನಿಮಗಾಗಿ ಆಹಾರವನ್ನು ತೆಗೆದುಕೊಂಡು ಬರುವೆನು'' ಎಂದು ನುಡಿದು ಒಳಗೆ ಹೋಗಿ ಅಕ್ಕಿಯನ್ನು ತೆಗೆದುಕೊಂಡು ಬಂದು ತಮ್ಮ ಕೈಯಿಂದ ಅವುಗಳಿಗೆ ತಿನಿಸಿದರು. ಆದರೆ ಅಷ್ಟರಿಂದ ಆ ಹಕ್ಕಿಗಳ ಹಸಿವೆಯು ಹಿಂಗದಿರಲಾಗಿ ಅವು ನಾಗಮಹಾಶಯರ ಸುತ್ತಲೂ ಹಾರಾಡಹತ್ತಿದವು. ಆಗ ನಾಗಮಹಾಶಯರು ಮತ್ತಿಷ್ಟು ಅಕ್ಕಿಯನ್ನೂ ಒಂದು ಪಾತ್ರೆಯಲ್ಲಿ ನೀರನ್ನೂ ತೆಗೆದುಕೊಂಡು ಬಂದರು. ಹಕ್ಕಿಗಳು ನಾಗಮಹಾಶಯರ

ಕೈಮೇಲೆ ಕುಳಿತುಕೊಂಡು ಅವನ್ನೆಲ್ಲ ತಿಂದು ತಣಿದವು. ಅದಾದ ಮೇಲೆ ನಾಗಮಹಾಶಯರು ಅವುಗಳ ಮೈಮೇಲೆ ಕೈಯಾಡಿಸುತ್ತ "ಮತ್ತೆ ಬನ್ನಿರಿ, ಅಡವಿಯಲ್ಲಿ ಆಡಿ ಮತ್ತೆ ಬನ್ನಿರಿ" ಎಂದು ನುಡಿದರು. ಆ ಮೇಲೆ ಹಕ್ಕಿಗಳೆರಡೂ ಹಾರಿಹೋದವು.

ನಾಗಮಹಾಶಯರು ಅಹಿಂಸೆಯ ಮೂರ್ತಿಮಂತ ಉದಾಹರಣೆಯಾಗಿದ್ದರು. "ಅಹಿಂಸಾ ಪರಮೋ ಧರ್ಮಃ" ಎಂಬ ತತ್ವವನ್ನು ಅವರು ಅಕ್ಷರಶಃ ಪಾಲಿಸುತ್ತಿದ್ದರು. ನಾರಾಯಣಗಂಜದಲ್ಲಿರುವ ಜೂಟನಾರಿನ ಕಾರಖಾನೆಯ ಕೆಲ ಯುರೋಪಿಯನ್ ಗೃಹಸ್ಥರು ಒಂದು ಸಾರೆ ದೇವಭೋಗದ ಕಡೆಗೆ ಪಕ್ಷಿಗಳ ಬೇಟೆಗಾಗಿ ಬಂದರು. ಗುಂಡಿನ ಸಪ್ಪಳವನ್ನು ಕೇಳಿ ನಾಗಮಹಾಶಯರು ಓಡುತ್ತ ಅವರ ಬಳಿಗೆ ಹೋಗಿ ಕೈಜೋಡಿಸಿ ಅಂಥ ನಿಷ್ಠುರ ಕಾರ್ಯವನ್ನು ಮಾಡಬಾರದಾಗಿ ಹೇಳಿಕೊಂಡರು. ಸಾಹೇಬರಿಗೆ ಇವರ ಮಾತು ತಿಳಿಯುವ್ದರಿಂದ ಅವರು ಪಕ್ಷಿಗಳನ್ನು ಹೊಡೆಯಲಿಕ್ಕೆ ಮತ್ತೆ ಮದ್ದು ತುಂಬಹತ್ತಿದರು. ನಾಗಮಹಾಶಯರು ಕೋಪಾವಿಷ್ಟರಾಗಿ "ಇಂಥ ಕ್ರೂರ ಕೃತ್ಯವನ್ನು ಮಾಡಬೇಡಿರಿ" ಎಂದು ಗರ್ಜಿಸಿದರು. ಆ ಸಾಹೇಬರು ಇವರು ಹುಚ್ಚರಿರಬಹುದೆಂದು ಭಾವಿಸಿ ಇವರ ಮಾತಿಗೆ ಕಿವಿಗೊಡದೆ ತಮ್ಮ ಬಂದೂಕುಗಳನ್ನೆತ್ತಿ ಪಕ್ಷಿಗಳ ಕಡೆಗೆ ಗುರಿಯಿಟ್ಟರು. ಗುಂಡು ಹಾರಿಸುವಷ್ಟರಲ್ಲಿಯೇ ನಾಗಮಹಾಶಯರು ಹಾರಿಬಂದು ಆ ಬಂದೂಕುಗಳನ್ನು ಗಟ್ಟಿಯಾಗಿ ಹಿಡಿದುಬಿಟ್ಟರು. ನಾಗಮಹಾಶಯರ ಕ್ಷೀಣ ಶರೀರದಲ್ಲಿ ಎಂಥ ಅದ್ಭುತ ಶಕ್ತಿಯು ಬಂದಿತೋ ಏನೋ, ಆ ಸಾಹೇಬರು ಎಷ್ಟು ಜಗ್ಗಾಡಿದರೂ ನಾಗಮಹಾಶಯರ ಕೈಯಿಂದ ತಮ್ಮ ಬಂದೂಕುಗಳನ್ನು ಕಸಿದುಕೊಳ್ಳಲು ಆಗಲಿಲ್ಲ. ನಾಗಮಹಾಶಯರು ಆ ಬಂದೂಕುಗಳನ್ನು ಹಿರಿದುಕೊಂಡು ಬಂದು ಮನೆಯಲ್ಲಿಟ್ಟು ಪ್ರಾಣಸಂಹಾರಕ ಅಸ್ತ್ರಗಳನ್ನು ಮುಟ್ಟಿದ್ದಕ್ಕಾಗಿ ಕೈ ತೊಳೆದುಕೊಂಡರು. ಸಾಹೇಬರು ನಿರಾಶರಾಗಿ ನಾರಾಯಣಗಂಜಕ್ಕೆ ಹೋಗಿ ನಾಗಮಹಾಶಯರ ಮೇಲೆ ಫಿರ್ಯಾದ ಮಾಡಬೇಕೆಂದು ಯೋಚಿಸಿದರು. ಇಷ್ಟರಲ್ಲಿ ನಾಗಮಹಾಶಯರು ಆ ಕಾರಖಾನೆಯಲ್ಲಿಯ ಒಬ್ಬ ಕೆಲಸಗಾರನ ಸಂಗಡ ಎರಡೂ ಬಂದೂಕುಗಳನ್ನು ಕೊಟ್ಟು ಕಳಿಸಿದರು. ಆತನ

ಬಾಯಿಂದ ನಾಗಮಹಾಶಯರ ಸಾಧುಸ್ವಭಾವವನ್ನೂ ಬಂದೂಕು ಕಸಿದು ಕೊಳ್ಳುವದರಲ್ಲಿಯ ಅವರ ಉದ್ದೇಶವನ್ನೂ ಕೇಳಿ ಆ ಸಾಹೇಬರಿಗೆ ನಾಗ ಮಹಾಶಯರ ವಿಷಯವಾಗಿ ಅತ್ಯಂತ ಶ್ರದ್ಧೆಯುಂಟಾಯಿತು. ಅಂದಿ ನಿಂದ ಅವರು ದೇವಭೋಗಕ್ಕೆ ಬೇಟೆಗಾಗಿ ಬರುವದನ್ನು ಬಿಟ್ಟು ಕೊಟ್ಟರು.

ಬಡ ಪ್ರಾಣಿಗಳ ಬಳಲಿಕೆಯನ್ನು ನೋಡಿ ನಾಗಮಹಾಶಯರಿಗೆ ಬಹು ವ್ಯಥೆಯಾಗುತ್ತಿತ್ತು. ಅವರ ಮನೆಗೆ ಹೊಂದಿರುವ ಚಿಕ್ಕ ಕೆರೆಯಲ್ಲಿ ಪೂರು ಬಂದಾಗ ಮೀನಗಳ ಅನೇಕ ಹಿಂಡುಗಳು ಬಂದಿರುತ್ತಿದ್ದವು. ಒಂದು ದಿನ ಒಬ್ಬ ಬಲೆಗಾರನು ಆ ಕೆರೆಯಲ್ಲಿಯ ಕೆಲವು ಮೀನಗಳನ್ನು ಹಿಡಿದುಕೊಂಡು ಬಂದು ಅಲ್ಲಿಯ ಪದ್ಧತಿಯಂತೆ ನಾಗಮಹಾಶಯರಿಗೆ ಅವರ ಪಾಲನ್ನು ಕೊಡಹೋದನು. ಬಲೆಗಾರನ ಬುಟ್ಟಿಯಲ್ಲಿಯ ಮೀನ ಗಳು ಜೀವಕ್ಕಾಗಿ ತಳಮಳಿಸುತ್ತಿರುವದನ್ನು ಕಂಡು ನಾಗಮಹಾಶಯರಿಗೆ ಅತಿಶಯ ದುಃಖವಾಯಿತು. ಆಗ ಅವರು ಬಲೆಗಾರನು ಹೇಳಿದಷ್ಟು ಬೆಲೆ ಕೊಟ್ಟು ಆ ಮೀನಗಳನ್ನು ಮತ್ತೆ ಕೆರೆಯಲ್ಲಿ ಬಿಟ್ಟುಬಿಟ್ಟರು.

ಮತ್ತೊಂದು ದಿನ ಮತ್ತೊಬ್ಬ ಬಲೆಗಾರನು ಕೆಲ ಮೀನಗಳನ್ನು ಹಿಡಿದುಕೊಂಡು ಬಂದು ನಾಗಮಹಾಶಯರ ಮನೆಗೆ ಮಾರಲು ಬಂದನು. ಈ ಸಾರೆಯೂ ನಾಗಮಹಾಶಯರು ಎಲ್ಲ ಮೀನಗಳನ್ನು ಕೊಂಡು ಅವುಗ ಳನ್ನು ಕೆರೆಯಲ್ಲಿ ಬಿಟ್ಟರು. ಆ ಬಲೆಗಾರನು ನಾಗಮಹಾಶಯರ ಈ ವಿಚಿತ್ರ ವೃತ್ತಿಯನ್ನು ಕಂಡು ಆಶ್ಚರ್ಯಚಕಿತನಾದನು ಹಾಗೂ ತನ್ನ ರೊಕ್ಕ ಕೈಸೇರಿದ ಕೂಡಲೇ ಈ ಹುಚ್ಚ ಮನುಷ್ಯನಿಂದ ದೂರ ಓಡಹತ್ತಿ ದನು! ಅಂದಿನಿಂದ ಅವನು ನಾಗಮಹಾಶಯರ ಮನೆಯ ಕಡೆಗೆ ಹಾಯು ವದನ್ನೇ ಬಿಟ್ಟನು.

ನಾಗಮಹಾಶಯರ ಅಹಿಂಸಾ ಭಾವವು ವಿಷಯುಕ್ತ ಹಾವುಗಳನ್ನು ಸಹ ಕೊಲ್ಲದಷ್ಟು ತೀವ್ರ ಸ್ವರೂಪವನ್ನು ತಳೆದಿತ್ತು! ಒಂದು ದಿನ ಅವರ ಮನೆಯ ಅಂಗಳದಲ್ಲಿ ಒಂದು ನಾಗರ ಹಾವು ಬಂದಿತು. ಅಲ್ಲಿದ್ದ ಜನರು ಅದನ್ನು ಕಂಡು ಗಾಬರಿಯಾದರು. ನಾಗಮಹಾಶಯರ ಹೆಂಡತಿಯು ಆ ಹಾವು ಕೊಲ್ಲಲ್ಪಡಬೇಕೆಂದಳು. ಆದರೆ ನಾಗಮಹಾಶಯರು ಅದಕ್ಕೆ

ಒಪ್ಪಲಿಲ್ಲ. "ವನದ ಸರ್ಪವು ನಮಗೇನೂ ಅಪಾಯ ಮಾಡುವದಿಲ್ಲ; ಮನದ ಸರ್ಪವೇ ನಮ್ಮನ್ನು ಕೊಲ್ಲುತ್ತದೆ'' ಎಂದು ಅವರು ನುಡಿದರು. ಆ ಮೇಲೆ ಅವರು ಹಾವಿಗೆ ಕೈಜೋಡಿಸಿ, ''ತಾಯಿ, ಮನಸಾದೇವಿ, ನಿನ್ನ ಮನೆ ಅಡವಿಯಷ್ಟೆ? ದಯಮಾಡಿ ಈ ಬಡವನ ಗುಡಿಸಲನ್ನು ಬಿಟ್ಟು ನಿನ್ನ ಮನೆಗೆ ಹೋಗಿ ಬಿಡು'' ಎಂದು ಹೇಳಿದರು. ಆ ಮೇಲೆ ನಾಗಮಹಾಶಯರು ಹಾದಿ ತೋರಿಸುತ್ತ ಅಡಿವೆಯ ಕಡೆಗೆ ಸಾಗಲು ಆ ಹಾವಾದರೂ ಹೆಡೆ ತಗ್ಗಿಸಿಕೊಂಡು ಅವರ ಹಿಂದಿನಿಂದ ಹೊರಟು ಹೋಯಿತು. ಇದನ್ನು ನೋಡಿ ಎಲ್ಲರೂ ಬೆರಗಾದರು. ''ಬಾಹ್ಯ ಜಗತ್ತೆಂದರೆ ನಮ್ಮ ಮನಸ್ಸಿನ ಕಲ್ಪನೆಯೇ ಸರಿ. ನಾವು ಯಾರ ಅನಿಷ್ಟವನ್ನೂ ಚಿಂತಿಸದಿದ್ದರೆ ಜಗತ್ತಾದರೂ ಅದಕ್ಕನುರೂಪವಾಗಿಯೇ ವ್ಯವಹರಿಸುವದು. ಕನ್ನಡಿಯಲ್ಲಿ ನಾವು ಮಾಡುವ ಹಾವ ಭಾವಗಳಂತೆ ನಮ್ಮ ಪ್ರತಿಬಿಂಬವು ಕಾಣುವದಷ್ಟೇ! ಎಂದು ಅವರು ನುಡಿಯುತ್ತಿದ್ದರು.

ಕೆರೆಯಲ್ಲೊಂದು ದಿನ ನಾಗಮಹಾಶಯರು ಮೋರೆ ತೊಳೆದುಕೊಳ್ಳುತ್ತಿದ್ದರು. ಆಗ ಒಂದು ಹಾವು ಅವರ ಎಡಗಾಲ ಬೆರಳನ್ನು ಕಚ್ಚಿತು. ಪಾಪ, ಆ ಹಾವಿಗೆ ತೊಂದರೆ ಕೊಡಬಾರದೆಂದು ಯೋಚಿಸಿ ನಾಗಮಹಾಶಯರು ತಮ್ಮ ಕಾಲನ್ನು ಅಗಳಾಡಿಸಲಿಲ್ಲ! ಮರುಚಣದಲ್ಲಿಯೇ ಆ ಹಾವು ಬಿಟ್ಟು ಹೋಯಿತು. ನಾಗಮಹಾತಯರ ಹೆಂಡತಿಗೆ ಇದು ತಿಳಿಯಲಾಗಿ ಅವಳು ಬಹು ಉದ್ವಿಗ್ನಳಾಗಲು, ಅವರು,'' ಅದಕ್ಕೇಕೆ ಅಷ್ಟು ಗಾಬರಿಯಾಗಬೇಕು? ಯಾವುದೋ ನೀರಹಾವು ಆಹಾರವೆಂದು ತಿಳಿದು ನನ್ನ ಬೆರಳನ್ನು ಹಿಡಿದಿತ್ತು. ಆದರೆ ಅದಕ್ಕೆ ತನ್ನ ತಪ್ಪು ಗೊತ್ತಾಗಲಾಗಿ ಅದು ನನಗೇನೂ ಅಪಾಯ ಮಾಡದೆ ಹೊರಟು ಹೋಯಿತು'' ಎಂದು ನುಡಿದರು.

''ಪ್ರತಿಯೊಂದು ಜೀವದಲ್ಲಿಯೂ ಒಬ್ಬ ಪರಮಾತ್ಮನೇ ವಿರಾಜಿಸುತ್ತಿರುವನು,'' ಎಂದು ಅವರು ಅನ್ನುತ್ತಿದ್ದರು. ಯಾವಾಗಲೂ ತಾವು ಕೈಜೋಡಿಸಿಕೊಂಡೇಕಿರುವಿರಿ? ಎಂದು ಕೇಳಿದರೆ ನಾಗಮಹಾಶಯರು ''ಪ್ರತಿಯೊಂದು ಪ್ರಾಣಿಯಲ್ಲಿಯೂ ಆತನೇ ಪ್ರತ್ಯಕ್ಷನಾಗಿರುವದು ನನಗೆ ಕಾಣುತ್ತದೆ'' ಎಂದು ಹೇಳುತ್ತಿದ್ದರು. ಗಿಡದ ಒಂದೆಲೆಯನ್ನು ಹರಿಯಲು

ಸಹ ಅವರಿಗೆ ಅತಿಶಯ ವೇದನೆಯಾಗುತ್ತಿತ್ತು. ಅವರ ಮನೆಯ ಹಿತ್ತಲಲ್ಲಿ ಒಂದ ಮಾವಿನ ಗಿಡವಿತ್ತು. ಭಕ್ತನೊಬ್ಬನು ಅದರ ಎಲೆ ಹರಿಯುವದನ್ನು ನೋಡಿ ನಾಗಮಹಾಶಯರು "ಅಯ್ಯೋ, ಅದರಲ್ಲಿಯಾದರೂ ಜೀವವಿದೆ; ಅದಕ್ಕಾದರೂ ಸುಖ ದುಃಖ ಬೋಧವಾಗುತ್ತದೆ" ಎಂದು ನುಡಿದರು. ಅವರ ಹಿತ್ತಲದೊಳಗಿನ ಒಂದು ಬಿದರ ಮೆಳೆಯ ಗರಿಗಳು ಬೆಳೆದು ಮನೆಯೊಳಗೆ ಚಾಚಿದ್ದವು. ಆದರೂ ಅವುಗಳನ್ನು ನಾಗಮಹಾಶಯರು ಕಡಿಯಲಿಲ್ಲ.

ಕ್ಷುದ್ರ ಜಂತುಗಳಿಗೆ ಸಹ ಎಳ್ಳಷ್ಟೂ ಪೀಡೆಯಾಗದಂತೆ ನಾಗಮಹಾಶಯರು ಒಳ್ಳೇ ಎಚ್ಚರಾಗಿರುತ್ತಿದ್ದರು. ಇರಿವೆಗಳೇನಾದರೂ ತಮ್ಮ ಮೈಮೇಲೆ ಏರಿದರೆ ಅವಕ್ಕೇನೂ ನೋವಾಗದಂತೆ ತೆಗೆದು ಸುರಕ್ಷಿತ ಸ್ಥಳದಲ್ಲಿ ಚಲ್ಲುತ್ತಿದ್ದರು. ಹೊರಗೆ ಹರಿದಾಡುವ ತಗಣಿಗಳನ್ನು ತಿರುಗಿ ಹಾಸಿಗೆಯಲ್ಲಿ ಹಾಕುತ್ತಿದ್ದರು. ಅಹಿಂಸೆಯ ಭಾವನೆಯ ಉದ್ದಾಮ ವೇಗದಲ್ಲಿ ಒಂದೊಂದು ಸಾರೆ, ಉಸುರಾಡಿಸಿದರೆ ಹವೆಯಲ್ಲಿಯ ಅದೃಶ್ಯವಾದ ಕೀಟಗಳು ಎಲ್ಲಿ ಸಾಯುವವೋ ಎಂದು, ಅವರ ಉಸರಾಡಿಸುವಿಕೆಯು ನಿಲ್ಲುತ್ತಿತ್ತು! ನಡೆಯುತ್ತಿದ್ದಾಗ ತಮ್ಮ ಕಾಲು ಬುಡದಲ್ಲಿ ಹುಳಹುಪ್ಪಡಿಗಳು ಸಾಯಬಹುದೆಂಬ ಸಂಶಯದಿಂದ ಅಲ್ಲಿಯೇ ನಿಂತು ಬಿಡುತ್ತಿದ್ದರು!

ನಾಗಮಹಾಶಯರ ಭಕ್ತನೊಬ್ಬನು ಅವರ ಮನೆಯ ಜಗುಲಿಯಲ್ಲಿ ಕುಳಿತುಕೊಂಡಿದ್ದನು. ಜಗುಲಿಯ ಪೂರ್ವಭಾಗಕ್ಕೆ ಆಧಾರವಾಗಿದ್ದ ಕಂಬವನ್ನು ಗೆದ್ದಲಿಗಳು ತಿಂದಿವೆಯೆಂಬುದು ಅವನ ಕಣ್ಣಿಗೆ ಬಿತ್ತು. ಆತನು ಆ ಕಂಬವನ್ನು ಅಗಲಾಡಿಸಲು ಗೆದ್ದಲಿಗಳೆಷ್ಟೋ ಕೆಳಗೆ ಬಿದ್ದವು. ನಾಗಮಹಾಶಯರಿಗೆ ಇದನ್ನು ಕಂಡು ಬಹಳ ದುಃಖವಾಯಿತು. "ಪಾಪ ಬಡ ಪ್ರಾಣಿಗಳು ಮನೆಮಾಡಿಕೊಂಡಿದ್ದವು! ನೀವು ಅವಕ್ಕೆ ಆಶ್ರಯವಿಲ್ಲದಂತೆ ಮಾಡಿದಿರಿ" ಎಂದು ನುಡಿದರು. ಅವರು ಹೀಗೆ ಅನ್ನುತ್ತಿದ್ದಾಗ್ಗೆ ಅವರ ಕಂಣುಗಳಲ್ಲಿ ನೀರು ತುಂಬಿ ಬಂದಿತು. ಭಕ್ತನಿದನ್ನು ನೋಡಿ ಬೆರಗಾದನು. ಆ ಮೇಲೆ ನಾಗಮಹಾಶಯರು ಆ ನಿರಾಶ್ರಿತ ಹುಳಗಳ ಕಡೆಗೆ ಹೋಗಿ "ನೀವು ಮತ್ತೆ ಮನೆಮಾಡಿಕೊಳ್ಳಬಹುದು. ಇನ್ನೇನು ಹೆದರಬೇಕಾಗಿಲ್ಲ" ಎಂದು ಹೇಳಿದರು. ಗೆದ್ದಲಿಗಳು ಮತ್ತೆ ಯಥಾ ಪ್ರಕಾರ ಮನೆ

ಮಾಡಲು ಕೆಲದಿನಗಳಲ್ಲಿಯೇ ಆ ಕಂಬವು ಮುರಿದು ಬಿದ್ದಿತು. ನಾಗಮಹಾಶಯರು ಯಾರಿಗೂ ಆ ಗೆದ್ದಲಗಳಿಗೆ ಕೈಹಚ್ಚಲು ಕೊಡುತ್ತಿದ್ದಿಲ್ಲ.

ಆಕಳ ಮೇಲೆ ನಾಗಮಹಾಶಯರಿಗೆ ವಿಶೇಷ ಭಕ್ತಿಯಿತ್ತು. ಪುರಾಣ ಮತವಾದಿ ಹಿಂದುವಿನ ವಿಶ್ವಾಸದಂತೆ ಆಕಳಲ್ಲಿ ದೇವಿಯು ವಿಶೇಷ ಅಂಶ ವುಂಟೆಂದು ಅವರು ಭಾವಿಸುತ್ತಿದ್ದರು. ಅದರ ಪಾದ ಧೂಳಿಯನ್ನು ತೆಗೆದುಕೊಳ್ಳುತ್ತಿದ್ದರು. ನಾಗಮಹಾಶಯರು ಒಂದು ದಿನ ಕಬ್ಬನ್ನು ತೆಗೆದುಕೊಂಡು ಹೊರಟಿದ್ದರು. ಆಕಳೊಂದು ಅದನ್ನು ತಿನ್ನಬಯಸಿತು. ನಾಗಮಹಾಶಯರಾಗ ಆ ಕಬ್ಬನ್ನು ತುಂಡುತುಂಡಾಗಿ ಮಾಡಿ ಅದಕ್ಕೆ ತಿನ್ನಿಸಿದರು. ಆ ಮೇಲೆ ಅದಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಿ ತುಸು ಹೊತ್ತು ಗಾಳಿ ಹಾಕುತ್ತ ನಿಂತರು. ಅದಕ್ಕೆ ಗಾಳಿ ಹಾಕುತ್ತಿದ್ದಾಗ್ಗೆ ಆ ಆಕಳಲ್ಲಿ ದೇವಿಯ ಆವಿರ್ಭಾವವಾಗಿದೆಯೆಂಬ ತೀವ್ರ ಭಾವನೆಯ ಉದ್ರೇಕದಿಂದ ಅವರಿಗೆ ಬಾಹ್ಯ ಸಂಜ್ಞೆಯು ಲೋಪವಾಗಿ ಬಿದ್ದುಬಿಟ್ಟರು!

ನಾಗಮಹಾಶಯರು ಶಕ್ತಿಯ ಉಪಾಸಕರಾಗಿದ್ದರು. ಆದರೆ "ನಿರ್ದಿಷ್ಟ ಪಥದಿಂದಲೇ ಮುಕ್ತಿಯು ದೊರಕುವದೆಂಬುದು ಸುಳ್ಳು. ಯಾವ ಮಾರ್ಗವನ್ನು ಹಿಡಿದರೂ ಮುಕ್ತಿ ದೊರೆಕೇ ದೊರಕುವದು; ಏಕನಿಷ್ಠೆ ಮಾತ್ರ ಬೇಕು. ಪರಮಾತ್ಮನು ಅವರ ಮೇಲೆ ಅನುಗ್ರಹ ಮಾಡುವನು" ಎಂದು ನುಡಿಯುತ್ತಿದ್ದರು. ಅವರಲ್ಲಿ ಭೇದಬುದ್ಧಿಯಿದ್ದಿಲ್ಲ. ಶೈವ ವೈಷ್ಣವ ಮೊದಲಾದ ಎಲ್ಲ ಸಾಂಪ್ರದಾಯಗಳ ಸಾಧಕರಿಗೂ ಸಮಾನ ಆದರವನ್ನು ತೋರಿಸುತ್ತಿದ್ದರು. ಹಿಂದೂ, ಮುಸಲ್ಮಾನ, ಕ್ರಿಶ್ಚಿಯನ್ ಎಂದು ಭೇದಭಾವ ಮಾಡುತ್ತಿದ್ದಿಲ್ಲ. ಚರ್ಚ ಅಥವಾ ಮಸೀದೆಗಳಮುಂದೆ ನಮಸ್ಕಾರ ಮಾಡುತ್ತಿದ್ದರು.

ಸಾಧನೆಯ ವಿಷಯವಾಗಿ ಅವರು ಹೀಗೆ ಹೇಳುತ್ತಿದ್ದರು,-"ಹಣ್ಣಿನ ಗಿಡದ ಬುಡಕ್ಕೆ ಹಗಲಿರುಳೂ ಎಚ್ಚರಿದ್ದು ಕಾಯುತ್ತ ಕೂಡವ ಮನುಷ್ಯನಂತೆ ಸಾಧಕನು ಯಾವಾಗಲೂ ಸಾಧನೆಯದ್ವಾರಾ ತನ್ನನ್ನು ಜಾಗರಿತನಾಗಿಟ್ಟುಕೊಳ್ಳಬೇಕು. ಆದರೆ ಫಲವು ಆತನ ಕೈಯಲ್ಲಿ. ಕರುಣಾಸಾಗರನಾದ ಪರಮಾತ್ಮನು ದಯದೋರಿದರೇ ಸಾಧಕನಿಗೆ ತನ್ನ ಸಾಧನೆಯ ಫಲವು ದೊರಕುವದು. ಮತ್ತೆ ಕೆಲವರು ನಿದ್ರಿಸಿದ್ದರೂ ಅವರ ಮೇಲೆ

ಸಹಜವಾಗಿ ದೇವರ ಅನುಗ್ರಹವಾಗಿಬಿಡುತ್ತದೆ. ಮೇಲಿನಿಂದ ಸಾಧನೆಯ ಫಲವನ್ನು ಸುರಿಸಿದಂತಾಗುತ್ತದೆ. ಎಚ್ಚರಾದಮೇಲೆ ಸಾಧಕನಿಗೂ ಜಗತ್ತಿಗೂ ಆಶ್ಚರ್ಯವಾಗುತ್ತದೆ ಇಂಥವರು ವಿಶೇಷ ಸಾಧನೆ ಭಜನೆ ಮಾಡಬೇಕಾಗಿಲ್ಲ. ಇವರೇ ಕೃಪಾಸಿದ್ಧರು. ಪರಮಾತ್ಮನ ಕೃಪೆಯಾಗದ ಹೊರತು ಆತನ ಯಥಾರ್ಥ ಸ್ವರೂಪವು ತಿಳಿಯದು. ಪರಮಾತ್ಮನು ಕಲ್ಪತರುವಿನಂತೆ ಬೇಡಿದ್ದನ್ನು ಕೊಡುವನು. ಆದರೆ ಪುನಃ ಪುನಃ ಜನ್ಮ ಮೃತ್ಯುವಿನ ಚಕ್ರದಲ್ಲಿ ಬೀಳುವಂತೆ ಬೇಡುವದು ಅಯೋಗ್ಯವು. ಆತನ ಅಡಿದಾವರೆಗಳಲ್ಲಿ ಕೇವಲ ಶುದ್ಧಭಕ್ತಿ ಹಾಗೂ ಶುದ್ಧಜ್ಞಾನ ಇವುಗಳನ್ನೇ ಪ್ರಾರ್ಥಿಸತಕ್ಕದ್ದು. ಆದರಿಂದಲೇ ಸಂಸಾರಬಂಧನವು ಛಿನ್ನವಾಗಿ ಮುಕ್ತಿ ಲಾಭವಾಗುವದು. ವಿಷಯವಾಸನೆಗೆ ಬಲಿಬಿದ್ದರೆ ಆದರಿಂದ ಜೀವನು ದುಃಖಜ್ವಾಲೆಯನ್ನು ಸಹಿಸಬೇಕಾಗುವದು. ಆದರೆ ಯಾರು ಭಗವದ್ವಿಚಾರದಲ್ಲಿ ಆಸಕ್ತರಾಗುವರೋ ಅವರ ತ್ರಿತಾಪಜ್ವಾಲೆಯು ಶಾಂತವಾಗುವದು.

ಸಿದ್ಧಿಗಳ ವಿಷಯವಾಗಿ ಅವರು ಹೀಗೆ ಹೇಳುತ್ತಿದ್ದರು, “ ಮನುಷ್ಯನು ನಿಜವಾಗಿಯೂ ನಿರ್ಮಲ ಹೃದಯಿಯೂ ದೈವೀಭಾವದಿಂದೊಡಗೂಡಿದವನೂ ಆದಮೇಲೆ ಋದ್ಧಿ ಸಿದ್ಧಿಗಳು ಸದಾ ಅವನನ್ನು ಪ್ರಲೋಭಿತನನ್ನಾಗಿ ಮಾಡುತ್ತವೆ. ನಿಜವಾದ ಸಾಧುವಿನ ಹೃದಯದಲ್ಲಿ ಜಗತ್ತಿನ ಎಲ್ಲ ವಸ್ತುಗಳ ಪ್ರತಿಬಿಂಬವು ಬೀಳುತ್ತದೆ. ಆದ್ದರಿಂದ ಅವನುಎಲ್ಲವನ್ನೂ ಅಂತರ್ಜ್ಞಾನದಿಂದ ತಿಳಿದುಕೊಳ್ಳಬಲ್ಲನು. ಆದರೆ ಇಂಥ ಸಿದ್ಧಿಗಳಿಗೆ ಅವನು ಮನಸೋತರೆ ಆದರ್ಶ ಜೀವನದಿಂದ ಚ್ಯುತನಾಗುವ ಸಂಭವವುಂಟು. ”

ನಾಗಮಹಾಶಯರ ಎದುರಿನಲ್ಲಿ ಅವರ ಭಕ್ತರ ಮನಸ್ಸಿನಲ್ಲೇನಾದರೂ ಸಂಶಯ ಬಂದರೆ ಅದನ್ನು ಭಕ್ತರು ಅವರಿಗೆ ಕೇಳಬೇಕಾಗಿದ್ದಿಲ್ಲ. ನಾಗಮಹಾಶಯರು ತಾವೇ ಸಂಭಾಷಣೆಯಲ್ಲಿ ಆ ವಿಷಯವನ್ನೆತ್ತಿ ಅವರ ಸಂಶಯವನ್ನು ಪರಿಹರಿಸುತ್ತಿದ್ದರು. ಮೋರೆಯ ಮೇಲಿಂದಲೇ ಮನುಷ್ಯನ ಸ್ವಭಾವವನ್ನೂ ಮಹತ್ವವನ್ನೂ ಕಂಡುಹಿಡಿಯುತ್ತಿದ್ದರು. ಅನೇಕರ ವಿಷಯವಾಗಿ ಅವರು ಹೇಳಿದ ಭವಿಷ್ಯವು ಅಕ್ಷರಶಃ ನಿಜವಾಗಿ ಪರಿಣಮಿ

ಸಿತು. ಯಾರಾದರೂ ದೇವಭೋಗಕ್ಕೆ ಬರುವ ಮೊದಲು "ಈ ದಿನ ಇಂಥವರು ಮನೆಗೆ ಬರುವರು, ನಾನೀಗ ಅದಕ್ಕಾಗಿ ಪೇಟೆಗೆ ಹೋಗಬೇಕಾಗಿದೆ" ಎಂದು ಅವರು ತಮ್ಮ ಹೆಂಡತಿಗೆ ಹೇಳುತ್ತಿದ್ದರು; ಮತ್ತು ಅವರು ಹೇಳಿದ ಮನುಷ್ಯನು ತಪ್ಪದೆ ಬರುತ್ತಿದ್ದನು.

ಶರಚ್ಚಂದ್ರರೂ ಅವರ ಆಪ್ತರಾದ ಅಶ್ವಿನೀಕುಮಾರರೂ ಒಂದು ದಿನ ನಾಗಮಹಾಶಯರನ್ನು ಕಾಣಲು ಹೋದರು. ಅಶ್ವಿನೀಕುಮಾರನಿಗೆ ಉದರ ಶೂಲೆ ಏಳುತ್ತಿತ್ತು; ಪ್ರತಿದಿನ ಸಂಜೆಯಿಂದ ಮುಂಜಾನೆಯವರೆಗೆ ಅವರು ಅದರ ತಾಪದಿಂದ ನಿಶ್ಚೇಷ್ಟಿತರಾಗಿ ಬಿದ್ದಿರುತ್ತಿದ್ದರು. ಸಂಜೆಯಾದರೂ ಅವರಿಗೆ ದೇವಭೋಗಕ್ಕೆ ಮುಟ್ಟುವದಾಗಲಿಲ್ಲ; ಕ್ಷಣ ಕ್ಷಣಕ್ಕೆ ಶೂಲವೇದನೆಯ ಆಶಂಕೆಯುದಯಿಸಹತ್ತಿತು. ಆದರೆ ದೇವರ ದಯೆಯಿಂದ ಅವರಿಗೆ ನೋವು ಏಳಲಿಲ್ಲ. ಅಶ್ವಿನೀಕುಮಾರರು "ನಿರ್ದಿಷ್ಟ ವೇಳೆಯು ಕಳೆದುಹೋಗಿರುವದರಿಂದ ಇನ್ನು ವೇದನೆಯೇಳುವ ಸಂಭವವಿಲ್ಲ" ವೆಂದು ಶರಚ್ಚಂದ್ರರಿಗೆ ಹೇಳಿದರು. ಹಿಂದಿನ ಐದು ತಿಂಗಳುಗಳಲ್ಲಿ ಅಶ್ವಿನೀಕುಮಾರರು ರಾತ್ರಿ ಒಂದು ಒಂದು ಹನಿ ನೀರು ಸಹ ಕುಡಿಯುತ್ತಿದ್ದಿಲ್ಲ. ಆದರೆ ಆ ದಿನ ಮಾತ್ರ ಹೊಟ್ಟೆತುಂಬ ಉಂಡರು. ದೇವಭೋಗದಲ್ಲಿ ಅವರು ಮೂರು ದಿನ ಇದ್ದರು. ಮೂರು ದಿನಗಳು ಏನೂ ಬಾಧೆಯಿಲ್ಲದ ಕಳೆದವು. ಈ ಘಟನೆಯನ್ನುಲ್ಲೇಖಿಸಿ ಅಶ್ವಿನೀಕುಮಾರರು "ಪೂರ್ವ ಜನ್ಮಗಳ ದುಷ್ಕೃತ್ಯಗಳ ಫಲವಾಗಿದ್ದ ನನ್ನ ಆ ಭಯಂಕರ ಬೇನೆಯು ಆ ಮಹಾತ್ಮನ ದರ್ಶನದಿಂದ ನಾಶವಾಯಿತು. ನಾನು ಮೊದಲಿನಿಂದಲೇ ಅವರ ಅನುಯಾಯಿಯಾಗಿದ್ದರೆ ನನ್ನ ಜನ್ಮವು ಸಾರ್ಥಕವಾಗುತ್ತಿತ್ತು" ಎಂದು ಹೇಳುತ್ತಿದ್ದರು.

ದೇವಭೋಗದಲ್ಲಿಯ ಬ್ರಾಹ್ಮಣ ಬಾಲಕನೊಬ್ಬನು ಮಾರಿಕಾದಿಂದ ಬೇನೆ ಬಿದ್ದ. ಅವನ ವಿಧವೆಯಾದ ತಾಯಿಯು ಆತನ ಜೀವಿತದ ವಿಷಯವಾಗಿ ನಿರಾಶಳಾಗಿ ಮುಮೂರ್ಷು ಅವಸ್ಥೆಯಲ್ಲಿದ್ದವನನ್ನು ನಾಗಮಹಾಶಯರ ಬಾಗಿಲಲ್ಲಿ ತಂದಿರಿಸಿದಳು. ಈಶ್ವರೇಚ್ಛೆಯಿಂದ ಬಾಲಕನು ಬದುಕಿಕೊಂಡನು. ಸುರೇಶಬಾಬುಗಳು "ಬಾಲಕನಿಗೆ ಹೇಗೆ ಗುಣವಾಯಿತು?" ಎಂದು ನಾಗಮಹಾಶಯರಿಗೆ ಕೇಳಲಾಗಿ, ಅವರು "ಬಾಲಕ

ನಿಗೆ ಗುಣವಾಯಿತೆಂಬುದೇನೋ ನಿಜ; ಆದರೆ ಆವನಿಗೆ ಹೇಗೆ ಗುಣವಾಯಿತೆಂಬುದನ್ನು ಮಾತ್ರ ಹೇಳಲಾರೆ ಎಂದು ನುಡಿದರು.

ಚೈತ್ರಮಾಸದಲ್ಲೊಂದು ದಿನ ನಾಗಮಹಾಶಯರ ಮನೆಯ ಹತ್ತಿರುವ ಚೌಧರೀಯವರ ಮನೆಗೆ ಬೆಂಕಿಹತ್ತಿತು. ಗಾಳಿಯು ಭರದಿಂದ ಬೀಸುತ್ತಿದ್ದುದರಿಂದ ಒಳ್ಳೇ ಜೋರಿನಿಂದ ಬೆಂಕಿಯು ಉರಿಯಹತ್ತಿತು. ಬೆಂಕಿ ಹತ್ತಿದ ಮನೆಯಿಂದ ನಾಗಮಹಾಶಯರ ಗುಡಿಸಲು ೨೫-೩೦ ಮೊಳ ದೂರದಲ್ಲಿತ್ತು. ಅವರ ಮನೆ ಮಾಳಿಗೆಯ ಮೇಲೆ ಕಿಡಿಗಳು ಹಾರಿ ಬೀಳಹತ್ತಿದವು. ಬೆಂಕಿಯನ್ನು ನೊಂದಿಸಲು ಎಲ್ಲರೂ ಹೆಣಗಹತ್ತಿದರು. ಒಳ್ಳೇ ಕೋಲಾಹಲವೆದ್ದಿತು. ಆದರೆ ನಾಗಮಹಾಶಯರು ಮಾತ್ರ ಆ ಉರಿಯ ಎದುರಿಗೆ ಕೈ ಜೋಡಿಸಿಕೊಂಡು ಯಾವ ವಿಷಯದ ಪರಿವೆಯೂ ಇಲ್ಲದೆ ಹಾಗೆಯೇ ನಿಂತುಕೊಂಡಿದ್ದರು. ಅವರ ಹೆಂಡತಿಯು ತಮ್ಮ ಮನೆಗೆ ಬೆಂಕಿ ಹತ್ತಬಹುದೆಂಬ ಹೆದರಿಕೆಯಿಂದ ಮನೆಯೊಳಗಿನ ಎಲ್ಲ ಸಾಮಾನುಗಳನ್ನು ಹೊರಗೆ ತಂದಿಡಹತ್ತಿದಳು. ಆಗ ನಾಗಮಹಾಶಯರು ಅವಳಿಗೆ ಹೇಳಿದರು, "ಇನ್ನೂ ಇಷ್ಟು ಅವಿಶ್ವಾಸವೇ? ಈ ಕ್ಷುದ್ರ ವಸ್ತುಗಳ ಬಗ್ಗೆ ಇಷ್ಟೇಕೆ ಚಿಂತೆ? ಸಾಕ್ಷಾತ್ ಬ್ರಹ್ಮನೇ ಈ ದಿನ ನಮ್ಮ ಬಾಗಿಲಿಗೆ ಬಂದಿರುವನು; ಅವನನ್ನು ಪೂಜಿಸುವದನ್ನು ಬಿಟ್ಟು ಈ ಗೊಂದಲದಲ್ಲೇಕೆ ಬಿದ್ದಿರುವಿ?" ಆ ಮೇಲೆ ಚಪ್ಪಾಳಿಯಿಕ್ಕುತ್ತ "ಜಯ ದೇವ ಜಯ ದೇವ. ದೇವರು ಉಳಿಸುವವನಾದರೆ ಕೊಲ್ಲುವವನಾರು, ದೇವರು ಕೊಲ್ಲುವವನಾದರೆ ಉಳಿಸುವವನಾರು" ಎಂದೆನ್ನುತ್ತ ಆನಂದದ ಭರದಲ್ಲಿ ಕುಣಿಯಹತ್ತಿದರು. ಚೌಧರೀಯವರ ಮನೆಯನ್ನು ಭಸ್ಮಸಾತ್ ಮಾಡಿದ ಮೇಲೆ ಅಗ್ನಿದೇವನ ಹಸಿವು ಹಿಂಗಿತು. ನಾಗಮಹಾಶಯರ ಮನೆಯು ಸುರಕ್ಷಿತವಾಗಿ ಉಳಿಯಿತು.

ಅರ್ಧೋದಯ ಯೋಗವು † ಒದಗಿದ ವರ್ಷ ನಾಗಮಹಾಶಯರು, ಇನ್ನು ಮೂರು ನಾಲ್ಕು ದಿನಗಳಲ್ಲಿಯೇ ಆ ಶುಭದಿನವು ಬರುವಂ

† ಇದು ಐವತ್ತು ವರ್ಷಗಳಿಗೊಮ್ಮೆ ಬರುತ್ತದೆ. ಮಹಾ ಶುಭಯೋಗವೆಂದು ಎಣಿಸಲ್ಪಡುತ್ತದೆ. ಈ ಯೋಗದಲ್ಲಿ ಗಂಗಾ ಸ್ನಾನ ಮಾಡಿದವರೆ ವಿಶೇಷ ಪುಣ್ಯ ಬರುವು ದೆಂದು ಪುರಾಣಗಳಲ್ಲಿ ಹೇಳಿದೆ.

ತಿದ್ದಾಗ್ಗೆ ಕಲಕತ್ತೆಯಿಂದ ದೇವಭೋಗಕ್ಕೆ ಹೊರಟು ಬಂದರು. ದೀನದ ಯಾಲರಿಗೆ ಇದರಿಂದ ಬಹಳ ಸಿಟ್ಟುಬಂದಿತು. "ಅಯ್ಯಾ, ಈ ಯೋಗದಲ್ಲಿ ಗಂಗಾ ಸ್ನಾನ ಮಾಡಬೇಕೆಂದು ಎಷ್ಟೋ ಜನರು ಕಲಕತ್ತೆಗೆ ಹೋಗು ತ್ತಾರೆ; ಹೀಗಿದ್ದು ನೀನು ಗಂಗಾ ತೀರವನ್ನು ಬಿಟ್ಟು ಬಂದೆಯಲ್ಲ! ನಿನ್ನ ಧರ್ಮ ಕರ್ಮಗಳ ಮರ್ಮವು ನನಗಂತೂ ಹೊಳೆಯಲೊಲ್ಲದು! ಇನ್ನಾದರೂ ಮೂರು ನಾಲ್ಕು ದಿನಗಳುಳಿದಿವೆ. ನನ್ನನ್ನೊಂದು ಸಾರೆ ಗಂಗಾ ತೀರಕ್ಕೆ ಕರೆದುಕೊಂಡು ಹೋಗು'' ಎಂದು ಹೇಳಿದರು. ನಾಗಮ ಹಾಶಯರಾಗ"ಮನುಷ್ಯನಲ್ಲಿ ಅಂಥ ತೀವ್ರಭಕ್ತಿಯಿದ್ದರೆ ತಾಯಿ ಭಾಗೀರ ಥಿಯು ತಾನೇ ಭಕ್ತನಮನೆಗೆ ಬರುವಳು. ಅವನು ಮತ್ತೆಲ್ಲಿಯೂ ಹೋಗು ವದು ಅವಶ್ಯವಿಲ್ಲ'' ಎಂದು ನುಡಿದರು. ಆ ಶುಭ ದಿನವು ಉದಯಿಸಿತು. ನಾಗಮಹಾಶಯರ ಭಕ್ತರಾದ ಕೈಲಾಸಬೋಸ, ಶ್ರೀ ಹರಕಾಮಿನಿ ಮೊದ ಲಾದವರು ಆ ಸಮಯದಲ್ಲಿ ದೇವಭೋಗದಲ್ಲಿದ್ದರು. ಆ ಯೋಗವು ಒದಗಿದ ಸಮಯದಲ್ಲಿಯೇ ಸರಿಯಾಗಿ ನಾಗಮಹಾಶಯರ ಮನೆಯ ಅಂಗಳದ ಆಗ್ನೇಯ ಭಾಗದಲ್ಲಿ ಅಕಸ್ಮಿಕವಾಗಿ ನೀರು ಪುಟಿಯಹತ್ತಿ ಅಂಗಳದಲ್ಲೆಲ್ಲ ಹರಿಯಹತ್ತಿತು! ಎಲ್ಲರೂ ನೋಡಿ ಆಶ್ಚರ್ಯಚಕಿತರಾ ದರು. ನಾಗಮಹಾಶಯರು ಆಗ ಮನೆಯೊಳಗಿದ್ದರು. ಗದ್ದಲವನ್ನು ಕೇಳಿ ಅವರು ಹೊರಗೆ ಬಂದರು. ಹಾಗೂ "ಜಯ ಗಂಗೆ, ಪತಿತ ಪಾವನಿ, ಜಯ ಭಾಗೀರಥಿ'' ಎನ್ನುತ್ತ ಆ ನೀರಿನ ಝರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಆ ಮೇಲೆ ಬೊಗಸೆಯಲ್ಲಿ ಆ ನೀರನ್ನು ತೆಗೆ ದುಕೊಂಡು ತಲೆಯ ಮೇಲೆ ಸಿಂಪಡಿಸಿಕೊಂಡು ಮತ್ತೆ ನಮಸ್ಕಾರ ಮಾಡಿದರು. ಅನಂತರ ಮನೆಯ ಜನರೆಲ್ಲರೂ ಸ್ನಾನ ಮಾಡಿದರು. ಈ ಸುದ್ದಿಯು ಊರಲ್ಲೆಲ್ಲ ಹಬ್ಬಲು ಜನರೆಲ್ಲರೂ ಗುಂಪು ಗುಂಪಾಗಿ ಬಂದು ಸ್ನಾನ ಮಾಡಹತ್ತಿದರು. "ಜಯ ಗಂಗೆ'' ಎಂಬ ಧ್ವನಿಯಿಂದ ನಾಗಮಹಾಶಯರ ಅಂಗಳವು ತುಂಬಿ ಹೋಯಿತು. ಸುಮಾರು ಒಂದು ತಾಸಿನ ಮೇಲೆ ನೀರು ಪುಟಿಯುವದು ಕಡಿಮೆಯಾಗುತ್ತ ಕಡೆಗೆ ನಿಂತಿತು. ಈ ಘಟನೆಯನ್ನು ನೋಡಿದವರೆಷ್ಟೋ ಜನರು ಇನ್ನೂ ದೇವಭೋಗ ದಲ್ಲಿ ಜೀವಿಸುತ್ತಿದ್ದಾರೆ. ಶ್ರೀಮತಿ ಹರಕಾಮಿನಿಯು ಅನೇಕ ವರ್ಷಗಳ

ಗುಲ್ಮ ರೋಗವು ಈ ನೀರಿನಲ್ಲಿ ಸ್ನಾನ ಮಾಡಿದ್ದರಿಂದ ಪೂರ್ಣವಾಗಿ ಗುಣವಾಯಿತು. ನಾಗಮಹಾಶಯರು ತಾವಾಗಿಯೇ ಈ ಘಟನೆಯನ್ನು ಎಂದಿಗೂ ಉಲ್ಲೇಖಿಸಲಿಲ್ಲ. ಯಾರಾದರೂ ಇದರ ಬಗ್ಗೆ ಮಾತೆತ್ತಿದರೆ ಉಪೇಕ್ಷೆಯ ಭಾವನೆಯಿಂದ "ಅಯ್ಯೋ, ಜನರು ಕಾಜನ್ನು ಕಾಂಚನವೆಂದು ತಿಳಿಯುವರಲ್ಲ!" ಎಂದು ನುಡಿಯುತ್ತಿದ್ದರು. ಸ್ವಾಮೀ ವಿವೇಕಾನಂದರಿಗೆ ಈ ಘಟನೆಯ ಬಗ್ಗೆ ಹೇಳಲು ಅವರು "ನಾಗಮಹಾಶಯರಂಥ ಮಹಾತ್ಮರಿಗೆ ಯಾವುದೂ ಅಸಾಧ್ಯವಿಲ್ಲ. ಅವರಲ್ಲಿ ಅಘಟಿತಘಟನಾ ಸಾಮರ್ಥ್ಯವಿರುತ್ತದೆ. ಅವರ ಅಮೋಘವಾದ ಇಚ್ಛಾ ಶಕ್ತಿಯಿಂದ ಮನುಷ್ಯನು ಮುಕ್ತಿಯನ್ನು ಹೊಂದುವನು" ಎಂದು ನುಡಿದರು.

ಜೀವನದ ಪ್ರತಿಯೊಂದು ಘಟನೆಯಲ್ಲಿಯೂ ನಾಗಮಹಾಶಯರು ಶ್ರೀ ರಾಮಕೃಷ್ಣರ ಮಂಗಲಮಯವಾದ 'ಕಾಣದ ಕೈ'ಯನ್ನು ಕಾಣುತ್ತಿದ್ದರು. ನಾಗಮಹಾಶಯರು ನಿದ್ರಿಸುತ್ತಿದ್ದಾಗ ಒಮ್ಮೆ ಒಂದು ದೊಡ್ಡ ಬೆಕ್ಕು ಹಾರಿ ಅವರ ಎಡಗಣ್ಣನ್ನು ಚಿವರಿತು. ಅವರ ಕಣ್ಣಿಗೆ ಬಹಳ ನೋವಾಯಿತು. ಆದರೂ ಅದರ ಬಗ್ಗೆ ಏನೂ ಚಿಂತಿಸದೆ "ಶ್ರೀ ರಾಮಕೃಷ್ಣರು ನನ್ನ ಪೂರ್ವ ಜನ್ಮದ ಪಾಪಕ್ಕಾಗಿ ನನಗೆ ಶಿಕ್ಷೆ ವಿಧಿಸಿದರು. ನಿಜವಾಗಿಯೂ ಇದು ಅವರ ಅನುಗ್ರಹವು" ಎಂದು ನುಡಿದರು. ಅವರ ನೋವಂದೂ ವಿಶೇಷ ಔಷಧೋಪಾಯವಿಲ್ಲದೆ ಮಾಯಿತು. ವಿಶ್ವವೆಲ್ಲವೂ ಶ್ರೀ ರಾಮಕೃಷ್ಣಮಯವಾಗಿ ಅವರಿಗೆ ಕಾಣುತ್ತಿತ್ತು.

ಕಲಕತ್ತೆಯಲ್ಲಿದ್ದಾಗ್ಗೆ ಒಂದು ಸಾರೆ ಅವರ ಎರಡೂ ಕೈಗಳು ಬಹಳ ನೋವಾಗಿದ್ದವು. ಕೈಗಳನ್ನು ಮಣಿಸಲು ಬರುತ್ತಿದ್ದಿಲ್ಲ. ಕೈ ಜೋಡಿಸಿಕೊಂಡಿದ್ದರೆ ಮಾತ್ರ ತುಸು ಸಮಾಧಾನವೆನಿಸುತ್ತಿತ್ತು. ಆಗ ಅವರು "ಯಾವಾಗಲೂ ಕೈಮುಗಿದುಕೊಂಡಿರಬೇಕೆಂದು ಶಿಕ್ಷಣ ಕೊಡಲಿಕ್ಕೆ ಗುರುದೇವನೇ ನನಗೀ ವ್ಯಾಧಿಯನ್ನು ಕೊಟ್ಟಿರುವ"ನೆಂದು ಹೇಳುತ್ತಿದ್ದರು.

ಹೊಟ್ಟೆನೋವಿನಿಂದ (Colic) ನರಳುತ್ತಿದ್ದಾಗ ಸಹ ಅವರು "ಜಯ ಪ್ರಭು ರಾಮಕೃಷ್ಣ, ನಿನಗೆ ಜಯವಾಗಲಿ. ಈ ದೇಹವು ನಿನ್ನ

ಸೇವೆಯಲ್ಲಿ ತತ್ಪರವಾಗಲ್ಲಿಲ್ಲವೆಂದು ತಿಳಿದು ಈ ವ್ಯಾಧಿಯನ್ನು ಕೊಟ್ಟು ನನಗೆ ಯೋಗ್ಯ ಶಿಕ್ಷೆಯನ್ನು ವಿಧಿಸಿದೆ. ಈ ವ್ಯಥೆಯು ದಯೆತೋರಿ ನಿನ್ನ ನೆನಪು ಆಗುವಂತೆ ಮಾಡಿತು. ಶ್ರೀರಾಮಕೃಷ್ಣರ ಸ್ಮರಣೆ ಮಾಡಿ ಕೊಡುವ ಈ ವ್ಯಾಧಿಯು ಧನ್ಯವು! ಧನ್ಯ ಗುರುದೇವ! ಇದೆಲ್ಲವೂ ನಿನ್ನ ಕೃಪೆಯು! ಗುರುಕೃಪಾಹಿ ಕೇವಲಂ! ಗುರುಕೃಪಾಹಿ ಕೇವಲಂ! ನಿನ್ನ ಅನುಗ್ರಹವಾಗದೆ ಜೀವನ ಉದ್ಧಾರವಾಗಲಾರದು!'' ಎಂದೆನ್ನುತ್ತಿದ್ದರು.

ನಾಗಮಹಾಶಯರು ಗುರುಭಾವವನ್ನೆಂದೂ ವಹಿಸಲಿಲ್ಲ. ಯಾರಾದರೂ ಏನಾದರು ಕಲಿಸಲು ಕೇಳಿದರೆ ಅವರು "ಯಾರು ಯಾರಿಗೂ ಕಲಿಸಲಾರರು. ಶ್ರೀರಾಮಕೃಷ್ಣರ ಕೃಪೆಯಿಂದ ಯಥಾಸಮಯದಲ್ಲಿ ಜೀವನ ಅಂತಶ್ಚಕ್ಷುವು ತೆರೆಯುವದು. ಆಗ ಎಲ್ಲ ಕಡೆಗೂ ದೇವರು ಕಾಣುವನು; ಆಗ ಪ್ರತಿಯೊಂದು ವಸ್ತುವೂ ಹೊಸ ವರ್ಣದಿಂದ ರಂಜಿತವಾಗಿ, ಹೊಸ ಅರ್ಥದಿಂದ ಕೂಡಿದ್ದಾಗಿ, ಕಾಣುವದು'' ಎಂದು ನುಡಿಯುತ್ತಿದ್ದರು.

ಆದರೆ ಅವರ ಭಕ್ತರು ಯಾರಾದರೂ ಹತಾಶರಾಗಿರುವದನ್ನು ಕಂಡರೆ, "ನಿಮಗೆ ಶ್ರೀ ರಾಮಕೃಷ್ಣರಲ್ಲಿ ಶ್ರದ್ಧೆ ಹುಟ್ಟಿದ್ದಯೆಂದ ಮೇಲೆ ಇದೇ ನಿಮ್ಮ ಕಡೆಯ ಜನ್ಮವೆಂದು ತಿಳಿಯಿರಿ. ಮನುಷ್ಯನಿಗೆ ನಿಜವಾಗಿಯೂ ದೇವರಲ್ಲಿ ಅಚಲವಾದ ನಿಷ್ಠೆಯಿದ್ದರೆ ಅವನ ಚತುರ್ವಿಧ ಪುರುಷಾರ್ಥಗಳೂ ಕೈಗೂಡುವವು'' ಎಂದು ಹೇಳಿ ಅದರಲ್ಲಿ ಉತ್ಸಾಹವನ್ನು ತುಂಬುತ್ತಿದ್ದರು.

ಗಿರೀಶಚಂದ್ರರು ತಮ್ಮ ನಗೆ ಮಾತಿನಿಂದ ಹೀಗೆ ಹೇಳುತ್ತಿದ್ದರು, "ಮಹಾಮಾಯೆಯು ನರೇಂದ್ರ (ಸ್ವಾಮೀ ವಿವೇಕಾನಂದ) ಹಾಗೂ ನಾಗಮಹಾಶಯರನ್ನು ಬಂಧಿಸಹೋದಾಗ ಬಳ್ಳೇ ವಿಪತ್ತಿನಲ್ಲಿ ಬಿದ್ದಳು! ನರೇಂದ್ರನನ್ನು ಬಿಗಿದಂತೆ ಅವನು ಬೆಳೆಯುತ್ತ ಹೋಗಿ ಕಡೆಗೆ ಮಾಯೆಯ ಹಗ್ಗವು ಸಾಲದಾಯಿತು. ಹೀಗಾಗಿ ಅವಳು ನಿರಾಶಳಾದಳು. ನಾಗಮಹಾಶಯರನ್ನು ಕಟ್ಟ ಹೋಗಲು ಅವರು ಸಣ್ಣವರಾಗಹತ್ತಿ, ಕಡೆಗೆ ತೀರಾ ಸಣ್ಣವರಾಗಿ ಅವಳ ಜಾಲದಿಂದ ನಿಸುಟಿ ಬಂದರು.''

# ೮ನೆಯ ಪ್ರಕರಣ

## ಭಕ್ತರೊಡನೆ.



ನಾಗಮಹಾಶಯರಿಂದ ಮಂತ್ರದೀಕ್ಷಿತರಾದ ಶಿಷ್ಯರು ಯಾರೂ ಇಲ್ಲವೆಂದು ಹೇಳಬಹುದು. ಶಾಸ್ತ್ರೀಯ ನಿರ್ಬಂಧನೆಯನ್ನು ಅವರು ಎಂದಿಗೂ ಮೀರುತ್ತಿದ್ದಿಲ್ಲ. ಯಾರಾದರೂ ಶಾಸ್ತ್ರವಿರುದ್ಧವಾಗಿ ಆಚರಿಸುವದನ್ನು ಕಂಡರೆ ಅವರಿಗೆ ಬಹಳ ದುಃಖವಾಗುತ್ತಿತ್ತು; ಸಿಟ್ಟೊಬರುತ್ತಿತ್ತು. ಶೂದ್ರನಿಗೆ ಮಂತ್ರದೀಕ್ಷೆಯ ಅಧಿಕಾರವಿಲ್ಲವೆಂಬ ನಿಯಮವನ್ನು ಅವರು ಎಂದಿಗೂ ಮುರಿಯಲಿಲ್ಲ. ಅವರ ಕೃಪೆಯಿಂದ ಅನೇಕರ ಹೃದಯದಲ್ಲಿ ಚೈತನ್ಯದ ಸಂಚಾರವಾಯಿತು; ಅನೇಕರ ಉಚ್ಛೃಂಖಲ ಜೀವನವು ಪರಿವರ್ತನೆ ಹೊಂದಿತು; ಆದರೂ ಗುರು ಶಿಷ್ಯಭಾವವು ಅವರ ಮನಸ್ಸಿನಲ್ಲೆಂದೂ ಮೂಡಲಿಲ್ಲ. ಯಾರಾದರೂ ಅವರಿಗೆ "ಗುರು" ಎಂದು ಕರೆವರೆ ಅವರು ಅತಿಶಯ ವ್ಯಥಿತರಾಗುತ್ತಿದ್ದರು. "ನಾನು ಹೀನ ಶೂದ್ರ ನನಗೇನು ತಿಳಿಯುತ್ತದೆ? ತಾವೆಲ್ಲರೂ ತಮ್ಮ ಪಾದ ಧೂಲಿಯಿಂದ ನನ್ನನ್ನು ಪವಿತ್ರನನ್ನಾಗಿ ಮಾಡುತ್ತಿರುವಿರಿ. ಗುರುದೇವನ ಅನುಗ್ರಹದಿಂದ ತಮ್ಮೆಲ್ಲರ ದರ್ಶನ ಲಾಭವಾಯಿತು" ಎಂದು ಅವರು ನುಡಿಯುತ್ತಿದ್ದರು.

ನಾಗಮಹಾಶಯರ ಬ್ರಾಹ್ಮಣ ಭಕ್ತನೊಬ್ಬನು ತನಗೆ ದೀಕ್ಷೆ ಕೊಡಬೇಕೆಂದು ಒಳ್ಳೇ ಹಟತೊಟ್ಟನು. ಆಗ ನಾಗಮಹಾಶಯರು ಅವನಿಗೆ 'ಅಯ್ಯಾ, ನೀನು ಬ್ರಾಹ್ಮಣ; ಮೇಲಾಗಿ ಸುಶಿಕ್ಷಿತ; ನಿನಗೀ ವಿಚಾರ ಸಲ್ಲದು. ಸಮಾಜ ಮರ್ಯಾದೆಯನ್ನು ಹಾಗೂ ಶಾಸ್ತ್ರಾನುಶಾಸನವನ್ನು ಮೀರುತ್ತಿರುವದರಿಂದಲೇ ಜನರದೀಪರಿ ದುರ್ಗತಿಯಾಗಿದೆ ಗುರುದೇವನ ಅಪ್ಪಣೆಯಂತೆ ನಾನು ನಿಜವಾದ ಗೃಹಸ್ಥಧರ್ಮವನ್ನು ಆಚರಿಸಬೇಕಾಗಿದೆ. ತುಸುವಾದರೂ ಅತ್ತಿತ್ತ ಹೊರಳುವಂತಿಲ್ಲ" ಎಂದು ಹೇಳಿದರು. ಆಮೇಲೆ

ಭಕ್ತನ ವಿಷಣ್ಣತೆಯನ್ನು ನೋಡಿ "ನೀನೇನೂ ಚಿಂತಿಸಬೇಡ. ಸಾಕ್ಷಾತ್ ಸದಾಶಿವನೇ ನಿನಗೆ ದೀಕ್ಷೆಕೊಡುವನು" ಎಂದು ಆಶೀರ್ವದಿಸಿದರು. ಕೆಲವು ದಿನಗಳಮೇಲೆ ಈ ಭಕ್ತನು ಸ್ವಾಮೀ ವಿವೇಕಾನಂದರಿಂದ ದೀಕ್ಷಿತನಾದನೆಂದು ಕೇಳಿ ನಾಗಮಹಾಶಯರು ಸಂತೋಷಪಟ್ಟು "ಈ ಕಾಲದಲ್ಲಿ ಶ್ರೀರಾಮಕೃಷ್ಣರ ಸನ್ಯಾಸೀ ಶಿಷ್ಯರೇ ಜಗತ್ತಿಗೆ ದೀಕ್ಷೆಕೊಡಲು ಯೋಗ್ಯರಿದ್ದಾರೆ. ಇವರಿಂದ ದೀಕ್ಷೆ ಹೊಂದಿದವರು ಧನ್ಯರಾಗುವರು" ಎಂದು ನುಡಿದರು.

ನಾಗಮಹಾಶಯರ ಮಂತ್ರಶಿಷ್ಯರಾರೂ ಇರದಿದ್ದರೂ ಅವರ ಭಕ್ತರ ಪರಿವಾರವು ವಿಶಾಲವಾಗಿದೆ. ನಾಗಮಹಾಶಯರು ಯಾವಾಗಲೂ ತಮ್ಮ ಭಕ್ತರ ಕಲ್ಯಾಣವನ್ನು ಹಾರೈಸುತ್ತಿದ್ದರು. ಸಮೀಪದಲ್ಲಿರಲಿ ಅಥವಾ ದೂರದಲ್ಲಿರಲಿ. ಎದುರಿಗಿರಲಿ ಅಥವಾ ಇರದಿರಲಿ ಅವರ ಸ್ನೇಹದೃಷ್ಟಿಯು ಎಲ್ಲರ ಮೇಲೆಯೂ ಸಮಭಾವದಿಂದ ಬೀಳುತ್ತಿತ್ತು. ಒಂದುಸಾರೆ ಅವರ ಭಕ್ತನೊಬ್ಬನು ಅವರನ್ನು ಕಾಣಲು ಅತ್ಯಂತ ವ್ಯಾಕುಲನಾದನು. ಭಕ್ತನು ಡಾಕಾ ಕಾಲೇಜಿನಲ್ಲಿ ಓದುತ್ತಿದ್ದನು. ಡಾಕಾದಿಂದ ರೈಲುಮಾರ್ಗವಾಗಿ ನಾರಾಯಣ ಗಂಜಕ್ಕೆ ಬಂದಾಗ ಸಂಜೆಯಾಗಿತ್ತು. ಆಗ ಮಳೆಗಾಲವಾಗಿತ್ತು. ಎಲ್ಲೆಡೆಯಲ್ಲಿ ನೀರೇನೀರಾಗಿತ್ತು. ಮುಗಿಲು ಕಾರ್ಮೋಡಗಳಿಂದ ಮುಸುಕಿತ್ತು. ಒಂದೇ ಸಮನೆ ಮಳೆಸುರಿಯುತ್ತಿತ್ತು. ಕಗ್ಗತ್ತಲೆ. ಮಳೆಗಾಲದಲ್ಲಿ ದೇವಭೋಗಕ್ಕೆ ಡೋಣಿಯಿಲ್ಲದೆ ಹೋಗುವದು ಸಾಧ್ಯವಿರುವದಿಲ್ಲ. ಭಕ್ತನು ನೋಡಿದ, ಒಂದೂ ಡೋಣಿಯಿದ್ದಿಲ್ಲ. ನಿರುಪಾಯನಾಗಿ ಆತನು ಈಸಿ ಪಾರಾಗಬೇಕೆಂದು ಯೋಚಿಸಿದ. ನಾಗಮಹಾಶಯರ ಸ್ಮರಣೆ ಮಾಡಿದವನೇ ಆ ಅಗಾಧ ಜಲರಾಶಿಯಲ್ಲಿ ಹಾರಿಬಿಟ್ಟ. ಈಸುತ್ತ ಈಸುತ್ತ ರಾತ್ರಿ ಒಂಬತ್ತರ ಸುಮಾರಕ್ಕೆ ದಣಿದು ಹಣ್ಣಾಗಿ ನಾಗಮಹಾಶರ ಮನೆಯ ಉತ್ತರ ಭಾಗದಲ್ಲಿರುವ ತೋಟಕ್ಕೆ ಬಂದು ಮುಟ್ಟಿದನು. ಆಗಲೂ ಮಳೆ ಜೋರಿನಿಂದ ಸುರಿಯುತ್ತಿತ್ತು. ಭಕ್ತನು ನೋಡಿದನು, ನಾಗಮಹಾಶಯರು ಅಲ್ಲಿ ತನಗಾಗಿ ದಾರೀ ನೋಡುತ್ತ ನಿಂತಿದ್ದರು. ಭಕ್ತನನ್ನು ನೋಡಿ ನಾಗಮಹಾಶಯರು "ಅಯ್ಯೋ, ಇದೆಂಥ ಹುಚ್ಚು ಧೈರ್ಯ!

ದಾರಿಯಲ್ಲಿ ವಿಷಯುಕ್ತ ಹಾವುಗಳು ಅಲ್ಲಲ್ಲಿ ಅಲೆಯುತ್ತಿರುತ್ತವೆ; ಕಗ್ಗತ್ತಲೆಯಲ್ಲಿ, ಈ ಪರಿ ಮಳೆ ಸುರಿಯುತ್ತಿರುವಾಗ ಅದೇಕೆ ಬರಬೇಕಾಗಿತ್ತು?'' ಎಂದು ನುಡಿದರು. ಭಕ್ತನು ಸುಮ್ಮನೆ ಇದ್ದ. ಮನೆಗೆ ಹೋದಮೇಲೆ ನಾಗಮಹಾಶಯರು ಅವನಿಗೆ ಬೇರೊಂದು ವಸ್ತ್ರವನ್ನು ಕೊಟ್ಟರು ಅವರ ಹೆಂಡತಿಯಾದರೂ ಭಕ್ತನ ಮೇಲಿನ ಮಮತೆಯಿಂದ ಇಂಥ ಸಾಹಸವನ್ನು ಮಾಡಿದ್ದಕ್ಕಾಗಿ ಅವನಿಗೆ ಸಿಟ್ಟುಮಾಡಿದಳು. ಭಕ್ತನ ಕಣ್ಣುಗಳಲ್ಲಿ ನೀರುತುಂಬಿ ಬಂದು "ನಾಗಮಹಾಶಯರಿಂದ ದೂರ ಇರುವದು ನನಗೆ ಸಹನವಾಗಲಿಲ್ಲ'' ಎಂದು ನುಡಿದನು. ಆಮೇಲೆ ನಾಗಮಹಾಶಯರ ಪತ್ನಿಯು ಆತನಿಗಾಗಿ ಅಡುಗೆಮಾಡಲು ಹೋದಳು. ಆದರೆ ನೋಡುವಷ್ಟರಲ್ಲಿ ಕಟ್ಟಿಗೆಯೇ ಇದ್ದಿಲ್ಲ. ನಾಗಮಹಾಶಯರಿಗಿದು ತಿಳಿಯಲಾಗಿ ಮನೆಯ ತಲೆಬೆಲಗನ್ನು ಕಡಿಯಹತ್ತಿದರು. ಭಕ್ತನು ಬೇಡವೆಂದು ಎಷ್ಟು ಹೇಳಿದರೂ ಲೆಕ್ಕಿಸಲಿಲ್ಲ. ಅವರು ತಮ್ಮ ಹೆಂಡತಿಗೆ "ನೋಡು, ಪ್ರಾಣದ ಹಂಗನ್ನು ತೊರೆದು, ಹಾವುಗಳ ಬಾಯಲ್ಲಿ ಈಸುತ್ತ, ನನ್ನನ್ನು ಕಾಣಲು ಬಂದವರಿಗಾಗಿ ನಾನಿಷ್ಟು ಸಹ ಮನೆಯ ಮಾಯೆಯನ್ನು ಬಿಡಬಾರದೇ? ಮನೆ ಬಿಸ್ವರೆ ಬೀಳಲಿ ಇಂಥವರಿಗಾಗಿ ನಾನು ಪ್ರಾಣಕೊಡಬೇಕಾದರೂ ಸಿದ್ಧನಿರುವೆನು'' ಎಂದು ನುಡಿದರು. ಸಿಸ್ಟರ ನಿವೇದಿತೆಯವರು ತಾವು ಬರೆದಿರುವ The master as I saw him. ಎಂಬ ಪುಸ್ತಕದಲ್ಲಿ ಈ ಘಟನೆಯನ್ನು ವಿಶೇಷವಾಗಿ ಉಲ್ಲೇಖಿಸಿರುವರು. ಈ ಭಕ್ತನು" ನಾನು ಆ ದಿನ ಪಾರಾಗಿ ಉಳಿದದ್ದು ನಾಗಮಹಾಶಯರ ಅಪಾರ ಕೃಪೆಯಿಂದಲ್ಲದೆ ಬೇರೆಯಲ್ಲ'' ಎಂದು ಹೇಳುತ್ತಾನೆ.

ಮತ್ತೊಂದುಸಾರೆ ನಾಗಮಹಾಶಯರು ಇದೇ ಯುವಕನನ್ನು ಆತ್ಮಹತ್ಯೆಯಿಂದ ಉಳಿಸಿದರು. ಆತನು ಆಗ ಕಲಕತ್ತೆಯ ವಿದ್ಯಾಸಾಗರ ಕಾಲೇಜಿನಲ್ಲಿ B. A. ವರ್ಗದಲ್ಲಿ ಓದುತ್ತಿದ್ದನು. ಒಂದು ದಿನ ರಾತ್ರಿ ಬೆಳದಿಂಗಳಲ್ಲಿ ಆತನು ಮನೆಯ ಮಾಳಿಗೆಯ ಮೇಲೆ ಅಡ್ಡಾಡುತ್ತಿದ್ದನು. ನಾಲ್ದೆಶಗಳಲ್ಲಿ ಶಾಂತಿಯೂ ಬೆಳದಿಂಗಳೂ ಪಸರಿಸಿದ್ದರೂ ಆತನ ಮನಸ್ಸಿನಲ್ಲಿ ಮಾತ್ರ ದಾರುಣವಾದ ಅಶಾಂತಿಯು ನೆಲೆಸಿತ್ತು. ಆತನ ಹೃದಯದಲ್ಲಿ ಇನ್ನೂ ಜ್ಞಾನದೀಪವು ಬೆಳಗಿದ್ದಿಲ್ಲ. ನಾಗಮಹಾಶಯರ ದರ್ಶನ

ವಾಗದ ಮೂಲಕ ಅವನಿಗೆ ಬಹಳ ಬೇಸರವುಂಟಾಯಿತು ಆತನಿಗೆ ಆಗ ಶ್ರೀರಾಮಕೃಷ್ಣರ ಇತರ ಶಿಷ್ಯರ ಪರಿಚಯವೂ ಆಗಿದ್ದಿಲ್ಲ. ಹೀಗಾಗಿ ಅವರ ಪವಿತ್ರ ಸಹವಾಸದಿಂದ ಉದ್ಭವಿಸಬಹುದಾದ ಶಾಂತಿಯು ಅವನಿಗೆ ದೊರಕುವುಂತಿದ್ದಿಲ್ಲ. ನಾಗಮಹಾಶಯರು ಪ್ರತಿವರ್ಷ ದುರ್ಗಾ ಪೂಜೆಯ ಮಹೋತ್ಸವಕ್ಕಾಗಿ ಸಾಮಗ್ರಿಗಳನ್ನು ಕೊಳ್ಳಲು ಬರುತ್ತಿದ್ದರೂ ಅಲ್ಲಿಯವರೆಗೆ ತಡೆಯುವಷ್ಟು ಧೀರತೆ ಅವನಲ್ಲುಳಿಯಲಿಲ್ಲ. ಅವನ ಮನಸ್ಸಿನಲ್ಲಿ ಒಂದೇ ಒಂದು ವಿಚಾರ ನಡೆದಿತ್ತು, "ನಾಗಮಹಾಶಯರಂಥ ಮಹಾತ್ಮರ ಅನುಗ್ರಹಲಾಭವಾಗಿದ್ದರೂ ನಾನಿನ್ನೂ ಆ ಆನಂದಾನುಭವವನ್ನು ಹೊಂದಲು ಸಮರ್ಥನಾಗಲಿಲ್ಲವೆಂದಮೇಲೆ ನಾನು ಬದುಕಿದ್ದು ಲಾಭವೇನು?" ಜೀವನದ ವಿಷಯವಾಗಿಗಿ ಆತನಿಗೆ ಜಿಗುಪ್ಸೆ ಹುಟ್ಟಿತು; ಹಾಗೂ, ಮಾಳಿಗೆಯ ಮೇಲಿಂದ ಕೆಳಗೆ ಹಾರಿ ಆತ್ಮಹತ್ತ್ಯೆ ಮಾಡಿಕೊಳ್ಳಬೇಕೆಂದು ಆತ ನಿಶ್ಚಯಿಸಿದನು. ಈ ವಿಚಾರವನ್ನವನು ಕಾರ್ಯದಲ್ಲಿ ಪರಿಣತ ಮಾಡುವಷ್ಟರಲ್ಲಿಯೇ "ನಾಳೆ ಮುಂಜಾನೆ ನೀನು ನಾಗಮಹಾಶಯರನ್ನು ಕಾಣುವಿ" ಎಂದು ಯಾರೋ ಉಸುರಿದಂತಾಯಿತು. ಅಲ್ಲಿ ಯಾರೂ ಇದ್ದಿಲ್ಲ. ಆ ಮೇಲೆ ಆತನು ಹೋಗಿ ಮಲಗಿಕೊಂಡನು.

ಮರುದಿನ ಮುಂಜಾನೆ ಎದ್ದು ಭಕ್ತನು ಮುಖತೊಳಕೊಳ್ಳುತ್ತಿದ್ದಾಗ್ಗೆ ಯಾರೋ ಹೊರಗೆ ಕೂಗುತ್ತಿರುವದನ್ನು ಕೇಳಿದನು. ಅವಸರದಿಂದ ಬಂದು ಬಾಗಿಲ ತೆರೆದು ನೋಡಲು ನಾಗಮಹಾಶಯರು ಕೈಯಲ್ಲೊಂದು ಗಂಟನ್ನು ಹಿಡಿದುಕೊಂಡು ನಿಂತಿದ್ದರು. ಭಕ್ತನನ್ನು ಕಂಡು ನಾಗಮಹಾಶಯರು "ಅಯ್ಯಾ, ನೀನ ಇಂಥ ಭಯಂಕರ ವಿಚಾರಗಳನ್ನು ಮನಸ್ಸಿನಲ್ಲೇಕೆ ತರುವಿ? ನೀನೀಗ ಶ್ರೀರಾಮಕೃಷ್ಣರ ರಾಜ್ಯದಲ್ಲಿ (ಕಲಕತ್ತೆ) ಪ್ರವೇಶಿಸಿರುವಿಯೆಂದಮೇಲೆ ಎಳ್ಳಷ್ಟೂ ಚಿಂತಿಸಬೇಡ"ಎಂದು ನುಡಿದರು. ಆ ಮೇಲೆ "ಇಷ್ಟು ದಿನಗಳವರೆಗೆ ನೀನು ಹೊಳೆಹಳ್ಳಗಳಲ್ಲಿದ್ದಿ. ಈಗ ಮಹಾ ಸಮುದ್ರವನ್ನು ಸೇರಿರುವಿ" ಎಂದು ಮತ್ತೆ ನುಡಿದರು. ಆಮೇಲೆ ಆತನನ್ನು ನಾಗಮಹಾಶಯರು ಬೇಲೂರ ಮಠಕ್ಕೆ ಕರೆದುಕೊಂಡು ಹೋಗಿ ಅಲ್ಲಿಯೇ ಶ್ರೀರಾಮಕೃಷ್ಣರ ಸನ್ನ್ಯಾಸೀ ಶಿಷ್ಯರಿಗೆ "ಈ ಯುವಕನೊಳ್ಳೇ ಚಂಚಲ ಸ್ವಭಾವದವನಿರುವನು. ಇವನ ಮೇಲೆ ತಮ್ಮ ಕಣ್ಣಿ

ರಲಿ. ಇವನ ಮೇಲೆ ಗುರುಮಹಾರಾಜರ ಕೃಪೆಯಾಗುವಂತೆ ಅನುಗ್ರಹಿಸಿರಿ '' ಎಂದು ಹೇಳಿದರು.

ನಾಗಮಹಾಶಯರು ಒಂದುಸಾರೆ ತಮ್ಮನ್ನು ಕಾಣಲು ಬಂದ ಭಕ್ತರೆದುರಿಗೆ '' ನೀವೆಲ್ಲರೂ ನನಗೆ ಪ್ರಾಣಕ್ಕಿಂತಲೂ ಪ್ರಿಯರಿರುವಿರಿ. ನಿಮ್ಮ ಕಲ್ಯಾಣಕ್ಕಾಗಿ ನಾನು ನನ್ನ ಜೀವನವನ್ನರ್ಪಿಸಲು ಸಿದ್ಧನಿರುವೆನು. ಇದಕ್ಕಿಂತ ಹೆಚ್ಚಿಗೆ ಈ ದೇಹದಿಂದ ಏನು ಮಾಡಬಲ್ಲೆ? '' ಎಂದು ನುಡಿದರು.

ನಾಗಮಹಾಶಯರ ಭಕ್ತರಲ್ಲಿ ಅವರ ಪತ್ನಿಯನ್ನು ಮೊದಲಿಗೆಣಿಸಬೇಕಾಗುವದು. ಭಕ್ತರಲ್ಲಿ ಅವಳೇ ಸರ್ವಶ್ರೇಷ್ಠಳು. ನಾಗಮಹಾಶಯರ ಮನೆಯಲ್ಲುಳಿದುಕೊಳ್ಳುವ ಪ್ರಸಂಗವೊದಗಿದವರಿಗೆ, ಈ ಗೃಹದೇವಿಯ ದಯೆ, ಮನೆಗೆಲಸಗಳನ್ನು ಸಾಗಿಸಿಕೊಂಡು ಹೋಗುವದರಲ್ಲಿ ಅವಳ ಕುಶಲತೆ ಹಾಗೂ ಪತಿ ಹಾಗೂ ಅತಿಥಿಗಳ ವಿಷಯವಾಗಿ ಅವಳ ದಕ್ಷತೆ ಇವೆಲ್ಲವೂ ಸಹಜವಾಗಿ ಕಂಡು ಬರುತ್ತಿದ್ದವು- ಅವಳು ಎಲ್ಲರಗಿಂತಲೂ ಮೊದಲು ಏಳುತ್ತಿದ್ದಳು. ಮನೆಗೆಲಸವು ಮುಗಿದ ಕೂಡಲೇ ಪೂಜೆ ಹಾಗೂ ಧ್ಯಾನಕ್ಕಾಗಿ ಕುಳಿತುಕೊಳ್ಳುತ್ತಿದ್ದಳು. ಪತಿ ಮತ್ತು ಅಧಿತಿಗಳ ಊಟವಾಗದ ಹೊರತು ಅವಳು ಊಟಮಾಡುತ್ತಿದ್ದಿಲ್ಲ. ಎಲ್ಲ ಮನೆಗೆಲಸಗಳನ್ನು ತಾನೊಬ್ಬಳೇ ಮಾಡುತ್ತಿದ್ದಳು. ಯಾರಾದರೂ ಅವಳ ತಂಗಿಯಾದ ಹರಕಾಮಿನಿಯನ್ನು ಮೊದಲುಮಾಡಿ-ಅವಳಿಗೆ ಸಹಾಯಮಾಡಹೋದರೆ ಅವಳು ಒಪ್ಪುತ್ತಿದ್ದಿಲ್ಲ.

ಅವಳು ಪತಿಯೇ ದೇವರೆಂದು ಭಾವಿಸಿದ್ದಳು. ಅವಳ ಪೂಜೆ ಹಾಗೂ ಭಕ್ತಿಯು ನಾಗಮಹಾಶಯರಲ್ಲಿ ಕೇಂದ್ರೀಕೃತವಾಗಿತ್ತು. ಮಹಾಷ್ಟಮಿಯ ದಿನ ಒಂದುಸಾರೆ ನಾಗಮಹಾಶಯರ ಚರಣಗಳಲ್ಲಿ ಹೂಗಳನ್ನರ್ಪಿಸಬೇಕೆಂದು ಅವಳ ಮನಸ್ಸಿನಲ್ಲಿ ಬಯಕೆಯುಂಟಾಯಿತು. ಆದರೆ ನಾಗಮಹಾಶಯರು ಇದಕ್ಕೆ ಸಮ್ಮತಿಸಲಿಲ್ಲ. '' ಯಾರನ್ನು ನಾನು ಪೂಜಿಸುತ್ತಿರುವೆನೋ ಅವರಿಂದ ನಾನು ಪೂಜೆ ಮಾಡಿಸಿಕೊಳ್ಳಬೇಕೆ ? '' ಎಂದು ನುಡಿದರು. ಕಡೆಗೆ ಅವರ ಪತ್ನಿಯು ಒಂದು ಸಂಧಿಯನ್ನು ಸಾಧಿಸಿದಳು; ನಾಗಮಹಾಶಯರು ಅನ್ಯಮನಸ್ಕರಾಗಿ ಮೂಲೆಯೊಂದರಲ್ಲಿ

ನಿಂತುಕೊಂಡಾಗ್ಗೆ ಬಂದವಳೇ ಹೂಗಳನ್ನು ಅವರ ಪಾದಗಳ ಮೇಲೆ ಎರಚಿಬಿಟ್ಟಳು. ಆಮೇಲೆ ಆ ಹೂಗಳನ್ನು ಒಂದು ಬಂಗಾರದ ಕವಚದಲ್ಲಿ ಹಾಕಿ ಅದನ್ನು ಕೊರಳಲ್ಲಿ ಧರಿಸಿಕೊಂಡಳು.

ನಾಗಮಹಾಶಯರ ಪತ್ನಿಯ ದಯೆ, ಶಾಲೀನತೆ, ಉನ್ನತ ಚಾರಿತ್ರ್ಯ ಇವೆಲ್ಲವೂ ಸ್ತ್ರೀಯರಿಗೆ ಮಾರ್ಗದರ್ಶಕವಾಗಿವೆ. ಅವಳ ಸ್ಥೈರ್ಯ, ಸ್ವಾರ್ಥಹೀನತೆ, ಸಹನಶೀಲತೆ ಹಾಗು ತಪಸ್ಯೆ ಇವು ಯಾರ ಮನಸ್ಸಿನಲ್ಲಿ ಯಾದರೂ ಅವಳ ಬಗ್ಗೆ ವಿಶೇಷ ಆದರವನ್ನು ಹುಟ್ಟಿಸದೆ ಇರಲಾರವು. ಅವಳು ನಾಗಮಹಾಶಯರ ಭಕ್ತಿಗೆ ಸ್ಫೂರ್ತಿಯ ನೆಲೆಯಾಗಿರುವಳು.

ನಾಗಮಹಾಶಯರ ಹೆಂಡತಿಯ ತಂಗಿಯಾದ ಹರಕಾಮಿನಿಯು ನಾಗಮಹಾಶಯರನ್ನು ದೇವತಾ ಸ್ವರೂಪವೆಂದು ತಿಳಿದಿದ್ದಳು, ಹಾಗೂ ಅವರ ಮೇಲೆ ಅತಿಶಯ ಭಕ್ತಿಯುಕ್ತಳಾಗಿದ್ದಳು. ಅವಳ ಗಾಢ ಭಕ್ತಿಯೂ ಸರಲ ಸ್ವಭಾವವೂ ಒಡೆದು ಕಾಣುತ್ತಿದ್ದವು. ನಾಗಮಹಾಶಯರು ತಂದೆಯಂತೆ ಅವಳನ್ನು ಪ್ರೀತಿಸುತ್ತಿದ್ದರು. ಅವಳು ಜರುಗಿಸುತ್ತಿರುವ ಉತ್ಸವಗಳಿಗೆ ಅವರು ಆಗಾಗ ಹೋಗುತ್ತಿದ್ದರು. ನಾಗಮಹಾಶಯರಿಲ್ಲದೆ ಉತ್ಸವಕ್ಕೆ ಪೂರ್ಣತೆ ಬಾರದೆಂದು ಅವಳ ಗ್ರಹಿಕೆಯಾಗಿತ್ತು. ಪ್ರಾಪಂಚಿಕ ವಿಷಯಗಳ ಬಗ್ಗೆ ಅವಳು ತೀರಾ ವಿರಕ್ತಳಾಗಿದ್ದಳು. ಸಂಸಾರದ ಸುಖ-ದುಃಖಗಳಲ್ಲಿ ಅವಳು ಅವಿಚಲಿತಳಾಗಿರುತ್ತಿದ್ದಳು. ನಾಗಮಹಾಶಯರ ಭಕ್ತರನ್ನು ತನ್ನ ಕುಟುಂಬದವರಂತೆ ತಿಳಿದು ಅವರ ಆದರ ಸತ್ಕಾರ ಮಾಡುತ್ತಿದ್ದಳು.

ನಾಗಮಹಾಶಯರ ಅತ್ತಿಗೆಯಾದರೂ ಒಳ್ಳೇ ಭಕ್ತಿಯುತೆಯಾಗಿದ್ದಳು. ಅವಳೊಂದು ಸಾರೆ ಕಲಕತ್ತೆಗೆ ಬಂದು ಕುಮಾರಟುಲಿಯಲ್ಲಿ ಅಳಿಯನ ಮನೆಯಲ್ಲಿ ಬಂದಿದ್ದಳು. ಅವಳು ಪ್ರತಿದಿನ ಗಂಗಾನದಿಯಲ್ಲಿ ಸ್ನಾನಮಾಡಿ ಆಮೇಲೆ ಮರಳಿನ ಶಿವಲಿಂಗವನ್ನು ಮಾಡಿ ಅದನ್ನು ಪೂಜಿಸುತ್ತಿದ್ದಳು. ಒಂದು ದಿನ ಹೀಗೆಯೇ ಪೂಜಿಸುತ್ತಿದ್ದಾಗ್ಗೆ ಶಿವಲಿಂಗದ ಮೇಲಿನ ಭಾಗವು ಬಿರಿದದ್ದನ್ನು ನೋಡಿದಳು. ಈ ಅಶುಭವನ್ನು ಕಂಡು ಅವಳು ಬೆದರಿದಳು. ಬಹಳ ಚಿಂತಿತಳಾಗಿ ನದಿಯ ದಂಡೆಯ ಮೇಲೆ ಕುಳಿತುಕೊಂಡು ಅಳಹತ್ತಿದಳು. ಸಂಜೆಯಾದರೂ ಅವಳು ಮನೆಗೆ

ಬಾರದ್ದನ್ನು ಕಂಡು ನಾಗಮಹಾಶಯರು ಅವಳನ್ನು ಹುಡುಕುತ್ತ ಗಂಗಾ ತೀರಕ್ಕೆ ಹೋಗಲು ಅವಳು ಅಳುತ್ತಿರುವದನ್ನು ನೋಡಿದರು. ಏನಾಯಿತೆಂಬುದನ್ನು ಅವಳು ಹೇಳಲಾಗಿ ನಾಗಮಹಾಶಯರು ಇದರಿಂದೇನೂ ಕೆಡಕು ಆಗುವದಿಲ್ಲವೆಂದು ಅವಳಿಗೆ ಆಶ್ವಾಸನ ಕೊಟ್ಟರು. ಆಮೇಲೆ ಅವಳು ಮನೆಗೆ ಬಂದು ಊಟಮಾಡದೆ ಚಿಂತಾಗ್ರಸ್ತಳಾಗಿ ಹಾಗೆಯೇ ಮಲಗಿಕೊಂಡಳು. ರಾತ್ರಿ ಕನಸಿನಲ್ಲಿ ಅವಳು, ಮಹಾದೇವನು ತನ್ನ ಬಳಿಯಲ್ಲಿ ನಿಂತುಕೊಂಡು 'ನಿನ್ನ ಭಕ್ತಿಯಿಂದ ನಾನು ಸಂತುಷ್ಟನಾದೆನು ಇನ್ನು ನನ್ನನ್ನು ಆರಾಧಿಸಬೇಕಾಗಿಲ್ಲ' ಎಂದು ನುಡಿದುದನ್ನು ಕಂಡಳು. ಆನಂತರ ಅವಳಿಗೆ ನಿದ್ದೆ ಹತ್ತಲಿಲ್ಲ. ಬೆಳಗಾದ ಕೂಡಲೇ ಎದ್ದು ಅಳಿಯನ ಮುಂದೆ ಕನಸಿನ ಸುದ್ದಿಯನ್ನು ಹೇಳಿದಳು. ಅಂದಿನಿಂದ ಅವಳ ಮೂರ್ತಿ ಪೂಜೆಯು ನಿಂತಿತು. ಇದರ ಕಾರಣವನ್ನು ಯಾರಾದರೂ ಅವಳಿಗೆ ಕೇಳಿದರೆ 'ನನ್ನ ಅಳಿಯನಲ್ಲಿ ನಾನು ಶಿವನನ್ನು ಕಂಡಿರುವೆನೆಂದ ಮೇಲೆ ಮತ್ತಿನ್ನೇನು ಪೂಜಿಸುವದು?' ಎಂದು ನುಡಿಯುತ್ತಿದ್ದಳು.

ಹರಪ್ರಸನ್ನ ಮುಜುಮದಾರರ ಪತ್ನಿಯಾದರೂ ನಾಗಮಹಾಶಯರ ಭಕ್ತಪರಿವಾರದಲ್ಲಿ ವಿಖ್ಯಾತಳಾಗಿರುವಳು. ಸ್ವಾಮಿ ವಿವೇಕಾನಂದರು ಒಬ್ಬ ಶಿಷ್ಯನೆದುರಿಗೆ ಒಂದು ಸಾರೆ ಇವಳ ವಿಷಯವಾಗಿ 'ನಾನು ನಿಮ್ಮ ಪ್ರಾಂತದಲ್ಲಿ ಮಹಾಭಕ್ತಿವತಿಯಾದ ಹಾಗೂ ಅಷ್ಟೇ ವಿದುಷಿಯಾದ ಮಹಿಲೆಯೋರ್ವಳನ್ನು ನೋಡಿದೆ' ನೆಂದು ನುಡಿದರು. ನಾಗಮಹಾಶಯರು ಅವಳಿಗೆ 'ತಾಯಿ' ಯೆಂದು ಕರೆಯುತ್ತಿದ್ದರು.

ಎಲ್ಲಿಯಾದರೂ ಸಾಂಸರ್ಗಿಕ ರೋಗದ ಪ್ರಾದುರ್ಭಾವವಾಗಿದ್ದರೆ ನಾಗಮಹಾಶಯರು ಅಂಥಲ್ಲಿ ಹೋದರೆ ರೋಗವು ಅಷ್ಟಕ್ಕೇ ನಿಲ್ಲುವದೆಂದರೆ ಅವರ ಭಕ್ತರ ವಿಶ್ವಾಸವಿತ್ತು. ಅದ್ದರಿಂದ ಅನೇಕ ಭಕ್ತರು ಇದಕ್ಕಾಗಿ ನಾಗಮಹಾಶಯರನ್ನು ಆಮಂತ್ರಿಸುತ್ತಿದ್ದರು. ಇಂಥ ಆಮಂತ್ರಣದ ಮೂಲಕ ನಾಗಮಹಾಶಯರೊಮ್ಮೆ ಘೋಷೇಶ್ವರ ಎಂಬ ಊರಿಗೆ ಹೋಗಬೇಕಾಯಿತು. ಅಲ್ಲಿಂದ ಹರಪ್ರಸನ್ನರ ಮನೆಯು ಸಮೀಪದಲ್ಲಿತ್ತು. ನಾಗಮಹಾಶಯರು ಹರಪ್ರಸನ್ನರ ಮನೆಗೆ ಹೋದರು. ಹರಪ್ರಸನ್ನರ ಪತ್ನಿಯು ಈ ಮೊದಲು ನಾಗಮಹಾಶಯರನ್ನು ನೋಡಿದ್ದಿಲ್ಲ. ತನ್ನ

ಸತಿಯು ಒಬ್ಬ ಸಾಧುವರನ ಭಕ್ತನಿರುವನೆಂಬುದು ಮಾತ್ರ ಅವಳಿಗೆ ಗೊತ್ತಿತ್ತು. ನಾಗಮಹಾಶಯರೇ ಆ ಸಾಧುವೆಂದು ಅವಳಿಗೆ ತಿಳಿಯಿತು. ಅವಳೊಳ್ಳೇ ಭಕ್ತಿಯುಳ್ಳವಳಾಗಿದ್ದರಿಂದ ನಾಗಮಹಾಶಯರಂಥ ಮಹಾ ಭಗವದ್ಭಕ್ತರ ಪರಿಚಯವಾಗುವ ಸುಸಂಧಿ ದೊರೆಯಿತು. ಅವಳೊಳ್ಳೇ ದಕ್ಷತೆಯಿಂದ ನಾಗಮಹಾಶಯರ ಆದರಾತಿಥ್ಯವನ್ನು ಮಾಡಿದಳು. ಅಂದಿನಿಂದ ಅವಳು ಆಗಾಗ್ಗೆ ದೇವಭೋಗಕ್ಕೆ ಬಂದು ನಾಗಮಹಾಶಯರೊಡನೆ ಭಗವತ್ಪ್ರಸಂಗದಲ್ಲಿ ಕಾಲಕಳೆಯುತ್ತಿದ್ದಳು. ಹೀಗೆಯೇ ಒಂದು ದಿನ ಅವರಿಬ್ಬರೂ ಮಾತನಾಡುತ್ತ ಕುಳಿತಾಗ್ಗೆ ಊರವರೆಲ್ಲರಿಗೂ ಪರಿಚಯದವಳಾದ ಒಬ್ಬ ವೃದ್ಧ ವೈಷ್ಣವಿಯು ಅಲ್ಲಿ ಬಂದಳು. ನಾಗಮಹಾಶಯರೊಡನೆ ಒಬ್ಬ ಸ್ತ್ರೀಯು ಮಾತಾಡುತ್ತ ಕುಳಿತದನ್ನು ನೋಡಿ ಅವಳಿಗೆ ಆಶ್ಚರ್ಯವಾಯಿತು. 'ಇವಳಾರು, ದುರ್ಗಾಚರಣ? ' ಎಂದು ಅವಳು ನಾಗಮಹಾಶಯರಿಗೆ ಕೇಳಿದಳು. ನಾಗಮಹಾಶಯರು 'ಇವಳು ನನ್ನ ತಾಯಿ' ಎಂದು ಉತ್ತರ ಕೊಟ್ಟರು. ಆದರೆ ಅವಳು ನಾಗಮಹಾಶಯರ ತಾಯಿಯಲ್ಲವೆಂಬುದು ಆ ವೈಷ್ಣವಿಗೆ ಗೊತ್ತಿತ್ತು. ಆದ್ದರಿಂದ ಅವಳು ಮತ್ತೆ 'ಇವಳೆಂಥ ತಾಯಿ?' ಎಂದು ಕೇಳಿದಳು. 'ನಿಜವಾಗಿಯೂ ಇವಳು ನನ್ನ ತಾಯಿಯೇ' ಎಂದು ಕೂಡಲೇ ನಾಗಮಹಾಶಯರು ನುಡಿದರು. ನಾಗಮಹಾಶಯರ ಯೋಗ್ಯತೆಯನ್ನವಳು ಅರಿತಿದ್ದಳು. ಅದರಿಂದ ಮತ್ತೇನೂ ಆಕ್ಷೇಪವನ್ನೆತ್ತದೆ, 'ನನಗೆ ಗೊತ್ತಾಯಿತೀಗ ; ನಿಜವಾಗಿಯೂ ನೀನು ಮಹಾಪುರುಷನಿರುವಿ; ಅಂತೇ ನಿನ್ನ ಕೀರ್ತಿಯು ಎಲ್ಲ ಕಡೆಗೆ ಹಬ್ಬಿದೆ. ಚಿರಜೀವಿಯಾಗಿದ್ದು ದೇಶಕ್ಕೆ ಕೀರ್ತಿ ಬರುವಂತೆ ಮಾಡು' ಎಂದು ಆಶೀರ್ವದಿಸಿ ಹೊರಟುಹೋದಳು.

ಹರಪ್ರಸನ್ನರ ಪತ್ನಿಯ ಧ್ವನಿಯು ಬಹು ಮಧುರವಾಗಿತ್ತು. ಅವಳು ಭಕ್ತಿಯಿಂದ ತನ್ಮಯಳಾಗಿ ದೇವಿಯ ಸ್ತೋತ್ರಗಳನ್ನು ಒಳ್ಳೇ ಮನೋಹರವಾಗಿ ಹಾಡುತ್ತಿದ್ದಾಗ ನಾಗಮಹಾಶಯರು "ತಾಯಿಯು ತನ್ನ ಸ್ತುತಿಯನ್ನು ತಾನೇ ಹಾಡುತ್ತಿರುವಳು" ಎಂದು ನುಡಿಯುತ್ತಿದ್ದರು.

ದೇವಭೋಗದ ಹತ್ತಿರಿರುವ ಕಾಶೀಪುರದಲ್ಲಿರುತ್ತಿದ್ದ ಒಬ್ಬ ಮುಸಲ್ಮಾನ ಗೃಹಸ್ಥನು ನಾಗಮಹಾಶಯರಬಗ್ಗೆ ಅಸೀಮ ಶ್ರದ್ಧಾಭಕ್ತಿ

ಯುಳ್ಳವನಾಗಿದ್ದನು. ಅವನ ಬಗ್ಗೆ ನಾಗಮಹಾಶಯರು "ಮುಸಲ್ಮಾನನಾದರೇನಾಯಿತು ? ಅವನಲ್ಲಿರುವಂಥ ಸಾತ್ವಿಕ ಭಾವವು ಅನೇಕ ಬ್ರಾಹ್ಮಣರಲ್ಲಿಯೂ ಕಂಡುಬರುವದಿಲ್ಲ" ಎಂದು ನುಡಿಯುತ್ತಿದ್ದರು. ಅವನಲ್ಲೇನೂ ಧರ್ಮಾಂಧತೆಯಿದ್ದಿಲ್ಲ. ಅವನು ನಾಗಮಹಾಶಯರನ್ನು 'ಪೀರ'ನೆಂದು ಭಾವಿಸುತ್ತಿದ್ದನು. ಹಾಗೂ ಅವರ ಉಪದೇಶವನ್ನು 'ಖುದಾನ' ಆದೇಶವೆಂದು ಗ್ರಹಿಸುತ್ತಿದ್ದನು. ಅಲ್ಪ ವಯಸ್ಸಿನಲ್ಲಿ ಸ್ತ್ರೀ ವಿಯೋಗವಾಗಿದರೂ ಅವನು ಎರಡನೆಯ ಮದುವೆಯನ್ನು ಮಾಡಿಕೊಳ್ಳಲಿಲ್ಲ. ಮಗನ ಮೇಲೆ ಸಂಸಾರದ ಭಾರವನ್ನು ವಹಿಸಿ ನಿಶ್ಚಿಂತ ಮನಸ್ಸಿನಿಂದ ಈಶ್ವರ ಚಿಂತನೆಯಲ್ಲಿ ತೊಡಗಿದ್ದನು. ನಾಗಮಹಾಶಯರನ್ನು ಕಾಣಲು ಅವನು ಮೇಲಿಂದ ಮೇಲೆ ಬರುತ್ತಿದ್ದನು. ನಾಗಮಹಾಶಯರಾದರೂ ಅವನನ್ನು ಚನ್ನಾಗಿ ಆದರಿಸುತ್ತಿದ್ದರು. ನಾಗಮಹಾಶಯರ ಕೆಲಸಗಳಲ್ಲಿ ಏನಾದರೂ ಸಹಾಯ ಮಾಡಬೇಕೆಂದು ಅವನಿಗೆ ಬಹಳ ಇಚ್ಛೆಯಿತ್ತು. ಆದರೆ ನಾಗಮಹಾಶಯರು ಆತನು ಉಚ್ಚ ತರಗತಿಯ ಭಕ್ತನೆಂದು ಅದಕ್ಕೊಪ್ಪುತ್ತಿದ್ದಿಲ್ಲ. ತನ್ನ ಎಪ್ಪತ್ತನೇ ವರ್ಷ ಆತನು ಮರಣಹೊಂದಿದನು.

"ಭಗವಂತನ ರಾಜ್ಯದಲ್ಲಿ ಜಾತಿವರ್ಣಗಳ ವಿಭಾಗವಿಲ್ಲ. ಎಲ್ಲರೂ ಅಲ್ಲಿ ಸಮಾನರು ಯಾವ ಹೆಸರಿನಿಂದಲೇ ಅವನನ್ನು ಕರಯಲಿ, ಆತನ ಯಾವ ರೂಪವನ್ನೇ ಧ್ಯಾನಿಸಲಿ, ಶುದ್ಧ ಮನಸ್ಸಿನಿಂದ ಅವನಿಗೆ ಆತ್ಮಸಮರ್ಪಣೆ ಮಾಡಿದರೆ ನಿಜವಾಗಿಯೂ ಅವನು ಅನುಗ್ರಹಮಾಡುವನು. ಎಲ್ಲ ಧರ್ಮಗಳೂ ಪಂಥಗಳೂ ಅವನ ಬಳಿಗೆ ಹೋಗುವ ಬೇರೆ ಬೇರೆ ಹಾದಿಗಳಾಗಿವೆ. ಯಾವ ಪಂಥವನ್ನವಲಂಬಿಸಿದರೂ ನಿಷ್ಕಪಟ ಹಾಗೂ ಸ್ಥಿರ ಮನಸ್ಸಿನಿಂದ ಪರಮಾತ್ಮನನ್ನು ಆರಾಧಿಸಿದರೆ ಅವನು ನಿಶ್ಚಯವಾಗಿ ಒಲಿಯುವನು" ಎಂದು ನಾಗಮಹಾಶಯರು ಹೇಳುತ್ತಿದ್ದರು.

ನಾಗಮಹಾಶಯರ ಅಮೋಘ ಕೃಪೆಯಿಂದ ಅನೇಕರ ಜೀವನ ಪ್ರವಾಹವು ಪರಿವರ್ತಿತವಾಯಿತು. ಕಾಲೀಪದನಾದ ಘೋಷ ಇವರು ಅವರಲ್ಲೊಬ್ಬನು, ಚಿಕ್ಕವನಿದ್ದಾಗ ಅವನು ಬಹಳ ಬಡವನಾಗಿದ್ದನು. ಆ ಮೇಲೆ ಅವನನ್ನು ದೇವಭೋಗದ ಶ್ರೀಮಂತ ಗೃಹಸ್ಥನೋರ್ವನು

ದತ್ತಕಮಾಡಿಕೊಂಡನು. ಆದರೆ ಕಾಲೀ ಕುಮಾರನು ಯೌವನದಲ್ಲಿ ವಿಷಯಾಸಕ್ತನಾಗಿ ಎಲ್ಲ ಸಂಪತ್ತನ್ನು ಹಾಳುಮಾಡಿ ನಾರಿಯು ತಿರುಕನಾದನು. ನಾಗಮಹಾಶಯರ ಸಂಸರ್ಗದಿಂದ ಇನ್ನೂ ಅವನ ಯೌವನದ ಚಾಂಚಲ್ಯವು ಹೋಗಿದ್ದಿಲ್ಲ. ಆದಕ್ಕಾಗಿ ನಾಗಮಹಾಶಯರು ಅವನ ಬಗ್ಗೆ ಒಳ್ಳೇ ಕಠೋರವೃತ್ತಿಯನ್ನು ತಳೆಯುತ್ತಿದ್ದರು. ಕಾಲೀಕುಮಾರನು ಆಗಾಗ ನಾಗಮಹಾಶಯರ ಮನೆಯಲ್ಲಿ ತನ್ನ ಹಿಂದಿನ ದುಷ್ಕೃತ್ಯಗಳ ಬಗ್ಗೆ ಪಶ್ಚಾತ್ತಾಪ ಪಡುತ್ತ ಕುಳಿತುಕೊಳ್ಳುತ್ತಿದ್ದನು. ಒಂದು ದಿನ ಅವರ ಮನೆಯಲ್ಲಿಯ ಕಂಬಕ್ಕೆ ತಲೆ ಘಟ್ಟಿಸಿಕೊಳ್ಳುತ್ತ ಕುಳಿತಿದ್ದನು. ಕೋಮಲ ಹೃದಯರಾದ ನಾಗಮಹಾಶಯರು ಅವನ ಕಡೆಗೆ ಹೊರಳಿ ಸಹ ನೋಡದೆ "ತನ್ನ ದುಷ್ಕರ್ಮದ ಫಲವನ್ನು ಅನುಭೋಗಿಸಲೇ ಬೇಕು" ಎಂದು ನುಡಿದರು. ನಾಗಮಹಾಶಯರ ಸಂಬಂಧವು ವಿಶೇಷವಾಗಿ ಬೆಳೆದಂತೆ ಕ್ರಮವಾಗಿ ಕಾಲೀಕುಮಾರನು ತನ್ನ ಎಲ್ಲ ದುರ್ಗುಣಗಳನ್ನು ಬಿಟ್ಟು ಸಚ್ಚರಿತ್ರನೂ ನಿಷ್ಠಾವಂತನೂ ಆದನು. ಆತನು ಕೆಲವು ದಿನ ವೃಂದಾವನಕ್ಕೆ ಹೋಗಿ ಇದ್ದನು. ಅಲ್ಲಿಂದ ಬಂದ ಮೇಲೆ ನಾಗಮಹಾಶಯರು ಅವನನ್ನು ಕೃಪಾದೃಷ್ಟಿಯಿಂದ ನೋಡಿದರು. ಆತನು ಈಗಲೂ ಮೇಲಿಂದ ಮೇಲೆ ತೀರ್ಥಯಾತ್ರೆ ಮಾಡುತ್ತಿರುತ್ತಾನೆ, ಹಾಗೂ ನಾಗಮಹಾಶಯರ ಪವಿತ್ರ ಜೀವನವನ್ನು ಅನುಕರಣ ಮಾಡುತ್ತ ಜೀವನವನ್ನು ಕಳೆಯುತ್ತಿದ್ದಾನೆ.

ಹರಪ್ರಸನ್ನ ಮುಜುಮದಾರರೂ ನಾಗಮಹಾಶಯರ ಭಕ್ತರಲ್ಲೊಬ್ಬರು. ಅವರೊಂದು ದಿನ ಭಗವತ್ಸಂಕೀರ್ತನಗೆ ಹೋದಾಗ ನಾಗಮಹಾಶಯರು ಭಾವಾವೇಶದಿಂದ ಬಾಹ್ಯಸಂಜ್ಞಾಹೀನರಾಗುವದನ್ನೂ ಆಗ ಅವರ ಮುಖದ ಮೇಲೆ ಅಪೂರ್ವವಾದ ಕಳೆಯೇರುತ್ತಿರುವದನ್ನೂ ಕಂಡು ಅವರು ನಾಗಮಹಾಶಯರ ಬಗ್ಗೆ ಆಕರ್ಷಿತರಾದರು. ನಾಗಮಹಾಶಯರ ಪರಿಚಯವು ಬೆಳೆದಂತೆ ಅವರ ಮನಸ್ಸಿನಲ್ಲಿ ನಾಗಮಹಾಶಯರ ಸಹವಾಸದಲ್ಲಿರಬೇಕೆಂದು ತೀವ್ರವಾದ ಇಚ್ಛೆಯು ಹುಟ್ಟಿತು. ಅವರು ಮೇಲಿಂದ ಮೇಲೆ ನಾಗಮಹಾಶಯರನ್ನು ಕಾಣಲು ಬರುತ್ತಿದ್ದರು. ನಾಗಮಹಾಶಯರಾದರೂ ಅವರನ್ನು ಬಹಳ ಪ್ರೀತಿಸುತ್ತಿದ್ದರು.

ಹರಪ್ರಸನ್ನರು ಡಾಕಾದಲ್ಲಿ ಸರಕಾರೀ ನೌಕರರಾಗಿದ್ದರು. ಅದೇನೋ ಕಾರಣದಿಂದ ಒಮ್ಮೆ ಹರಪ್ರಸನ್ನರ ಮಸ್ತಿಷ್ಕವು ತುಸು ವಿಕೃತವಾಗಿ ಅವರು ರಜೆ ತೆಗೆದುಕೊಳ್ಳಬೇಕಾಯಿತು. ಅವರ ಪತ್ನಿಯು ಉದ್ವಿಗ್ನಳಾಗಿ ಪತಿಯನ್ನು ನಾಗಮಹಾಶಯರ ಬಳಿಗೆ ಕರೆತಂದಳು. ನಾಗಮಹಾಶಯರು ಭಕ್ತ ದಂಪತಿಗಳಿಗೆ ಅಭಯ ಕೊಟ್ಟ ಅಲ್ಪ ಸಮಯದಲ್ಲಿಯೇ ಹರಪ್ರಸನ್ನರ ವ್ಯಾಧಿಯು ದೂರಾಯಿತು.

ಎಲ್ಲ ಭಕ್ತರಲ್ಲಿ ಹರ ಪ್ರಸನ್ನರು ನಾಗಮಹಾಶಯರಿಗೆ ವಿಶೇಷ ಪ್ರೀಯರಾಗಿದ್ದರು. ಹರ ಪ್ರಸನ್ನರ ಭಕ್ತಿಯನ್ನವರು ಬಹಳ ವರ್ಣಿಸುತ್ತಿದ್ದರು ಸ್ವಾಮೀ ಬ್ರಹ್ಮಾನಂದರೂ ಅವರ ಭಕ್ತಿಯನ್ನು ಕಂಡು ವಿಮೋಹಿತರಾಗಿದ್ದರು. ಹರ ಪ್ರಸನ್ನರ ಜೀವನದಲ್ಲಿ ನಾಗಮಹಾಶಯರ ಆದರ್ಶ ಜೀವನವು ಪ್ರತಿಬಿಂಬಿತವಾಗಿತ್ತು. ಹರ ಪ್ರಸನ್ನರ ಶ್ರದ್ಧೆ ನಮ್ರತೆ, ಭಕ್ತಿಭಾವ ಹಾಗೂ ಸೇವಾಭಾವ ಮೊದಲಾದವುಗಳು ನಾಗ ಮಹಾಶಯರ ನೆನಪು ಮಾಡಿಕೊಡುತ್ತವೆ.

ನಟವರ ಮುಖರ್ಜಿಯು ಮಹಾ ಉಚ್ಛೃಂಖಲ ವೃತ್ತಿಯವನಾಗಿದ್ದನು. ನಾಗಮಹಾಶಯರ ಪ್ರಭಾವದಿಂದ ಅವನ ಜೀವನವೂ ಪರಿವರ್ತನೆಹೊಂದಿತು. ಆತನ ಸ್ವಭಾವದ ವಿಶಿಷ್ಟತೆಯೇನೆಂದರೆ, ಅವನು ಒಳ್ಳೇ ಧಿಟ್ಟನೂ ನಿಷ್ಕಪಟಿಯೂ ಆಗಿದ್ದನು. ತನಗೆ ಸತ್ಯವೆಂದು, ಯೋಗ್ಯವೆಂದು ಕಂಡದ್ದನ್ನು ಮಾಡುವದರಲ್ಲಿ ಯಾವತರದ ಸ್ವಾರ್ಥತ್ಯಾಗವನ್ನು ಮಾಡಲೂ ಹಿಂಜರಿಯುತ್ತಿದ್ದಿಲ್ಲ. ಅವನಲ್ಲಷ್ಟು ಕವಿತ್ವಶಕ್ತಿಯೂ ಇದ್ದಿತು. ಅವನೊಂದು ನಾಟಕವನ್ನು ಬರೆದಿದ್ದನು. ಪತಿತರನ್ನು ಉದ್ಧರಿಸುವದಕ್ಕಾಗಿ ಪರಮಾತ್ಮನು ನರಶರೀರದಲ್ಲಿ ಅವತರಿಸುವದೇ ಆ ನಾಗಕದ ವಿಷಯವಾಗಿತ್ತು. ಆ ನಾಟಕದಲ್ಲಿ ಅವನು ಮುಖ್ಯವಾಗಿ ನಾಗಮಹಾಶಯರ ಅಸಾಧಾರಣ ದೀನತೆ ಹಾಗೂ ಅಪಾರ ದಯೆಗಳನ್ನು ಚಿತ್ರಿಸಿದ್ದನು. ನಾಟಕವು ದೇವಭೋಗದಲ್ಲಿ ಅಭಿನೀತವಾಯಿತು. ನಾಟ ಮಹಾಶಯರು ಅದನ್ನು ನೋಡಲು ಹೋಗಿದ್ದರು. ನಟವರನು ದೇವಭೋಗದ ನಿವಾಸಿಯಾಗಿದ್ದನು. ಹಾಗೂ ಬಹುತರವಾಗಿ ಅವನು ಅಲ್ಲಿಯೇ ಇರುತ್ತಿದ್ದನು. ನಾಗಮಹಾಶಯರ ಪತ್ನಿಯ ಬಗ್ಗೆಯೂ ಅವನಲ್ಲಿ

ಭಕ್ತಿಯೂ ಪೂಜ್ಯಭಾವವೂ ನೆಲೆಸಿದ್ದವು. ನಾಗಮಹಾಶಯರ ಭಕ್ತರನ್ನು ಅವನು ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದನು.

ಮತ್ತೊಬ್ಬ ಭಕ್ತನಾದ ಅನ್ನದಾ ಠಾಕೂರನು ಶ್ರೀರಾಮಕೃಷ್ಣರ ಭಕ್ತವೃಂದದಲ್ಲಿ ಸುಪರಿಚಿತನಾಗಿದ್ದನು. ಅವನಿಗೆ ವಿಶೇಷ ಓದುಬರೆಯಲು ಬರುತ್ತಿದ್ದಿಲ್ಲ. ಆದರೆ ದೇವರಲ್ಲಿ ಮಾತ್ರ ಅವನಿಗೆ ಅತ್ಯಂತ ಪ್ರಬಲವಾದ ಶ್ರದ್ಧೆಯಿತ್ತು. ಅವನು ನಾಗಮಹಾಶಯರ ದರ್ಶನಕ್ಕಾಗಿ ಮೇಲಿಂದ ಮೇಲೆ ಬರುತ್ತಿದ್ದರು. ನಾಗಮಹಾಶಯರಾದರೂ ಸರಲ ಹೃದಯದ ಬ್ರಾಹ್ಮಣನನ್ನು ವಾತ್ಸಲ್ಯದಿಂದ ನೋಡುತ್ತಿದ್ದರು. ಢಾಕಾದಲ್ಲಿದ್ದಾಗ ಅನ್ನದಾನು ತನ್ನ ಮಿತ್ರನಾದ ಒಬ್ಬ ಸರಕಾರೀ ನೌಕರನ ಮನೆಗೆ ಹೋಗುತ್ತಿದ್ದನು. ಆ ಮಿತ್ರನು ಡಿಪ್ಯೂಟಿ ಕಲೆಕ್ಟರನಾಗಿದ್ದನು ಆ ಸಮಯದಲ್ಲಿ ಪೂಜ್ಯ ಸ್ವಾಮೀ ವಿವೇಕಾನಂದರ ವಿಜಯ ದುಂದುಭಿಯು ಭಾರತದಲ್ಲೆಲ್ಲ ಮೊಳಗುತ್ತಿತ್ತು. ಮಿತ್ರನ ಮನೆಗೆ ಹೋದಾಗ ಅವನು ಸ್ವಾಮಿಜಿಯವರ ವಿಷಯವಾಗಿ ಮತ್ಸರಗ್ರಸ್ತನಾಗಿ, ಅನ್ನದಾನ ಮುಂದೆ ಸ್ವಾಮೀ ವಿವೇಕಾನಂದರನ್ನು ನಿಂದಿಸಹತ್ತಿದನು. “ ವಿವೇಕಾನಂದರಂಥ ಮಹಾತ್ಮರನ್ನು ಸುಮ್ಮನೇ ನಿಂದಿಸಬೇಡಿರಿ ” ಎಂದು ಅನ್ನದಾನು ಬಹಳ ಹೇಳಿದನು. ಆದರೆ ಆ ಮಿತ್ರನು ಅದನ್ನು ಲೆಕ್ಕಿಸದೆ ಹಾಗೆಯೇ ನಿಂದಿಸಹತ್ತಿದನು. ಅನ್ನದಾನಿಗೆ ಸಹಿಸುವದಾಗಲಿಲ್ಲ. ಕೋಪಾವಿಷ್ಟನಾಗಿ “ One word more against swamiji and you are done for ” ( ಸ್ವಾಮೀಜಿಯವರ ವಿರುದ್ಧವಾಗಿ ಒಂದು ಶಬ್ದವನ್ನಿನ್ನು ಉಚ್ಚರಿಸಿದರೆ ನಿಮ್ಮ ಅವತಾರ ಸಮಾಪ್ತಿಯಾಯಿತೆಂದು ತಿಳಿಯರಿ ) ಎಂದು ಸ್ಪಷ್ಟವಾಗಿ ಹೇಳಿಬಿಟ್ಟಿದ್ದನು. ಅನ್ನದಾನ ಉಗ್ರಮೂರ್ತಿಯನ್ನು ಕಂಡು ರಾಯರು ತಣ್ಣಗಾದರು ! ಅಂದಿನಿಂದ ಅನ್ನದಾನು ಆ ಮಿತ್ರನ ಮನೆಗೆ ಹೋಗುವದನ್ನು ಬಿಟ್ಟುಕೊಟ್ಟನು. ಅನ್ನದಾನ ಕಡೆಯ ದಿನಗಳು ಶಾಂತಿಯಿಂದ ಕಳೆದವು. ಅವನು ಶ್ರೀರಾಮಕೃಷ್ಣರ ಹಾಗೂ ನಾಗಮಹಾಶಯರ ನಾಮವನ್ನುಚ್ಚರಿಸುತ್ತ ಪ್ರಾಣಬಿಟ್ಟನು.

ಶ್ರೀಮತಿ ಹರಕಾಮಿನಿಯ ಪತಿಯಾದ ಕೈಲಾಸಚಂದ್ರನಾದರೂ ನಾಗಮಹಾಶಯರನ್ನೇ ಪೂರ್ಣವಾಗಿ ಶರಣುಹೋಗಿದ್ದನು. ನಾಗಮಹಾ

ಶಯರು ಎಲ್ಲರಲ್ಲಿ 'ನಾರಾಯಣ' ನನ್ನು ಕಾಣುತ್ತಿದ್ದದರಿಂದ ಯಾರ ಸೇವೆಯನ್ನೂ ಗ್ರಹಿಸುತ್ತಿದ್ದಿಲ್ಲ. ಕೈಲಾಸಚಂದ್ರನ ಬಗ್ಗೆ ಮಾತ್ರ ಈ ವಿಷಯವು ಅಪವಾದವಾಗಿತ್ತು. ಕೈಲಾಸಚಂದ್ರನು ನಾಗಮಹಾಶಯರನ್ನು ತನ್ನ ಗುರುವೆಂದು ಭಾವಿಸಿದ್ದನು. ಅವನ ಜೀವನದ ಉದ್ದೇಶವು ನಾಗಮಹಾಶಯರ ಸೇವೆಯನ್ನು ಮಾಡುವದೂ ಅವರ ಆದೇಶಗಳನ್ನು ಪಾಲಿಸುವದೂ ಆಗಿತ್ತು. ನಾಗಮಹಾಶಯರು ಅವತಾರಿಕರೆಂದು ಅವನು ತಿಳಿದಿದ್ದನು.

ನಾಗಮಹಾಶಯರ ಬೇರೊಬ್ಬ ಭಕ್ತನಾದ ಪಾರ್ವತೀಚರಣನು ಬಹು ಏಕಾಂತ ಪ್ರಿಯನಾಗಿದ್ದನು. ಧರ್ಮದ ಬಗ್ಗೆ ಅವನೆಂದೂ ಚರ್ಚೆ ಮಾಡುತ್ತಿದ್ದಿಲ್ಲ. ನಾಗಮಹಾಶಯರಲ್ಲಿ ಅವನಿಗೆ ಬಹಳ ವಿಶ್ವಾಸವಿತ್ತು ಹಾಗೂ ಎಲ್ಲ ವಿಷಯಗಳಲ್ಲಿ ಅವನು ಅವರ ಮೇಲೆಯೇ ಅವಲಂಬಿಸುತ್ತಿದ್ದನು. ಧರ್ಮದ ಬಗ್ಗೆ ಅಥವಾ ಯಾವುದಾದರೊಂದ ದಾರ್ಶನಿಕ ವಿಷಯದ ಬಗ್ಗೆ ವಾದವಿವಾದಗಳು ನಡೆದಾಗ್ಗೆ ಅವನು ಸುಮ್ಮನೇ ಕುಳಿತುಕೊಂಡು ತನ್ನ ಇಷ್ಟದೇವತೆಯನ್ನು ಧ್ಯಾನಿಸುತ್ತಿದ್ದನು.

ನಾಗಮಹಾಶಯರ ಮನೆಯ ನೆರೆಯಲ್ಲಿರುತ್ತಿದ್ದ ಗೋಪಾಲಚಂದ್ರ ಚಕ್ರವರ್ತಿಯವರು ನಾಗಮಹಾಶಯರ ಭಕ್ತರಲ್ಲಿ ಮೊದಲಿಗರು. ನಾಗಮಹಾಶಯರ ಪರಿಚಯವು ಮತ್ತನೇಕ ಭಕ್ತರಿಗೆ ಅಗಲು ಇವರು ಕಾರಣರಾಗಿದ್ದಾರೆ ಬಾಲ್ಯವಯಸ್ಸಿನಲ್ಲಿಯೇ ಒಬ್ಬ ಧೀಮತಿಯಾದ ಸ್ತ್ರೀ ಗುರುವಿನಿಂದ 'ಮಧುರ ಭಾವ' ದೀಕ್ಷಿತರಾಗಿದ್ದರು. ಹಾಗೂ ಸಾಧನೆಯ ಮೂಲಕ ಅವರಲ್ಲಿ ಅಪೂರ್ವವಾದ ಶಕ್ತಿಯು ಉದಯಿಸಿತ್ತು. ಅದರಿಂದ ಜನರು ಅವರಕಡೆಗೆ ಬಹಳವಾಗಿ ಆಕರ್ಷಿತರಾಗುತ್ತಿದ್ದರು. ಭಕ್ತ ಸಮಾಜದಲ್ಲಿ ಅವರು ಸತ್ಯಗೋಪಾಲರೆಂದು ಪ್ರಸಿದ್ಧರಾಗಿದಾರೆ. ಸತ್ಯಗೋಪಾಲಕರು ಒಳ್ಳೇ ಗಾಯಕರಾಗಿದ್ದರು ವಾದನದಲ್ಲಿಯೂ ಬಹು ನಿಪುಣರಾಗಿದರು. ಅವರು ವಿವಿಧ ಸ್ಥಾನಗಳಿಗೆ ಹೋಗಿ ಕೀರ್ತನ ಮಾಡುತ್ತಿದ್ದರು. ಅವರ ಕೀರ್ತನೆಯಲ್ಲಿ ಒಂದು ತರದ ಮೋಹಿನೀ ಶಕ್ತಿಯಿತ್ತು. ಎಂಥ ಕಲ್ಲೆದೆಯವನೂ ಅವರ ಕೀರ್ತನೆಯನ್ನು ಕೇಳಿ ರಸಾನುಭವವನ್ನು ಹೊಂದುತ್ತಿದ್ದನು. ನಾಗಮಹಾಶಯರು ಅವರನ್ನು ಮೊದಲು ನೋಡಿ

ದಾಗ ಸತ್ಯಗೋಪಾಲನು ಮಹಾಭಗವದ್ಭಕ್ತನಿರುವನು. ಅವನ ಶ್ರದ್ಧೆ ಯೂ ಅಪೂರ್ವವಾಗಿದೆ. ಆದರೆ ಅವನಲ್ಲಿ ಭೋಗವಾಸನೆಯುಂಟು'' ಎಂದು ನುಡಿದರು ನಾಗಮಹಾಶಯರ ಸಹವಾಸದಿಂದ ಸತ್ಯಗೋಪಾಲರಿಗೆ ತಮ್ಮ ವ್ಯಂಗವು ತಿಳಿದು ಬಂದಿತು. ಹಾಗೂ ಅಂದಿನಿಂದ ಮಧುರ ಭಾವದ ಸಾಧನೆ ಮಾಡುವದನ್ನು ಬಿಟ್ಟು ಭಕ್ತಿಮಾರ್ಗದ ಸಾಧಕರಾದರು. ನಾಗಮಹಾಶಯರು ಸತ್ಯಗೋಪಾಲರನ್ನು ವಿಶೇಷವಾಗಿ ಪ್ರೀತಿಸುತ್ತಿದ್ದರು. ಸತ್ಯಗೋಪಾಲರು ನಾಗಮಹಾಶಯರನ್ನು ತಮ್ಮ ಗುರುಗಳೆಂದು ತಿಳಿಯುತ್ತಿದ್ದರು. ನಾಗಮಹಾಶಯರು ಮೂರ್ತಿಮಂತ ವೇದ ಎಂದೂ ಅವರ ಮಹಿಮೆಯು ಆಕಾಶದಂತೆ ಅಪಾರವಿದೆಯೆಂದೂ ಸತ್ಯಗೋಪಾಲರು ಎಣಿಸುತ್ತಿದ್ದರು. ಇದರಿಂದ ಅವರು ಯಾವಾಗಲೂ ''ಶ್ರೀಗುರು ವೇದಾಕಾಶರಿಗೆ ಜಯ'' ಎಂದು ನಾಗಮಹಾಶಯರ ಜಯಘೋಷವನ್ನು ಮಾಡುತ್ತಿದ್ದರು. ಸತ್ಯಗೋಪಾಲರ ಶಿಷ್ಯರೂ ಅನೇಕರಿರುವರು.

ಹಿಂದೆ ಹೇಳಿದಂತೆ ನಾಗಮಹಾಶಯರ ಭಕ್ತ ಪರಿವಾರವು ಬಹು ವಿಶಾಲವಾಗಿದೆ. ಸ್ಥಾನಾಭಾವದ ಮೂಲಕ ಅವರ ನಿರ್ದೇಶವಿನ್ನಿಲ್ಲಿ ಮಾಡಿಲ್ಲ. ಯಾರೇ ಆಗಲಿ ನಾಗಮಹಾಶಯರನ್ನು ಒಮ್ಮೆ ನೋಡಿದರೆಂದರೆ ನಾಗಮಹಾಶಯರ ಅದ್ಭುತ ಜೀವನವು ಅವರ ಹೃದಯದಲ್ಲಿ ಅಚ್ಚಳಿಯದ ಪ್ರಭಾವವನ್ನು ಮಾಡುತ್ತಿತ್ತು. ಅವರ ಅನುಗ್ರಹದಿಂದ ಎಷ್ಟೋ ಜನರು ತಮ ಜೀವನವನ್ನು ಸಾರ್ಥಕ ಮಾಡಿಕೊಂಡರು. ಸ್ವಾಮೀ ವಿವೇಕಾನಂದರು ''ಇಂಥ ಮಹಾತ್ಮರ ಸಹವಾಸವು ಐದು ನಿಮಿಷ ಲಭಿಸಿದರೂ ಸಾಕು. ಜೀವನವು ಪರಿವರ್ತನೆ ಹೊಂದುವ'' ದೆಂದು ನುಡಿಯುತ್ತಿದ್ದರ. ಕೇವಲ ಸದ್ಗುರು ಕೃಪೆಯಿಂದ ಶಿಷ್ಯನಿಗೆ ಜ್ಞಾನೋಪಲಬ್ಧಿಯಾಗುವದು. ನಾಗಮಹಾಶಯರಿದಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದಾರ.

# ೯ ನೆಯ ಪ್ರಕರಣ.

## ಮಹಾಸಮಾಧಿ

ವಂಗಶಕೆ ೧೩೦೭ ರಲ್ಲಿ ನಾಗಮಹಾಶಯರಿಗೆ ಪೂಜಾ ಉತ್ಸವದ ಸಾಮುಗ್ರಿಗಳನ್ನು ಕೊಳ್ಳಲು ಕಲಕತ್ತೆಗೆ ಬರುವದಾಗಲಿಲ್ಲ. ಮಾರ್ಗಶೀರ್ಷ ಮಾಸದ ಕಡೆಯ ಭಾಗದಲ್ಲಿ ಶರಚ್ಚಂದ್ರರಿಗೆ ನಾಗಮಹಾಶಯರ ಹೆಂಡತಿಯಿಂದ ನಾಗಮಹಾಶಯರ ಬೇನೆಯು ಹೆಚ್ಚಾಗಿದೆಯೆಂದೂ ಅದಕ್ಕಾಗಿ ದೇವಭೋಗಕ್ಕೆ ಬರಬೇಕೆಂದೂ ತಂತಿ ಬಂದಿತು. ತಂತಿ ಬಂದ ಮರುದಿನ ಶರಚ್ಚಂದ್ರರು ರಾಮಕೃಷ್ಣ ಮಠದಲ್ಲಿ 'ವೇದಧರ್ಮ' ದ ಬಗ್ಗೆ ಒಂದು ಪ್ರಬಂಧವನ್ನೋದಬೇಕಾಗಿತ್ತು. ಈ ಕಾರ್ಯವನ್ನು ಬಿಟ್ಟು ಹೊರಡಬೇಕೋ ಬಾರದೋ ಎಂದು ಯೋಚಿಸುವಷ್ಟರಲ್ಲಿ ಸ್ವಾಮಿ ಅದ್ಭುತಾನಂದರು ಬಂದು "ವೇದಗಳ ಬಗ್ಗೆ ವ್ಯಾಖ್ಯಾನಗಳನ್ನು ಕೊಡಲು ಬೇಕಾದಷ್ಟು ಸಮಯವಿದೆ; ಕೇಳಲು ಯಾವಾಗಲಾದರೂ ಜನರು ಸಿದ್ಧರೇ ಇರುವರು. ಆದರೆ ನಾಗಮಹಾಶಯರು ಪ್ರಾಣ ವಿಸರ್ಜಿಸಿದರೆ ಮಾತ್ರ ಅ ದೇವದುರ್ಲಭ ಮಹಾಪುರುಷನ ದರ್ಶನವಾಗುವದು ಅಸಾಧ್ಯವಾಗುವದು" ಎಂದು ಹೇಳಿದರು. ಶರಚ್ಚಂದ್ರರು ಅದೇ ದಿನ ದೇವಭೋಗಕ್ಕೆ ಹೊರಟರು.

ಮರುದಿನ ಸಂಜೆಗೆ ಶರಚ್ಚಂದ್ರರು ದೇವಭೋಗವನ್ನು ಮುಟ್ಟಿದರು. ಮನೆಗೆ ಹೋಗಿ ನೋಡಲಾಗಿ ನಾಗಮಹಾಶಯರು ಪಡಸಾಲೆಯಲ್ಲಿ ಒಂದು ಹರಕು ಹಾಸಿಗೆಯ ಮೇಲೆ ಮಲಗಿಕೊಂಡಿದ್ದರು. ಆಗ ಚಳಿಗಾಲವಿತ್ತು; ನೆರೆಯ ಹುಲ್ಲುಗಾವಲಿನಿಂದ ಬೀಸುವ ಚಳಿಗಾಳಿಯಿಂದ ವೃಥಕಾಯ ಮನಷ್ಯನು ಸಹ ನಡಗುತ್ತಿದ್ದನೆಂದ ಮೇಲೆ ಮುರುಕ ಪಡಸಾಲೆಯಲ್ಲಿ ಮಲಗಿಕೊಂಡ ರೋಗಿಯ ಪಾಡೇನು? "ನಾಗಮಹಾಶಯರು ಅಲ್ಲಿಯೇಕೆ ಮಲಗಿಕೊಂಡಿರುವರು?" ಎಂದು ಶರಚ್ಚಂದ್ರರು

ನಾಗಮಹಾಶಯರ ಹೆಂಡತಿಯನ್ನು ವಿಚಾರಿಸಿದರು. ಅದಕ್ಕೆ ಅವಳು "ಅಯ್ಯಾ, ಎಂದಿಗೆ ಅವರ ಅಶಕ್ತತೆ ಬೆಳೆದು ಹಾಸಿಗೆಯಿಂದ ಏಳುವದು ಅಸಾಧ್ಯವಾಯಿತೋ ಅಂದಿನಿಂದ ಅವರು ಅಲ್ಲಿಯೇ ಮಲಗಿಕೊಂಡಿರುವರು. ಒಳಗೆ ಬರಲು ಎಷ್ಟು ಹೇಳಿದರೂ ಕೇಳಗೊಲ್ಲರು. ಅವರ ಹೊಟ್ಟೆ ನೋವೂ ಕೆಲವು ದಿನಗಳ ಹಿಂದೆ ಹೆಚ್ಚಾಯಿತು. ಆ ಮೇಲೆ ಅತಿಸಾರ ಗಂಟು ಬಿದ್ದಿತು. ಈಗ ಬೇನೆಯು ಭಯಂಕರ ಸ್ವರೂಪವನ್ನು ಧಾರಣ ಮಾಡಿದ್ದರಿಂದ ಅವರ ಒಪ್ಪಿಗೆಯನ್ನು ಪಡೆದು ನಿನಗೆ ತಂತಿಯನ್ನು ಕಳುಹಿದೆನು" ಎಂದು ನುಡಿದಳು.

ನಾಗಮಹಾಶಯರು ಯಾರ ಎದುರಿಗೂ ತಮ್ಮ ವ್ಯಥೆಯನ್ನು ಹೇಳುತ್ತಿದ್ದಿಲ್ಲ. ಅವರು ತಮ್ಮ ಹೆಂಡತಿಗೆ ಒಮ್ಮೆ "ನನ್ನ ಪ್ರಾರಬ್ಧವು ಮುಗಿಯಲಿಕ್ಕೆ ಬಂದಿದೆ; ಇನ್ನು ತುಸು ಉಳಿದಿದೆ" ಎಂದು ಹೇಳಿದರು. ರೋಗಗ್ರಸ್ತರಾಗುವ ಮೊದಲು ಅವರು ದಿನದಿನಕ್ಕೆ ಅಶಕ್ತರಾಗುತ್ತ ನಡೆದಿದ್ದರು ಮಧ್ಯಾಹ್ನದಲ್ಲಿ ತುಸು ಊಟ ಮಾಡುತ್ತಿದ್ದರು. ರಾತ್ರಿ ಉಪವಾಸ ಇರುತ್ತಿದ್ದರು. ಅಸ್ಥಿ ಪಂಜರದಂತೆ ಕಾಣುತ್ತಿದ್ದರು ತಮ್ಮ ಪತ್ನಿಯು ಚಿಂತೆಯಿಂದ ಬಿಸುಸುಯ್ಯುವದನ್ನು ಕಂಡರೆ ನಾಗಮಹಾಶಯರು "ಈ ದೇಹಕ್ಕಾಗಿ ಅಷ್ಟೇಕೆ ಚಿಂತೆ ಮಾಡುವಿ? ಈ ದೇಹವೆಂದರೆ ಅದೊಂದು ಎಲುಬಿನ ಹಂದರ" ಎಂದು ನುಡಿಯುತ್ತಿದ್ದರು. ಔಷಧ ತೆಗೆದುಕೊಳ್ಳಲು ಅವರ ಮನವೊಲಿಸಲು ಯಾರಿಗೂ ಸಾಧ್ಯವಾಗಲಿಲ್ಲ.

ಈಚೆಗೆ ಬೇನೆಯು ತೀಕ್ಷ್ಣವಾಗಹತ್ತಿತು. ಕೋಣೆಯೊಳಗೆ ಬರಲು ಎಷ್ಟು ಹೇಳಿದರೂ ಬಾರದೆ ನಾಗಮಹಾಶಯರು ಹೊರಗೆಯೇ ಒರಗಿಕೊಂಡಿರುತ್ತಿದ್ದರು. ಅಸಹನೀಯವಾದ, ಭಯಂಕರವಾದ ವ್ಯಥೆಯಿಂದ ಬಳಲುತ್ತಿದ್ದರೂ ನಾಗಮಹಾಶಯರ ಮನವನ್ನು ದುಃಖಛಾಯೆಯು ಆವರಿಸಲಿಲ್ಲ. ಯಾವಾಗಲೂ ಶ್ರೀ ರಾಮಕೃಷ್ಣರ ಅಪಾರವಾದ ದಯೆಯ ವಿಷಯವನ್ನುಳಿದು ಅವರ ಬಾಯಿಂದ ಬೇರೆ ಮಾತೇ ಹೊರಡುತ್ತಿದ್ದಿಲ್ಲ.

ನಾಗಮಹಾಶಯರ ಮೃತ್ಯುವಿನ ವರೆಗೆ ಎಂದರೆ ಹದಿಮೂರು ದಿನಗಳ ವರೆಗೆ ಶರಚ್ಚಂದ್ರರು ಅಲ್ಲಿಯೇ ಇದ್ದರು. ಈ ದಿನಗಳಲ್ಲಿ ಅವರು ಭಗವದ್ಗೀತೆ, ಭಾಗವತ ಹಾಗೂ ಉಪನಿಷತ್ತುಗಳನ್ನು ಅವರೆದುರಿಗೆ ಓದು

ತ್ತಿದ್ದರು. ಆಗಾಗ ದೇವಿಯ ಸ್ತೋತ್ರಗಳನ್ನು ಹಾಡುತ್ತಿದ್ದರು. ಹಾಡುಗಳನ್ನು ಕೇಳುತ್ತಿದ್ದಾಗ, ನಾಗಮಹಾಶಯರು ಮೇಲಿಂದಮೇಲೆ ಬಾಹ್ಯ ಜ್ಞಾನಶೂನ್ಯರಾಗಿ ಎಷ್ಟೋ ಹೊತ್ತಿನ ವರೆಗೆ ಗಭೀರವಾದ ಸಮಾಧಿಯಲ್ಲಿ ಮಗ್ನರಾಗುತ್ತಿದ್ದರು. ಸಮಾಧಿಯಿಳಿದ ಮೇಲೆ ಅವರು ನಿದ್ದೆಯಿಂದೆದ್ದ ಕೂಸಿನಂತೆ 'ಅವ್ವಾ ಅವ್ವಾ' ಎಂದು ಅಳುತ್ತಿದ್ದರು. ಆಗ ಅವರ ಮೋರೆಯ ಮೇಲೆ ಎಲ್ಲ ದಿವ್ಯ ಲಕ್ಷಣಗಳೂ ಮೂಡಿರುತ್ತಿದ್ದವು. ಮತ್ತೆ ಕೆಲವು ಸಾರೆ "ಸಚ್ಚಿದಾನಂದ, ಸಚ್ಚಿದಾನಂದ ಅಖಂಡ ಚೈತನ್ಯ" ಎಂದು ನುಡಿಯುತ್ತಿದ್ದರು.

ನಾಗಮಹಾಶಯರು ಬೇನೆಬಿದ್ದಾಗ ಅನೇಕ ಭಕ್ತರು ಅವರ ದರ್ಶನಕ್ಕಾಗಿ ಬರುತ್ತಿದ್ದರು. ಕೆಲವರು ಒಂದೊಂದು ದಿನ ಅವರ ಮನೆಯಲ್ಲಿಯೇ ಉಳಿಯುತ್ತಿದ್ದರು. ನಾಗಮಹಾಶಯರು ತಾವು ಸದಾ ಹಾಸಿಗೆಯ ಮೇಲೆ ಬಿದ್ದುಕೊಂಡಿರುತ್ತಿದ್ದರೂ ಘೋರವಾದ ವ್ಯಥೆಯನ್ನು ಅನುಭೋಗಿಸುತ್ತಿದ್ದರೂ ಅತಿಥಿಗಳ ಆದರ ಸತ್ಕಾರದ ಬಗ್ಗೆ ಬಹು ಜಾಗರೂಕರಾಗಿರುತ್ತಿದ್ದರು. ಅತಿಥಿಗಳೆಂದರೆ ನಾರಾಯಣ ಸ್ವರೂಪರೆಂದು ಅವರು ತಿಳಿಯುತ್ತಿದ್ದರು. ಯಾರ ರುಚಿಯು ಹೇಗಿದೆ; ಅವರಿಗಾಗಿ ಏನೇನು ಅಡಿಗೆ ಮಾಡಬೇಕು; ಯಾರಿಗೆ ಎಲ್ಲಿ ಮಲಗಲು ಸ್ಥಳವಿದೆ, ಪೇಟೆಯಿಂದ ಯಾವ ಯಾವ ಸಾಮಾನುಗಳನ್ನು ತರಿಸಬೇಕು, ಇವೇ ಮೊದಲಾದ ವಿಷಯಗಳನ್ನು ಅವರು ತಮ್ಮ ಹೆಂಡತಿಗೆ ತಿಳಿಸುತ್ತಿದ್ದರು. ಒಟ್ಟಿನಮೇಲೆ ಅತಿಥಿಗಳಿಗೆ ತಮ್ಮ ಮನೆಯಲ್ಲಿ ಯಾವ ಕೊರತೆಯೂ ಎನಿಸದಂತೆ ಅವರು ನೋಡಿಕೊಳ್ಳುತ್ತಿದ್ದರು. ಆಗ ಅವರ ಮನೆಯಲ್ಲಿ ಒಂದು ಸಮಾರಂಭ ನಡೆದಂತಾಗಿತ್ತು. ನಾಗಮಹಾಶಯರು ಸದಾ ಪರಮಾತ್ಮನ ಬಗ್ಗೆ ಹಾಗೂ ಅವನ ಭಕ್ತರ ಬಗ್ಗೆಯಲ್ಲದೆ ಬೇರೆ ವಿಷಯದ ಬಗ್ಗೆ ಮಾತೇ ಆಡುತ್ತಿದ್ದಿಲ್ಲ. ಹೀಗಾಗಿ ಅಲ್ಲಿ ಒಂದು ಬಗೆಯ ದೈವೀ ವಾತಾವರಣವೇ ನಿರ್ಮಿತವಾಗಿತ್ತು. ಅದರಿಂದ ಅಲ್ಲಿ ಬಂದ ಎಲ್ಲ ಭಕ್ತರೂ ಪ್ರಾಪಂಚಿಕ ವಿಷಯಗಳನ್ನು ಮರೆತು ಕೇವಲ ಪರಮಾತ್ಮ ಚಿಂತನೆಯಲ್ಲಿ ತೊಡಗಲು ಪ್ರೇರಿತರಾಗುತ್ತಿದ್ದರು. ತಮಗಾಗಿ ಭಕ್ತರು ಚಿಂತಿತರಾಗಿರುವದನ್ನು ಕಂಡರೆ ನಾಗಮಹಾಶಯರು "ಹಾಯ್, ಈ ಹಾಳು ಎಲುಬಿನ

ಹಂದರವನ್ನು ನೋಡಲಿಕ್ಕೆ ಸುಮ್ಮನೆ ಕಷ್ಟಪಟ್ಟು ಏಕೆ ಬಂದಿರಿ? ಇದೇನು ಇನ್ನು ಹೆಚ್ಚು ದಿನ ಬಾಳುವದಿಲ್ಲ. ಇದು ಪರಿವರ್ತನೆ ಹೊಂದುತ್ತಿದೆ'' ಎಂದು ನುಡಿಯುತ್ತಿದ್ದರು.

ಶರಚ್ಚಂದ್ರರು ಬಹುಶಃ ನಾಗಮಹಾಶಯರ ಬಳಿಯಲ್ಲಿಯೇ ಕುಳಿತಿರುತ್ತಿದ್ದರು ನಾಗಮಹಾಶಯರು ಆಗಾಗ "ಪರಮಾತ್ಮನು ಎಷ್ಟು ದಯಾಮಯನಿರುವನು! ಇದೆಲ್ಲವೂ ಆತನ ಅನುಗ್ರಹ'' ಎಂದು ನುಡಿಯುತ್ತಿರುವದನ್ನು ಕೇಳುತ್ತಿದ್ದರು. ಆದರೆ ನಾಗಮಹಾಶಯರ ಅಸಹ್ಯವೇದನೆಯನ್ನು ಕಂಡು ಶರಚ್ಚಂದ್ರರ ಮನಸಿನಲ್ಲಿ 'ದೇವರು ದಯಾಮಯನಲ್ಲ; ಆತನು ಕಠೋರನಿರುವನು''ಎಂದು ವಿಚಾರ ಬಂದಿತು. ನಾಗಮಹಾಶಯರು ಭಕ್ತನ ಮನೋಭಾವವನ್ನು ತಿಳಿದು 'ಅಯ್ಯಾ' ಭಗವಂತನ ಅಪಾರವಾದ ಕರುಣೆಯ ಬಗ್ಗೆ ಎಳ್ಳಷ್ಟು ಸಂಶಯ ಪಡಬೇಡ. ಈ ದೇಹದಿಂದ ಜಗತ್ತಿಗೆ ಏನು ಉಪಕಾರವಾಗಬೇಕಾಗಿದೆ. ನೋಡು, ಇದೀಗ ಹಾಸಿಗೆ ಬಿಟ್ಟು ಏಳಲಾರದು. ನಿಮ್ಮೆಲ್ಲರ ಸೇವೆಯನ್ನು, ಅದು ಮಾಡಲಾರದು. ಆದ್ದರಿಂದ ಶ್ರೀರಾಮಕೃಷ್ಣರು ದಯೆದೋರಿ ಈ ಶರೀರವನ್ನು ಪಂಚಭೂತಗಳಲ್ಲಿ ಕೂಡಿಸುತ್ತಿದ್ದಾರೆ" ಎಂದು ನುಡಿದರು. ಆಮೇಲೆ ಕ್ಷೀಣ ಕಂಠದಿಂದ "ಮನಸ್ಸೇ, ಈ ದೇಹ, ಈ ದುಃಖ, ಈ ವೇದನೆ ಇವೆಲ್ಲವುಗಳ ಪರಿವೆ ನಿನಗೆ ಬೇಡ. ನೀನು ಯಾವಾಗಲೂ ಆತ್ಮಾನಂದದಲ್ಲಿ ಮಗ್ನನಾಗು'' ಎಂದು ಅಂದರು. ಆ ಮೇಲೆ ಪುನಃ "ಈ ದೇಹದ ಬಗ್ಗೆ ಚಿಂತಿಸಬೇಡಿರಿ. ಈ ಎಲುಬಿನ ಹಂದರದ ಬಗ್ಗೆ ಆಷ್ಟೇಕೆ ಆಸ್ಥೆ? ಜಗದಂಬೆಯ ನಾಮಸ್ಮರಣೆ ಮಾಡಿರಿ. ಶ್ರೀರಾಮಕೃಷ್ಣ ಕೀರ್ತನೆಯನ್ನು ಮಾಡಿರಿ. ಭವರೋಗಕ್ಕೆ ಇದೇ ಪರಮೌಷಧ" ಎಂದು ನುಡಿದರು ಆ ಮೇಲೆ ಶರಚ್ಚಂದ್ರರು "ಆಮಾಯ ದೇ ಮಾ ಪಾಗಲ ಕರೆ, ಆರ ಕಾಜ ನೇ ಇ ಮಾ ಜ್ಞಾನ ವಿಚಾರೆ'' (ತಾಯಿ, ನಿನ್ನ ಪ್ರೇಮದಿಂದ ನನ್ನನ್ನು ಹುಚ್ಚನನ್ನಾಗಿ ಮಾಡು. ನನಗೇನೂ ಜ್ಞಾನ ಬೇಡ,) ಎಂಬ ಹಾಡನ್ನು ಹಾಡಿದರು. ಹಾಡ ಹಾಡುತ್ತ ತನ್ಮಯತೆಯಿಂದ ಮೈಮರೆತರು. ಅಷ್ಟರಲ್ಲಿ ನಾಗಮಹಾಶಯರ ಪತ್ನಿಯ ಕೂಗಿನಿಂದ ಅವರಿಗೆ ಎಚ್ಚರಾಯಿತು. ನೋಡಲಾಗಿ ನಾಗಮಹಾಶಯರು ಹಾಸಿಗೆಯಿಂದ

ಎದ್ದು ಕುಳಿತಿದ್ದರು. ಅವರ ದೃಷ್ಟಿಯು ನಾಸಿಕಾಗ್ರದಲ್ಲಿ ಸ್ಥಿರವಾಗಿತ್ತು; ಕಣ್ಣುಗಳಿಂದ ಪ್ರೇಮಾಶ್ರುಗಳು ಸೂಸುತ್ತಿದ್ದವು! ಹಾಡು ಕೇಳಕೇಳುತ್ತ ನಾಗಮಹಾಶಯರು ಸಮಾಧಿಮಗ್ನರಾಗಿದ್ದರು. ಅವರು ಯಾವಾಗ ಎದ್ದು ಕುಳಿತರೆಂಬುದರ ಅರಿವು ಶರಚ್ಚಂದ್ರರಿಗೆ ಇದ್ದಿಲ್ಲ. ಈ ದಿನಗಳಲ್ಲಿ ನಾಗಮಹಾಶಯರಿಗೆ ಎರಡಸೆಯವರ ಸಹಾಯವಿಲ್ಲದೆ ಮಗ್ಗಲು ಆಗಲು ಸಹ ಬರುತ್ತಿದ್ದಿಲ್ಲ! ಹೀಗೆ ಆವೇಶದಲ್ಲಿ ಎದ್ದು ಕುಳಿತದ್ದರಿಂದ ನಾಗ ಮಹಾಶಯರ ಪ್ರಕೃತಿಯ ಮೇಲೆ ಎಲ್ಲಿ ದುಷ್ಪರಿಣಾಮವಾಗುವದೋ ಏನೋ ಎಂದು ಶರಚ್ಚಂದ್ರರೂ ನಾಗಮಹಾಶಯರ ಪತ್ನಿಯೂ ಗಾಬರಿ ಯಾದರು. ಆ ಮೇಲೆ ಅವರಿಬ್ಬರೂ ಕೂಡಿ ಸಾವಕಾಶವಾಗಿ ನಾಗಮಹಾ ಶಯರನ್ನು ಮಲಗಿಸಿದರು. ತುಸುಹೊತ್ತಿನಮೇಲೆ ನಾಗಮಹಾಶಯರ ಸಮಾಧಿ ಇಳಿಯಿತು. ಆಗಲೂ ಅವರು "ಆ ಮಾಯ ದೇ ಮಾ ಪಾಗಲ ಕರೆ" ಎಂಬುದಾಗಿ ಗುಣುಗುಣುತ್ತಿದ್ದರು.

ಶರಚ್ಚಂದ್ರರೊಂದು ಸಾರೆ ಅತ್ಯಂತ ಹೃದಯಾವೇಶದೊಡನೆ ನಾಗ ಮಹಾಶಯರಿಗೆ "ನನ್ನ ಮೇಲೆ ಅನುಗ್ರಹ ಮಾಡಿರಿ. ನೀವಿಲ್ಲದಾಿದ ಮೇಲೆ ನಾನು ಯಾರನ್ನು ಅವಲಂಬಿಸಲಿ?" ಎಂದರು. ಆಗ ನಾಗ ಮಹಾಶಯರು ಅಭಯ ನೀಡಿ "ಅದಕ್ಕೇಕೆ ಅಷ್ಟು ಭಯ? ಭಗವಾನ್ ಶ್ರೀರಾಮಕೃಷ್ಣ' ಅಡಿದಾವರೆಗಳನ್ನು ನೀವು ಆಶ್ರಯಿಸಿರುವಿರೆಂದ ಮೇಲೆ ಅವರು ನಿಮ್ಮ ಮೇಲೆ ನಿಶ್ಚಯವಾಗಿ ಅನುಗ್ರಹಮಾಡುವರು. ದೇವರನ್ನು ನಿಜವಾಗಿಯೂ ಬಯಸುವವರು ಆತನನ್ನು ಕಂಡೇ ಕಾಣುವರು" ಎಂದು ನುಡಿದರು.

ಸ್ವಾಮೀ ಶಾರದಾನಂದರು ಆಗ ಶ್ರೀರಾಮಕೃಷ್ಣ ಮಿಶನ್ನಿನ ಕೆಲಸ ಕ್ಕಾಗಿ ಡಾಕಾಕ್ಕೆ ಬಂದಿದ್ದರು. ಅಲ್ಲಿಂದ ಅವರು ದೇವಭೋಗಕ್ಕೆ ನಾಗ ಮಹಾಶಯರನ್ನು ಕಾಣಲು ಮೇಲಿಂದ ಮೇಲೆ ಬರುತ್ತಿದ್ದರು. ಮತ್ತು ನಾಗಮಹಾಶಯರ ಪಥ್ಯ, ಶುಶ್ರೂಷೆ ಮೊದಲಾದ ವಿಷಯಗಳ ಬಗ್ಗೆ ಅನೇಕ ಸಲಹೆಗಳನ್ನು ಕೊಡುತ್ತಿದ್ದರು. ಶಾರದಾನಂದರು ಬಹು ಮನೋ ಹರವಾಗಿ ಹಾಡುತ್ತಿದ್ದರು. ಶ್ರೀರಾಮಕೃಷ್ಣರಿಗೆ ವಿಶೇಷಪ್ರಿಯವಾದ ಕೆಲ ಹಾಡುಗಳನ್ನು ಹಾಡಲು ನಾಗಮಹಾಶಯರು ಶಾರದಾನಂದರಿಗೆ ಹೇಳಿ

ದರು. ಅವರು ಮೂರು ಹಾಡುಗಳನ್ನು ಹಾಡಿದರು. ನಾಗಮಹಾಶಯರು ಹಾಡುಗಳನ್ನು ಕೇಳುತ್ತ ಸಮಾಧಿಸ್ಥರಾದರು. ಆ ಮೇಲೆ ಸ್ವಾಮಿಜಿಯವರ ಹೇಳಿಕೆಯಂತೆ ನಾಗಮಹಾಶಯರ ಕಿವಿಯಲ್ಲಿ ದೇವಿಯ ನಾಮವನ್ನುಚ್ಚರಿಸಲು ಅವರ ಸಮಾಧಿಯ ಭಂಗವಾಯಿತು.

ಮಹಾ ಸಮಾಧಿಯ ಮೊದಲು, ನಾಗಮಹಾಶಯರು ಕಾಲೀಮಾತೆಯನ್ನು ಪೂಜಿಸುವ ಇಚ್ಛೆಯನ್ನರುಹಿದರು. ದಿನವು ನಿರ್ಧರಿತವಾಯಿತು. ಪೂಜಾ ಸಾಮಗ್ರಿಯೂ ಸಿದ್ಧವಾಯಿತು. ದೇವಿಯ ಮೂರ್ತಿಯೂ ತರಲ್ಪಟ್ಟಿತು. ಆಗ ಸ್ವಾಮೀ ಶಾರದಾನಂದರು "ಸದ್ಯದ ಅಶಕ್ತಸ್ಥಿತಿಯಲ್ಲಿ ನಾಗಮಹಾಶಯರು ಎದ್ದು ದೇವಿಯ ಪ್ರತಿಮೆಯನ್ನು ನೋಡಲಾರರು. ಆದ್ದರಿಂದ ಅದನ್ನು ಅವರೆದುರಿಗೆ ತನ್ನಿರಿ. ನಾಗಮಹಾಶಯರು ಅದನ್ನು ನೋಡಿದಮೇಲೆ ಅದನ್ನು ಪೂಜೆಗಾಗಿ ಮಂಟಪದಲ್ಲಿ ಇಡಿರಿ" ಎಂದು ಹೇಳಿದರು. ಆ ಪ್ರಕಾರ ಪ್ರತಿಮೆಯು ನಾಗಮಹಾಶಯರೆದುರಿಗೆ ತರಲ್ಪಟ್ಟಿತು. ಆಗ ಭಕ್ತನೊಬ್ಬನು "ಸ್ವಾಮೀ, ತಾವು ಪೂಜಿಸಬೇಕೆನ್ನುತ್ತಿದ್ದ ದೇವಿಯ ಪ್ರತಿಮೆಯನ್ನು ತಂದಿರುವೆವು" ಎಂದು ನುಡಿದನು ನಾಗಮಹಾಶಯರಾಗ ಕಣ್ಣು ಮುಚ್ಚಿ ಮಲಗಿಕೊಂಡಿದ್ದರು. ಅವರು ಕಣ್ಣು ತೆರೆದು ದೇವಿಯ ಮೂರ್ತಿಯನ್ನು ನೋಡಿದ ಕೂಡಲೆ ಬಾಹ್ಯಸಂಜ್ಞೆಯ ಲೋಪವಾಗಿ ಅವರು "ತಾಯಿ ತಾಯಿ" ಎನ್ನುತ್ತ ಗಭೀರವಾದ ಸಮಾಧಿಮಗ್ನರಾದರು. ದೇವಿಯ ನಾಮೋಚ್ಚರಣೆಯನ್ನು ಕಿವಿಯಲ್ಲಿ ಮಾಡಿದರು; ಆದರೆ ಈ ಸಾರೆ ಅವರು ಪೂರ್ವಸ್ಥಿತಿಗೆ ಬರಲಿಲ್ಲ. ನಾಡಿಯು ನಿಂತಿತ್ತು. ಹೃದಯದ ಸ್ಪಂದನವೂ ನಿಂತಿತ್ತು. ನಾಗಮಹಾಶಯರ ಹೆಂಡತಿಯು "ಅವರು ದೇವಿಯ ಪೂಜೆ ಮಾಡುವ ನೆವದಿಂದ ನಮ್ಮೆಲ್ಲರನ್ನೂ ತೊಲಗಿಹೋದರು" ಎಂದು ಅಳಹತ್ತಿದಳು. ಆಗ ಸ್ವಾಮೀ ಶಾರದಾನಂದರು "ಭಯಪಡಬೇಡರಿ; ಅವರ ಸಮಾಧಿಯು ತುಸು ಹೊತ್ತಿನಲ್ಲಿಯೇ ಇಳಿಯುವದು" ಎಂದು ಸಮಾಧಾನಪಡಿಸಿದರು. ಎರಡು ತಾಸುಗಳು ಈ ಪ್ರಕಾರ ಕಳೆದವು; ಅಕಸ್ಮಿಕವಾಗಿ ನಾಗಮಹಾಶಯರು ಇಂದ್ರಿಯ ಜಗತ್ತಿಗೆ ಬಂದದ್ದು ಕಂಡುಬಂದಿತು. ಆಗ ನಾಗಮಹಾಶಯರು "ತಾಯಿ, ಆನಂದಮಯೀ" ಎಂದು ನುಡಿಯುತ್ತಿದ್ದರು.

ಆ ಮೇಲೆ ನಾಗಮಹಾಶಯರು "ದೇವಿಯ ಪೂಜೆಯಾಯಿತೆ?" ಎಂದು ಕೇಳಿದರು. ಅದಕ್ಕೆ ಭಕ್ತನೊಬ್ಬನು ಮೂರ್ತಿಯನ್ನು ತಮ್ಮ ಮುಂದೆ ಇರಿಸಿರುವೆವು. ತಮ್ಮ ಅಪ್ಪಣೆಯಾದಮೇಲೆ ಅದನ್ನು ಮಂಟಪಕ್ಕೆ ಒಯ್ದು ಪೂಜಿಸುವೆವು" ಎಂದು ನುಡಿದನು. ನಾಗಮಹಾಶಯರು ಒಪ್ಪಿದಮೇಲೆ ಶಾಸ್ತ್ರಾನುಸಾರವಾಗಿ ಪೂಜೆಯಾಯಿತು.

ಮರುದಿನ ಮುಂಜಾನೆ ಶರಚ್ಚಂದ್ರರು ನಾಗಮಹಾಶಯರೆದುರಿಗೆ "ನಿನ್ನಿನ ನಿಮ್ಮ ಅವಸ್ಥೆಯನ್ನು ನೋಡಿ ನೀವು ತಿರುಗಿ ಜೀವಂತರಾಗುವಿರೆಂಬ ಆಶೆ ನಮಗಿದ್ದಿಲ್ಲ" ಎಂದು ನುಡಿದರು. ಆಗ ನಾಗಮಹಾಶಯರು ಮೆಲುದನಿಯಲ್ಲಿ "ಪ್ರಾರಬ್ಧವು ತೀರದ ಹೊರತು ದೇಹವು ಅಳಿಯದು" ಎಂದರು.

ದೇವಿಯ ಪೂಜೆಯಾದ ಬಳಿಕ, ಇನ್ನು ದೇವಿಯು ನಾಗಮಹಾಶಯರನ್ನು ಉಳಿಸುವಳೆಂದು ಎಲ್ಲರೂ ಭಾವಿಸಿದರು. ಆದರೆ ನಾಗಮಹಾಶಯರ ಮಾತುಗಳಿಂದ ಅವರ ಪೂಜೆಯ ಉದ್ದೇಶವು ಕಡೆಗೆ ಹೊಳೆಯಿತು. ನಾಗಮಹಾಶಯರೆಂದರು, "ದಯಾನಿಧಿಯಾದ ದೇವಿಯಿಲ್ಲಿ ಬಂದಿರುವಳು; ಈ ಎಲುವಿನ ಹಂದರವನ್ನು ರಕ್ಷಿಸಲು ಅಲ್ಲ, ಇಲ್ಲಿಗೆ ಬಂದ ನನ್ನ ಹಿತೈಷಿಗಳನ್ನು ಎಲ್ಲ ಸಂಕಟಗಳಿಂದ ಎಲ್ಲ ವಿಪತ್ತುಗಳಿಂದ ಸಂರಕ್ಷಿಸಲು ದೇವಿಯು ನಿಮ್ಮೆಲ್ಲರ ಮೇಲೆ ಕೃಪಾ ದೃಷ್ಟಿಯನ್ನು ಸುರಿಸಲಿ" ಮರುದಿನ ಶ್ರೀ ರಾಮಕೃಷ್ಣರ ವಿಷಯವಾಗಿ ಮಾತು ನಡೆದಾಗ "ಶ್ರೀರಾಮಕೃಷ್ಣರ ಚರಣಗಳಲ್ಲಿ ನೀವು ಅಚಲವಾದ ನಿಷ್ಠೆಯನ್ನಿಡಿರಿ. ನಾನು ಮೂರ್ಖ, ದುರ್ಬಲನೆಂದು ತಿಳಿದು ಗುರುದೇವನು ನನ್ನ ಮೇಲೆ ಅನುಗ್ರಹಮಾಡಿದ್ದಾನೆ' ಎಂದು ನಾಗಮಹಾಶಯರು ನುಡಿದು 'ಜಯ ರಾಮಕೃಷ್ಣ' ಎಂದೆನ್ನುತ್ತ ಶ್ರೀರಾಮಕೃಷ್ಣರಿಗೆ ನಮಸ್ಕರಿಸತೊಡಗಿದರು.

ಪಿತೃಶ್ರಾದ್ಧದ ವೆಚ್ಚಕ್ಕಾಗಿ ನಾಗಮಹಾಶಯರು ತಮ್ಮ ಮನೆಯನ್ನು ಒತ್ತೆಹಾಕಿ ಒಬ್ಬ ಗೃಹಸ್ಥನ ಕಡೆಯಿಂದ ಸಾಲವನ್ನು ತಂದಿದ್ದರು. ಆ ಗೃಹಸ್ಥನು ಮಾರನೆಯ ದಿನ ನಾಗಮಹಾಶಯರ ಮನೆಗೆ ಅವರ ದರ್ಶನಕ್ಕಾಗಿ ಬಂದನು. ನಾಗಮಹಾಶಯರು ಕೈಜೋಡಿಸಿ "ತಮ್ಮ ಸಾಲವನ್ನು ನನಗೆ ತೀರಿಸುವದಾಗುವದಿಲ್ಲ. ಈ ದೇಹವು

ಇನ್ನೇನು ಬಹಳ ದಿನ ಬದುಕುವದಿಲ್ಲ. ತಮ್ಮ ಔದಾರ್ಯದ ಮೂಲಕ ನನಗೆ ಪಿತೃಶ್ರಾದ್ಧವನ್ನು ಮಾಡಲು ಸಾಧ್ಯವಾಯಿತು. ಆದರೆ ತಾವೇನೂ ಚಿಂತಿಸಬೇಡಿರಿ ನನ್ನ ಮರಣನಂತರ ಈ ಮನೆಯನ್ನು ತಾವು ತೆಗೆದು ಕೊಳ್ಳಬಹುದು. ನನ್ನ ಹೆಂಡತಿಯು ತನ್ನ ತವರ್ಮನೆಯಲ್ಲಿರುವಳು'' ಎಂದು ಅವನಿಗೆ ಹೇಳಿದರು. ನಾಗಮಹಾಶಯರ ಮಾತನ್ನು ಕೇಳಿ ಆ ಗೃಹಸ್ಥನಿಗೆ ಬಹಳ ವಿಷಾದವೆನಿಸಿತು. ಅವನು 'ಸ್ವಾಮಿ, ತಾವು ಸಾಲದ ಬಗ್ಗೆ ಚಿಂತಿಸಬೇಡಿರಿ. ನಾನಿಲ್ಲಿಗೆ ಅದಕ್ಕಾಗಿ ಬಂದಿಲ್ಲ, ತಮ್ಮ ದರ್ಶನ ಕ್ಕಾಗಿ ಬಂದಿರುವೆನು. '' ಎಂದು ನುಡಿದನು. ''ಇದೆಲ್ಲವೂ ಪರಮಾ ತ್ಮನ ದಯೆ'' ಎಂದು ನುಡಿದು ನಾಗಮಹಾಶಯರು ತುಸುಹೊತ್ತು ಕಣ್ಣು ಮುಚ್ಚಿಕೊಂಡಿದ್ದರು.

ಈ ಗೃಹಸ್ಥನು ಹೋದ ಮೂರು ತಾಸುಗಳ ಬಳಿಕ ನಾಗಮಹಾಶ ಯರ ಅವಸ್ಥೆಯಲ್ಲಿ ಆಕಸ್ಮಿಕವಾದ ಪರಿವರ್ತನೆಯು ಕಂಡುಬಂದಿತು. ಹಾಸಿಗೆಯಮೇಲೆ ಹೊರಳಾಡುತ್ತ ಏನೇನೋ ಬಡಬಡಿಸಹತ್ತಿದರು. ಆಗ ಅತಿಶಯವಾಗಿ ಚಳಿ ಬಿದ್ದಿತ್ತು; ಮತ್ತೆ ಎರಡು ಬೀಸಣಿಕೆಗಳಿಂದ ಬೀಸುತ್ತಿ ದ್ದರೂ ಅವರಿಗೆ ಸಮಾಧಾನವಾಗದಾಯಿತು. ಹಾಸಿಗೆಯಿಂದ ಏಳಬೇ ಕೆಂದರು. ಆ ಪ್ರಕಾರ ಎಬ್ಬಿಸಿ ಕುಳ್ಳಿರಿಸಿದರು; ಪುನಃ ಮಲಗಿಸಿದರು. ಆ ಮೇಲೆನಾಗಮಹಾಶಯರು ಕೆಲಹೊತ್ತು ಸುಮ್ಮನಿದ್ದರು. ಪುನಃ ಬಡಬಡಿ ಸಹತ್ತಿದರು. ಒಮ್ಮಿಂದೊಮ್ಮೆ ನಾಗಮಹಾಶಯರು 'ಉಳಿಸು, ಉಳಿಸು' ಎಂದು ಕೂಗಹತ್ತಿದರು. ಅವರ ಹೆಂಡತಿಯು ಅಳುತ್ತ 'ಮರಣಕಾಲ ದಲ್ಲಿ ಮೋಹವು ನನ್ನ ಮೇಲೆ ಎಳ್ಳಷ್ಟೂ ಪರಿಣಾಮಮಾಡಲಾರದೆಂದು ನೀವು ಅಂದಿದ್ದಿರಲ್ಲವೇ ? ಅದೇಕೆ ನೀವು ಈಗ ಹೀಗೆ ಮಾಡುತ್ತಿರುವಿರಿ?'' ಎಂದು ನುಡಿದಳು. ಸುಮಾರು ಅರ್ಧತಾಸಿನ ಮೇಲೆ ನಾಗಮಹಾಶ ಯರು ಸ್ವಸ್ಥರಾದರು; ಹಾಗೂ ಅವರಿಗೆ ನಿದ್ದೆ ಬರಹತ್ತಿತು

ನಾಗಮಹಾಶಯರ ಈ ಕ್ಷಣಿಕ ವಿಭ್ರಮದ ವಿಷಯವಾಗಿ ಸ್ವಾಮೀ ವಿವೇಕಾನಂದರು ಶರಚ್ಚಂದ್ರರಿಗೆ ಹೀಗೆ ಹೇಳಿದರು, ''ನೀವು ಆಗ ಅವರ ಬಾಹ್ಯರೂಪವನ್ನಷ್ಟೇ ನೋಡಿದಿರಿ. ಅವರ ಒಳಗೆ ಏನು ನಡೆದಿತ್ತೆಂಬುದು ನಿಮಗೆ ಗೊತ್ತಾಗಲಿಲ್ಲ. ಒಳಗೆ ಅವರು ಪೂರ್ಣ ಪ್ರಜ್ಞರಾಗಿದ್ದರು.

ಗಿದ್ದರು. ಶರೀರಧಾರಣೆಯನ್ನು ಮಾಡಿದಮೇಲೆ ಶರೀರ ಧರ್ಮವಿರಲಿಕ್ಕೇ ಬೇಕು. ಅನೇಕ ಮಹಾಪುರುಷರಲ್ಲಿ ಸಹ ಈ ದುರ್ಬಲತೆಯು ಕಂಡು ಬಂದಿದೆ. ಇದರಿಂದ ನಾಗಮಹಾಶಯರ ಯೋಗ್ಯತೆಯೇನೂ ಕುಂದುವ ದಿಲ್ಲ. ಅವರು ನಿಜವಾಗಿಯೂ ಜೀವನ್ಮುಕ್ತರೇ. ಮೇಲಾಗಿ ಅವರು ಯಾವ ಅರ್ಥದಿಂದ 'ಉಳಿಸು, ಉಳಿಸು' ಎಂದು ಅಂದರೆಂಬುದನ್ನು ನಿಶ್ಚಿತವಾಗಿ ಹೇಳಲಿಕ್ಕೆ ಬರುವಂತಿಲ್ಲ. ಈ ಅನಿತ್ಯ ದೇಹವನ್ನು ಬಿಟ್ಟು ಸ್ವಸ್ವರೂಪದಲ್ಲಿ ಇರಬೇಕೆಂಬ ಉದ್ವೇಗವೇ ಇಂಥ ಮಾತಿನ ಕಾರಣವಾಗಿರಬಹುದು.''

ಗಿರೀಶಚಂದ್ರ ಘೋಷರು ಹೀಗೆ ನುಡಿದರು— ಶ್ರೀ. ರಾಮಕೃಷ್ಣರ ಯಾವ ಪ್ರಮುಖ ಭಕ್ತನೂ ಕೈವಲ್ಯ ಮುಕ್ತಿಯನ್ನಪೇಕ್ಷಿಸುವದಿಲ್ಲ; ಅವರ ಆಕಾಂಕ್ಷೆ ಇದ್ದರೂ ಕೂಡ ಅವರಿಗೆ ಅಂಥ ಮುಕ್ತಿಯಾಗುವದಿಲ್ಲ. ಏಕೆಂದರೆ ಭಗವಂತನು ಧರ್ಮೋದ್ಧಾರಕ್ಕಾಗಿ ಮೇಲಿಂದ ಮೇಲೆ ಅವತರಿಸುತ್ತಾನಷ್ಟೆ; ಆಗ ಅವರ ಲೀಲೆಯಲ್ಲಿ ಭಾಗಿಗಳಾಗಲು ಈ ಸಿದ್ಧಪುರುಷರೂ ಜನ್ಮಗ್ರಹಣ ಮಾಡಬೇಕಾಗುತ್ತದೆ. ನಾಗಮಹಾಶಯರಲ್ಲಿ ಸಂಸಾರದ ಬಗ್ಗೆ ಇನಿಸಾದರೂ ಆಕರ್ಷಣೆಯಿದ್ದಿಲ್ಲ. ಮಾಯಾಮುಕ್ತ ನಾಗಮಹಾಶಯರಿಗೆ ತುಸುವಾದರೂ ಜೀವನದ ಬಗ್ಗೆ ಆಸೆಯಿರದಿದ್ದರೆ ಅವರು, ಪ್ರತ್ಯಕ್ಷ ಪರಮಾತ್ಮನೇ ಅವತರಿಸುವಾಗ ಅವನ ಲೀಲಾಭಾಗಿಗಳಾಗಲು ಹೇಗೆ ಜನ್ಮಗ್ರಹಣ ಮಾಡಬಹುದಾಗಿತ್ತು? ಅದಕ್ಕಾಗಿಯೇ ನಾಗಮಹಾಶಯರು ಪುನಃ ನರಶರೀರಧಾರಣದ ಸಾಮಾನ್ಯ ವಾಸನೆಯನ್ನಿಟ್ಟುಕೊಂಡು ದೇಹತ್ಯಾಗ ಮಾಡಿದರು. ಅರ್ಥಾತ್ ಈ ವಾಸನೆಯು ಕೇವಲ ಪರಮಾತ್ಮನ ಲೀಲೆಯಲ್ಲಿ ಮತ್ತಿಷ್ಟು ವಿವಿಧತೆಯನ್ನು ತರಲು ಕಾರಣವಾಗುವದು; ಆದರೆ ಇಂಥ ವಿಭ್ರಮವು ಮೃತ್ಯುವಿನ ವರೆಗೆ ಮತ್ತೆಂದಿಗೂ ಆಗಲಿಲ್ಲ.

ಮಹಾಸಮಾಧಿಯ ಮೂರು ದಿನ ಮೊದಲು ನಾಗಮಹಾಶಯರು ಶರಚ್ಚಂದ್ರರಿಗೆ ಪಂಚಾಂಗವನ್ನು ನೋಡಿ ಪ್ರಯಾಣದ ಒಂದು ಶುಭ ಮುಹೂರ್ತವನ್ನು ತೆಗೆದಿಡಲು ಹೇಳಿದರು. ಯಾವ ಉದ್ದೇಶದಿಂದ ನಾಗಮಹಾಶಯರು ಈ ಮುಹೂರ್ತವನ್ನು ನೋಡಲು ಹೇಳಿದರೆಂಬುದು ಶರ

ಚ್ಚಂದ್ರರಿಗೆ ಹೋಗಲಿಲ್ಲ. ಹೀಗಾಗಿ ಅವರು ಸಹಜಭಾವದಿಂದ ''ಪುಷ್ಯ ತ್ರಯೋದಶಿಯ ದಿನ ಮುಂಜಾನೆ ೧೦ ಗಂಟೆಯ ಮೇಲೆ '' ಮುಹೂರ್ತ ಚನ್ನಾಗಿದೆ'' ಎಂದು ನುಡಿದರು. ಆಗ ನಾಗಮಹಾಶಯರು, ''ಹಾಗಾದರೆ ಅಪ್ಪಣೆ ಕೊಡಿರಿ. ನಾನು ಅಂದು ಮಹಾ ಪ್ರಯಾಣವನ್ನು ಬೆಳೆಸುವೆನು'' ಎಂದು ನುಡಿದ ಕೂಡಲೇ ಶರಚ್ಚಂದ್ರರು ಸ್ತಂಭಿತರಾದರು. ಅತಿಶಯ ವ್ಯಾಕುಲರಾಗಿ ಶರಚ್ಚಂದ್ರರು ನಾಗಮಹಾಶಯರ ಹೆಂಡತಿಯ ಎದುರಿಗೆ ಎಲ್ಲವನ್ನೂ ಹೇಳಿದರು. ಆಗ ಅವಳು ''ಅಯ್ಯೋ, ಇನ್ನು ಅತ್ತು ಫಲವೇನು? ಅವರೇನು ಇನ್ನು ಬದುಕುವದಿಲ್ಲ. ಅವರ ಇಚ್ಛೆ ಇದ್ದಂತೆ ಆಗಲಿ. ಶ್ರೀ ರಾಮಕೃಷ್ಣರ ಇಚ್ಛೆಯಂತೆ ಆಗಲಿ'' ಎಂದು ನುಡಿದಳು.

ಮುಹೂರ್ತವನ್ನು ನಿಶ್ಚಯಿಸಿ ನಾಗಮಹಾಶಯರು ನಿಶ್ಚಿಂತರಾದರು. ಮೃತ್ಯುವಿನ ಎರಡು ದಿನ ಮೊದಲು ನಾಗಮಹಾಶಯರ ಹೆಂಡತಿಯೂ, ಹರಪ್ರಸನ್ನರೂ ಶರಚ್ಚಂದ್ರರೂ ನಾಗಮಹಾಶಯರ ಹಾಸಿಗೆಯ ಬಳಿಯಲ್ಲಿ ಕುಳಿತಿದ್ದರು. ಆಗ ನಾಗಮಹಾಶಯರು ಕಣ್ಣು ಮುಚ್ಚಿಯೇ ಮಲಗಿಕೊಂಡಿದ್ದರು. ಆಮೇಲೆ ಒಮ್ಮೆಲೆ ಕಣ್ತೆರೆದು ಅತ್ತಿತ್ತ ನೋಡುತ ''ಶ್ರೀ ರಾಮಕೃಷ್ಣರು ಬಂದಿದ್ದಾರೆ; ಅವರು ಈದಿನ ನನಗೆ ಎಲ್ಲ ಕ್ಷೇತ್ರಗಳನ್ನೂ ತೋರಿಸಿರುವರು'' ಎಂದು ನುಡಿದರು. ಆಮೇಲೆ ಶರಚ್ಚಂದ್ರರ ಕಡೆಗೆ ನೋಡಿ ಅವರಿಗೆ ''ಎಲ್ಲ ಕ್ಷೇತ್ರಗಳ ಹೆಸರು ತೆಗೆದುಕೊಳ್ಳಿರಿ, ನಾನವುಗಳನ್ನು ನೋಡುವೆನು'' ಎಂದು ಹೇಳಿದರು. ಶರಚ್ಚಂದ್ರರು ಆದೇ ಹರಿದ್ವಾರಕ್ಕೆ ಹೋಗಿಬಂದಿದ್ದರು. ಅವರು ಮೊದಲು ಹರಿದ್ವಾರದ ಹೆಸರನ್ನು ತೆಗೆದುಕೊಂಡರು. ಕೂಡಲೇ ನಾಗಮಹಾಶಯರು ಉತ್ತೇಜಿತ ಸ್ವರದಿಂದ ''ಹರಿದ್ವಾರ, ಹರಿದ್ವಾರ! ಇಲ್ಲಿಯೇ ತಾಯಿ ಭಾಗೀರಥಿಯು ಕಲಕಲನಿನಾದ ಮಾಡುತ್ತ ಹಿಮಾಲಯದಿಂದ ಇಳಿದು ಬರುತ್ತಿರುವಳು. ದಂಡೆಯ ಮೇಲಿನ ಗಿಡಗಳು ಅವಳ ತರಂಗಗಳಲ್ಲಿ ಕುಣಿಯುವಂತೆ ಕಾಣುತ್ತವೆ! ಅದೋ ಆಚೆಯ ಬದಿಗೆ ಚಂಡೀ ಪರ್ವತವು ಕಾಣುತ್ತಿದೆ. ಎಂಥ ಸುಂದರ ಘಾಟವಿದು! ಘಟ್ಟಗಳ ಸಾಲುಗಳು ಹಾಗೆಯೇ ನದಿಯ ಒಳಗೆ ಇಳಿದಿವೆ. ಸ್ವಲ್ಪ ತಡೆಯಿರಿ. ಇಪ್ಪತ್ತು ವರ್ಷಗಳಿಂದ ನಾನು ಸ್ನಾನ ಮಾಡಿಲ್ಲ. ನಾನೊಮ್ಮೆ ನದಿಯಲ್ಲಿ ಸ್ನಾನಮಾಡಿ ನನ್ನ ಜನ್ಮವನ್ನು

ಸಫಲ ಮಾಡಿಕೊಳ್ಳುವೆನು,'' ಎಂದು ನುಡಿದರು. ಆಮೇಲೆ ಮತ್ತೆ ''ಜಯ ಗಂಗೆ, ಪತಿತ ಪಾವನಿ, ಅಘನಿವಾರಿಣಿ......'' ಎಂದೆನ್ನುತ್ತ ಆಳವಾದ ಸಮಾಧಿಯಲ್ಲಿ ಮಗ್ನರಾದರು. ಅವರ ಸಮಾಧಿ ಇಳಿದ ಮೇಲೆ ಅದರು ನಿಜವಾಗಿಯೂ ಸ್ನಾನಮಾಡಿ ಬಂದಿರುವರೆಂದು ಎಲ್ಲರಿಗೂ ಅನಿಸಿತು

ಶರಚ್ಚಂದ್ರರು ಆ ಮೇಲೆ ಪ್ರಯಾಗವನ್ನು ಸೂಚಿಸಿದರು. ಆಗ ನಾಗಮಹಾಶಯರು "ಜಯ ಗಂಗೆ, ಜಯ ಯಮುನೆ" ಎಂದೆನ್ನುತ್ತ ನಮಸ್ಕರಿಸಹತ್ತಿದರು. ಆ ಮೇಲೆ "ಭಾರದ್ವಾಜ ಆಶ್ರಮವು ಇಲ್ಲಿಯೇ ಇರುವದಲ್ಲವೇ? ಆದರೆ ಅದೆಲ್ಲಿ ಕಾಣಬರುವದಿಲ್ಲವಲ್ಲ! ಗಂಗಾ-ಯಮುನೆಗಳ ಸಂಗಮವು ನನಗೆ ಕಾಣುತ್ತಿದೆ. ಅಲ್ಲಿ ಗುಡ್ಡಗಳ ಸಾಲು ಕಾಣುತ್ತಿದೆ. ಆದರೆ ಗುರುದೇವನು ಭರದ್ವಾಜರ ಆಶ್ರಮವನ್ನು ತೋರಿಸಲೊಲ್ಲನಲ್ಲ'' ಎಂದು ನುಡಿದರು. ಆ ಮೇಲೆ ತುಸು ಹೊತ್ತು ನಾಗಮಹಾಶಯರು ತಂದ್ರಾ ಮಗ್ನರಾಗಿದ್ದರು. ಎರಡು ಮೂರು ಮಿನಿಟುಗಳ ನಂತರ "ಹಾ, ಈ ಸಾರೆ ಆಶ್ರಮವು ಕಾಣುತ್ತಿದೆ'' ಎಂದು ನುಡಿದರು. ಆ ಮೇಲೆ ಸ್ವಲ್ಪ ಹೊತ್ತು ಸುಮ್ಮನಿದ್ದು ನುಡಿಯಹತ್ತಿದರು. "ತಾಯೀ ನೀನು ರಾಜ ರಾಜೇಶ್ವರಿಯು. ನೀನು ಮಹಾ ಶಕ್ತಿಯ ಅವತಾರಳಾಗಿದ್ದು ವನವನಗಳಲ್ಲಿ ಹೀಗೇಕೆ ಅಲೆಯುತ್ತಿರುವಿ?'' ಹೀಗೆ ಅನ್ನುತ್ತಿದ್ದಾಗ ನಾಗಮಹಾಶಯರು ಮತ್ತೆ ಸಮಾಧಿ ಮಗ್ನರಾದರು. ಸಮಾಧಿ ಭಂಗವಾದ ಮೇಲೆ ಶರಚ್ಚಂದ್ರರು ಕಾಶಿಯ ಹೆಸರನ್ನು ತೆಗೆದುಕೊಂಡರು. ನಾಗಮಹಾಶಯರು ಕೂಡಲೇ, "ಜಯ ಶಿವ, ಜಯ ಶಿವ ವಿಶ್ವೇಶ್ವರ! ಹರ ಹರ, ಬೋಮ್ ಬೋಮ್*'' ಎಂದೆನ್ನಹತ್ತಿದರು. ಆ ಬಳಿಕ ''ನಾನೀ ಸಾರೆ ಮಹಾ ಶಿವನಲ್ಲಿ ಲಯವಾಗಿ ಹೋಗುವೆನು'' ಎಂದರು ಆ ಮೇಲೆ ಜಗನ್ನಾಥ ಕ್ಷೇತ್ರದ ಹೆಸರು ತೆಗೆದುಕೊಂಡರು. ನಾಗಮಹಾಶಯರ ಅದನ್ನು ಕೇಳಿದ ಕೂಡಲೆ "ಅಹೋ ಜಗನ್ನಾಥನ ಆ ಭವ್ಯ ಮಂದಿರವು ಕಾಣುತ್ತಿದೆ! ಅಲ್ಲಿ 'ಆನಂದ ಬಾಜಾರ'ದಲ್ಲಿ ಪ್ರಸಾದವು ದೊರೆಯುತ್ತದೆ.'' ಎಂದು ನುಡಿದರು ಆಗ ನಾಗಮಹಾಶಯರು ಶ್ರೀ ಚೈತನ್ಯನ ನಾಮವನ್ನು ಒಂದೆರಡು ಬಾರಿ ಉಚ್ಚರಿಸಿದರು. ಹೀಗೆ ರಾತ್ರಿ ನಾಲ್ಕು

* ವ್ಯೋಮ

ಗಂಟೆಯವರಗೆ ನಡೆಯಿತು. ಆ ಮೇಲೆ ನಾಗಮಹಾಶಯರಿಗೆ ನಿದ್ದೆ ಬರಹತ್ತಿತು. ಮರುದಿನ ಪುಷ್ಯ ತ್ರಯೋದಶಿ ಮುಂಜಾನೆ ಎಂಟು ಗಂಟೆಯಾದರೂ ಅವರ ನಿದ್ರಾವೇಶವು ಇಳಿಯಲಿಲ್ಲ ಊರೊಳಗಿನ ಒಬ್ಬ ಡಾಕ್ಟರನನ್ನು ಕರೆಸುಕೊಂಡು ಬಂದು ನಾಗಮಹಾಶಯರಿಗೆ ಔಷಧ ಕೊಡಿಸಿದರು.

ಪುಷ್ಯ ತ್ರಯೋದಶಿಯ ದಿನ ಎಂಟು ಗಂಟೆಯ ಮೇಲಿಂದ ನಾಗ ಮಹಾಶಯರು ಪುನಃ ಪುನಃ ಭಾವ ಮಗ್ನರಾಗಹತ್ತಿದರು. ಶರಚ್ಚಂದ್ರರು ಗಟ್ಟಿಯಾಗಿ ಶ್ರೀ ರಾಮಕೃಷ್ಣರ ನಾಮವನ್ನುಚ್ಚರಿಸಹತ್ತಿದರು. ಶ್ರೀ ರಾಮಕೃಷ್ಣರ ಚಿತ್ರವು ನಾಗಮಹಾಶಯರ ಕಣ್ಣೆದುರಿಗೆ ಇಡಲ್ಪಟ್ಟಿತು; ಆಗ ಶರಚ್ಚಂದ್ರರು 'ಯಾರ ಹೆಸರಿನಿಂದ ನೀವು ಸರ್ವಸ್ವವನ್ನೂ ತ್ಯಾಗ ಮಾಡಿರುವಿರೋ ಆ ನಿಮ್ಮ ಗುರುದೇವನ ಚಿತ್ರವಿದು'' ಎಂದು ನುಡಿದರು. ನಾಗಮಹಾಶಯರು ಆ ಚಿತ್ರದ ಕಡೆಗೆ ನೋಡಿ ಕೈಮುಗಿದು "ಎಲ್ಲವೂ ನಿನ್ನ ಕೃಪೆ, ನಿನ್ನ ಅಪಾರವಾದ ಕೃಪೆ''ಯೆಂದು ಕ್ಷೀಣ ಸ್ವರದಿಂದ ನುಡಿದರು. ಇದೇ ನಾಗಮಹಾಶಯರ ಕಡೆಯ ಮಾತು.

ಮುಂಜಾನೆ ಸುಮಾರು ಒಂಬತ್ತು ಗಂಟೆಗೆ ಅಂತ್ಯ ಸಮಯದ ಎಲ್ಲ ಲಕ್ಷಣಗಳೂ ಕಾಣಹತ್ತಿದವು. ಅವರ ಕಣ್ಣುಗಳು ತುಸು ಕೆಂಪಾದವು. ತಮ್ಮಷ್ಟಕ್ಕೆ ತಾವೇ ಏನೇನೋ ಮಾತಾಡುತ್ತಿರುವರೆಂಬಂತೆ ಅವರ ತುಟಿಗಳು ನಡುಗಹತ್ತಿದವು. ಸುಮಾರು ಅರ್ಧ ತಾಸಿನ ಮೇಲೆ ಆಕಸ್ಮಿಕವಾಗಿ ಅವರ ದೃಷ್ಟಿಯು ನಾಸಿಕಾಗ್ರದಲ್ಲಿ ಸ್ಥಿರವಾಯಿತು. ಶರೀರವೆಲ್ಲ ರೋಮಾಂಚವಾಯಿತು. ಕಣ್ಣುಗಳಿಂದ ಪ್ರೇಮಾಶ್ರುಗಳು ಸುರಿಯಹತ್ತಿದವು. ಪ್ರಾಣವಾಯುವು ಹಾರಹತ್ತಿತು. ಹತ್ತು ಹೊಡೆದು ಐದು ಮಿನಿಟುಗಳ ನಂತರ ನಾಗಮಹಾಶಯರು ಮಹಾ ಸಮಾಧಿಯಲ್ಲಿ ನಿಶ್ಚಲರಾದರು. ಎಲ್ಲರಿಗೂ ಕಂಡು ಬಂದಿತು. ಆ ಮೇಲೆ ನಾಗಮಹಾಶಯರನ್ನು ಹೊರಗೆ ತೆಗೆದುಕೊಂಡು ಬಂದು ಒಂದು ಶುಭ್ರವಾದ ಹಾಸಿಗೆಯ ಮೇಲೆ ಮಲಗಿಸಿದರು. ಆಗ ಇನ್ನೂ ತುಸು ಉಸಿರು ಇತ್ತು. ಐದು ಹತ್ತು ಮಿನಿಟುಗಳ ಮೇಲೆ ಪ್ರಾಣವಾಯುವು ಪೂರ್ಣವಾಗಿ ಹಾರಿ ಹೋಯಿತು. ಜೀವನ ಲೀಲೆಯು ಅಂದಿಗೆ ಮುಗಿಯಿತು; ಇಹ ಜಗ

ತ್ತಿನಿಂದ ಅಂತರ್ಧಾನರಾದರು. ಆಗಲೂ ಅವರ ಮುಖಮಂಡಲವು ಅಪೂರ್ವ ತೇಜದಿಂದ ಬೆಳಗುತ್ತಿತ್ತು. ಅರೆಮುಚ್ಚಿದ ಕಣ್ಣುಗಳಲ್ಲಿ ಪ್ರೇಮಾಶ್ರುಗಳು ಕಾಣುತ್ತಿದ್ದವು. ಆಕಾಶವೆಲ್ಲ ಪ್ರಲಾಪದಿಂದ ತುಂಬಿ ಹೋಯಿತು. ನಾಗ ಮಹಾಶಯರ ಭಕ್ತನೊಬ್ಬನು ಅವರ ಹೆಂಡತಿಗೆ "ತಾಯಿ, ಶಾಂತರಾಗಿರಿ. ನೀವೇಕೆ ಗಾಬರಿಯಾಗುವಿರಿ? ನಾಗಮಹಾಶಯರು ಎಲ್ಲ ಭಾರವನ್ನು ನಮ್ಮ ಮೇಲೆ ಹೊರಿಸಿ ಹೋಗಿರುವರು. ನಾವೆಲ್ಲರೂ ನಿಮ್ಮ ಮಕ್ಕಳಂತಿದ್ದೇವೆ. ಧೈರ್ಯಗೆಡಬೇಡಿರಿ.'' ಎಂದು ಹೇಳಿದನು. ಶೋಕದ ಪ್ರಥಮ ವೇಗವು ಶಾಂತವಾದ ಮೇಲೆ ನಾಗ ಮಹಾಶಯರ ಹೆಂಡತಿಯ ಹೇಳಿಕೆಯಂತೆ ಭಕ್ತನೊಬ್ಬನು ತುಪ್ಪ, ಗಂಧದ ಕಟ್ಟಿಗೆ ಹಾಗೂ ದಹನ ಸಂಸ್ಕಾರಕ್ಕೆ ಬೇಕಾದ ಇತರ ಸಾಮಗ್ರಿಗಳನ್ನು ತರಲು ಪೇಟೆಗೆ ಹೋದನು

ಹಳ್ಳಿಯ ಅನುಭವಿಕ ವೃದ್ಧರು ಬಂದು ದೇಹವನ್ನು ಪರೀಕ್ಷಿಸಿ ಅದು ಇನ್ನೂ ಬೆಚ್ಚಗಿದೆಯೆಂದು ಹೇಳಿದರು. ಆಗಲೇ ದಹನ ಮಾಡಬೇಕೋ ಇಲ್ಲವೋ ಎಂಬದರ ಬಗ್ಗೆ ಅವರು ವಿಚಾರ ನಡೆಸಿದ್ದರು. ಆಗ ಶರಚ್ಚಂದ್ರರು '' ನಾಗಮಹಾಶಯರಂಥ ಮಹಾತ್ಮರ ದೇಹವನ್ನು ಹನ್ನೆರಡು ತಾಸುಗಳವರೆಗಾದರೂ ಹಾದೀ ನೋಡಿ ಆ ಮೇಲೆ ಅಗ್ನಿಸಂಸ್ಕಾರ ಮಾಡಬೇಕೆಂ '' ದು ನುಡಿದರು. ಕಡೆಗೆ ರಾತ್ರಿ ಹತ್ತು ಗಂಟೆಗೆ ಅಗ್ನಿ ಸಂಸ್ಕಾರವಾಗಬೇಕೆಂದು ನಿಶ್ಚಯವಾಯಿತು.

ನಾಗಮಹಾಶಯರ ಭಕ್ತರು ಅವರ ಫೋಟೋ ತೆಗೆದುಕೊಳ್ಳಬೇಕೆಂದು ಮಾಡಿದರು. ನಾಗಮಹಾಶಯರು ಬದುಕಿದಾಗ್ಗೆ ಅವರ ಫೋಟೋ ತೆಗೆದುಕೊಳ್ಳಹೋದರೆ ಅವರು '' ಈ ಎಲುಬಿನ ಹಂದರದ ಫೋಟೋ ತೆಗೆದುಕೊಳ್ಳಲು ಅಷ್ಟೇಕೆ ಆತುರರಾಗಿರುವಿರಿ ?' ಎಂದು ನುಡಿದು ತೆಗೆಸಿಕೊಳ್ಳಲು ಒಪ್ಪುತ್ತಿದ್ದಿಲ್ಲ. ಆದರೆ ಈಗ ಅವರು ಸುಮ್ಮನಿದ್ದುದರಿಂದ ಅವರ ದೇಹವನ್ನು ಗಂಧಪುಷ್ಪಾದಿಗಳಿಂದ ಶೃಂಗರಿಸಿ ಫೋಟೋ ತೆಗೆದುಕೊಂಡರು ಈ ಫೋಟೋದ ಆಧಾರದ ಮೇಲಿಂದ ಪ್ರಿಯನಾಥಸಿಂಹರು ಒಂದು ತೈಲ ಚಿತ್ರವನ್ನು ತಯಾರಿಸಿದರು. ಈ ಪುಸ್ತಕದಲ್ಲಿ ಕೊಟ್ಟ ಚಿತ್ರವು ಆ ತೈಲಚಿತ್ರವನ್ನನುಸರಿಸಿದೆ.

ಸೂರ್ಯಾಸ್ತವಾಗುವ ಮೊದಲು ನಾಗಮಹಾಶಯರ ವಿಧವಾ ಪತ್ನಿಯು ಅವರ ದೇಹವನ್ನು ಹೂವು ಪತ್ರಿ ಹಾಗೂ ಇತರ ಪೂಜಾದ್ರವ್ಯಗಳಿಂದ ಪೂಜಿಸಿದಳು. ಆ ಮೇಲೆ ದೇಹದ ಸುತ್ತಲೂ ಏಳು ಸಾರಿ ಪ್ರದಕ್ಷಿಣೆ ಹಾಕಿದಳು ಹಾಗೂ ಅವರ ಪಾದಗಳನ್ನು ತನ್ನ ಕೂದಲುಗಳಿಂದ ಒರಿಸಿದಳು. ಭಕ್ತರು ಆ ದೇಹವನ್ನು ಹೂಮಾಲೆಗಳಿಂದ ಭೂಷಿಸಿದರು.

ನಾಗಮಹಾಶಯರ ಮಹಾಸಮಾಧಿಯ ಸುದ್ದಿಯು ಹಳ್ಳಿಯಲ್ಲಿ ಹಬ್ಬಲು ಅವರ ಕಡೆಯ ದರ್ಶನಕ್ಕಾಗಿ ಜನರು ಹಿಂಡುಗಟ್ಟಿಕೊಂಡು ಬರಹತ್ತಿದರು. ಆಗ ಹಳ್ಳಿಯ ಪ್ರತಿಯೊಂದು ಮನೆಯೂ ದುಃಖದಿಂದ ತುಂಬಿತ್ತು.

ಹತ್ತುಗಂಟೆಯ ಮೇಲೆ ಗಂಧದ ಕಟ್ಟಿಗೆಯಿಂದ ಚಿತೆಯನ್ನು ರಚಿಸಿದ ಯಥಾಶಾಸ್ತ್ರ ಕ್ರಿಯೆಗಳಾದಮೇಲೆ ಆ ಪವಿತ್ರ ದೇಹವನ್ನು ಅಗ್ನಿಮುಖದಲ್ಲಿ ಆಹುತಿಯಾಗಿ ಕೊಟ್ಟರು. ಆ ಮೇಲೆ ಶರಚ್ಚಂದ್ರರು ವ್ಯಾಹೃತಿಹೋಮವನ್ನು ಮಾಡಿ ಬಿಲ್ವಪತ್ರಗಳನ್ನು ಅರ್ಪಿಸಿದರು. ಅಷ್ಟರಲ್ಲಿ ಸ್ವಾಮಿ ಶಾರದಾನಂದರು ಅಲ್ಲಿಗೆ ಬಂದು ಚಿತೆಯ ದಾವಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಮೂರು ತಾಸುಗಳಲ್ಲಿ ನಾಗಮಹಾಶಯರ ಮರ್ತ್ಯ ದೇಹವು ಪಂಚಭೂತಗಳಲ್ಲಿ ಕೂಡಿಹೋಯಿತು. ನಾಗಮಹಾಶಯರ ಹೆಂಡತಿಯು ಅಗ್ನಿಯನ್ನು ಆರಿಸಿದಳು. ಆ ಪವಿತ್ರ ದೇಹದ ಭಸ್ಮರಾಶಿಯನ್ನು ಸ್ಪರ್ಶಿಸಿ ಎಲ್ಲರೂ ಶುದ್ಧರಾದೆವೆಂದು ಭಾವಿಸಿದರು. ತಂದೆಯ ಮರಣದ ನಂತರ ಮೂರು ವರ್ಷಗಳ ಮೇಲೆ, ಐವತ್ತುನಾಲ್ಕನೆಯ ವಯಸ್ಸಿನಲ್ಲಿ ನಾಗಮಹಾಶಯರ ದೇಹವು ಕಾಣದಂತಾಯಿತು. ಚಿಹ್ನಸ್ವರೂಪವಾಗಿ ಭಸ್ಮರಾಶಿಯೊಂದು ಉಳಿಯಿತು.

ಮರುದಿನ ಆ ಪೂತ ಭಸ್ಮರಾಶಿಯನ್ನು ಸ್ವಾಮೀ ಶಾರದಾನಂದರ ಹೇಳಿಕೆಯಂತೆ ಒಂದು ಕಲಶದಲ್ಲಿ ಹಾಕಿ ನಾಗಮಹಾಶಯರಿಂದ ರಚಿತವಾದ ಒಂದು ಹಾಡನ್ನು ಅದರಲ್ಲಿಟ್ಟು ಅದನ್ನು ಚಿತಾಭೂಮಿಯೊಳಗಿಟ್ಟರು. ಮೃತ್ಯುವಿನ ಪೂರ್ವದಲ್ಲಿ ನಾಗಮಹಾಶಯರು ಪೂಜಿಸಿದ ದೇವಿಯ ಮೂರ್ತಿಯನ್ನು ಆಸ್ಥಳದ ಮೇಲೆ ಸ್ಥಾಪಿಸಲು ಶಾರದಾನಂದರು ಹೇಳ

ದರು. ಆ ಪ್ರಕಾರ ಆ ಮೂರ್ತಿಯ ಸ್ಮಾರಕವಾಗಿ ಅದರ ಮೇಲೆ ಸುಂದರವಾದ ಛತ್ರವು ಇಡಲ್ಪಟ್ಟಿತು.

ನಾಗಮಹಾಶಯರ ಸಾಲದ ಬಗ್ಗೆ ಯೋಗ್ಯ ಸಲಹೆಗಳನ್ನು ಕೊಟ್ಟು ಸ್ವಾಮಿ ಶಾರದಾನಂದರು ಡಾಕಾಕ್ಕೆ ಹೊರಟು ಹೋದರು. ನಾಲ್ಕನೆಯ ದಿನ ಶರಚ್ಚಂದ್ರರೂ ಆ ಚಿರಶಾಂತಿಮಯ ಸ್ಥಾನದಿಂದ ಕಲಕತ್ತೆಗೆ ಹೋದರು.

# ಸಾಧುವರ್ಯ
# ನಾಗಮಹಾಶಯರ ಚರಿತ್ರೆ

---

## ಪರಿಶಿಷ್ಟ ೧.

"The conversations and dialogues of Swami Vivekananda" ಎಂಬ ಪುಸ್ತಕದಿಂದ ಸಂಗ್ರಹಿಸಿದ್ದು.

ಸ್ಥಲ:— ಬೇಲೂರ ಮಠ. ವರ್ಷ—೧೮೯೯ ರ ಪ್ರಾರಂಭ.

ವಿಷಯ—ನಾಗಮಹಾಶಯ ಹಾಗೂ ಸ್ವಾಮೀ ವಿವೇಕಾನಂದರ ಸಮಾಗಮ. ಒಬ್ಬರು ಮತ್ತೊಬ್ಬರ ಬಗ್ಗೆ ಒಳ್ಳೇ ಆದರಭಾವವುಳ್ಳವರಾಗಿದ್ದಾರೆ.

ಶಿಷ್ಯನಿಂದು ನಾಗಮಹಾಶಯರ ಜೊತೆಯಲ್ಲಿ ಮಠಕ್ಕೆ ಬಂದಿರುವನು. ಸ್ವಾಮೀಜಿಯವರು ನಾಗಮಹಾಶಯರಿಗೆ (ನಮಸ್ಕಾರ ಮಾಡಿ) ತಾವು ಒಳಿತಾಗಿರುವಿರಷ್ಟೇ? ನಾಗಮಹಾಶಯ—ನಾನು ಇಂದು ತಮ್ಮನ್ನು ಕಾಣಲು ಬಂದಿರುವೆನು. ಜಯ ಶಂಕರ ಜಯ ಶಂಕರ. ಶಿವದರ್ಶನದಿಂದ ಇಂದು ನಾನು ಧನ್ಯನಾದೆನು.

ಹೀಗನ್ನುತ್ತ ನಾಗಮಹಾಶಯರು ಸ್ವಾಮೀಜಿಯವರ ಎದುರಿಗೆ ಕೈ ಜೋಡಿಸಿಕೊಂಡು ನಿಂತರು.

ಸ್ವಾಮೀಜಿ—ತಮ್ಮ ಆರೋಗ್ಯವು ಹೇಗಿದೆ?

ನಾಗಮಹಾಶಯ—ಈ ಕ್ಷುದ್ರ ದೇಹದ ಬಗ್ಗೆ ಈ ಎಲಬು ಮಾಂಸಗಳ ಗೂಡಿನ ಬಗ್ಗೆ ಏಕೆ ವಿಚಾರಿಸುವಿರಿ? ನಿಜವಾಗಿಯೂ ತಮ್ಮನ್ನು ಕಂಡು ನಾನು ಧನ್ಯನಾದೆ. ಹೀಗೆ ನುಡಿದು ನಾಗಮಹಾಶಯರು ಸ್ವಾಮೀಜಿಯವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಸ್ವಾಮೀಜಿ (ಅವರ

ನ್ನೆಬ್ಬಿಸುತ್ತ ) ನನಗೆ ಸಾಷ್ಟಾಂಗ ನಮಸ್ಕಾರವನ್ನೇಕೆ ಮಾಡುವಿರಿ? ನಾಗಮಹಾಶಯ—ನನ್ನ ಒಳಗಣ್ಣಿನಿಂದ ನೋಡುತ್ತಿರುವೆನು. ಸಾಕ್ಷಾತ್ ಶಿವನನ್ನು ಕಂಡು ಇಂದು ಪುನೀತನಾದೆನು. ಜಯರಾಮಕೃಷ್ಣ !

ಸ್ವಾಮೀಜಿ—( ಶಿಷ್ಯನನ್ನುದ್ದೇಶಿಸಿ ) ನೋಡಿದಿಯಾ ! ನಿಜವಾದ ಭಕ್ತಿಯು ಮನುಷ್ಯನ ಜೀವನದಲ್ಲಿ ಎಂಥ ಅದ್ಭುತ ಪರಿವರ್ತನೆಯನ್ನು ಮಾಡುತ್ತಿದೆ ? ನಾಗಮಹಾಶಯರು ಸದಾ ದೈವೀ ಭಾವದಲ್ಲಿ ಮುಳುಗಿರುತ್ತಾರೆ. ಅವರ ದೇಹಭಾವವು ಪೂರ್ಣವಾಗಿ ಅಳಿದು ಹೋಗಿದೆ.

ನಾಗಮಹಾಶಯ—ಪ್ರಸಾದ! (ಕೈಜೋಡಿಸಿ) ತಮ್ಮನ್ನು ಕಂಡು ನನ್ನ ಎಲ್ಲ ಹಸಿವೆಯೂ ಹಿಂಗಿದೆ.

ಮಠದಲ್ಲಿಯ ಬ್ರಹ್ಮಚಾರಿಗಳೂ ಸನ್ಯಾಸಿಗಳೂ ಉಪನಿಷತ್ತುಗಳ ಅಭ್ಯಾಸವನ್ನು ನಡೆಸಿದ್ದರು ಸ್ವಾಮೀಜಿಯವರು ಅವರಿಗೆ "ಈ ದಿನ ಶ್ರೀ ರಾಮಕೃಷ್ಣರ ಮಹಾ ಭಕ್ತರಾದ ನಾಗಮಹಾಶಯರು ಬಂದಿರುವರು. ಅವರ ಶುಭಾಗಮನದ ಉದ್ದಿಶ್ಯವಾಗಿ ಇಂದು ನಿಮ್ಮ ಅಭ್ಯಾಸವನ್ನು ನಿಲ್ಲಿಸಿರಿ" ಎಂದು ಹೇಳಿದರು. ಎಲ್ಲರೂ ತಮ್ಮ ತಮ್ಮ ಪುಸ್ತಕಗಳನ್ನು ಮುಚ್ಚಿ ನಾಗಮಹಾಶಯರ ಸುತ್ತಲೂ ಕುಳಿತುಕೊಂಡರು. ಸ್ವಾಮೀಜಿಯವರು ನಾಗಮಹಾಶಯರ ಎದುರಿಗೆ ಕುಳಿತುಕೊಂಡರು.

ಸ್ವಾಮೀಜಿ (ಎಲ್ಲರನ್ನುದ್ದೇಶಿಸಿ)—ನೋಡಿರಿ, ನಾಗಮಹಾಶಯರು ಗೃಹಸ್ಥಾಶ್ರಮಿಗಳು, ಆದರೆ ಅವರು ಸಂಸಾರದಿಂದ ತೀರ ನಿರ್ಲಿಪ್ತರಿರುವರು ಪರಮಾತ್ಮ ಚಿಂತನೆಯಲ್ಲಿಯೇ ಅವರು ಯಾವಾಗಲೂ ತೊಡಗಿರುವರು. ( ನಾಗಮಹಾಶಯರಿಗೆ ) ನಮ್ಮೆಲ್ಲರಿಗೆ ಶ್ರೀರಾಮಕೃಷ್ಣರ ವಿಷಯವಾಗಿ ತುಸು ಹೇಳಿರಿ

ನಾಗಮಹಾಶಯ " ನಾನೇ! ನಾನೇನು ಹೇಳಲಿ? ನಾನು ತಮ್ಮನ್ನು-ಶ್ರೀರಾಮಕೃಷ್ಣ ಲೀಲೆಯ ನಾಯಕನನ್ನು ಸಹಾಯಕನನ್ನು ನೋಡ ಬಂದಿರುವೆನು. ಶ್ರೀರಾಮಕೃಷ್ಣರ ಉಪದೇಶ ಹಾಗೂ ಸಂದೇಶಗಳ ಮಹತ್ವವನ್ನು ಜನರು ಇನ್ನು ತಿಳಿಯುವರು. ಜಯ ರಾಮಕೃಷ್ಣ !

ಸ್ವಾಮೀಜಿ- ತಾವು ಮಾತ್ರ ಶ್ರೀರಾಮಕೃಷ್ಣರ ಮಹಾತ್ಮೆಯನ್ನು ಕಂಡುಹಿಡಿದಿರುವಿರಿ. ನಮ್ಮ ಜೀವನವು ಬರಿಯ ತತ್ವಾನ್ವೇಷಣೆಯಲ್ಲಿ ಕಳೆದು ಹೋಯಿತು.

ನಾಗಮಹಾಶಯ—ಇದೇನು ಹೇಳುವಿರಿ? ತಾವು ಶ್ರೀರಾಮಕೃಷ್ಣರ ಆದರ್ಶದ ಪ್ರತಿಮೂರ್ತಿಯಾಗಿರುವಿರಿ ? ಕಣ್ಣಿದ್ದವರು ನೋಡವರು.

ಸ್ವಾಮೀಜಿ—ಈ ಮಠ ಹಾಗೂ ಆಶ್ರಮಗಳ ಸಂಸ್ಥಾಪನೆಯ ಆ ಯೋಜನೆಯು ಸರಿಯಾಗಿರುವದಷ್ಟೇ?

ನಾಗಮಹಾಶಯ ನಾನು ಕ್ಷುದ್ರ ಜೀವಿ. ನನಗೇನು ತಿಳಿಯುತ್ತದೆ? ಇಷ್ಟು ಮಾತ್ರ ನಾನು ನಿಶ್ಚಯವಾಗಿ ಬಲ್ಲೆ, ತಾವು ಮಾಡುವುದೆಲ್ಲವೂ ಜಗತ್ತಿನ ಕಲ್ಯಾಣಕ್ಕಾಗಿ.

ಅನೇಕರು ನಾಗಮಹಾಶಯರ ಮೇಲಿನ ಪೂಜ್ಯಭಾವದ ಮೂಲಕ ಅವರ ಪಾದಧೂಲಿಯನ್ನು ತೆಗೆದುಕೊಳ್ಳಹತ್ತಿದರು. ನಾಗಮಹಾಶಯರಿಗೆ ದಂದಬಹಳ ಕಳವಳವುಂಟಾಯಿತು ಆಗ ಸ್ವಾಮೀಜಿಯವರಿಗೆವು ಜನರಿಗೆ "ನಾಗಮಹಾಶಯರ ಮನಸ್ಸಿಗೆ ವ್ಯಥೆಯಾಗುವಂತೆ ಮಾಡಬೇಡಿರಿ. ಅವರಿಗೆ ಅದರಿಂದ ಕೆಡಕೆನಿಸುತ್ತದೆ" ಎಂದರು ಇದನ್ನು ಕೇಳೀ ಎಲ್ಲರೂ ಸುಮ್ಮನಾದರು.

ಸ್ವಾಮೀಜಿ—ಮಠಕ್ಕೆ ಬಂದು ಇಲ್ಲಿಯೇ ಇದ್ದುಬಿಡಿರಿ ತಮ್ಮನ್ನು ಕಂಡು ಈ ಹುಡುಗರೆಲ್ಲರೂ ಕಲಿಯುವರು.

ನಾಗಮಹಾಶಯ —ನಾನೊಮ್ಮೆ ಶ್ರೀರಾಮ ಕೃಷ್ಣರಿಗೆ ಕೇಳಿದೆನು. ಅವರು "ನೀನು ಗೃಹಸ್ಥಾಶ್ರಮಿಯಾಗಿರು" ಎಂದು ಹೇಳಿದರು; ಆದ್ದರಿಂದ ನಾನು ಗೃಹಸ್ಥಜೀವನವನ್ನು ಸ್ವೀಕರಿಸುವೆನು. ಮೇಲಿಂದ ಮೇಲೆ ತಮ್ಮನ್ನು ಕಂಡು ಧನ್ಯನಾದೆನೆಂದು ಭಾವಿಸುವೆನು.

ಸ್ವಾಮೀಜಿ—ನಾನೊಮ್ಮೆ ತಮ್ಮ ಊರಕಡೆಗೆ ಬರಬೇಕೆಂದಿದ್ದೇನೆ.

ನಾಗಮಹಾಶಯ— (ಹಿರಿಹಿರಿ ಹಿಗ್ಗಿ) ಅಂಥ ಸುದಿನವು ಉದಯಿಸುವದೆ? ನಮ್ಮ ನೆಲೆಯು ತಮ್ಮ ಪಾದಸ್ಪರ್ಶದಿಂದ ಕಾಶಿಯಂತೆ ಪವಿತ್ರವಾಗುವದೆ? ಆ ಸುಸಂಧಿ ನನಗೆ ದೊರಕುವದೆ!

ಸ್ವಾಮೀಜಿ—ನನ್ನ ಇಚ್ಛೆಯೇನೂ ಇದೆ. ಆದರೆ, ಅವಳ ಇಚ್ಛೆ ಇದ್ದರೆ ನಾನು ಅಲ್ಲಿಗೆ ಬರುವದು ಸಾಧ್ಯ.

ನಾಗಮಹಾಶಯ—ತಮ್ಮನ್ನು ಯಾರು ಕಂಡುಹಿಡಿಯುವರು ? ಆ ಒಳಗಣ್ಣು ತೆರೆಯದೆ ತಮ್ಮನ್ನು ಯಾರೂ ತಿಳಿಯಲಾರರು ಶ್ರೀರಾಮ ಕೃಷ್ಣರೊಬ್ಬರು ತಮ್ಮನ್ನು ಕಂಡುಹಿಡಿದಿದ್ದರು. ಉಳಿದವರೆಲ್ಲರವು ಅವರ ಮಾತಿನಲ್ಲಿ ಶ್ರದ್ಧೆಯನ್ನಿಟ್ಟುಕೊಂಡಿದ್ದಾರೆ.

ಸ್ವಾಮೀಜಿ—ನನ್ನದೊಂದು ಬಯಕೆಯಿದೆ, ದೇಶವನ್ನೆಬ್ಬಿಸುವದು. ತನ್ನ ಮಹತ್‌ಶಕ್ತಿಯ ಅರಿವಿಲ್ಲದೆ, ಏತರ ಪರಿವೆಯೂ ಇಲ್ಲದೆ, ಘೋರ ನಿದ್ರೆಯಲ್ಲಿ ಮಗ್ನವಾಗಿರುವ ದೇಶವನ್ನು ಚೇತನಗೊಳಿಸಬೇಕಾಗಿದೆ. ಆತ್ಮಬೋಧವನ್ನುಂಟುಮಾಡಿಕೊಡಬೇಕಾಗಿದೆ. ದೇಶದಲ್ಲೆಲ್ಲ ಸನಾತನ ಧರ್ಮದ ಸ್ಫೂರ್ತಿಯ ಹೊಳೆಯನ್ನು ಹರಿಸಬೇಕಾಗಿದೆ. ಇಷ್ಟಾದರೆ ಶ್ರೀರಾಮಕೃಷ್ಣರ ಅವತಾರದ ಉದ್ದೇಶವು ಸಾರ್ಥಕವಾಯಿತೆಂದು ಭಾವಿಸುವೆನು. ಇದೊಂದೇ ನನ್ನ ಹೃದಯದ ಹಂಬಲಿಕೆ. ಇದರೆದುರಿಗೆ ನನಗೆ ಮುಕ್ತಿಯು ಬೆಲೆಯಿಲ್ಲ. ಈ ನನ್ನ ಕಾರ್ಯದಲ್ಲಿ ಯಶ ದೊರೆಯು ವಂತೆ ಆಶೀರ್ವದಿಸಿರಿ.

ನಾಗಮಹಾಶಯ—ಶ್ರೀರಾಮಕೃಷ್ಣರ ಆಶೀರ್ವಾದಗಳು ! ತಮ್ಮ ಇಚ್ಛೆಯ ವಿರುದ್ಧವಾಗಿ ಯಾರೂ ಏನೂ ಮಾಡಲಾರರು ! ತಾವು ಬಯಸಿದ್ದು ಆಗಲಿಕ್ಕೇ ಬೇಕು !

ಸ್ವಾಮೀಜಿ ಆತನ ಇಚ್ಛೆಯಿಲ್ಲದೆ ಯಾವದೂ ಆಗದು.

ನಾಗಮಹಾಶಯ—ಆತನ ಹಾಗೂ ತಮ್ಮ ಇಚ್ಛೆ ಒಂದಾಗಿವೆ. ತಮ್ಮ ಇಚ್ಛೆಯೇ ಅವನ ಇಚ್ಛೆ. ಜಯಗುರುದೇವ.

ಸ್ವಾಮೀಜಿ— ಕೆಲಸ ಮಾಡಲು ಬಲಶಾಲಿಯಾದ ದೇಹ ಬೇಕು. ಇಲ್ಲಿಗೆ ಬಂದಾಗಿನಿಂದ ನನ್ನ ಆರೋಗ್ಯ ಸರಿಯಾಗಿಲ್ಲ. ಬೇರೆ ದೇಶಗಳಲ್ಲಿ ( ಯುರೋಪ, ಅಮೇರಿಕಾ ) ನನ್ನ ಆರೋಗ್ಯ ಚನ್ನಾಗಿತ್ತು.

ನಾಗಮಹಾಶಯ— ‘ ದೇಹ ತಾಳಿದ ಮೇಲೆ ಅದಕ್ಕಾಗಿ ಕರಕೊ

ಡಬೇಕಾಗುತಿದೆ' ಎಂದು ಶ್ರೀ. ರಾಮಕೃಷ್ಣರು ಹೇಳುತ್ತಿದ್ದರು. ಬೇನೆ ಹಾಗೂ ದುಃಖ ಇವೇ ಆ ಕರಗಳು. ಆದರೆ, ತಮ್ಮ ದೇಹವೆಂದರೆ ವರಹಗಳ ಪೆಟ್ಟಿಗೆ! ಅದಕ್ಕಾಗಿ ಬಹಳ ಎಚ್ಚರ ತೆಗೆದುಕೊಳ್ಳುವದು. ಅತ್ಯವಶ್ಯಕ. ಇನೆಲ್ಲ ಯಾರಿಗೆ ತಿಳಿಯುತ್ತದೆ? ಶ್ರೀ ರಾಮಕೃಷ್ಣರೊಬ್ಬರು ತಮ್ಮನ್ನು ಕಂಡು ಹಿಡಿದಿದ್ದರು ಜಯ ರಾಮಕೃಷ್ಣ!

ಸ್ವಾಮೀಜಿ— ಮಠದಲ್ಲಿ ಎಲ್ಲರೂ ನನ್ನ ಆರೈಕೆಯನ್ನು ಬಹು ಚನ್ನಾಗಿ ಮಾಡುವರು.

ನಾಗಮಹಾಶಯ— ತಿಳಿಯಲಿ, ತಿಳಿಯದಿರಲಿ, ಅವರು ಎಲ್ಲವನ್ನು ಮಾಡುತ್ತಿರುವರು. ಅವರ ಕಲ್ಯಾಣಕ್ಕಾಗಿಯೇ ತಮ್ಮ ದೇಹದ ಬಗ್ಗೆ ಯೋಗ್ಯ ಎಚ್ಚರಿಕೆಯನ್ನು ತೆಗೆದುಕೊಳ್ಳದೆ. ಹೋದರೆ ಅದು ಬಿದ್ದು ಹೋಗುವದು.

ಸ್ವಾಮೀಜಿ— ನಾಗಮಹಾಶಯರೆ, ನಾನು ಮಾಡುತ್ತಿರುವದು ಸರಿಯಾಗಿದೆಯೋ ಇಲ್ಲವೋ ಎಂಬುದು ನನಗೆ ತಿಳಿಯಲೊಲ್ಲದು. ಇಂಥದೊಂದು ಕೆಲಸ ಮಾಡಬೇಕೆಂಬ ಪ್ರವೃತ್ತಿಯುಂಟಾಗುತ್ತದೆ. ಅದರಂತೆ ಮಾಡುತ್ತೇನೆ ಅವರಿಂದ ಹಿತವಾಗುವದೋ ಅಹಿತವಾಗುವದೋ ಗೊತ್ತಾಗುವದಿಲ್ಲ.

ನಾಗಮಹಾಶಯ – "ಭಾಂಡಾರಕ್ಕೆ ಈಗ ಬೀಗ ಹಾಕಿದೆ" ಎಂದು ಶ್ರೀ. ರಾಮಕೃಷ್ಣರು ಹೇಳುತ್ತಿದ್ದರು. ಅದಕ್ಕಾಗಿ ಅವರು ತಮಗೆ ತಿಳಿಯದಂತೆ ಮಾಡಿದ್ದಾರೆ ತಮಗೆ ಆತ್ಮ ಸ್ವರೂಪದ ಅರಿವಾಯಿತೆಂದರೆ ತಮ್ಮ ಜೀವನ ಲೀಲೆಯು ಮುಗಿಯಿತೆಂದು ತಿಳಿಯಬೇಕು.

ಸ್ವಾಮಿಜಿಯವರು ಕಣ್ಣು ಮುಚ್ಚಿಕೊಂಡು ಏನೋ ಯೋಚಿಸುತ್ತಿದ್ದರು. ಆ ಮೇಲೆ ಸ್ವಾಮೀ ಪ್ರೇಮಾನಂದರು ಪ್ರಸಾದವನ್ನು ತಂದು ನಾಗಮಹಾಶಯರಿಗೂ ಉಳಿದವರಿಗೂ ಕೊಟ್ಟರು. ನಾಗಮಹಾಶಯರು ಪ್ರಸಾದವನು ಕೈಯಲ್ಲಿ ಹಿಡಿದುಕೊಂಡು ಅವಕ್ಕೆ ತಲೆಬಾಗಿ ಶ್ರೀ ರಾಮಕೃಷ್ಣರ ಜಯ ಧ್ವನಿಯನ್ನು ಮಾಡುತ್ತ ಕುಣಿಯಹತ್ತಿದರು. ಅವರ ಭಾವಾವೇಶವನ್ನು ಕಂಡು ಎಲ್ಲರೂ ಅಚ್ಚರಿಗೊಂಡರು. ಪ್ರಸಾದ

ಗ್ರಹಣಾನಂತರ ಎಲ್ಲರೂ ಹೊರಬಿದ್ದು ತೋಟದಲ್ಲಿ ತಿರುಗಾಡಹತ್ತಿದರು. ಸ್ವಾಮೀಜಿಯವರು ಒಂದು ಗುದ್ದಲಿಯನ್ನು ತೆಗೆದುಕೊಂಡು ಕೆರೆಯೆದುರಿಗಿನ ನೆಲವನ್ನು ಸಾವಕಾಶವಾಗಿ ಅಗಿಯುತ್ತಿದ್ದರು. ನಾಗಮಹಾಶಯರು ಅದನ್ನು ಕಂಡು ಅವರ ಕೈಹಿಡಿದು "ನಾವೆಲ್ಲರೂ ಇರುತ್ತಿರುವಾಗ ನೀವೇಕೆ ಅಗಿಯುತ್ತಿರುವಿರಿ" ಎಂದು ನುಡಿದರು ಸ್ವಾಮೀಜಿಯವರು ಗುದ್ದಲಿಯನ್ನು ಬಿಟ್ಟು ತೋಟದಲ್ಲಿ ತಿರುಗಾಡಹತ್ತಿದರು. ಆಗ ಒಬ್ಬ ಶಿಷ್ಯನಿಗೆ ಹೇಳಿದರು. "ಶ್ರೀ. ರಾಮಕೃಷ್ಣರ ಅಂತರ್ಧಾನದ ನಂತರ ನಮಗೊಂದು ದಿನ ಸುದ್ದಿ ಬಂತು. ನಾಗಮಹಾಶಯರು ಉಪವಾಸ ಮಾಡುತ್ತ ತಮ್ಮ ಕಲಕತ್ತೆಯ ಮನೆಯಲ್ಲಿ ಬಿದ್ದುಕೊಂಡಿರುವರೆಂದು ನಾನು, ಹರಿ ಹಾಗೂ ಮತ್ತೆ ಕೆಲವರು ಕೂಡಿಕೊಂಡು ಅವರ ಮನೆಗೆ ಹೋದೆವು ನಮ್ಮನ್ನು ಕಂಡು ಅವರು ಎದ್ದು ಕುಳಿತುಕೊಂಡರು. "ನಾವು ತಮ್ಮಲ್ಲಿಯೇ ಇದ್ದು ಭಿಕ್ಷೆಯನ್ನು ಸ್ವೀಕರಿಸುವೆವು." ಎಂದು ನಾವು ಹೇಳಿದೆವು. ಕೂಡಲೇ ನಾಗಮಹಾಶಯರು ಎದ್ದು ಪೇಟೆಗೆ ಹೋಗಿ ಅಕ್ಕಿ ಬೆಳೆ ಮೊದಲಾದವುಗಳನ್ನು ತಂದು ಅಡಿಗೆ ಮಾಡಹತ್ತಿ ನಾವು ಊಟಮಾಡಿ ನಾಗಮಹಾಶಯರಿಗೂ ಉಣಹಚ್ಚಬಹುದೆಂದು ಭಾವಿಸಿದ್ದೆವು. ಅಡಿಗೆಯಾದಮೇಲೆ ನಾಗಮಹಾಶಯರು ನಮಗೆ ಬಡಿಸಿದರು. ನಾಗಮಹಾಶಯರಿಗಾಗಿ ಕೆಲವು ಭಾಗವನ್ನು ತೆಗೆದಿಟ್ಟು ನಾವು ಊಟ ಮಾಡಲು ಕುಳಿತೆವು. ಇದಾದ ಮೇಲೆ ನಾಗಮಹಾಶಯರಿಗೆ ಊಟಮಾಡಲು ಹೇಳಿದೆವು ಅವರು ಕೂಡಲೇ ಅನ್ನದ ಪಾತ್ರೆಯನ್ನು ಒದೆದು ಹಾಕಿ ಹಣೆ ಹಣೆ ಘಟ್ಟಿಸಿಕೊಳ್ಳುತ್ತ ನುಡಿದರು. 'ಭಗವಂತ ನನ್ನು ಈ ವರೆಗೂ ಕಾಣದ ಈ ದೇಹಕ್ಕೆ ಅನ್ನ ಹಾಕಲೇ? ಎಂದೂ ಆಗದು. "ನೋಡಿ ಮಗಿನ ಮೇಲೆ ಬೆರಳಿಟ್ಟುಕೊಂಡೆವು. ಕಡೆಗೆ ಅಂತೂ ಇಂತೂ ಮಾಡಿ ಅವರಿಗೆ ಉಣಹಚ್ಚಿ ನಾವು ಕಡೆಗೆ ಹೊರಟು ಬಂದೆವು."

ಸ್ವಾಮೀಜಿ — ನಾಗಮಹಾಶಯರು ಈ ದಿನ ಮಠದಲ್ಲಿ ಉಳಿಯುವರೋ?

ಶಿಷ್ಯ— ಇಲ್ಲ ಅವರಿಗೆ ಕೆಲಸವಿದೆ. ಇಂದೇ ಹೊರಡಬೇಕು,

ಸ್ವಾಮೀಜಿ—ಹಾಗಾದರೆ ಡೋಣಿಯೊಂದನ್ನು ನೋಡಿರಿ. ಸಂಜೆಯಾಯಿತು.

ಡೋಣಿಯು ಬಂದ ಮೇಲೆ ಶಿಷ್ಯ ಹಾಗೂ ನಾಗಮಹಾಶಯರು ಸ್ವಾಮೀಜಿಯವರಿಗೆ ನಮಸ್ಕಾರ ಮಾಡಿ ಡೋಣಿಯಲ್ಲಿ ಕುಳಿತುಕೊಂಡು ಕಲಕತ್ತೆಗೆ ಹೊರಟರು.

## ಪರಿಶಿಷ್ಟ: ೨

ನಾಗಮಹಾಶಯರು ಮರಣ ಹೊಂದಿದ ಮೇಲೆ ಸ್ವಾಮೀ ವಿವೇಕಾನಂದರು ಹಿಂದಕ್ಕೆ ನಾಗಮಹಾಶಯರಿಗೆ ಮಾತು ಕೊಟ್ಟಂತೆ ಒಮ್ಮೆ ದೇವ-ಭೋಗಕ್ಕೆ ಹೋದರು. (ಸ್ವಾಮಿಜಿಯವರು ಬರುವರೆಂದು ತಿಳಿದು ನಾಗಮಹಾಶಯರು ಹಿಂದೆ ಎಲ್ಲ ಏರ್ಪಾಡನ್ನೂ ಮಾಡಿದ್ದರು.) ಒಂದು ದಿನ ದೇವಭೋಗದಲ್ಲಿದ್ದು ಢಾಕಾಕ್ಕೆ ಹೊರಟು ಹೋದರು. ಈ ಭಾಗದಲ್ಲಿ ಪ್ರಚಾರ ಕಾರ್ಯ ಮಾಡಲು ಬರುವ ಮೊದಲು ಸ್ವಾಮೀಜಿಯವರು ನಾಗಮಹಾಶಯರ ಭಕ್ತನೊಬ್ಬನಿಗೆ ಹೇಳಿದ್ದರು. "ಆ ಕಡೆಗೆ ಹೋಗಿ ಭಾಷಣ ಮಾಡುವ ಇಚ್ಛೆಯೂ ಇಲ್ಲ. ಪ್ರಯೋಜನೆಯೂ ಇಲ್ಲ. ನಾಗಮಹಾಶಯರ ಪ್ರಭಾವದಿಂದ ತುಂಬಿದ ಆ ಪ್ರಾಂತದಲ್ಲಿ ನಾನು ಹೆಚ್ಚಿಗೆ ಏನು ಹೇಳುವದಿದೆ?" ಅದಕ್ಕೆ ಭಕ್ತನಂದ, "ನಾಗಮಹಾಶರು ಬಹು ಗೌಪ್ಯವಾಗಿದ್ದರು. ಸಾಧಾರಣವಾಗಿ ಅವರು ಎಂದೂ ಏನೂ ನುಡಿದಿಲ್ಲ" ಸ್ವಾಮೀಜಿಯವರೆಂದರು. "ಬಾಯಿಂದ ಏನೂ ನುಡಿದಿಲ್ಲ? ನಾಗಮಹಾಶಯರಂಥ ಮಹಾಪುರುಷರ ವಿಚಾರ ತರಂಗಗಳು (thought) vibrations) ದೇಶದ ವಿಚಾರ ಪ್ರವಾಹವನ್ನೇ ಹೊರಳಿಸುವವು."